ಗುರುವಾರ, ಜುಲೈ 31, 2025 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಗ್ರ ಆಲ್‌ರೌಂಡರ್ ಜಡೇಜ

ಭಾರತ ಕ್ರಿಕೆಟ್ ತಂಡದ ರವೀಂದ್ರ ಜಡೇಜ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಆಲ್‌ರೌಂಡರ್‌ಗಳ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನವನ್ನು ಕಾಯ್ದುಕೊಂಡಿದ್ದಾರೆ



ಶಿಶು ಸ್ತನ್ಯಪಾನ ಕೊಠಡಿ...

ದೇಶದ 452 ರೈಲು ನಿಲ್ದಾಣಗಳಲ್ಲಿ ಶಿಶು ಸ್ತನ್ಯಪಾನ ಕೊಠಡಿಗಳನ್ನು ತೆರೆಯಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಲೋಕಸಭೆಯಲ್ಲಿ ತಿಳಿಸಿದ್ದಾರೆ



ರಾಜಕಾಲುವೆ: 42 ಕಿ.ಮೀ. ಸರ್ವಿಸ್ ರಸ್ತೆಗೆ ₹75 ಕೋಟಿ

2026ರ ಮಾರ್ಚ್ ವೇಳೆಗೆ 100 ಕಿ.ಮೀ ಸರ್ವಿಸ್ ರಸ್ತೆ ನಿರ್ಮಿಸಲು 'ಬಿ–ಸ್ಮೈಲ್' ಗುರಿ • ಕನಿಷ್ಠ 30 ಅಡಿಯಿಂದ ಗರಿಷ್ಠ 80 ಅಡಿ ಅಗಲ

• ಆರ್. ಮಂಜುನಾಥ್

ಬೆಂಗಳೂರು: ರಾಜಕಾಲುವೆಯ ಬಫರ್ ಝೋನ್‌ನಲ್ಲಿ ಸರ್ವಿಸ್ ರಸ್ತೆ ನಿರ್ಮಿಸುವ ಪ್ರಥಮ ಹಂತದ ಯೋಜನೆಗೆ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ (ಬಿ–ಸ್ಮೈಲ್) ಚಾಲನೆ ನೀಡಿದೆ.

ಮೈಸೂರು ರಸ್ತೆ, ಹೊರವರ್ತುಲ ರಸ್ತೆ ಹಾಗೂ ಬಳ್ಳಾರಿ ರಸ್ತೆ, ನಾಗವಾರ ರಸ್ತೆಗಳ ಸುತ್ತಮುತ್ತಲಿನ ರಾಜಕಾಲುವೆಗಳ ಬಫರ್ ಝೋನ್‌ನಲ್ಲಿ ಮೊದಲ ಹಂತದಲ್ಲಿ ಸುಮಾರು 42 ಕಿ.ಮೀ ರಸ್ತೆಯನ್ನು ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಬಿ–ಸ್ಮೈಲ್ ಅಲ್ಪಾವಧಿ ಟೆಂಡರ್ ಕರೆದಿದ್ದು, ಆಗಸ್ಟ್ 18ರಂದು ಎಲ್ಲವನ್ನೂ ಅಂತಿಮಗೊಳಿಸಿ, ತಿಂಗಳಾಂತ್ಯದಲ್ಲಿ ಕಾರ್ಯಾದೇಶ ನೀಡಲು ಯೋಜಿಸಲಾಗಿದೆ.

ಮೊದಲ ಹಂತದಲ್ಲಿ ₹75 ಕೋಟಿ ವೆಚ್ಚದಲ್ಲಿ ನಾಲ್ಕು ಪ್ಯಾಕೇಜ್‌ಗಳಲ್ಲಿ 42 ಕಿ.ಮೀ ಸರ್ವಿಸ್ ರಸ್ತೆಯನ್ನು ಆರು ತಿಂಗಳಲ್ಲಿ ನಿರ್ಮಿಸುವ ಗುರಿ ಹೊಂದಲಾಗಿದೆ. ರಾಜಕಾಲುವೆಯ ಅಳತೆಗೆ ಅನುಗುಣವಾಗಿ ಸರ್ವಿಸ್ ರಸ್ತೆಯ ಅಗಲ ನಿರ್ಧಾರವಾಗಲಿದೆ. ಕನಿಷ್ಠ 30 ಅಡಿಯಿಂದ ಗರಿಷ್ಠ 80 ಅಡಿ ಅಗಲದವರೆಗೆ ಸರ್ವಿಸ್ ರಸ್ತೆಗೆ ಜಾಗ ಸಿಗಲಿದೆ.

'ಪ್ರಥಮ ಹಂತದ ರಾಜಕಾಲುವೆಯ ಬಫರ್ ಝೋನ್ ಕಾಲುವೆಯ ಮಧ್ಯಭಾಗದಿಂದ 50 ಮೀಟರ್ ಇರುತ್ತದೆ. ಇದರಲ್ಲಿ ಕಾಲುವೆಯ ವ್ಯಾಪ್ತಿ 15 ಮೀಟರ್ ಆಗಿರುತ್ತದೆ. 15 ಮೀಟರ್ ಅನ್ನು ಅಗ್ನಿಶಾಮಕ ದಳದ ಸೇವೆ ಮತ್ತು ಸೌಲಭ್ಯಕ್ಕಾಗಿ (ಫೈರ್ ಸೆಡಿಮೆಂಟ್) ಬಿಡಬೇಕಾಗುತ್ತದೆ. 15 ಮೀಟರ್ ಸೆಟ್‌ಬ್ಯಾಕ್ ಇರುತ್ತದೆ. ಉಳಿದ ಜಾಗದಲ್ಲಿ ಸರ್ವಿಸ್ ರಸ್ತೆ ನಿರ್ಮಿಸಲಾಗುತ್ತದೆ. ಅದೇ ರೀತಿ, ದ್ವಿತೀಯ ಹಂತದ ರಾಜಕಾಲುವೆಯಲ್ಲಿ 25 ಮೀಟರ್ ಬಫರ್ ಝೋನ್‌ನಲ್ಲಿ 5 ಮೀಟರ್ ಕಾಲುವೆ, 8 ಮೀಟರ್ ಸೆಟ್‌ಬ್ಯಾಕ್ ಇರುತ್ತದೆ. ತೃತೀಯ ಹಂತದ ರಾಜಕಾಲುವೆಯ 15 ಮೀಟರ್ ಬಫರ್ ಝೋನ್‌ನಲ್ಲಿ 3 ಮೀಟರ್ ಕಾಲುವೆ, 3 ಮೀಟರ್ ಸೆಟ್‌ಬ್ಯಾಕ್ ಇರುತ್ತದೆ' ಎಂದು ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ಮಾಹಿತಿ ನೀಡಿದರು.

ಎಲ್ಲೆಲ್ಲಿ ರಾಜಕಾಲುವೆ ಸರ್ವಿಸ್ ರಸ್ತೆ?

ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆಯಿಂದ ವಿ–ಲೆಗಸಿ ರಸ್ತೆಯಿಂದ ರಾಜರಾಜೇಶ್ವರಿ ನಗರ ಆರ್ಚ್‌ವರೆಗೆ

10.02 ಕಿ.ಮೀ; ಒಟ್ಟು ಉದ್ದ

₹22.95 ಕೋಟಿ; ಒಟ್ಟು ವೆಚ್ಚ

ಮಾರ್ಗ: ಕೆರೆಕೋಡಿ ರಸ್ತೆಯಿಂದ ರಾಜರಾಜೇಶ್ವರಿ ನಗರ ಆರ್ಚ್; ಕೆರೆಕೋಡಿಯಿಂದ ವಿ–ಲೆಗಸಿ ಮೂಲಕ ರಾಜರಾಜೇಶ್ವರಿ ನಗರ ಆರ್ಚ್; ವಿ–ಲೆಗಸಿ ರಸ್ತೆಯಿಂದ (ನೈಸ್ ರಸ್ತೆ ಸೇತುವೆ) ರಾಜಕಾಲುವೆ ಸೇತುವೆ; ನಾಯಂಡಹಳ್ಳಿ ವೃತ್ತದಿಂದ ವಿ–ಲೆಗಸಿ ರಸ್ತೆ; ಹೊರವರ್ತುಲ ರಸ್ತೆಯಲ್ಲಿರುವ ನಮ್ಮೂರ ತಿಂಡಿಯಿಂದ ಮೈಸೂರು ರಸ್ತೆಯ ವಿಶ್ವವಿದ್ಯಾಲಯದ ಗೇಟ್; ಮೈಸೂರು ರಸ್ತೆಯ ವಿಶ್ವವಿದ್ಯಾಲಯ ಗೇಟ್‌ನಿಂದ ಪಟ್ಟಣಗೆರೆ ಮುಖ್ಯರಸ್ತೆ; ವಿ–ಲೆಗಸಿ ರಸ್ತೆಯಿಂದ ದರ್ಶನ್ ಫಾರ್ಮ್‌ಹೌಸ್; ವಿ–ಲೆಗಸಿ ರಸ್ತೆಯಿಂದ ರಾಜಕಾಲುವೆ ಸೇತುವೆವರೆಗೆ.

ನಾಯಂಡಹಳ್ಳಿ ವೃತ್ತದಿಂದ ವಿ–ಲೆಗಸಿ ರಸ್ತೆವರೆಗೆ

2.60 ಕಿ.ಮೀ; ಒಟ್ಟು ಉದ್ದ

₹11.66 ಕೋಟಿ; ಒಟ್ಟು ವೆಚ್ಚ

ಮಾರ್ಗ: ಹೊರ ವರ್ತುಲ ರಸ್ತೆಯ ವೀರಭದ್ರ ಸಿಗ್ನಲ್‌ನಿಂದ ಕೆರೆಕೋಡಿ ರಸ್ತೆ ಮೂಲಕ ವಿ– ಲೆಗಸಿ ರಸ್ತೆ; ನೈಸ್ ರಸ್ತೆಯ ಲಿಂಕ್ ರಸ್ತೆಯಿಂದ ಕೆರೆಕೋಡಿ ರಸ್ತೆ; ವಿ–ಲೆಗಸಿ ರಸ್ತೆಯಿಂದ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್; ಜವರೇಗೌಡನ ದೊಡ್ಡಿ ಮುಖ್ಯರಸ್ತೆಯಿಂದ ನೈಸ್ ರಸ್ತೆ ಸೇತುವೆ–ಬಂಗಾರಪ್ಪನಗರ ರಸ್ತೆ ಜಂಕ್ಷನ್.

ಥಣಿಸಂದ್ರ ಮುಖ್ಯರಸ್ತೆಯಿಂದ ಹೆಣ್ಣೂರು ಮುಖ್ಯರಸ್ತೆ

15.17 ಕಿ.ಮೀ; ಒಟ್ಟು ಉದ್ದ

₹19.27 ಕೋಟಿ; ಒಟ್ಟು ವೆಚ್ಚ


ಮಾರ್ಗ: ಥಣಿಸಂದ್ರದಿಂದ ಹೆಣ್ಣೂರು ಮುಖ್ಯರಸ್ತೆಯ ಎರಡೂ ಬದಿ; ಹೆಣ್ಣೂರು ಮುಖ್ಯರಸ್ತೆಯಿಂದ ಕಿತ್ತಗನೂರು ಬಿದರಹಳ್ಳಿ ಮುಖ್ಯರಸ್ತೆಯ ಎಡಭಾಗ; ಹೆಣ್ಣೂರು ಮುಖ್ಯರಸ್ತೆಯಿಂದ ಕಿತ್ತಗನೂರು ಬಿದರಹಳ್ಳಿ ಮುಖ್ಯರಸ್ತೆ (ಬಲಭಾಗ) ಮೂಲಕ ಕಲ್ಕರೆ ಕೆರೆ.

ಹೆಬ್ಬಾಳ ಮಿಲಿಟರಿ ಪ್ರದೇಶದಿಂದ (ಸರೋವರ ಲೇಔಟ್) ಥಣಿಸಂದ್ರ ಮುಖ್ಯರಸ್ತೆ

14.02 ಕಿ.ಮೀ; ಒಟ್ಟು ಉದ್ದ

₹21.59 ಕೋಟಿ; ಒಟ್ಟು ವೆಚ್ಚ

ಮಾರ್ಗ: ಸರೋವರ ಲೇಔಟ್‌ನಿಂದ ಬಳ್ಳಾರಿ ರಸ್ತೆ (ಎಡಬದಿ); ಬಳ್ಳಾರಿ ರಸ್ತೆಯಿಂದ ನಾಲ್ಕನೇ ಮುಖ್ಯರಸ್ತೆ; 4ನೇ ಮುಖ್ಯರಸ್ತೆಯಿಂದ ಕೆಂಪೇಗೌಡ ರಸ್ತೆ (ನಾಗವಾರ ಕೆರೆ; ಕೆಂಪೇಗೌಡ ರಸ್ತೆಯಿಂದ ಮಾನ್ಯತಾ ಟೆಕ್‌ಪಾರ್ಕ್; ಮಾನ್ಯತಾ ಟೆಕ್‌ಪಾರ್ಕ್‌ನಿಂದ ಮಾನ್ಯತಾ ಗೇಟ್–4 ಮೂಲಕ ಕೆ.ವಿ. ಜಯರಾಂ ರಸ್ತೆ; ಕೆ.ವಿ. ಜಯರಾಂ ರಸ್ತೆಯಿಂದ 60 ಅಡಿ ರೈಲ್ವೆ ಪ್ಯಾರಲಲ್ ರಸ್ತೆ (ಎರಡೂ ಬದಿ); ರೈಲ್ವೆ ಪ್ಯಾರಲಲ್ ರಸ್ತೆಯಿಂದ ಬ್ರೆನ್ ನಾರ್ಥರನ್ ಲೈಟ್ಸ್ ಅಪಾರ್ಟ್‌ಮೆಂಟ್; ಮಾನ್ಯತಾ ಗೇಟ್–4ರಿಂದ ಕೆಂಪೇಗೌಡ ರಸ್ತೆ.



ಥಣಿಸಂದ್ರ ಮುಖ್ಯರಸ್ತೆಯಿಂದ ಹೆಣ್ಣೂರು ಮುಖ್ಯರಸ್ತೆವರೆಗೆ ರಾಜಕಾಲುವೆ ಸರ್ವಿಸ್ ರಸ್ತೆ

2 ವರ್ಷದಲ್ಲಿ 300 ಕಿ.ಮೀ ರಸ್ತೆ: ಪ್ರಹ್ಲಾದ್

'ನಗರದಲ್ಲಿ 'ಸಂಚಾರಯುಕ್ತ ಯೋಜನೆ' ಅಡಿ 300 ಕಿ.ಮೀ ಸರ್ವಿಸ್ ರಸ್ತೆಯನ್ನು ರಾಜಕಾಲುವೆಯ ಬಫರ್ ಝೋನ್‌ನಲ್ಲಿ ಇನ್ನೆರಡು ವರ್ಷದಲ್ಲಿ ನಿರ್ಮಿಸಲಾಗುತ್ತದೆ. ಈ ಬಗ್ಗೆ ಯೋಜನೆ ರೂಪಿಸಲಾಗಿದೆ. ಬಫರ್ ಝೋನ್‌ನಲ್ಲಿರುವ ಆಸ್ತಿಗಳಿಗೆ ಟಿಡಿಆರ್ ನೀಡುವುದರಿಂದ ಭೂಸ್ವಾಧೀನದ ವೆಚ್ಚ ಅನ್ವಯವಾಗುವುದಿಲ್ಲ. ಇದಲ್ಲದೆ, 'ಆಕಾಶ ಗೋಪುರ' ಯೋಜನೆಯನ್ನು ಬಿಡಿಎಯೇ ತನ್ನ ಸಂಪನ್ಮೂಲದಿಂದ ನಿರ್ಮಿಸಲು, ಆ ಯೋಜನೆಯನ್ನು ಸರ್ಕಾರ ಬಿ–ಸ್ಮೈಲ್‌ನಿಂದ ಬಿಡಿಎಗೆ ವರ್ಗಾಯಿಸಿದೆ' ಎಂದು ಬಿ–ಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

ರಾಮಸಂದ್ರ: 33 ಎಕರೆಯಲ್ಲಿ 'ಆಕಾಶ ಗೋಪುರ'

'ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ ನಿಯಮಿತ' (ಬಿ–ಸ್ಮೈಲ್) ವತಿಯಿಂದ ನಿರ್ಮಿಸಬೇಕಿದ್ದ 'ಆಕಾಶ ಗೋಪುರ'ವನ್ನು (ಸ್ಕೈಡೆಕ್) ಬಿಡಿಎಗೆ ವರ್ಗಾಯಿಸಲಾಗಿದ್ದು, ಕೆಂಗೇರಿಯ ರಾಮಸಂದ್ರದಲ್ಲಿ 33 ಎಕರೆಯಲ್ಲಿ ನಿರ್ಮಿಸಲು ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ಕೊಮ್ಮಘಟ್ಟ ಗ್ರಾಮಕ್ಕೆ ಹೊಂದಿಕೊಂಡಿರುವ, ರಾಮಸಂದ್ರ ಗ್ರಾಮದ ಸರ್ವೆ ನಂ. 40ರಲ್ಲಿ 41 ಎಕರೆ 12 ಗುಂಟೆ ಜಮೀನಿನಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಅಂತಿಮ ಅಧಿಸೂಚನೆ ಹೊರಡಿಸಿರುವ 27 ಎಕರೆ 19 ಗುಂಟೆ ಜಮೀನಿಗೆ ಐ–ತೀರ್ಪು ರಚಿಸಿ, ನೈಸ್ ಕಂಪನಿಯ ನಿರಾಕ್ಷೇಪಣಾ ಪತ್ರ ಪಡೆದು ಬಿಡಿಎಗೆ ಭೂಮಿಯನ್ನು ಹಸ್ತಾಂತರಿಸಿಕೊಳ್ಳಬೇಕು.


ರಾಮಸಂದ್ರದ ಸರ್ವೆ ನಂ.40ರಲ್ಲಿ ನೈಸ್ ಸಂಸ್ಥೆಗೆ ಗುತ್ತಿಗೆ ನೀಡಿರುವ 8 ಎಕರೆ 12 ಗುಂಟೆ ಮತ್ತು ಕೆಐಎಡಿಬಿ ನೀಡಿರುವ 13 ಎಕರೆ 33 ಗುಂಟೆಯಲ್ಲಿ ನೈಸ್ ಸಂಸ್ಥೆ 8 ಎಕರೆ 33 ಗುಂಟೆಯನ್ನು ಉಪಯೋಗಿಸಿಕೊಂಡಿಲ್ಲ. ಅವರ ಗುತ್ತಿಗೆ ರದ್ದಿಪಡಿಸಿ, ಜಮೀನನ್ನು ಬಿಡಿಎ ಪಡೆದುಕೊಳ್ಳಬೇಕು.

ರಾಮಸಂದ್ರ ಸರ್ವೆ ನಂ. 39ರಲ್ಲಿ 49 ಎಕರೆ 3 ಗುಂಟೆ ಸರ್ಕಾರಿ ಜಮೀನಿನಲ್ಲಿ 5 ಎಕರೆ ಜಮೀನನ್ನು ಜಿಲ್ಲಾಧಿಕಾರಿಯವರು ಬಿಡಿಎಗೆ ಹಸ್ತಾಂತರಿಸಬೇಕು ಎಂದು ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಡಿಸೈನ್ ಟ್ರೀ ಸಂಸ್ಥೆಗೆ 'ಆಕಾಶ ಗೋಪುರ'ದ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಬಿಬಿಎಂಪಿ/ಬಿ–ಸ್ಮೈಲ್ ಕಾರ್ಯಾದೇಶ ನೀಡಿದ್ದು, ಅದು ವ್ಯರ್ಥವಾಗದಂತೆ ಯೋಜನೆಯನ್ನು ಮುಂದುವರಿಸಬೇಕು. ಡಿಪಿಆರ್ ತಯಾರಿಸಿದ ಮೇಲೆ ಅದನ್ನು ಬಿಡಿಎಗೆ ಹಸ್ತಾಂತರಿಸಬೇಕು ಎಂದು ಆದೇಶಿಸಲಾಗಿದೆ.

'ಆಕಾಶ ಗೋಪುರ' ನಿರ್ಮಾಣದ ಸಂಪೂರ್ಣ ವೆಚ್ಚವನ್ನು ಬಿಡಿಎ ಭರಿಸಬೇಕು. ಅದರಿಂದ ಬರುವ ಆದಾಯವನ್ನು ಪಡೆದುಕೊಳ್ಳಬಹುದು. ಸುತ್ತಮುತ್ತಲಿನ ನಿವಾಸಿಗಳ ಸುಗಮ ಸಂಚಾರಕ್ಕೆ ತೊಂದರೆಯಾಗದಂತೆ, 'ಆಕಾಶ ಗೋಪುರ'ಕ್ಕೆ ನೈಸ್ ರಸ್ತೆ ಅಥವಾ ರಾಜ್ಯ/ ರಾಷ್ಟ್ರೀಯ ಹೆದ್ದಾರಿಗಳಿಂದ ನೇರವಾಗಿ ಸಂಪರ್ಕ ಕಲ್ಪಿಸಬೇಕು ಎಂದು ಸೂಚಿಸಲಾಗಿದೆ.

'ಆಕಾಶ ಗೋಪುರ' ಯೋಜನೆಯ ಡಿಪಿಆರ್ ಅಂತಿಮಗೊಂಡ ಮೇಲೆ ಟೆಂಡರ್ ಇತರೆ ಪ್ರಕ್ರಿಯೆ ಆರಂಭವಾಗುತ್ತದೆ. ಆ ವೇಳೆಗೆ ಭೂಮಿ ಹಸ್ತಾಂತರ ಪ್ರಕ್ರಿಯೆ ಮುಗಿಯಲಿದೆ. ₹500 ಕೋಟಿಗೂ ಹೆಚ್ಚು ವೆಚ್ಚದಲ್ಲಿ 'ಆಕಾಶ ಗೋಪುರ' ನಿರ್ಮಿಸಲಾಗುತ್ತದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.



ಸಂಕ್ಷಿಪ್ತ ಸುದ್ದಿ

ಮೇಲ್ಸೇತುವೆ: ಅಕ್ಟೋಬರ್‌ಗೆ ಪೂರ್ಣ

ಬೆಂಗಳೂರು: ಹೊರವರ್ತುಲ ರಸ್ತೆಯ ಪಿಇಎಸ್ ಕಾಲೇಜು ಬಳಿಯ ಹೊಸಕೆರೆಹಳ್ಳಿ ಜಂಕ್ಷನ್‌ನಲ್ಲಿ ನಡೆಯುತ್ತಿರುವ ಮೇಲ್ಸೇತುವೆ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ, ಅಕ್ಟೋಬರ್‌ನಲ್ಲಿ ಸಾರ್ವಜನಿಕರ ಸೇವೆಗೆ ಲಭ್ಯವಾಗುವಾಗುವಂತೆ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜಕಾಲುವೆ ಬಫರ್ ಝೋನ್‌ನಲ್ಲಿ ಸರ್ವಿಸ್ ರಸ್ತೆ ನಿರ್ಮಿಸುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭದಲ್ಲಿ ಅವರು ಮೇಲ್ಸೇತುವೆ ಕಾಮಗಾರಿಯನ್ನು ವೀಕ್ಷಿಸಿದರು.

'ಮೀಸಲಾತಿ ಅನುಷ್ಠಾನಗೊಳಿಸಿ'

ಬೆಂಗಳೂರು: ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡಿರುವ ಶೇ 1ರಷ್ಟು ಮೀಸಲಾತಿಯನ್ನು ರಾಜ್ಯ ಸರ್ಕಾರದ ಎಲ್ಲ ಇಲಾಖೆಗಳಲ್ಲಿ ಅನುಷ್ಠಾನಗೊಳಿಸಬೇಕು ಎಂದು ನಾವು ಜೀವ, ಪರಿವರ್ತನ್ ಮತ್ತು ಯುತಿ ಸಂಸ್ಥೆ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸದಸ್ಯರಾದ ಉಮಾ ಪಿ., ಕುಮಾರ್. ವಿ., 'ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಲಿಂಗತ್ವ ಲಿಂಗ ಪರಿವರ್ತನೆ ಶಸ್ತ್ರಚಿಕಿತ್ಸೆ ಸೌಲಭ್ಯವನ್ನು ಕಡ್ಡಾಯಗೊಳಿಸಬೇಕು. ಈ ಸೌಲಭ್ಯವನ್ನು ಲಿಂಗತ್ವ ಅಲ್ಪಸಂಖ್ಯಾತರಿಗೆ ಉಚಿತವಾಗಿ ನೀಡುವುದರ ಜೊತೆಗೆ ಆರೈಕೆಯನ್ನೂ ಮಾಡಬೇಕು' ಎಂದು ಒತ್ತಾಯಿಸಿದರು.

'ಲಿಂಗತ್ವ ಅಲ್ಪಸಂಖ್ಯಾತರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು. ಲಿಂಗತ್ವ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಸ್ಥಾಪಿಸಿ, ವಾರ್ಷಿಕ ₹200 ಕೋಟಿ ಅನುದಾನ ಹಂಚಿಕೆ ಮಾಡಬೇಕು' ಎಂದರು.

'ರಿಯಲ್ ಎಸ್ಟೇಟ್ ಮಾಫಿಯಾಗೆ ಸರ್ಕಾರ ಶರಣು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಂಪೇಗೌಡರು ಕಟ್ಟಿದ ಕೆರೆಗಳನ್ನು ರಿಯಲ್ ಎಸ್ಟೇಟ್ ಕುಳಗಳ ಕಪಿಮುಷ್ಠಿಗೆ ಕೊಡಲು ಕಾಂಗ್ರೆಸ್ ಸರ್ಕಾರ ಮುಂದಾಗಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಟೀಕಿಸಿದ್ದಾರೆ.

ಪ್ರಜಾವಾಣಿಯಲ್ಲಿ ಪ್ರಕಟವಾದ '11 ಕೆರೆಗಷ್ಟೇ 30 ಮೀಟರ್ ಬಫರ್ ಝೋನ್' ವಿಶೇಷ ವರದಿಯನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಅಶೋಕ ಅವರು, 'ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ–2024ರ (ಕೆಟಿಸಿಡಿಎ) ಅಡಿ ಇರುವ ಎಲ್ಲ ಕೆರೆಗಳಿಗೆ 30 ಮೀಟರ್ ಬಫರ್ ಝೋನ್ ಇರಬೇಕು ಎಂಬ ನಿಯಮಕ್ಕೆ ತಿದ್ದುಪಡಿ ತರಲು ಸರ್ಕಾರ ಮುಂದಾಗಿದೆ. ಸಂರಕ್ಷಿತ ಪ್ರದೇಶವನ್ನು ಕಡಿಮೆ ಮಾಡಲು ಹೊರಟಿರುವ ಸರ್ಕಾರ ರಿಯಲ್ ಎಸ್ಟೇಟ್ ಮಾಫಿಯಾಗೆ ಶರಣಾಗಿ ಬೆಂಗಳೂರು ನಗರವನ್ನು ಸರ್ವನಾಶ ಮಾಡಲು ಪಣ ತೊಟ್ಟಿದೆ' ಎಂದು ಟೀಕಿಸಿದ್ದಾರೆ.


ಆರ್. ಅಶೋಕ

'ಈ ತಿದ್ದುಪಡಿ ಜಾರಿಯಾದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ 172 ಕೆರೆಗಳ ಬಫರ್ ಝೋನ್ 30 ಮೀಟರ್‌ಗಿಂತ ಕಡಿಮೆಯಾಗಲಿದ್ದು, ಪ್ರಕೃತಿ ವಿಕೋಪಗಳಿಗೆ ದಾರಿ ಮಾಡಿಕೊಡಲಿದೆ. ಒಂದು ಕಡೆ ಸುಪ್ರೀಂ ಕೋರ್ಟ್, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ), ಹೈಕೋರ್ಟ್ ಹಲವು ಬಾರಿ ಆದೇಶ ನೀಡಿದ್ದರೂ ಕೆರೆಗಳ ಒತ್ತುವರಿಯನ್ನು ತೆರವು ಮಾಡಿಲ್ಲ. ಬಫರ್ ಝೋನ್ ಅಂತೂ ಇಲ್ಲವೇ ಇಲ್ಲ. ಈಗ ಕೆರೆಗಳ 'ಸಂರಕ್ಷಿತ ವಲಯ'ವನ್ನು ಕಡಿಮೆ ಮಾಡುವ ಕಾಂಗ್ರೆಸ್ ಸರ್ಕಾರದ ತೀರ್ಮಾನ 'ಬ್ರ್ಯಾಂಡ್ ಬೆಂಗಳೂರಿನ' ಭವಿಷ್ಯಕ್ಕೆ ಮಾರಕವಾಗಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಬ್ರ್ಯಾಂಡ್ ಬೆಂಗಳೂರು ಕಟ್ಟುತ್ತೇನೆ ಎಂದು ಬೆಂಗಳೂರಿನ ಕೆರೆಗಳನ್ನು ಭೂ ಮಾಫಿಯಾಗೆ ಧಾರೆ ಎರೆದು ಕೊಡುತ್ತಿದ್ದಾರೆ. ಅವರ ಭೂದಾಹಕ್ಕೆ ಇನ್ನೆಷ್ಟು ಕೆರೆಗಳು ಬಲಿಯಾಗಬೇಕು' ಎಂದು ಪ್ರಶ್ನಿಸಿದ್ದಾರೆ.

ವರ್ಣ ಹಿತ ಕಾಪಾಡುವ ಗುರುಕುಲ ಬೇಡ

ಬಿ.ಆರ್. ರಾಮಚಂದ್ರೇಗೌಡ ಸಂಸ್ಮರಣೆಯಲ್ಲಿ ಎಸ್.ಜಿ. ಸಿದ್ದರಾಮಯ್ಯ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದಲ್ಲಿದ್ದ ಗುರುಕುಲ ಶಿಕ್ಷಣ ಪದ್ಧತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವ ಬದಲು ಅಲ್ಲಿ ಯಾರಿಗೆ ಶಿಕ್ಷಣ ಸಿಗುತ್ತಿತ್ತು ಎಂಬುದನ್ನು ನೋಡಬೇಕು. ವರ್ಣ ಹಿತ ಕಾಪಾಡುವ ಗುರುಕುಲ ಪದ್ಧತಿಯನ್ನು ತಿರಸ್ಕರಿಸಬೇಕು. ಎಲ್ಲರನ್ನು ಒಳಗೊಳ್ಳುವ ಮಾನವೀಯ, ಪ್ರಜಾಪ್ರಭುತ್ವ ಮಾದರಿಯ ಶಿಕ್ಷಣವೇ ಅಗತ್ಯವಾದುದು ಎಂದು ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದಲ್ಲಿ ಬುಧವಾರ ನಡೆದ ಗಾಂಧಿ ತತ್ವ ಪ್ರಣೀತ ಕಾರ್ಯಕ್ರಮ, ಬಿ.ಆರ್. ರಾಮಚಂದ್ರೇಗೌಡ ಸಂಸ್ಮರಣೆ ಮತ್ತು ಸಮಾಜಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಉಪನ್ಯಾಸ ನೀಡಿದರು.

'ಗುರುಕುಲ ಶಿಕ್ಷಣ ವ್ಯವಸ್ಥೆಯು ಒಂದು ವರ್ಣಕ್ಕೆ ಸೀಮಿತವಾಗಿತ್ತು. ನಾವೆಲ್ಲ ಹೊರಗಿನವರು. ಹಾಗಾಗಿ ಸ್ವಾತಂತ್ರ್ಯ ಸಿಗುವ ಹೊತ್ತಿಗೆ ಭಾರತದಲ್ಲಿ ವಿದ್ಯಾವಂತರ ಪ್ರಮಾಣ ಶೇ 14ರಷ್ಟು ಮಾತ್ರ ಇತ್ತು. ಎಲ್ಲರಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜವಾಹರಲಾಲ್ ನೆಹರೂ ಜಾರಿಗೆ ತಂದಿದ್ದರಿಂದ ಈಗ ಶೇ 80ರಷ್ಟು ದಾಟಲು ಸಾಧ್ಯವಾಗಿದೆ ಎಂದು ವಿವರಿಸಿದರು.



ಕೃಷಿ ತಜ್ಞ ಎನ್‌ಸಿ ಪಟೇಲ್ ಅವರಿಗೆ ಬಿ.ಆರ್ ರಾಮಚಂದ್ರೇಗೌಡ ಸಮಾಜ ಸೇವಾ ಪ್ರಶಸ್ತಿ ನೀಡಿ ಗೌರವಿಸಲಾಯಿತು ಪ್ರಜಾವಾಣಿ ಚಿತ್ರ

ಭಾರತವೂ ಸೇರಿದಂತೆ ಜಗತ್ತಿನಲ್ಲಿ ಅಸಹನೆ ಮತ್ತು ದ್ವೇಷ ಹೆಚ್ಚಾಗಿದೆ. ಹಿಂಸೆ, ಕ್ರೌರ್ಯಗಳಿಗೆ ಮಹಿಳೆಯರು ಮತ್ತು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಿದ್ದಾರೆ. ಯುದ್ಧವಲ್ಲ ಅಹಿಂಸೆ, ಶಾಂತಿ ಮುಖ್ಯ ಎಂದು ಪ್ರತಿಪಾದಿಸಿದ ಗಾಂಧೀಜಿ ಇಂಥ ಸಮಯದಲ್ಲಿ ಪ್ರಸ್ತುತರಾಗುತ್ತಾರೆ. ನಮ್ಮ ಪೀಳಿಗೆಗೆ ಗಾಂಧಿ ಅರ್ಥವಾಗಿದ್ದರು. ಆದರೆ, ಈಗಿನ ಯುವಪೀಳಿಗೆಗೆ ಗಾಂಧಿಗಿಂತ ಗೋಡ್ಸೆಯೇ ಮುಖ್ಯವಾಗಿರುವುದು ವಿಪರ್ಯಾಸ. ಗಾಂಧೀಜಿಯನ್ನು ಯುವ ಪೀಳಿಗೆಗೆ ತಲುಪಿಸದೇ ಇರುವುದು ಪ್ರಜಾಪ್ರಭುತ್ವದ ವೈಫಲ್ಯ ಎಂದು ಹೇಳಿದರು.

ಸಾರಿಗೆ ಸಚಿವ ರಾಮಲಿಂಗೇಗೌಡ ಮಾತನಾಡಿ, 'ರಾಮಚಂದ್ರೇಗೌಡರು ನಮ್ಮ ಗುರುಗಳು. ಅವರಿಗೆ ಕನ್ನಡದ ಬಗ್ಗೆ ಹೆಚ್ಚು ಪ್ರೀತಿ ಮತ್ತು ವಿದ್ವತ್ತು ಇತ್ತು' ಎಂದು ನೆನಪು ಮಾಡಿಕೊಂಡರು.

'ಗಾಂಧೀಜಿಯನ್ನು ಅಲ್ಲಗಳೆಯುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಜೈಲಿಗೆ ಹೋದವರು ಅಪ್ರಸ್ತುತರಾಗುತ್ತಿದ್ದಾರೆ. ಹೋರಾಟ ಮಾಡದವರೇ ಇಂದು ದೇಶಪ್ರೇಮಿಗಳಾಗುತ್ತಿದ್ದಾರೆ. ನಾವು ಗಟ್ಟಿ ಧ್ವನಿಯಲ್ಲಿ ಇದರ ವಿರುದ್ಧ ಧ್ವನಿ ಎತ್ತಿ ಸತ್ಯ ತಿಳಿಸದೇ ಹೋದರೆ 50 ವರ್ಷಗಳಲ್ಲಿ ಗಾಂಧೀಜಿ ಮರೆತುಹೋಗಲಿದ್ದಾರೆ' ಎಂದು ಆತಂಕ ವ್ಯಕ್ತಪಡಿಸಿದರು.

ಕೃಷಿ ತಜ್ಞ ಎನ್.ಸಿ. ಪಟೇಲ್ ಅವರಿಗೆ ಬಿ.ಆರ್. ರಾಮಚಂದ್ರೇಗೌಡ ಸಮಾಜಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಕಲಾ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಹಸನ್‌ಖಾನ್ ಕೆ. ಕುಲಕರ್ಣಿ, ರಾಮಚಂದ್ರೇಗೌಡ ಟ್ರಸ್ಟ್‌ನ ಟ್ರಸ್ಟಿಗಳಾದ ಹೊನ್ನಮ್ಮ, ಬಿ.ಆರ್. ಮಮತಾ, ಗಾಂಧಿಭವನ ಕೋಶಾಧ್ಯಕ್ಷ ಎಚ್.ಬಿ. ದಿನೇಶ್, ಗಾಂಧಿ ಅಧ್ಯಯನ ಕೇಂದ್ರದ ಸಂಚಾಲಕ ನಾಗೇಶ್ ಜಿ. ಉಪಸ್ಥಿತರಿದ್ದರು.

ರೈತರೊಂದಿಗಿನ ಸಭೆ ವಿಫಲ

ಸಭೆ ಅರ್ಧಕ್ಕೆ ಮೊಟಕು, ಅಧಿಕಾರಿಗಳ ವಿರುದ್ಧ ಆಕ್ರೋಶ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಬೆಂಗಳೂರು ಬಿಸಿನೆಸ್ ಕಾರಿಡಾರ್ (ಪಿಆರ್‌ಆರ್) ನಿರ್ಮಾಣ ಸಂಬಂಧ ಭೂಸ್ವಾಧೀನಕ್ಕೊಳಪಡುವ ಜಮೀನಿನ ರೈತರೊಂದಿಗೆ ಮಾತುಕತೆ ನಡೆಸಲು ಬುಧವಾರ ಬಿಡಿಎ ಅಧಿಕಾರಿಗಳು ಕರೆದಿದ್ದ ಸಭೆ ವಿಫಲವಾಯಿತು.

ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯ ಆಲೂರು ಗ್ರಾಮ ಪಂಚಾಯತಿಯಲ್ಲಿ ಕಂದಾಯ ಇಲಾಖೆ ಹಾಗೂ ಬಿಡಿಎ ಅಧಿಕಾರಿಗಳು ಈ ಸಭೆ ಕರೆದಿದ್ದರು. ಅಧಿಕಾರಿಗಳಿಗೂ ರೈತರಿಗೂ ಮಧ್ಯೆ ಸಮನ್ವಯ ಬಾರದ ಕಾರಣ ಅಧಿಕಾರಿಗಳ ತಂಡ ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಿ ಹೊರನಡೆದರು.

'ಪಿಆರ್‌ಆರ್ ನಿರ್ಮಾಣದಿಂದ ಭೂಮಿ ಕಳೆದುಕೊಳ್ಳುವ ರೈತರಿಗೆ ನೋಟಿಸ್ ನೀಡದೇ ಅಥವಾ ದಿನ ಪತ್ರಿಕೆಗಳಲ್ಲಿ ಸಭೆ ಕುರಿತು ಜಾಹೀರಾತು ನೀಡದೇ, ಕೆಲವು ಮಧ್ಯವರ್ತಿಗಳ ಮೂಲಕ ಏಕಾಏಕಿ ಸಭೆಗೆ ಆಹ್ವಾನಿಸಿ ಅಭಿಪ್ರಾಯಗಳನ್ನು ಲಿಖಿತ ರೂಪದಲ್ಲಿ ಕೊಡಿ ಎಂದರೆ ಹೇಗೆ? ಎಂದು ಸಭೆಯಲ್ಲಿದ್ದ ರೈತರು, ಅಧಿಕಾರಿಗಳನ್ನು ಪ್ರಶ್ನಿಸಿದರು.


ರೈತರು ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು

'ಕಾನೂನಾತ್ಮಕವಾಗಿ ಸಭೆಯನ್ನು ಕರೆಯದೆ, ರೈತರನ್ನು ಬೆದರಿಸಿ ಅಭಿಪ್ರಾಯ ಕೇಳುತ್ತೀರಾ' ಎಂದು ಅಧಿಕಾರಿಗಳ ವಿರುದ್ಧ ರೈತರು ಮುಗಿಬಿದ್ದರು. 'ಸ್ವಾಧೀನಕ್ಕೊಳಪಡುವ ಭೂ ಮಾಲೀಕರಿಗೆ 2013ರ ಕಾಯ್ದೆ ಪ್ರಕಾರ ಪರಿಹಾರ ನೀಡದೇ ರೈತರನ್ನು ದಾರಿ ತಪ್ಪಿಸಲು ಇಂತಹ ಸಭೆಗಳನ್ನು ನಡೆಸುತ್ತಿದ್ದೀರಿ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದ ಪಿಆರ್‌ಆರ್‌ಗೆ 20 ವರ್ಷ ಕಳೆದರೂ ಈವರೆಗೆ ಪರಿಹಾರ ನಿಗದಿ ಮಾಡಿಲ್ಲ. ಇದರಿಂದ ಜಮೀನಿನಲ್ಲಿ ವ್ಯವಸಾಯ ಮಾಡಲೂ ಆಗದೇ, ಅದನ್ನು ಮಾರಾಟ ಮಾಡಿ ನಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳಲು ಆಗದೇ ನಮ್ಮನ್ನು ತ್ರಿಶಂಕು ಸ್ಥಿತಿಯಲ್ಲಿ ಇಡಲಾಗಿದೆ' ಎಂದು ತಮ್ಮೇನಹಳ್ಳಿ ಗ್ರಾಮದ ಶ್ರೀನಿವಾಸ ರೆಡ್ಡಿ ಕಿಡಿಕಾರಿದರು.

'ಪಿಆರ್‌ಆರ್ ವಿರೋಧಿಸಿ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳು ನಡೆಯುತ್ತಿವೆ. ಅಂತಹದರಲ್ಲಿ ಬಿಡಿಎ ಅಧಿಕಾರಿಗಳು ಇಂತಹ ಸಭೆಗಳನ್ನು ನಡೆಸುವ ಮೂಲಕ ನ್ಯಾಯಾಂಗ ನಿಂದನೆ ಮಾಡುತ್ತಿದ್ದಾರೆ' ಎಂದು ಆರೋಪಿಸಿದರು. ತಹಶೀಲ್ದಾರ್ ಅನಿಲ್ ಕುಮಾರ್ ನೇತೃತ್ವದಲ್ಲಿ ಕಂದಾಯ ಇಲಾಖೆ ಮತ್ತು ಬಿಡಿಎ ಅಧಿಕಾರಿಗಳು ಸಭೆ ನಡೆಸಿದರು.

ಆಯ್ಕೆ ಅನೂರ್ಜಿತ ಕೋರಿಕೆ ಅರ್ಜಿ ವಜಾ

ಬೆಂಗಳೂರು: 'ಮತದಾರರಿಗೆ ಗ್ಯಾರಂಟಿ ಯೋಜನೆಗಳ ಆಮಿಷವೊಡ್ಡುವ ಮೂಲಕ ಚುನಾವಣಾ ಅಕ್ರಮ ಎಸಗಿ ಗೆದ್ದಿರುವ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಕೋರಲಾದ ಚುನಾವಣಾ ತಕರಾರು ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಆರ್.ವಿ ವಿಶ್ವವಿದ್ಯಾಲಯದಲ್ಲಿ ನವೋದಯ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್.ವಿ ವಿಶ್ವವಿದ್ಯಾಲಯದಲ್ಲಿ ಹೊಸ ವಿದ್ಯಾರ್ಥಿಗಳನ್ನು ಸ್ವಾಗತಿಸುವ 'ನವೋದಯ' ಕಾರ್ಯಕ್ರಮ ನಡೆಯಿತು.

ಕಾನೂನು, ಬಿಸಿನೆಸ್, ಎಕನಾಮಿಕ್ಸ್ ಆಂಡ್ ಪಬ್ಲಿಕ್ ಪಾಲಿಸಿ, ಕಂಪ್ಯೂಟರ್ ವಿಜ್ಞಾನ ಮತ್ತು ಎಂಜಿನಿಯರಿಂಗ್, ಡಿಸೈನ್ ಮತ್ತು ಇನ್ನೋವೇಷನ್, ಲಿಬರಲ್ ಆರ್ಟ್ಸ್ ಆಂಡ್ ಸೈನ್ಸ್, ಫಿಲ್ಮ್, ಮೀಡಿಯಾ ಆ್ಯಂಡ್ ಕ್ರಿಯೇಟಿವ್ ಆರ್ಟ್ಸ್ ಮತ್ತು ಸ್ಕೂಲ್ ಆಫ್ ಕಂಟಿನ್ಯೂಯಿಂಗ್ ಎಜುಕೇಷನ್ ಆ್ಯಂಡ್ ಪ್ರೊಫೆಷನಲ್ ಸ್ಟಡೀಸ್ ವಿಭಾಗಗಳ 2000 ವಿದ್ಯಾರ್ಥಿಗಳಿಗೆ ಸ್ವಾಗತ ಕೋರಲಾಯಿತು.

ಮುಂದಿನ ವರ್ಷ ಮೈಸೂರಿನ ನಂಜನಗೂಡಿನಲ್ಲಿ ಆರ್.ವಿ ವಿಶ್ವವಿದ್ಯಾಲಯದ ಹೊಸ ಕ್ಯಾಂಪಸ್ ಆರಂಭವಾಗಲಿದೆ ಎಂದು ಕಾರ್ಯಕ್ರಮದಲ್ಲಿ ಘೋಷಿಸಲಾಯಿತು.

ಆರ್.ವಿ ವಿಶ್ವವಿದ್ಯಾಲಯದ ಕುಲಾಧಿಪತಿ ಎ.ವಿ.ಎಸ್. ಮೂರ್ತಿ ಮಾತನಾಡಿ, 'ನವೋದಯ 2025 ಕಾರ್ಯಕ್ರಮವು ನಾಳೆಯ ನಾಯಕರು, ಸಂಶೋಧಕರು ಮತ್ತು ಚಿಂತಕರನ್ನು ರೂಪಿಸುವ ಒಂದು ದೀರ್ಘ ಪಯಣದ ಆರಂಭ' ಎಂದು ಬಣ್ಣಿಸಿದರು.

ಎಂ.ಎಸ್ ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್ ಕುಲಪತಿ ಎಂ.ಆರ್. ಜಯರಾಮ್, ಯುಜಿಸಿ ಸದಸ್ಯ ಎಂ.ಕೆ. ಶ್ರೀಧರ್, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಎಂ.ಪಿ. ಶ್ಯಾಮ್, ಸಹಕುಲಾಧಿಪತಿ ಡಿ.ಪಿ. ನಾಗರಾಜ್, ಆರ್‌ವಿಯು ನಿರ್ದೇಶಕ ನಿಖಿಲ್ ಎ. ಮೂರ್ತಿ, ಕುಲಪತಿ ದ್ವಾರಕಾ ಪ್ರಸಾದ್ ಉನಿಯಾಲ್, ಸಹ ಕುಲಪತಿ ಅನುರಾಧಾ ಚಟರ್ಜಿ, ಕುಲಸಚಿವೆ ಸಹನಾ ಡಿ. ಗೌಡ ಉಪಸ್ಥಿತರಿದ್ದರು.

ರಕ್ತದ ಗುಂಪಿಗೆ 'ಸಿಆರ್‌ಐಬಿ' ಎಂದು ಹೆಸರು

ಮಹಿಳೆಯಲ್ಲಿ ರಕ್ತದ ಹೊಸ ಗುಂಪು ಪತ್ತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೋಲಾರದ 38 ವರ್ಷದ ಮಹಿಳೆಯಲ್ಲಿ ಪತ್ತೆ
- ಬ್ರಿಟನ್‌ನ ಐಬಿಜಿಆರ್‌ಎಲ್‌ನಲ್ಲಿ 10 ತಿಂಗಳ ಸಂಶೋಧನೆ

ಬೆಂಗಳೂರು: ಜಗತ್ತಿನಲ್ಲಿ ಈವರೆಗೆ ಎಲ್ಲಿಯೂ ಕಂಡಿರದ ರಕ್ತದ ಹೊಸ ಗುಂಪೊಂದು ಕೋಲಾರದ 38 ವರ್ಷದ ಮಹಿಳೆಯೊಬ್ಬರಲ್ಲಿ ಪತ್ತೆಯಾಗಿದ್ದು, ಈ ರಕ್ತದ ಗುಂಪಿಗೆ 'ಸಿಆರ್‌ಐಬಿ' ಎಂದು ಹೆಸರಿಸಲಾಗಿದೆ.

ಕೋಲಾರದ ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ದಾಖಲಾಗಿದ್ದ ಮಹಿಳೆಯೊಬ್ಬರ ರಕ್ತದ ಮಾದರಿಯನ್ನು, ಹೆಚ್ಚಿನ ವಿಶ್ಲೇಷಣೆಗೆ ರೋಟರಿ ಬೆಂಗಳೂರು ಟಿಟಿಕೆ ರಕ್ತ ಕೇಂದ್ರಕ್ಕೆ ಕಳೆದ ವರ್ಷ ರವಾನಿಸಲಾಗಿತ್ತು. ಕೇಂದ್ರದ ಅಡ್ವಾನ್ಸ್‌ಡ್ ಇಮ್ಯುನೊ ಹೆಮಟಾಲಜಿ ರೆಫರನ್ಸ್ ಪ್ರಯೋಗಾಲಯದಲ್ಲಿ 'ಸೆರೋಲಾಜಿಕಲ್' ವಿಧಾನದಲ್ಲಿ ಪರೀಕ್ಷಿಸಲಾಗಿತ್ತು. ಈ ಪರೀಕ್ಷೆಯಲ್ಲಿ ರಕ್ತವು ಯಾವುದೇ ಗುಂಪಿಗೆ ಹೋಲಿಕೆಯಾಗದ ಕಾರಣ, ಇನ್ನಷ್ಟು ಪರೀಕ್ಷೆಗಾಗಿ ಯುನೈಟೆಡ್ ಕಿಂಗ್‌ಡಮ್‌ನ ಬ್ರಿಸ್ಟಲ್‌ನಲ್ಲಿರುವ ಇಂಟರ್‌ನ್ಯಾಷನಲ್ ಬ್ಲಡ್ ಗ್ರೂಪ್ ಲ್ಯಾಬೊರೇಟರಿಗೆ (ಐಬಿಜಿಆರ್‌ಎಲ್) ಕಳುಹಿಸಲಾಗಿತ್ತು.

ಐಬಿಜಿಆರ್‌ಎಲ್‌ನಲ್ಲಿ 10 ತಿಂಗಳ ಸಂಶೋಧನೆ ಬಳಿಕ ಹೊಸ ರಕ್ತದ ಗುಂಪನ್ನು ಪತ್ತೆ ಮಾಡಲಾಗಿದೆ. ಜೂನ್ 4ರಂದು ಇಟಲಿಯ ಮಿಲನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ರಕ್ತ ವರ್ಗಾವಣೆ ಸೊಸೈಟಿಯ (ಐಎಸ್‌ಬಿಟಿ) 35ನೇ ಪ್ರಾದೇಶಿಕ ಕಾಂಗ್ರೆಸ್‌ನಲ್ಲಿ 'ಸಿಆರ್‌ಐಬಿ' ನೂತನ ರಕ್ತದ ಗುಂಪನ್ನು ಘೋಷಿಸಲಾಗಿದೆ. ಸಿಆರ್ ಎಂಬುದು 'ಕ್ರೋಮರ್' ಎಂಬುದನ್ನು ಪ್ರತಿನಿಧಿಸಿದರೆ, 'ಐಬಿ' ಎಂಬುದು ಇಂಡಿಯಾ ಮತ್ತು ಬೆಂಗಳೂರನ್ನು ಸೂಚಿಸುತ್ತದೆ.

2024ರ ಫೆಬ್ರುವರಿ ತಿಂಗಳಲ್ಲಿ ಮಹಿಳೆ ಹೃದಯ ಶಸ್ತ್ರಚಿಕಿತ್ಸೆಗಾಗಿ ಆರ್.ಎಲ್. ಜಾಲಪ್ಪ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರಕ್ಕೆ ದಾಖಲಾಗಿದ್ದರು. 'ಒ' ಪಾಸಿಟಿವ್ ರಕ್ತದ ಗುಂಪು ಹೊಂದಿದ್ದ ಅವರಿಗೆ, ಹೊಂದಾಣಿಕೆಯಾಗುವ ರಕ್ತವನ್ನು ಸಂಗ್ರಹಿಸಿಡಲು ಆಸ್ಪತ್ರೆಯ ವೈದ್ಯಾಧಿಕಾರಿಗಳು ರಕ್ತ ನಿಧಿ ಕೇಂದ್ರಕ್ಕೆ ಸೂಚಿಸಿದ್ದರು.

ಆದರೆ, ಅವರ ರಕ್ತವು ಆಸ್ಪತ್ರೆಯಲ್ಲಿ ಲಭ್ಯವಿದ್ದ ಯಾವುದೇ 'ಒ' ಪಾಸಿಟಿವ್ ಗುಂಪಿನ ರಕ್ತಕ್ಕೆ ಹೊಂದಾಣಿಕೆ ಆಗಲಿಲ್ಲ. ಆದ್ದರಿಂದ ರೋಟರಿ ಬೆಂಗಳೂರು ಟಿಟಿಕೆ ರಕ್ತ ಕೇಂದ್ರಕ್ಕೆ ರಕ್ತದ ಮಾದರಿಯನ್ನು ರವಾನಿಸಲಾಗಿತ್ತು.

'ಮಹಿಳೆಯ ರಕ್ತವು ಯಾವುದೇ ಮಾದರಿಗಳೊಂದಿಗೆ ಹೊಂದಾಣಿಕೆ ಆಗುತ್ತಿರಲಿಲ್ಲ. ಇದು ಅಪರೂಪದ ಪ್ರಕರಣವಾದ್ದರಿಂದ ಅವರ ಕುಟುಂಬದ ಸದಸ್ಯರ ರಕ್ತದ ಮಾದರಿಯನ್ನೂ ಸಂಗ್ರಹಿಸಿ, ಪರೀಕ್ಷಿಸಿದರೂ ಅವರಿಗೆ ಹೊಂದಾಣಿಕೆ ಆಗುತ್ತಿರಲಿಲ್ಲ. ಪ್ರಯೋಗಾಲಯದ ಪರೀಕ್ಷೆಯಿಂದ ಮಹಿಳೆಯು ಹೊಸ ರಕ್ತದ ಗುಂಪು ಹೊಂದಿರುವುದು ದೃಢಪಟ್ಟಿದೆ. ಈ ರೀತಿ ಪ್ರಕರಣಗಳಲ್ಲಿ ಹಿಮೋಗ್ಲೋಬಿನ್ ಮಟ್ಟವನ್ನು ಹೆಚ್ಚಿಸಲು ಕಬ್ಬಿಣದ ಪೂರಕ ಔಷಧಗಳನ್ನು ನೀಡಬೇಕಾಗುತ್ತದೆ. ಅಗತ್ಯತೆಗೆ ಅನುಗುಣವಾಗಿ ವ್ಯಕ್ತಿಯ ರಕ್ತವನ್ನು ಸಂಗ್ರಹಿಸಿ, ಶಸ್ತ್ರಚಿಕಿತ್ಸೆಗೆ ಬಳಸಬೇಕಾಗುತ್ತದೆ' ಎಂದು ರೋಟರಿ ಬೆಂಗಳೂರು ಟಿಟಿಕೆ ರಕ್ತ ಕೇಂದ್ರ ತಿಳಿಸಿದೆ.

ಚಿತ್ರಾವಳಿ



ವಿದ್ಯಾರ್ಥಿವೇತನ ಬಿಡುಗಡೆ, ಹಾಸ್ಟೆಲ್‌ಗಳಲ್ಲಿ ಮೂಲಸೌಕರ್ಯ ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ



ಕುಂಬಳಗೋಡುನ ಕ್ರೈಸ್ಟ್ ಪಿಯು ಕಾಲೇಜಿನಲ್ಲಿ ಈಚೆಗೆ ನಡೆದ ವಿಜ್ಞಾನ ವಸ್ತು ಪ್ರದರ್ಶನಗಳ ಸ್ಪರ್ಧೆಯಲ್ಲಿ ಎನ್‌ಎಂಕೆಆರ್‌ವಿ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳಾದ ಜನ್ಯ ವಿನೋದ್, ಶ್ರೇಯಸಿ, ದಿಯಾ, ಸಂಜನಾ ಮತ್ತು ಐಶ್ವರ್ಯಾ ಅವರ ತಂಡ ತೃತೀಯ ಬಹುಮಾನ ಪಡೆಯಿತು

ಇ.ಡಿ ವಿಚಾರಣೆ
ಆನ್‌ಲೈನ್ ಬೆಟ್ಟಿಂಗ್‌ಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದ ವಿಚಾರಣೆಗಾಗಿ ನಟ ಪ್ರಕಾಶ್ ರಾಜ್ ಅವರು ಬುಧವಾರ ಇ.ಡಿ ಅಧಿಕಾರಿಗಳ ಎದುರು ಹಾಜರಾದರು



ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ನೋಂದಣಿ ಸಂಖ್ಯೆಗೆ ಪತ್ರ
ನಿವೃತ್ತ ಸಿಜೆಐ ಡಿ.ವೈ.ಚಂದ್ರಚೂಡ್ ಅವರ ಮರ್ಸಿಡಿಸ್ ಕಾರಿಗೆ ನಿರ್ದಿಷ್ಟ ನೋಂದಣಿ ಸಂಖ್ಯೆ ನೀಡುವಂತೆ ಸುಪ್ರೀಂ ಕೋರ್ಟ್ ರಿಜಿಸ್ಟ್ರಾರ್ ಅವರು ದೆಹಲಿ ಸಾರಿಗೆ ಆಯುಕ್ತರಿಗೆ ಪತ್ರ ಬರೆದಿದ್ದಾರೆ

ಸೆನ್ಸೆಕ್ಸ್ 81,481 | ನಿಫ್ಟಿ 24,855 | $/₹ 87.80 | ಚಿನ್ನ (Std. 10g) ₹1,04,800 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,21,400 (ಬೆಂಗಳೂರು)

ಅಮೆರಿಕದಿಂದ ಸುಂಕ ಪ್ರಹಾರ

ರಷ್ಯಾದಿಂದ ಶಸ್ತ್ರಾಸ್ತ್ರ ಖರೀದಿಸುತ್ತಿರುವ ಭಾರತದ ಮೇಲೆ ದಂಡ ಅಸ್ತ್ರ

ವಾಷಿಂಗ್ಟನ್ (ಪಿಟಿಐ/ರಾಯಿಟರ್ಸ್): ಭಾರತದಿಂದ ಅಮೆರಿಕಕ್ಕೆ ಆಮದಾಗುವ ಎಲ್ಲ ಸರಕುಗಳ ಮೇಲೆ ಆಗಸ್ಟ್ 1ರಿಂದ ಶೇಕಡ 25ರಷ್ಟು ಸುಂಕ ವಿಧಿಸಲಾಗುತ್ತದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬುಧವಾರ ಹೇಳಿದ್ದಾರೆ.


ಡೊನಾಲ್ಡ್ ಟ್ರಂಪ್

ಜಗತ್ತಿನ ಐದನೆಯ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಿರುವ ಭಾರತವು ರಷ್ಯಾದಿಂದ ಶಸ್ತ್ರಾಸ್ತ್ರ ಮತ್ತು ಕಚ್ಚಾ ತೈಲ ಖರೀದಿಸುತ್ತಿರುವುದಕ್ಕಾಗಿ ಆಗಸ್ಟ್ 1ರಿಂದ ಒಂದಿಷ್ಟು ದಂಡವನ್ನು ಕೂಡ ತೆರಬೇಕಿದೆ ಎಂದು ಟ್ರಂಪ್ ತಿಳಿಸಿದ್ದಾರೆ. ಆದರೆ, ದಂಡದ ಕುರಿತಾಗಿ ಅವರು ಹೆಚ್ಚಿನ ವಿವರಣೆ ನೀಡಿಲ್ಲ.

ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸಲು ಅಮೆರಿಕದ ತಂಡವೊಂದು ಆಗಸ್ಟ್ 25ಕ್ಕೆ ಭಾರತಕ್ಕೆ ಬರಲಿದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಗಳು ತಿಳಿಸಿದ ನಂತರದಲ್ಲಿ ಟ್ರಂಪ್ ಅವರ ಈ ದಿಢೀರ್ ಪ್ರಕಟಣೆ ಬಂದಿದೆ. ಅಮೆರಿಕವು ಮುಂದಿರಿಸಿರುವ ಬೇಡಿಕೆಗಳಿಗೆ ಭಾರತವು ಒಪ್ಪುವಂತೆ ಮಾಡಲು ಸುಂಕವನ್ನು ಒತ್ತಡ ತಂತ್ರವನ್ನಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ವಿಶ್ಲೇಷಿಸಲಾಗಿದೆ.

'ಭಾರತವು ನಮ್ಮ ಸ್ನೇಹಿತ. ಆದರೆ, ವರ್ಷಗಳಿಂದ ನಾವು ಭಾರತದ ಜೊತೆ ಹೆಚ್ಚಿನ ವಹಿವಾಟು ನಡೆಸಿಲ್ಲ. ಏಕೆಂದರೆ, ಭಾರತದಲ್ಲಿನ ಸುಂಕವು ಬಹಳ ಹೆಚ್ಚಿನ ಮಟ್ಟದಲ್ಲಿದೆ. ಅದು ಜಗತ್ತಿನಲ್ಲಿ ಅತಿಹೆಚ್ಚಿನ ಸುಂಕ ಇರುವ ದೇಶಗಳ ಪೈಕಿ ಒಂದಾಗಿದೆ. ಭಾರತವು ಇತರ ಯಾವುದೇ ದೇಶಕ್ಕಿಂತ ಅತ್ಯಂತ ಕಠಿಣವಾದ ಹಾಗೂ ಅಸಹ್ಯಕರವಾದ ಹಣಕಾಸೇತರ ವಾಣಿಜ್ಯ ತಡೆಗೋಡೆಗಳನ್ನು ಹೊಂದಿದೆ' ಎಂದು ಟ್ರಂಪ್ ಅವರು 'ಟ್ರುಥ್ ಸೋಷಿಯಲ್' ಸಾಮಾಜಿಕ ಮಾಧ್ಯಮದಲ್ಲಿ ಬರೆದಿದ್ದಾರೆ.

'ಅವರು ತಮಗೆ ಬೇಕಿರುವ ಮಿಲಿಟರಿ ಉಪಕರಣಗಳ ಪೈಕಿ ಬಹಳಷ್ಟನ್ನು ಯಾವಾಗಲೂ ರಷ್ಯಾದಿಂದ ಖರೀದಿಸಿದ್ದಾರೆ. ಉಕ್ರೇನ್‌ನಲ್ಲಿ ನಡೆಯುತ್ತಿರುವ ಹತ್ಯೆಗಳನ್ನು ರಷ್ಯಾ ನಿಲ್ಲಿಸಬೇಕು ಎಂದು ಎಲ್ಲರೂ ಬಯಸುತ್ತಿರುವ ಹೊತ್ತಿನಲ್ಲಿ ಚೀನಾ ಜೊತೆ ಭಾರತವು ರಷ್ಯಾದಿಂದ ಅತಿದೊಡ್ಡ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುತ್ತಿದೆ. ಇವೆಲ್ಲವೂ ಒಳ್ಳೆಯದಲ್ಲ' ಎಂದು ಟ್ರಂಪ್ ದೂರಿದ್ದಾರೆ.

ಟ್ರಂಪ್ ಅವರ ಘೋಷಣೆಯ ಪರಿಣಾಮಗಳ ಬಗ್ಗೆ ಅಧ್ಯಯನ ನಡೆದಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಸುಂಕದ ಪರಿಣಾಮಗಳ ಬಗ್ಗೆ ಅಧಿಕಾರಿಗಳು ಚರ್ಚಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಭಾರತದಿಂದ ಅಮೆರಿಕ ಪ್ರವೇಶಿಸುವ ಬಹುತೇಕ ಸರಕುಗಳ ಮೇಲೆ ಶೇ 10ರಷ್ಟು ಮೂಲಸುಂಕ ವಿಧಿಸಲಾಗುತ್ತಿದೆ.

▶12

ಮುಖ್ಯಾಂಶಗಳು

- ಭಾರತದ ಸರಕುಗಳ ಮೇಲೆ ಆ. 1ರಿಂದ ಶೇ 25ರಷ್ಟು ಸುಂಕ: ಟ್ರಂಪ್
- ಭಾರತದ ವಿರುದ್ಧ ಒತ್ತಡದ ತಂತ್ರವಾಗಿ ಸುಂಕ ಏರಿಕೆ?
- ರಾಷ್ಟ್ರದ ಹಿತಾಸಕ್ತಿ ಗಮನದಲ್ಲಿ ಇಟ್ಟುಕೊಂಡು ಕ್ರಮ: ಕೇಂದ್ರ

ಆಸೆಗೆ ತಣ್ಣೀರು...

ಭಾರತ ಮತ್ತು ಅಮೆರಿಕದ ನಡುವೆ ಸೀಮಿತ ಪ್ರಮಾಣದ ಮಧ್ಯಂತರ ವ್ಯಾಪಾರ ಒಪ್ಪಂದವೊಂದು ಸಾಧ್ಯವಾಗಬಹುದು ಎಂಬ ಆಸೆಗೆ ಟ್ರಂಪ್ ಹೇಳಿಕೆಯು ತಣ್ಣೀರು ಎರಚಿದೆ. ಎರಡೂ ದೇಶಗಳ ನಡುವೆ ಮಧ್ಯಂತರ ವ್ಯಾಪಾರ ಒಪ್ಪಂದ ಕುರಿತಾಗಿ ಮಾತುಕತೆ ನಡೆಯುತ್ತಿದೆ.

ಭಾರತ ಮತ್ತು ಅಮೆರಿಕದ ಅಧಿಕಾರಿಗಳು ಹಲವು ಸುತ್ತುಗಳ ಮಾತುಕತೆಯನ್ನು ನಡೆಸಿದ್ದಾರೆ. ಅದರಲ್ಲೂ ಮುಖ್ಯವಾಗಿ, ಅಮೆರಿಕದ ಕೃಷಿ ಹಾಗೂ ಹೈನು ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯ ಬಾಗಿಲು ತೆರೆಯುವ ವಿಚಾರವಾಗಿಯೂ ಮಾತುಕತೆ ನಡೆದಿದೆ.

ಕೆಲವು ವಿಚಾರಗಳಲ್ಲಿ ಮಾತುಕತೆಯ ಮೂಲಕ ಪ್ರಗತಿ ಸಾಧಿಸಲಾಗಿದೆ. ಆದರೆ, ಗೋಧಿ, ಜೋಳ, ಅಕ್ಕಿ, ಕುಲಾಂತರಿ ಸೋಯಾಬೀನ್‌ಗಳಿಗೆ ಭಾರತದ ಮಾರುಕಟ್ಟೆಯ ಬಾಗಿಲು ತೆರೆಯುವ ಪ್ರಸ್ತಾವನೆಯನ್ನು ಭಾರತದ ಅಧಿಕಾರಿಗಳು ಒಪ್ಪುತ್ತಿಲ್ಲ. ಈ ಉತ್ಪನ್ನಗಳಿಗೆ ಭಾರತ ಪ್ರವೇಶಿಸಲು ಅವಕಾಶ ಕಲ್ಪಿಸಿದರೆ ಇಲ್ಲಿನ ರೈತರ ಜೀವನೋಪಾಯಕ್ಕೆ ಧಕ್ಕೆ ಆಗುತ್ತದೆ ಎಂದು ಭಾರತದ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಭಾರತದ ಅತಿದೊಡ್ಡ ಪಾಲುದಾರ

2021ರಿಂದ 2025ರ ನಡುವಿನ ಅವಧಿಯಲ್ಲಿ ಅಮೆರಿಕವು ಭಾರತದ ಅತಿದೊಡ್ಡ ವಾಣಿಜ್ಯ ಪಾಲುದಾರ ಆಗಿದೆ. ಭಾರತದಿಂದ ರಫ್ತಾಗುವ ಸರಕುಗಳಲ್ಲಿ ಶೇ 18ರಷ್ಟು ಅಮೆರಿಕಕ್ಕೆ ಹೋಗುತ್ತವೆ.

2024–25ರಲ್ಲಿ ಭಾರತವು ಅಮೆರಿಕದ ಜೊತೆ 41 ಬಿಲಿಯನ್ ಡಾಲರ್ (₹3.59 ಲಕ್ಷ ಕೋಟಿ) ದ್ವಿಪಕ್ಷೀಯ ವ್ಯಾಪಾರ ಮಿಗತೆ ಹೊಂದಿದೆ.

ವಿದ್ಯಾರ್ಥಿಗಳ ಪಡಿಪಾಟಲು

ಪಿಟಿಐ ಚಿತ್ರ


ಅಹಮದಾಬಾದ್‌ನಲ್ಲಿ ಬುಧವಾರ ಸುರಿದ ಭಾರಿ ಮಳೆಯಿಂದಾಗಿ ಶಾಲಾ ಆವರಣವು ಜಲಾವೃತಗೊಂಡಿದ್ದು, ವಿದ್ಯಾರ್ಥಿಗಳು ಶಾಲೆಯಿಂದ ಹೊರ ನಡೆಯಲು ಪಡಿಪಾಟಲು ಪಟ್ಟರು

₹378 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ ದೋಚಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವೈಟ್‌ಫೀಲ್ಡ್‌ನಲ್ಲಿರುವ ಕ್ರಿಪ್ಟೊ ಕರೆನ್ಸಿ ಕಂಪನಿಯಾದ ನೆಬಿಲೊ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್‌ನ ಸರ್ವರ್ ಹ್ಯಾಕ್ ಮಾಡಿದ ಸೈಬರ್ ವಂಚಕರು, ₹378 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ ದೋಚಿದ್ದಾರೆ.

ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ನೆಬಿಲೊ ಟೆಕ್ನಾಲಜೀಸ್ ಕಂಪನಿಯ ಗುತ್ತಿಗೆ ಸಿಬ್ಬಂದಿ ರಾಹುಲ್ ಅಗರ್‌ವಾಲ್ ಅವರನ್ನು ಬಂಧಿಸಲಾಗಿದೆ.

ರಾಹುಲ್ ಅವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಹೆಚ್ಚಿನ ವಿಚಾರಣೆಗಾಗಿ ಪೊಲೀಸ್ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿ ಬಳಸುತ್ತಿದ್ದ ಲ್ಯಾಪ್‌ಟಾಪ್ ಹಾಗೂ ಮೊಬೈಲ್ ವಶಕ್ಕೆ ಪಡೆದುಕೊಳ್ಳಲಾಗಿದೆ. ಹರ್ದೀಪ್ ಸಿಂಗ್ ಅವರು ನೀಡಿದ ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

ಎರಡು ಬಾರಿ ಹ್ಯಾಕ್: ಕಂಪನಿಯು ಕ್ರಿಪ್ಟೊ ಕರೆನ್ಸಿ ಬದಲಾವಣೆ ಮಾಡುವ ಫ್ಲಾಟ್ ಫಾರಂ ಆಗಿದೆ. ಸೈಬರ್ ವಂಚಕರು ಎರಡು ಬಾರಿ ಸರ್ವರ್ ಹ್ಯಾಕ್ ಮಾಡಿದ್ದಾರೆ. ಜುಲೈ 19ರ ಮುಂಜಾನೆ ಕಂಪನಿಯ ವ್ಯಾಲೆಟ್ ಅನ್ನು ಹ್ಯಾಕ್ ಮಾಡಿದ್ದರು. ಆಗ ವ್ಯಾಲೆಟ್‌ನಿಂದ ಒಂದು ಯುಎಸ್‌ಡಿಟಿ ಅನ್ನು ಮತ್ತೊಂದು ವ್ಯಾಲೆಟ್‌ಗೆ ವರ್ಗಾವಣೆ ಮಾಡಿಕೊಂಡಿದ್ದರು. ನಂತರ, ಅಂದೇ ಬೆಳಿಗ್ಗೆ 9.40ರ ಸುಮಾರಿಗೆ ಮತ್ತೆ ಸರ್ವರ್ ಹ್ಯಾಕ್ ಮಾಡಿ, ವ್ಯಾಲೆಟ್‌ನಿಂದ 44 ಮಿಲಿಯನ್ ಯುಎಸ್‌ಡಿಟಿ (ಅಂದಾಜು ₹378 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ) ಅನ್ನು ವರ್ಗಾವಣೆ ಮಾಡಿಕೊಂಡಿದ್ದಾರೆ ಎಂದು ದೂರು ನೀಡಲಾಗಿದೆ.

'ರಾಹುಲ್ ಅವರು ನೆಬಿಲೊ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್‌ನಲ್ಲಿ ಒಂದು ವರ್ಷದಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದರು. ಕ್ರಿಪ್ಟೊ ಕರೆನ್ಸಿ ಕಂಪನಿ ನೀಡಿದ್ದ ಲ್ಯಾಪ್‌ಟಾಪ್ ಅನ್ನು ಬಳಸಿಕೊಂಡು ರಾಹುಲ್ ಬೇರೆ ಕಂಪನಿಯ ಕೆಲಸವನ್ನೂ ಮಾಡುತ್ತಿದ್ದರು. ರಾಹುಲ್ ಅಗರ್‌ವಾಲ್ ಮತ್ತೊಂದು ಕಂಪನಿಯಲ್ಲಿ ಕೆಲಸ ಮಾಡುವ ವೇಳೆ ಸೈಬರ್ ವಂಚಕರು ಲ್ಯಾಪ್‌ಟಾಪ್ ಹ್ಯಾಕ್ ಮಾಡಿ ಸರ್ವರ್‌ಗೆ ಪ್ರವೇಶಿಸಿ ₹378 ಕೋಟಿ ಮೌಲ್ಯದ ಕ್ರಿಪ್ಟೊ ಕರೆನ್ಸಿ ದೋಚಿರುವುದು ಗೊತ್ತಾಗಿದೆ' ಎಂದು ಸೈಬರ್ ಪೊಲೀಸರು ಹೇಳಿದರು.

ಆಂತರಿಕ ತನಿಖೆ ನಡೆಸಿದ್ದ ಕಂಪನಿ

ಕ್ರಿಪ್ಟೊ ಕರೆನ್ಸಿ ದೋಚಿರುವುದು ಗೊತ್ತಾದ ಬಳಿಕ ಕಂಪನಿಯು ಆಂತರಿಕ ತನಿಖೆ ನಡೆಸಿತ್ತು. ತನಿಖೆ ವೇಳೆ ತನ್ನದೇ ಕಂಪನಿಯ ನೌಕರ ರಾಹುಲ್ ಅಗರ್‌ವಾಲ್ ಅವರ ಲ್ಯಾಪ್‌ಟ್ಯಾಪ್ ಮೂಲಕ ಸರ್ವರ್ ಹ್ಯಾಕ್ ಮಾಡಲಾಗಿದೆ ಎಂಬುವುದು ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ



ಎಲ್ಲೂ ಸಿಕ್ಕಿಲ್ಲ ಶವಗಳ ಅವಶೇಷ

● ಪ್ರವೀಣ್ ಕುಮಾರ್ ಪಿ.ವಿ

ಮಂಗಳೂರು: ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಹಿಂದೆ ಅಪರಾಧ ಕೃತ್ಯಗಳಿಗೆ ಸಂಬಂಧಿಸಿ ಹೂತು ಹಾಕಲಾಗಿದೆ ಎನ್ನಲಾದ ಮೃತದೇಹಗಳ ಪತ್ತೆಗಾಗಿ ನೇತ್ರಾವತಿ ನದಿ ಪಕ್ಕದ ದಟ್ಟ ಕಾಡಿನ ಒಳಗೆ ಬುಧವಾರ ನಾಲ್ಕು ಕಡೆ ಜಾಗ ಅಗೆದರೂ ಎಲ್ಲೂ ಮೃತದೇಹದ ಅವಶೇಷಗಳು ಪತ್ತೆಯಾಗಲಿಲ್ಲ.

ಪ್ರಕರಣದ ಸಾಕ್ಷಿ ದೂರುದಾರ ಶವ ಹೂತು ಹಾಕಿರುವ 12 ಜಾಗಗಳನ್ನು ಕಾಡಿನೊಳಗೆ ಹಾಗೂ ಇನ್ನೊಂದು ಜಾಗವನ್ನು ಸ್ನಾನಘಟ್ಟದ ಸಮೀಪದಲ್ಲಿರುವ ಅಣೆಕಟ್ಟೆ ಬಳಿಯ ಬಯಲು ಪ್ರದೇಶದಲ್ಲಿ ತೋರಿಸಿದ್ದರು. ಅತ ತೋರಿಸಿದ್ದ ಒಂಬತ್ತು ಜಾಗಗಳು ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿಯೇ ಇದ್ದು, ಅವುಗಳಲ್ಲಿ ಮಂಗಳವಾರ ಅಗೆದ ನಾಲ್ಕು ಜಾಗಗಳು ಸೇರಿ ಒಟ್ಟು ಐದು ಕಡೆ ಅಗೆಯುವ ಕಾರ್ಯ ಮುಗಿದಿದೆ. ಇಷ್ಟೂ ಜಾಗಗಳಲ್ಲಿ ಶವದ ಯಾವುದೇ ಕುರುಹುಗಳು ಸಿಕ್ಕಿಲ್ಲ ಎಂದು ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಗಳು ತಿಳಿಸಿವೆ.

ಕಾಡಿನಲ್ಲಿ ಗುರುತಿಸಿರುವ ಜಾಗಕ್ಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ತಲುಪಲು ಹರಸಾಹಸ ಪಡಬೇಕಾದ ಸ್ಥಿತಿ ಇದೆ.

▶10

'ಪಾನ್ ಕಾರ್ಡ್, ರೂಪೇ ಡೆಬಿಟ್ ಕಾರ್ಡ್ ಪತ್ತೆ'

ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಬಳಿ ಮಂಗಳವಾರ ನೆಲವನ್ನು ಅಗೆಯುವಾಗ ಪುರುಷನ ಹೆಸರಿನಲ್ಲಿರುವ ಪಾನ್ ಕಾರ್ಡ್, ಮಹಿಳೆಯ ಹೆಸರಿನಲ್ಲಿರುವ ರೂಪೇ ಡೆಬಿಟ್ ಕಾರ್ಡ್ ಸಿಕ್ಕಿದೆ. ಅದರ ಮಾಹಿತಿಯನ್ನು ಪರಿಶೀಲಿಸಲಾಗುತ್ತಿದೆ ಎಂದು ಎಸ್‌ಐಟಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಬಾನಿನಲ್ಲಿ ಭಾರತದ ಶಕ್ತಿಶಾಲಿ 'ಕಣ್ಣು'



▶11

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ

ಪ್ರಕರಣ ರದ್ದು

ಬೆಂಗಳೂರು: ಹಸುವನ್ನು ಕೊಲ್ಲುವ ವಿಡಿಯೊ ಒಳಗೊಂಡ ಸುಳ್ಳು ಸುದ್ದಿಯನ್ನು ವಾಟ್ಸ್ ಆ್ಯಪ್‌ನಲ್ಲಿ ಹರಿಬಿಟ್ಟ ಆರೋಪ ಎದುರಿಸುತ್ತಿದ್ದ ಕೊಡಗು ಬೇರುಗ ಗ್ರಾಮದ ವಿವೇಕ್ ಕಾರ್ಯಪ್ಪ ಎಂಬುವರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಬಿಡದಿ ಭೂ ಸ್ವಾಧೀನ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡದಿ ನಗರ ಸಮಗ್ರ ಉಪನಗರ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಡಿ ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಅರಳಾಳುಸಂದ್ರ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಭೂ ಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2025ರ ಅಡಿಯಲ್ಲಿನ ಭೂಸ್ವಾಧೀನ ಪ್ರಕ್ರಿಯೆ ಪ್ರಶ್ನಿಸಿ ರಾಜಗೋಪಾಲ ಗೋಪಾಲಕೃಷ್ಣ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರತಿವಾದಿ ಪರ ವಕೀಲರ ಆಕ್ಷೇಪಣೆ ದಾಖಲಿಸಿಕೊಂಡು ವಿಚಾರಣೆ ಮುಂದೂಡಿದೆ.

ಕೋರಿಕೆ ಏನು?: 'ರಾಜ್ಯ ಸರ್ಕಾರ 11 ಸಾವಿರ ಎಕರೆ ಜಮೀನನ್ನು ಕಾನೂನು ಬಾಹಿರವಾಗಿ ಭೂಸ್ವಾಧೀನಕ್ಕೆ ಪಡೆಯಲು ಮುಂದಾಗಿದೆ. 2025ರ ಮೇ 15ರಂದು ಕಾಯ್ದೆ ಜಾರಿಯಾಗುವ ಮುನ್ನವೇ ಮಾರ್ಚ್ 12ರಂದೇ ಭೂ ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿದೆ. ಸಾರ್ವಜನಿಕ ಅಭಿಪ್ರಾಯ ಸಂಗ್ರಹಿಸದೇ ಹಾಗೂ ಪರಿಸರ ಇಲಾಖೆ ಅನುಮತಿ ಪಡೆಯದೇ ಕಾನೂನುಬಾಹಿರವಾಗಿ ಸ್ವಾಧೀನಕ್ಕೆ ಮುಂದಾಗಿರುವ ಈ ಪ್ರಕ್ರಿಯೆ ಅಮಾನ್ಯವಾದುದು' ಎಂದು ಘೋಷಿಸುವಂತೆ ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರ ಪರ ವಕೀಲ ಹೈಕೋರ್ಟ್ ಸದಾನಂದ್ ಜಿ.ಶಾಸ್ತ್ರಿ ವಕಾಲತ್ತು ವಹಿಸಿದ್ದಾರೆ.

ನಾಯಿಗಳು ಕಚ್ಚಿ ವೃದ್ಧ ಮೃತಪಟ್ಟ ಪ್ರಕರಣ


'ಬೀದಿನಾಯಿ ನಿಯಂತ್ರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕ್ರಮಣಕಾರಿ ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಸೂಚಿಸಿದ್ದರೂ, ಯಾವುದೇ ಕೆಲಸ ಮಾಡದೇ ಇರುವ ಕಾರಣಕ್ಕೆ ನಗರದಲ್ಲಿ ವೃದ್ಧರೊಬ್ಬರು ನಾಯಿಗಳು ಕಚ್ಚಿ ಮೃತಪಡುವಂತಾಗಿದೆ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ ಅವರು ಬಿಬಿಎಂಪಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಬ್ಯಾಟರಾಯನಪುರ ವಾರ್ಡ್‌ನಲ್ಲಿ ಇದೇ ಸೋಮವಾರ ನಾಯಿಗಳು ಕಚ್ಚಿ, ಸೀತಪ್ಪ ಅವರು ಮೃತಪಟ್ಟಿದ್ದರು. ಈ ಸಂಬಂಧ ಬುಧವಾರ ವಿಚಾರಣೆಗೆ ಹಾಜರಾಗುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಲೋಕಾಯುಕ್ತರು ಸೂಚಿಸಿದ್ದರು.

'ಬ್ಯಾಟರಾಯನಪುರ ವಾರ್ಡ್‌ನಲ್ಲಿ ಬೀದಿ ನಾಯಿಗಳು ಕಚ್ಚಿ ಜನರು ಮೃತಪಟ್ಟ ಎರಡನೇ ಪ್ರಕರಣ ಇದು. ಈ ಬಗ್ಗೆ ಏಕೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಮನುಷ್ಯರ ಮೇಲೆ ಎರಗುವಂತಹ ನಾಯಿಗಳನ್ನು ಪತ್ತೆ ಮಾಡಿ, ಅವುಗಳನ್ನು 'ಅಬ್ಸರ್ವೇಷನ್ ಹೋಂ'ನಲ್ಲಿ ಇರಿಸಿ ಎಂದು ಸೂಚಿಸಿದ್ದೆ. ಈ ಕೆಲಸ ಎಲ್ಲಿಯವರೆಗೆ ಬಂದಿದೆ' ಎಂದು ಲೋಕಾಯುಕ್ತರು ಪ್ರಶ್ನಿಸಿದರು.



ಬಿಬಿಎಂಪಿಯ ಯಲಹಂಕ ವಲಯದ ಜಂಟಿ ನಿರ್ದೇಶಕ ಡಾ.ಚಂದ್ರಯ್ಯ, 'ಯಲಹಂಕ ವಲಯದಲ್ಲಿ 'ಅಬ್ಸರ್ವೇಷನ್ ಹೋಂ' ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, 15 ದಿನಗಳಲ್ಲಿ ಪೂರ್ಣಗೊಳ್ಳಲಿದೆ. ಈಗಾಗಲೇ ಇರುವ 'ಅಬ್ಸರ್ವೇಷನ್ ಹೋಂ'ನಲ್ಲಿ 33 ನಾಯಿಗಳನ್ನು ಇರಿಸಲಾಗಿದೆ' ಎಂದು ಮಾಹಿತಿ ನೀಡಿದರು. ವೃದ್ಧರ ಮೇಲೆ ಎರಗಿದ ಬೀದಿನಾಯಿಗಳನ್ನು ಗುರುತಿಸುವ ಕೆಲಸ ಇನ್ನೂ ಆಗಿಲ್ಲ ಎಂದು ಅಧಿಕಾರಿ ತಿಳಿಸಿದರು. ಆ ಕೆಲಸವನ್ನು ಶೀಘ್ರವೇ ಮಾಡಿ ಎಂದು ಲೋಕಾಯುಕ್ತರು ಸೂಚಿಸಿದರು.

ಬ್ಯಾಟರಾಯನಪುರ ವಾರ್ಡ್‌ನ ವ್ಯಾಪ್ತಿಯಲ್ಲಿ ಬೀದಿ ನಾಯಿಗಳು ಕಚ್ಚಿದ 15–20 ಪ್ರಕರಣಗಳು ಪ್ರತಿ ತಿಂಗಳು ವರದಿಯಾಗುತ್ತಿವೆ. ಈ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ವರದಿ ನೀಡಲಿದ್ದಾರೆ. ಈ ಬಗ್ಗೆ ಸ್ವತಂತ್ರ ತನಿಖೆ ನಡೆಸಿ, ವರದಿ ನೀಡಿ ಎಂದು ಲೋಕಾಯುಕ್ತ ಎಸ್‌ಪಿ ವಂಶಿಕೃಷ್ಣ ಅವರಿಗೆ ಸೂಚಿಸಿದರು.

ಮುಖ್ಯಾಂಶಗಳು

- ಬ್ಯಾಟರಾಯನಪುರ: ಪ್ರತಿ ತಿಂಗಳು 15–20 ನಾಯಿ ಕಚ್ಚಿದ ಪ್ರಕರಣ
- ವರದಿ ಸಲ್ಲಿಸಲು ಬಿಬಿಎಂಪಿ ಅಧಿಕಾರಿಗಳಿಗೆ ತಾಕೀತು

ಕೆರೆ ಸಂರಕ್ಷಣೆಗೆ ಕ್ರಮ: ಶ್ಲಾಘನೆ

ದೊಡ್ಡನೆಕ್ಕುಂದಿ ಮತ್ತು ವಿಭೂತಿಪುರ ಕೆರೆಗಳ ಸಂರಕ್ಷಣೆಗೆ ಕ್ರಮ ತೆಗೆದುಕೊಂಡಿರುವ ಬಿಬಿಎಂಪಿ, ಬಿಡಿಎ ಮತ್ತು ಜಲಮಂಡಳಿ ಅಧಿಕಾರಿಗಳನ್ನು ಲೋಕಾಯುಕ್ತರು ಶ್ಲಾಘಿಸಿದರು.

ಎರಡೂ ಕೆರೆಗಳ ಸಂರಕ್ಷಣೆಗೆ ತೆಗೆದುಕೊಂಡಿರುವ ಕ್ರಮಗಳು ಮತ್ತು ಕಾಮಗಾರಿ ಪ್ರಗತಿಗೆ ಸಂಬಂಧಿಸಿದ ಚಿತ್ರಸಹಿತ ವರದಿಯನ್ನು ಅಧಿಕಾರಿಗಳು ಬುಧವಾರದ ವಿಚಾರಣೆ ವೇಳೆ ಲೋಕಾಯುಕ್ತರಿಗೆ ಸಲ್ಲಿಸಿದರು. ಅದನ್ನು ಪರಿಶೀಲಿಸಿದ ಲೋಕಾಯುಕ್ತರು, 'ಉಳಿದ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಿ. ಈಗ ಆಗಿರುವ ಕೆಲಸಗಳ ಬಗ್ಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುತ್ತೇನೆ' ಎಂದು ತಿಳಿಸಿದರು.

ದರ ಸಮಿತಿ ವರದಿ ಪ್ರಕಟಿಸದ ಮೆಟ್ರೊ: ಸಂಸದ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಮ್ಮ ಮೆಟ್ರೊ ದರಗಳು ದೇಶದಲ್ಲೇ ಅತ್ಯಧಿಕವಾಗಿದ್ದು, ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ದರ ನಿಗದಿ ಸಮಿತಿ ವರದಿ ಬಹಿರಂಗಗೊಳಿಸಿಲ್ಲ ಎಂದು ಬೆಂಗಳೂರು ದಕ್ಷಿಣ ಸಂಸದ ತೇಜಸ್ವಿ ಸೂರ್ಯ ಕಿಡಿಕಾರಿದರು.

ಲೋಕಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಬುಧವಾರ ಮಾತನಾಡಿದ ಸೂರ್ಯ, 'ಕಳೆದ ಕೆಲವು ತಿಂಗಳುಗಳಿಂದ ಹಲವಾರು ಸಲ ಮನವಿ ಮಾಡಲಾಗಿತ್ತು. ಆದರೂ, ನಿಗಮವು ವರದಿಯನ್ನು ಇನ್ನೂ ಸಾರ್ವಜನಿಕಗೊಳಿಸಿಲ್ಲ. ಎಂದರು. 'ಮೆಟ್ರೊ ಕೆಂಪು ಮಾರ್ಗಕ್ಕೆ ಶೀಘ್ರ ಅನುಮೋದನೆ ನೀಡಬೇಕು ಎಂದು ಅವರು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.



ಎಂ.ಶ್ರೀನಿವಾಸಬಾಬು, ವಿ.ಕೆ.ತಿವಾರಿ, ಶರಣಪ್ಪ ಬಿ. ಮುದುಗಲ್, ಎಲ್.ಪಿ.ಗುಡ್ವಿನ್ ಮತ್ತು ಕೆಂಪೇಗೌಡ ಅವರು ಕೃಷಕ್ ಸಾರಥಿ ಮಾಸಪತ್ರಿಕೆ ಜನಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಕ್ರಿಭ್ಕೋ: ಕೃಷಕ್ ಸಾರಥಿ ಮಾಸಪತ್ರಿಕೆ ಜನಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಕ್ ಸಾರಥಿ ಕೋ ಆಪರೇಟಿವ್ ಲಿಮಿಟೆಡ್ (ಕ್ರಿಭ್ಕೋ) ವತಿಯಿಂದ ಈಚೆಗೆ 'ಕೃಷಕ್ ಸಾರಥಿ' ಕನ್ನಡ ಮಾಸಪತ್ರಿಕೆಯನ್ನು ಜನಾರ್ಪಣೆ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕೃಷಿ ಇಲಾಖೆಯ ಹೆಚ್ಚುವರಿ ನಿರ್ದೇಶಕ ಶರಣಪ್ಪ ಬಿ. ಮುದುಗಲ್, ಕೃಷಿಯಲ್ಲಿ ಸಾವಯವ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರಗಳ ಮಹತ್ವವನ್ನು ವಿವರಿಸಿದರು. ಕ್ರಿಭ್ಕೋ ಸಂಸ್ಥೆಯು ರೈತರ ಆದಾಯವನ್ನು ಹೆಚ್ಚಿಸಲು ಕೈಗೊಂಡ ಕಾರ್ಯಗಳ ಕುರಿತು ಶ್ಲಾಘಿಸಿದರು.

ಕ್ರಿಭ್ಕೋ ಲಿಮಿಟೆಡ್ ಬೆಂಗಳೂರು ವಿಭಾಗದ ಮಾರುಕಟ್ಟೆ ವ್ಯವಸ್ಥಾಪಕ ಶ್ರೀನಿವಾಸ ಬಾಬು ರಾಜ ಅತಿಥಿಗಳನ್ನು ಸ್ವಾಗತಿಸಿದರು. ಕ್ರಿಭ್ಕೋ ಸಂಸ್ಥೆಯ ನವದೆಹಲಿಯ ಮಾರುಕಟ್ಟೆ ವಿಭಾಗದ ಜಂಟಿ ಪ್ರಧಾನ ವ್ಯವಸ್ಥಾಪಕ ಎಲ್.ಪಿ.ಗುಡ್ವಿನ್, ಮಾರುಕಟ್ಟೆ ಮತ್ತು ಸಾರ್ವಜನಿಕ ಸಂಪರ್ಕ ವಿಭಾಗದ ಜಂಟಿ ಪ್ರಧಾನ ವ್ಯವಸಾಪಕ ವಿ.ಕೆ. ತಿವಾರಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆಂಪೇಗೌಡ, ಕ್ರಿಭ್ಕೋ ಸಂಸ್ಥೆಯ ಅಧಿಕಾರಿಗಳು ಮತ್ತು ರಾಜ್ಯದ ಸಹಕಾರಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಕ್ರಿಭ್ಕೋ ಮಾರಾಟಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಉಚಿತ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕರಿಯರ್ ಕನೆಕ್ಟ್ ಸೆಲ್ಯೂಷನ್ಸ್ ಸಂಸ್ಥೆ ಹಾಗೂ ಅಪೊಲೊ ಮೆಡ್‌ಸ್ಕಿಲ್ಸ್‌ನಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಜನರಲ್ ಡ್ಯೂಟಿ ಅಸಿಸ್ಟೆಂಟ್ (ಜಿಡಿಎ) ಕೋರ್ಸ್‌ಗೆ ಉಚಿತ ತರಬೇತಿ ನೀಡಲಾಗುತ್ತದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತ್ ಕರಿಯರ್ ಕನೆಕ್ಟ್ ಸೆಲ್ಯೂಷನ್ಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಹೇಮಂತ್ ಕುಮಾರ್, 'ಆರು ತಿಂಗಳ ಈ ಕೋರ್ಸ್‌ನಲ್ಲಿ ರೋಗಿಗಳ ಪಾಲನೆ, ಸ್ವಚ್ಛತೆ, ಸೋಂಕು ನಿಯಂತ್ರಣ ಮತ್ತು ವೈದ್ಯಕೀಯ ತ್ಯಾಜ್ಯ ನಿರ್ವಹಣೆ, ವೈದ್ಯರು ಮತ್ತು ಶುಶ್ರೂಷಕರಿಗೆ ಸಹಾಯ ಮಾಡುವುದು, ಆಸ್ಪತ್ರೆಯ ಸುರಕ್ಷತೆ, ದಾಖಲೆ ನಿರ್ವಹಣೆ ಮಾಡುವುದನ್ನು ಕಲಿಸಲಾಗುತ್ತದೆ' ಎಂದು ಮಾಹಿತಿ ನೀಡಿದರು.

'10ನೇ ತರಗತಿ ತೇರ್ಗಡೆಯಾದ 18 ರಿಂದ 30 ವರ್ಷದೊಳಗಿನ ಆಸಕ್ತರು ಈ ಕೋರ್ಸ್‌ಗೆ ಅರ್ಜಿ ಸಲ್ಲಿಸಬಹುದು' ಎಂದರು. ಮಾಹಿತಿಗೆ: 63629 02335, 63639 02311

ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆಯು 2025–26ನೇ ಸಾಲಿನಲ್ಲಿ ಉಚಿತ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಬಿ.ಇ., ಬಿ.ಎಸ್ಸಿ (ಅಗ್ರಿ), ಎಂ.ಬಿ.ಬಿ.ಎಸ್., ಬಿ.ಎಸ್ಸಿ (ನರ್ಸಿಂಗ್), ಪದವಿ ಮತ್ತು ಸ್ನಾತಕೋತ್ತರ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆಸಕ್ತ ಪ್ರತಿಭಾವಂತ ಬಡ ವೀರಶೈವ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಆಗಸ್ಟ್ 23ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. **ವಿಳಾಸ:** ಗೌರವ ಕಾರ್ಯದರ್ಶಿ, ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ನ.88 ಗುಬ್ಬಿ ತೋಟದಪ್ಪ ರಸ್ತೆ, ನಗರ ರೈಲ್ವೆ ನಿಲ್ದಾಣದ ಹತ್ತಿರ, ಬೆಂಗಳೂರು–560023, ಮಾಹಿತಿಗೆ: 080–22879665ಗೆ ಸಂಪರ್ಕಿಸಬಹುದು.

ಚಿಟಿಕೆ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ಸುವರ್ಣ ನಾಗರಾಜು ಎಜುಕೇಷನಲ್ ಟ್ರಸ್ಟ್ ಐಟಿಐನ ವಿವಿಧ ಕೋರ್ಸ್‌ಗಳ ಉಚಿತ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ.

ಫಿಟ್ಟರ್, ಎಲೆಕ್ಟ್ರಾನಿಕ್ ಹಾಗೂ ಮೆಕ್ಯಾನಿಕ್ ವಿಷಯಗಳಲ್ಲಿ ಅಧ್ಯಯನ ಮಾಡಲು ಇಚ್ಛಿಸುವ ಬಡ ಹಾಗೂ ಪ್ರತಿಭಾವಂತ ಆಸಕ್ತ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 98866 29502, 99166 62659.

ರವೀಂದ್ರ, ಆಶಾಗೆ 'ಯುವ ಸಾಹಿತ್ಯ ಪ್ರಶಸ್ತಿ'

ಬೆಂಗಳೂರು: ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನೀಡುವ 'ಪುನೀತ್ ರಾಜ್‌ಕುಮಾರ್ ಯುವ ಸಾಹಿತ್ಯ ಪ್ರಶಸ್ತಿ'ಗೆ ವಿಜ್ಞಾನ ಲೇಖಕ ಆರ್.ಎಸ್.ರವೀಂದ್ರ ಹಾಗೂ ಕವಯತ್ರಿ ಆಶಾ ಶಿವುಗೌಡ ಆಯ್ಕೆಯಾಗಿದ್ದಾರೆ.



ಆಶಾ



ರವೀಂದ್ರ

ಟ್ರಸ್ಟ್ ಆಗಸ್ಟ್ 3ರಂದು ಬೆಳಿಗ್ಗೆ 9.30ಕ್ಕೆ ನಗರದ ಶೇಷಾದ್ರಿಪುರಂ ಕಾಲೇಜಿನಲ್ಲಿ ರಾಜ್ಯ ಮಟ್ಟದ ವೈಜ್ಞಾನಿಕ, ವೈಚಾರಿಕ ಕನ್ನಡ ಸಾಹಿತ್ಯ ಸಮಾವೇಶ ಹಮ್ಮಿಕೊಂಡಿದೆ. ಆರ್.ಎಸ್. ರವೀಂದ್ರ ಅವರು ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಶಿಕ್ಷಣ ತಜ್ಞೆ ಗೀತಾ ರಾಮಾನುಜಂ ಅವರು ಸಮಾವೇಶ ಉದ್ಘಾಟಿಸಲಿದ್ದಾರೆ.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಸಿ.ಹೇಮಾವತಿ ಸಿಸಿರಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅಣ್ಣನ ನೆನಪು' ಆ.3ಕ್ಕೆ

ಬೆಂಗಳೂರು: ಪ್ರವರ ಥಿಯೇಟರ್ ತಂಡದಿಂದ ಆಗಸ್ಟ್ 3ರಂದು ಸಂಜೆ 7ಕ್ಕೆ ಎನ್.ಆರ್. ಕಾಲೊನಿಯಲ್ಲಿರುವ ಡಾ.ಸಿ.ಅಶ್ವತ್ಥ್ ಕಲಾಭವನದಲ್ಲಿ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ರಚಿಸಿರುವ 'ಅಣ್ಣನ ನೆನಪು' ನಾಟಕ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂವಾದ ಆ.5ಕ್ಕೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕರ್ನಾಟಕ ಲೇಖಕಿಯರ ಸಂಘವು ಜಂಟಿಯಾಗಿ ಆಗಸ್ಟ್ 5ರಂದು ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ 'ಅಂತರ ರಾಷ್ಟ್ರೀಯ ಬುಕರ್ ಪ್ರಶಸ್ತಿ' ಪುರಸ್ಕೃತ ಬಾನು ಮುಷ್ತಾಕ್ ಅವರಿಂದ ಉಪನ್ಯಾಸ, ಸಂವಾದ ಹಾಗೂ ಅವರಿಗೆ ಅಭಿನಂದನೆ ಕಾರ್ಯಕ್ರಮ ಆಯೋಜಿಸಿವೆ.

ಆಸಕ್ತರು ಆ. 2ರೊಳಗೆ ನೋಂದಾಯಿಸಿಕೊಳ್ಳಬೇಕು. ಮಾಹಿತಿಗೆ https://sahithyaacademy.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಬೆಂಗಳೂರು ಫೋಟೊ ಜರ್ನಲಿಸ್ಟ್ ಅಸೋಸಿಯೇಷನ್‌ನ ಅಧ್ಯಕ್ಷರಾಗಿ ಮೋಹನ್ ಕುಮಾರ್ ಬಿ.ಎನ್. ಆಯ್ಕೆಯಾಗಿದ್ದಾರೆ.

2025–26ನೇ ಸಾಲಿಗೆ ಈ ಆಯ್ಕೆ ನಡೆದಿದೆ. ಪ್ರಧಾನ ಕಾರ್ಯದರ್ಶಿಯಾಗಿ ಗಣೇಶ್ ಕೆ.ಎಸ್., ಉಪಾಧ್ಯಕ್ಷರಾಗಿ ಶೈಲೇಂದ್ರ ಭೋಜಕ್, ಖಜಾಂಚಿಯಾಗಿ ಚೇತನ್ ಶಿವಕುಮಾರ್ ಕೆ., ಸದಸ್ಯರಾಗಿ ಎನ್. ನರಸಿಂಹಮೂರ್ತಿ, ಸುಧಾಕರ್ ಡಿ., ರಾಬರ್ಟ್ ಮಾರಿಯಾ ಕ್ಲೆಮೆಂಟ್, ಅಬ್ದುಲ್ ಅಕ್ರಂ ಹಕ್ ಚೌಧರಿ, ಪುಷ್ಕರ್ ವಿ. ಹಾಗೂ ಸುಧೀಂದ್ರ ಶ್ರೀರಂಗರಾಜು ಆಯ್ಕೆಯಾಗಿದ್ದಾರೆ.

ಅಮಲುಜಾರಿ ವಿಭಾಗ ವಿಲೀನ

ಬೆಂಗಳೂರು: ಆಯುಷ್ ಇಲಾಖೆಯ ಆಯುರ್ವೇದ, ಸಿದ್ಧ ಮತ್ತು ಯುನಾನಿ ಔಷಧಗಳ ಅಮಲುಜಾರಿ ವಿಭಾಗ ಮತ್ತು ಪರೀಕ್ಷಾ ಪ್ರಯೋಗಾಲಯವನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ.

ಈ ಬಗ್ಗೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ಆಯುಷ್ ಇಲಾಖೆಯ ಆಯುರ್ವೇದ, ಸಿದ್ಧ ಮತ್ತು ಯುನಾನಿ ವಿಭಾಗದಲ್ಲಿ ಮಂಜೂರಾದ ಹಾಗೂ ಹಾಲಿ ಜಾರಿಯಲ್ಲಿರುವ ಔಷಧ ಪರಿವೀಕ್ಷಕರು, ಸಹಾಯಕ ಔಷಧ ನಿಯಂತ್ರಕರು, ಉಪ ಔಷಧ ನಿಯಂತ್ರಕರು ಹಾಗೂ ಬೆಂಗಳೂರಿನ ಪರೀಕ್ಷಾ ಪ್ರಯೋಗಾಲಯದ ತಾಂತ್ರಿಕ ಮತ್ತು ಲಿಪಿಕ ವೃಂದದ ಸಿಬ್ಬಂದಿ ಹುದ್ದೆಗಳನ್ನು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಔಷಧ ನಿಯಂತ್ರಣ ವಿಭಾಗದಲ್ಲಿ ವಿಲೀನಗೊಳಿಸಿರುವುದಾಗಿ ತಿಳಿಸಲಾಗಿದೆ.

ನಟ ಪ್ರಥಮ್‌ಗೆ ಬೆದರಿಕೆ: ಎಫ್‌ಐಆರ್

ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಎಂ.ಪ್ರಥಮ್ ಅವರಿಗೆ ಬೆದರಿಕೆ ಹಾಕಿದ್ದ ಆರೋಪದಡಿ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಪ್ರಥಮ್

ಬೇಕರಿ ರಘು ಹಾಗೂ ಯಶಸ್ವಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನಟ ದರ್ಶನ್ ಅವರ ಅಭಿಮಾನಿಗಳು ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿ ಪ್ರಥಮ್ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಸ್‌ಪಿಗೆ ಮಂಗಳವಾರ ಲಿಖಿತ ದೂರು ನೀಡಿದ್ದರು. ಆ ದೂರು ಆಧರಿಸಿ ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಸಿನಿಮಾ ತಂಡವೊಂದರ ಆಹ್ವಾನದ ಮೇರೆಗೆ ಜುಲೈ 22ರಂದು ದೊಡ್ಡಬಳ್ಳಾಪುರದ ಯಲ್ಲಮ್ಮ ದೇವಸ್ಥಾನಕ್ಕೆ ತೆರಳಿದ್ದೆ. ಪೂಜೆ ಮುಗಿಸಿಕೊಂಡು ವಾಪಸ್ ಬರುವಾಗ ಯಶಸ್ವಿ, ಬೇಕರಿ ರಘು ಮತ್ತಿತರರು ನನ್ನ ಕಾರನ್ನು ಸುತ್ತುವರಿದು, ಅಜ್ಞಾತ ಸ್ಥಳಕ್ಕೆ ಕರೆದೊಯ್ದರು. ನಮ್ಮ ಬಾಸ್ ಬಗ್ಗೆ ಮಾತನಾಡುತ್ತೀಯಾ ಎಂದು ಹೇಳಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಡ್ರಾಗರ್ ಹಾಗೂ ಚಾಕು ತೋರಿಸಿ ಚುಚ್ಚಲು ಯತ್ನಿಸಿದ್ದರು. ಬಹಳ ಉಪಾಯದಿಂದ ನಾನು ಪ್ರಾಣ ಉಳಿಸಿಕೊಂಡು ಬಂದೆ' ಎಂದು ಪ್ರಥಮ್ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ದರ್ಶನ್ ಅವರ ಅಧಿಕೃತ ಫ್ಯಾನ್ ಪೇಜ್‌ಗಳಾದ ಡಿ ಡೈನಾಸ್ಟಿ, ಡಿ ಕಿಂಗ್‌ಡಮ್, ಡಿ ಯೂನಿವರ್ಸ್ ಹಾಗೂ ಡೆವಿಲ್ ಕಿಂಗ್‌ಡಮ್ ಜತೆಗೆ 500ಕ್ಕೂ ಹೆಚ್ಚು ಪೇಜ್‌ಗಳಿಂದ ತೇಜೋವಧೆ ಮಾಡಲಾಗುತ್ತಿದೆ' ಎಂದು ದೂರಿನ ಪ್ರತಿಯಲ್ಲಿ ಉಲ್ಲೇಖಿಸಿದ್ದಾರೆ.

ಎಸ್‌ಪಿ ಕಚೇರಿ ಎದುರು ಪ್ರತಿಭಟನೆ: ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪ್ರಥಮ್ ಅವರು ಗ್ರಾಮಾಂತರ ಎಸ್‌ಪಿ ಕಚೇರಿ ಎದುರು ಪ್ರತಿಭಟಿಸಿದರು. ಮಾಧ್ಯಮಗಳ ಜತೆಗೆ ಪ್ರಥಮ್ ಮಾತನಾಡುತ್ತಿದ್ದ ವೇಳೆ ಅದರ ವಿಡಿಯೊ ಚಿತ್ರೀಕರಣಕ್ಕೆ ಮುಂದಾದ ಪೊಲೀಸರನ್ನು ಪ್ರಥಮ್ ತರಾಟೆಗೆ ತೆಗೆದುಕೊಂಡರು.

'ಕೊಲೆ ಮಾಡಲು ಬಂದ ಆರೋಪಿಗಳನ್ನು ಮೊದಲು ಬಂಧಿಸಿ. ನಾನು ಡಿಸಿಪಿ ಬಳಿ ಮಾತನಾಡುತ್ತೇನೆ' ಎಂದು ಆಕ್ರೋಶ ಹೊರಹಾಕಿದರು.

ಎಸ್.ನಾರಾಯಣ್ ಹೆಸರಿನಲ್ಲಿ ನಕಲಿ ಖಾತೆ ತೆರೆದು ಪೋಸ್ಟ್

ಚಿತ್ರ ನಿರ್ದೇಶಕ ಎಸ್.ನಾರಾಯಣ್ ಅವರ ಹೆಸರು ಬಳಸಿಕೊಂಡು ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು ಅವಹೇಳನಕಾರಿಯಾಗಿ ಪೋಸ್ಟ್ ಮಾಡಲಾಗಿದೆ.



ನಾರಾಯಣ್

ಈ ಸಂಬಂಧ ನಾರಾಯಣ್ ಅವರು ಬುಧವಾರ ನಗರ ಪೊಲೀಸ್ ಕಮಿಷನರ್ ಸೀಮಂತ್‌ಕುಮಾರ್ ಸಿಂಗ್ ಅವರಿಗೆ ದೂರು ನೀಡಿ ಕ್ರಮಕ್ಕೆ ಆಗ್ರಹಿಸಿದರು.

'ನಟರಾದ ಶಿವರಾಜ್‌ಕುಮಾರ್, ಸುದೀಪ್ ಸೇರಿದಂತೆ ಹಲವು ನಟರನ್ನು ಗುರಿಯಾಗಿಸಿ, ನಾನು ಪೋಸ್ಟ್ ಮಾಡಿರುವಂತೆ ಅವಹೇಳಕಾರಿಯಾಗಿ ಕಿಡಿಗೇಡಿಗಳು ಪೋಸ್ಟ್ ಮಾಡಿದ್ದಾರೆ. ನನ್ನ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ಖಾತೆ ಇಲ್ಲ. ಆದರೂ ಕಿಡಿಗೇಡಿಗಳು ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು ನಟರಿಗೆ ತೇಜೋವಧೆ ಆಗುವ ರೀತಿ ಕೆಟ್ಟದಾಗಿ ಪೋಸ್ಟ್ ಮಾಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಆರು ತಿಂಗಳಿಂದ ಅಸಭ್ಯವಾಗಿ ಸಂದೇಶ ಕಳುಹಿಸುತ್ತಿದ್ದಾರೆ. ಆ ವಿಷಯ ನನಗೆ ತಿಳಿದಿರಲಿಲ್ಲ. ಈಗ ವಿಷಯ ಗೊತ್ತಾಗಿ ದೂರು ನೀಡಿದ್ದೇನೆ' ಎಂದು ನಾರಾಯಣ್ ಹೇಳಿದರು.

ರಮ್ಯಾಗೆ ಬೆದರಿಕೆ: ತನಿಖೆ ಚುರುಕು

ನಟಿ ರಮ್ಯಾ ಅವರಿಗೆ ಇನ್‌ಸ್ಟಾಗ್ರಾಂನಲ್ಲಿ ಬೆದರಿಕೆ ಹಾಕಿದ್ದ ಪ್ರಕರಣದ ತನಿಖೆ ಆರಂಭಿಸಿರುವ ಸಿಸಿಬಿ ಪೊಲೀಸರು, 43 ಖಾತೆಗಳ ಐಪಿ ಅಡ್ರೆಸ್ ಪತ್ತೆ ಹಚ್ಚಲು ಮುಂದಾಗಿದ್ದಾರೆ.



ರಮ್ಯಾ

'ಇದುವರೆಗೂ ನಡೆದ ತನಿಖೆಯಲ್ಲಿ 20ಕ್ಕೂ ಹೆಚ್ಚು ಆರೋಪಿಗಳು ನಕಲಿ ಖಾತೆಗಳ ಮೂಲಕ ರಮ್ಯಾ ಅವರಿಗೆ ಅಶ್ಲೀಲ ಹಾಗೂ ಅವಹೇಳನಕಾರಿ ಸಂದೇಶ ಕಳುಹಿಸಿ, ಕೊಲೆ ಬೆದರಿಕೆ ಹಾಕಿರುವುದು ಗೊತ್ತಾಗಿದೆ. ಅವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ. ಬುಧವಾರ ಸಹ ದೂರು ನೀಡಿದ ಖಾತೆಗಳಿಂದಲೇ ಬೆದರಿಕೆ ಸಂದೇಶ ಬಂದಿದ್ದವು ಎಂದು ಹೇಳಲಾಗಿದೆ. ಅದನ್ನು ಪರಿಶೀಲಿಸಲಾಗುತ್ತಿದೆ' ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಗೋಡೆಬರಹ: ಆರೋಪಿಗಳಿಗಾಗಿ ಪೊಲೀಸರ ಹುಡುಕಾಟ

ಕೊಡಿಗೇಹಳ್ಳಿಯಲ್ಲಿರುವ ಅಪಾರ್ಟ್‌ಮೆಂಟ್‌ವೊಂದರ ಗೋಡೆ ಮೇಲೆ 'ನಾನು ಭಾರತವನ್ನು ಸ್ಫೋಟಿಸುತ್ತೇನೆ' ಎಂದು ಇಂಗ್ಲಿಷ್‌ನಲ್ಲಿ ಬರೆಯಲಾಗಿದೆ.

ಬರಹವನ್ನು ಗಮನಿಸಿದ್ದ ಅಪಾರ್ಟ್‌ಮೆಂಟ್ ನಿವಾಸಿಗಳು, ಕೊಡಿಗೇಹಳ್ಳಿ ಠಾಣೆಯ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಮಾಹಿತಿ ಆಧರಿಸಿ ಸ್ಥಳಕ್ಕೆ ಬಂದ ಪೊಲೀಸರು ಬರಹವನ್ನು ಪರಿಶೀಲಿಸಿದರು.

'ಅಪಾರ್ಟ್‌ಮೆಂಟ್ ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ. ಯಾರೋ ಪುಟ್ಟ ಮಕ್ಕಳು ಈ ರೀತಿ ಬರೆದು ಹೋಗಿರುವ ಶಂಕೆಯಿದೆ. ಎಲ್ಲ ಆಯಾಮದಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಪಿಸ್ತೂಲ್‌ನಿಂದ ಹಾರಿದ ಗುಂಡು ಮಹಿಳೆ ಮೂತ್ರಪಿಂಡಕ್ಕೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊರಮಾವು ಬಡಾವಣೆಯ ಆಶೀರ್ವಾದ ಕಾಲೊನಿಯ ಮನೆಯೊಂದರಲ್ಲಿ ಪಿಸ್ತೂಲ್‌ನಿಂದ ಆಕಸ್ಮಿಕವಾಗಿ ಗುಂಡು ಹಾರಿ ಮಹಿಳೆಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕಾಕ್ಸ್‌ಟೌನ್ ನಿವಾಸಿ ರೇಚೆಲ್(32) ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರೇಚಲ್ ಅವರ ಸ್ನೇಹಿತ ನಿಖಿಲ್ ನಾಯಕ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023ರ 125ಬಿ ಹಾಗೂ ಶಸ್ತ್ರಾಸ್ತ್ರ ಕಾಯ್ದೆಯ 25 (1ಬಿ), 27, 30ರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಕಾಕ್ಸ್ ಟೌನ್‌ನ ನಿವಾಸಿ ರೇಚಲ್ ಅವರು ಜುಲೈ 28ರಂದು ರಾತ್ರಿ ಹೊರಮಾವು ಸಮೀಪದ ಆಶೀರ್ವಾದ ಕಾಲೊನಿಯಲ್ಲಿ ಇರುವ ನಿಖಿಲ್ ನಾಯಕ್ ಅವರ ಮನೆಗೆ ತೆರಳಿದ್ದರು. ನಿಖಿಲ್ ನಾಯಕ್ ಅವರು ಶೌಚಾಲಯಕ್ಕೆ ಹೋಗಿದ್ದರು. ರೇಚಲ್ ಅವರು ಸ್ನೇಹಿತನ ಬಳಿಯಿದ್ದ ಪರವಾನಗಿ ಹೊಂದಿದ್ದ ಪಿಸ್ತೂಲ್ ಅನ್ನು ನೋಡುತ್ತಿದ್ದಾಗ ಆಕಸ್ಮಿಕವಾಗಿ ಗುಂಡು ಹಾರಿದೆ. ರೇಚಲ್ ಅವರ ಹೊಟ್ಟೆಗೆ ಗುಂಡು ತಗುಲಿದ್ದು, ಗಂಭೀರವಾಗಿ ಗಾಯಗೊಂಡಿದ್ದರು. ತಕ್ಷಣವೇ ನಿಖಿಲ್ ನಾಯಕ್ ಅವರು ರೇಚಲ್ ಅವರನ್ನು ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿದ್ದರು. ರೇಚಲ್ ಅವರ ಒಂದು ಮೂತ್ರಪಿಂಡಕ್ಕೆ ಹಾನಿಯಾಗಿದೆ ಎಂದು ಮೂಲಗಳು ತಿಳಿಸಿವೆ.

'ರೇಚಲ್ ಅವರ ಸ್ಥಿತಿ ಗಂಭೀರವಾಗಿದೆ. ಚಿಕಿತ್ಸೆ ಮುಂದುವರಿದಿದೆ' ಎಂದು ಪೊಲೀಸರು ಹೇಳಿದರು.

'ಘಟನೆಯ ಬಳಿಕ ನಿಖಿಲ್ ನಾಯಕ್ ಅವರೇ ರೇಚಲ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ರೇಚಲ್ ಸಹೋದರಿ ನೀಡಿರುವ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪರವಾನಗಿ ಹೊಂದಿರುವವರು ಶಸ್ತ್ರಾಸ್ತ್ರ ದುರ್ಬಳಕೆ ಆಗದಂತೆ ಇರಿಸಿಕೊಳ್ಳಬೇಕು. ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿಯೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಜಂಟಿ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ತಿಳಿಸಿದರು.

ಎಂಪೈರ್ ರೆಸ್ಟೋರೆಂಟ್ ಚಿಕನ್ ಕಬಾಬ್ ಅಸುರಕ್ಷಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಂಪೈರ್ ರೆಸ್ಟೋರೆಂಟ್‌ನ ಚಿಕನ್ ಕಬಾಬ್ ಅಸುರಕ್ಷಿತ ಎನ್ನುವುದು ಆಹಾರ ಪ್ರಯೋಗಾಲಯದ ಪರೀಕ್ಷೆಯಿಂದ ದೃಢಪಟ್ಟಿದ್ದು, ಈ ಬಗ್ಗೆ ಉತ್ತರ ನೀಡುವಂತೆ ರೆಸ್ಟೋರೆಂಟ್‌ಗೆ ಬಿಬಿಎಂಪಿ ಉತ್ತರ ವಲಯ ಆಹಾರ ಸುರಕ್ಷತಾಧಿಕಾರಿ ನೋಟಿಸ್ ನೀಡಿದ್ದಾರೆ.

ಚಿಕನ್ ಕಬಾಬ್‌ಗೆ ನಿಷೇಧಿತ ಕೃತಕ ಬಣ್ಣಗಳನ್ನು ಬಳಸಿರುವುದು ಪ್ರಯೋಗಾಲಯದ ವಿಶ್ಲೇಷಣೆಯಿಂದ ಖಚಿತಪಟ್ಟಿದೆ. ಜೂನ್ 27ರಂದು ಈ ರೆಸ್ಟೋರೆಂಟ್‌ಗೆ ಭೇಟಿ ನೀಡಿದ್ದ ಆಹಾರ ಸುರಕ್ಷತಾಧಿಕಾರಿ, ಮಾರಾಟಕ್ಕೆ ಇಟ್ಟಿದ್ದ ಚಿಕನ್ ಕಬಾಬ್ ಮಾದರಿಗಳನ್ನು ಪರೀಕ್ಷೆಗೆ ಸಂಗ್ರಹಿಸಿದ್ದರು. 2 ಕೆ.ಜಿ. ತೂಕದ 4 ಪ್ಯಾಕೇಟ್‌ಗಳನ್ನು ಪಡೆದಿದ್ದ ಅವರು, ರಾಜ್ಯ ಆಹಾರ ಪ್ರಯೋಗಾಲಯಕ್ಕೆ ಸಲ್ಲಿಸಿದ್ದರು. ಈ ಬಗ್ಗೆ ಆಹಾರ ವಿಶ್ಲೇಷಕರು ಜುಲೈ 11ಕ್ಕೆ ವರದಿ ನೀಡಿದ್ದು, ಈ ಚಿಕನ್ ಕಬಾಬ್ ಮಾದರಿಗಳು ಅಸುರಕ್ಷಿತ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ವರದಿ ಆಧರಿಸಿ ಬಿಬಿಎಂಪಿ ಉತ್ತರ ವಲಯ ಆಹಾರ ಸುರಕ್ಷತಾಧಿಕಾರಿ ರೆಸ್ಟೋರೆಂಟ್‌ಗೆ ನೋಟಿಸ್ ನೀಡಿದ್ದಾರೆ.

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ–2006 ಅನ್ವಯ, ಮೈಸೂರಿನಲ್ಲಿರುವ ಕೇಂದ್ರೀಯ ಆಹಾರ ತಾಂತ್ರಿಕ ಸಂಶೋಧನಾಲಯದ (ಸಿಎಫ್‌ಟಿಆರ್‌ಐ) ಪ್ರಯೋಗಾಲಯದಲ್ಲಿ ಈ ಮಾದರಿಗಳ ಮರು ಪರೀಕ್ಷೆಗೆ ಇಚ್ಛಿಸಿದಲ್ಲಿ ಅದರ ವೆಚ್ಚವನ್ನು ತಾವೇ ಭರಿಸಬೇಕು. 30 ದಿನಗಳೊಳಗೆ ಉತ್ತರ ನೀಡದಿದ್ದಲ್ಲಿ ಭಾರತೀಯ ಆಹಾರ ಸುರಕ್ಷೆ ಮತ್ತು ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎ) ಕಾನೂನು ರೀತಿ ಕ್ರಮ ಜರುಗಿಸಲಾಗುವುದು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ವಕೀಲರ ದೂರು ಆಧರಿಸಿ ಹಲಸೂರು ಗೇಟ್ ಠಾಣೆ ಪೊಲೀಸರಿಂದ ತನಿಖೆ

ನಕಲಿ ದಾಖಲೆ ಸಲ್ಲಿಕೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಶಿಕ್ಷಣ ಇಲಾಖೆಗೆ ನಕಲಿ ದಾಖಲೆಗಳನ್ನು ಸಲ್ಲಿಸಿದ್ದ ಆರೋಪದ ಅಡಿ ತ್ಯಾಗರಾಜನಗರದ ಬಿಜಿಎಸ್ ಬ್ಲೂಮ್ ಫೀಲ್ಡ್ ಶಾಲೆಯ ಮುಖ್ಯಸ್ಥ ಬಿ.ಗುರಪ್ಪನಾಯ್ಡು ಹಾಗೂ ಅವರ ಪತ್ನಿ, ಸಂಸ್ಥೆಯ ಟ್ರಸ್ಟಿ ಸುನಿತಾ ಅವರ ವಿರುದ್ಧ ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಕೀಲೆ ಸುಧಾ ಕಟ್ವಾ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ಗುರಪ್ಪನಾಯ್ಡು ಹಾಗೂ ಸುನಿತಾ ಅವರು 2020ರಲ್ಲಿ ಶಾಲೆ ಆರಂಭಿಸಿದ್ದರು. ಶಿಕ್ಷಕರು ಹಾಗೂ ಶಾಲಾ ಮಕ್ಕಳ ಸುರಕ್ಷತೆಯ ದೃಷ್ಟಿಯಿಂದ ಬಿಬಿಎಂಪಿಯಿಂದ ಕಟ್ಟಡದ ಕಾಮಗಾರಿ ಪೂರ್ಣಗೊಂಡಿರುವ ಕುರಿತು ಹಾಗೂ ಕಟ್ಟಡದ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವುದು ಕಡ್ಡಾಯ. ಗುರಪ್ಪನಾಯ್ಡು ಹಾಗೂ ಸುನಿತಾ ಅವರು ಕಟ್ಟಡ ಕಾಮಗಾರಿ ಮುಕ್ತಾಯಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಕಲಿಯಾಗಿ ಸೃಷ್ಟಿಸಿದ್ದರು. ಕೆಂಗೇರಿ ವಿಭಾಗದ ಕಾರ್ಯಪಾಲಕ ಎಂಜಿನಿಯರ್(ರಾಜರಾಜೇಶ್ವರಿನಗರ ವಲಯ) 2021ರ ನವೆಂಬರ್ 3ರಂದು ಪ್ರಮಾಣ ಪತ್ರ ನೀಡಿದ್ದಾರೆಂದು ಸಾರ್ವಜನಿಕ ಶಿಕ್ಷಣ ಇಲಾಖೆಗೆ ಸಲ್ಲಿಸಿದ್ದಾರೆ' ಎಂದು ಸುಧಾ ಅವರು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಗುರಪ್ಪನಾಯ್ಡು ಹಾಗೂ ಸುನಿತಾ ಮತ್ತಿತರರು ಒಳಸಂಚು ರೂಪಿಸಿ ಸಾರ್ವಜನಿಕರಿಗೆ ನಂಬಿಕೆ ದ್ರೋಹ ಹಾಗೂ ಮೋಸ ಮಾಡಿ ನಕಲಿ ದಾಖಲೆಗಳನ್ನು ನೈಜ ದಾಖಲೆಗಳೆಂದು ಸರ್ಕಾರಿ ಕಚೇರಿಗೆ ಸಲ್ಲಿಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಿದ್ದಾರೆ.

ಅರುಣ್ ಚಕ್ರವರ್ತಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಡಿಜಿಪಿ ಅರುಣ್ ಚಕ್ರವರ್ತಿ ಅವರನ್ನು ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಸ್ಥಾನಕ್ಕೆ ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ವಿದ್ಯುತ್ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ಲೋಖಂಡೆ ಸ್ನೇಹಲ್ ಸುಧಾಕರ್ ಅವರಿಗೆ ಕಾರ್ಮಿಕ ಇಲಾಖೆ ಇಎಸ್‌ಐಎಸ್ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ.

ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್

₹15.31 ಕೋಟಿ ನಿವ್ವಳ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ 2024–25ನೇ ಸಾಲಿಗೆ ₹15.31 ಕೋಟಿ ನಿವ್ವಳ ಲಾಭಗಳಿಸಿದೆ.

ನಗರದಲ್ಲಿ ನಡೆದ 44ನೇ ಸರ್ವಸದಸ್ಯರ ಸಭೆ ಉದ್ಘಾಟಿಸಿದ ಬ್ಯಾಂಕಿನ ಆಡಳಿತ ಮಂಡಳಿಯ ಅಧ್ಯಕ್ಷ ಎಚ್.ಸಿ. ಗೋಪಾಲ್, 'ಪಟ್ಟಣ ಸಹಕಾರ ಬ್ಯಾಂಕ್‌ಗಳ ಪೈಕಿ ಇಡೀ ರಾಜ್ಯದಲ್ಲಿಯೇ ನಮ್ಮ ಬ್ಯಾಂಕ್ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ₹1,533.13 ಕೋಟಿ ಬಂಡವಾಳವನ್ನು ಬ್ಯಾಂಕ್ ಹೊಂದಿದೆ. ₹36.68 ಕೋಟಿಗಿಂತ ಹೆಚ್ಚು ಷೇರು ಬಂಡವಾಳವಿದೆ. ₹726.20 ಕೋಟಿಗಳಷ್ಟು ಸಾಲ ವಿತರಿಸಿದೆ. ಎಲ್ಲ ಗ್ರಾಹಕರಿಗೂ ಡಿಜಿಟಲ್ ಬ್ಯಾಂಕಿಂಗ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಗ್ರಾಹಕರಿಗೆ ಠೇವಣಿಗಳ ಮೇಲೆ ಆಕರ್ಷಕ ಬಡ್ಡಿ ದರ ನೀಡಲಾಗುತ್ತಿದೆ' ಎಂದು ತಿಳಿಸಿದರು.



ಸರ್ವಸದಸ್ಯರ ಸಭೆಯಲ್ಲಿ ಪಾಲ್ಗೊಂಡಿದ್ದ ಬ್ಯಾಂಕ್‌ನ ನೂತನ ಪದಾಧಿಕಾರಿಗಳು

'ಒಟ್ಟು ₹20.69 ಕೋಟಿ ಲಾಭ ಗಳಿಸಿದ್ದು, ₹5.38 ಕೋಟಿ ಆದಾಯ ತೆರಿಗೆ ಪಾವತಿಸಲಾಗಿದೆ. ಬ್ಯಾಂಕ್‌ನ ಸದಸ್ಯರಿಗೆ ವೈದ್ಯಕೀಯ ವೆಚ್ಚ, ಮರಣ ಪರಿಹಾರ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಒದಗಿಸಲಾಗುತ್ತಿದೆ. ಹಲವಾರು ಸಾಮಾಜಿಕ ಚಟುವಟಿಕೆಗಳಲ್ಲಿ ಬ್ಯಾಂಕ್ ತೊಡಗಿಸಿಕೊಂಡಿದ್ದು, ಸದ್ಯ ಐದು ಶಾಖೆಗಳನ್ನು ಒಳಗೊಂಡಿದೆ. ಮತ್ತೊಂದು ಶಾಖೆ ತೆರೆಯುವ ಯೋಜನೆಯನ್ನು ಹಾಕಿಕೊಂಡಿದೆ' ಎಂದು ಹೇಳಿದರು.

ಪದಾಧಿಕಾರಿಗಳ ಆಯ್ಕೆ: ಬ್ಯಾಂಕಿನ ಪದಾಧಿಕಾರಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಎಚ್.ಸಿ. ಗೋಪಾಲ್, ಉಪಾಧ್ಯಕ್ಷರಾಗಿ ಪಿ.ಎಲ್. ವೆಂಕಟೇಶ್‌ಮೂರ್ತಿ ಆಯ್ಕೆಯಾಗಿದ್ದಾರೆ. ನಿರ್ದೇಶಕರಾಗಿ ಮರಿಯಪ್ಪ ಪಿ., ಸಿದ್ದಪ್ಪ ಜಿ., ಜಯರಾಂ ಎಂ., ವೀರಣ್ಣಗೌಡ ಎಂ.ಟಿ., ಉಮಾ ರಾಮು, ಕೆಂಪಯ್ಯ ಎಂ., ಚನ್ನಕೇಶವ ಡಿ.ಎಲ್., ಚಂದ್ರಮೌಳಿ ಎಸ್., ಟಿ.ಆರ್. ಸ್ವಾಮಿ, ಚಂದ್ರಕಲಾ ಕೆ., ಆರತಿ ಎಚ್.ಆರ್., ಪುಟ್ಟಸ್ವಾಮಿಗೌಡ ಬಿ.ಟಿ. ಹಾಗೂ ಕೃಷ್ಣಪ್ಪ ಸಿ. ಆಯ್ಕೆಯಾಗಿದ್ದಾರೆ.

ರಾಜಗೋಪಾಲ್ ಹೆಗ್ಡೆ ಮತ್ತು ಬಿ. ಶಿವರಾಂ ಅವರು ವೃತ್ತಿಪರ ನಿರ್ದೇಶಕರಾಗಿ ಆಡಳಿತ ಮಂಡಳಿಗೆ ನಾಮನಿರ್ದೇಶನಗೊಂಡಿದ್ದಾರೆ. 2025ರಿಂದ 2030ರ ಅವಧಿಗೆ ಈ ಆಯ್ಕೆ ನಡೆದಿದೆ.

ನಗರದಲ್ಲಿ ಇಂದು

ಕ್ವಾಂಟಮ್ ಇಂಡಿಯಾ ಬೆಂಗಳೂರು–2025 ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಎನ್.ಎಸ್. ಬೋಸರಾಜು, ಎಂ.ಬಿ. ಪಾಟೀಲ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಡಾ.ಎಂ.ಸಿ. ಸುಧಾಕರ್, ಅಜಯ್ ಸೂದ್, ಅಭಯಂಕರ್ ಕರಂಡಿಕರ್, ಸಮೀರ್ ವಿ. ಕಾಮತ್, ಸ್ಮಿತಾ ವಿಶ್ವೇಶ್ವರ, ಆಯೋಜನೆ: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸ್ಥಳ: ಹಿಲ್ಟನ್ ಹೋಟೆಲ್, ಮಾನ್ಯತಾ ಬಿಸಿನೆಸ್ ಪಾರ್ಕ್, ಬೆಳಿಗ್ಗೆ 10

ಭರತನಾಟ್ಯ ಪ್ರದರ್ಶನ: ಕಲಾಗ್ರಣಿ ಪ್ರತಿಷ್ಠಾನದ ವಿದ್ಯಾರ್ಥಿಗಳಿಂದ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ, ಜಯನಗರ, ಸಂಜೆ 5.15

'ಜೆಪಿ ಅಭಿನಂದನೆ' ಗಾಯನ, ರಂಗ ಗೌರವ, ನಾಟಕ ಪ್ರದರ್ಶನಕ್ಕೆ ಚಾಲನೆ: ಸಿ.ಎಂ. ನರಸಿಂಹಮೂರ್ತಿ ಚಾಮರಾಜನಗರ ಮತ್ತು ತಂಡ, ಅಭಿನಂದಿಸುವವರು: ಶ್ರೀನಿವಾಸ್ ಜಿ. ಕಪ್ಪಣ್ಣ, ಅಭಿನಂದನಾ ನುಡಿ: ಚಂದ್ರು ಕಾಳೇನಹಳ್ಳಿ, ಅತಿಥಿ: ಮಹಾಂತೇಶ್ ಗಜೇಂದ್ರಗಡ, ಉಪಸ್ಥಿತಿ: ಜಯಪ್ರಕಾಶಗೌಡ, ಆಯೋಜನೆ: ಕರ್ನಾಟಕ ರಂಗ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6ರಿಂದ

ವಚನ ಶ್ರಾವಣ–2025: ವಚನ ಗಾಯನ: ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, ವಚನ ಚಿಂತನ: ಎಸ್. ಪಿನಾಕಪಾಣಿ, ಅತಿಥಿ: ಆರ್. ಬಾಲರಾಜ್, ಅಧ್ಯಕ್ಷತೆ: ಮೋನಿಷಾ ನವೀನ್, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ನಾಟ್ಯ ಸನ್ನಿಧಿ ಡಾನ್ಸ್ ಸ್ಕೂಲ್, ಹೆರೋಹಳ್ಳಿ, ಸಂಜೆ 6

'ಸಾಮಾಜಿಕ ಮೌಲ್ಯಗಳ ಕುಸಿತ, ಅದರ ಪರಿಣಾಮ' ಉಪನ್ಯಾಸ: ಎನ್. ಸಂತೋಷ್ ಹೆಗ್ಡೆ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ದಾಸವಾಣಿ ಗಾಯನ: ಬೃಂದಾ ಸತ್ಯಪ್ರಸಾದ್, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸತ್ಯಪ್ರಮೋದ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಬನಶಂಕರಿ ಆರನೇ ಹಂತ, ಸಂಜೆ 7



ಕೆ.ಆರ್‌.ಪುರದ ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ(ಸಿಐಟಿ) ಹಮ್ಮಿಕೊಂಡಿದ್ದ 15ನೇ ಪದವಿ ಪ್ರದಾನ ಸಮಾರಂಭದಲ್ಲಿ ಪದವಿ ಪೂರೈಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಭಾರತೀಯ ವಿಜ್ಞಾನ ಸಂಸ್ಥೆಯ ಮಾಜಿ ನಿರ್ದೇಶಕ ಪಿ.ಬಲರಾಮ, ಮೈಕ್ರೋಸಾಫ್ಟ್ ರಿಸರ್ಚ್ ಇಂಡಿಯಾದ ಪ್ರಧಾನ ಸಂಶೋಧಕ ಡಾ.ಸ್ವಾಮಿ ಮನೋಹರ್, ಎ.ಆರ್‌.ಎಂ.ಎಂಬೆಡೆಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನ ಪ್ರಾದೇಶಿಕ ಮುಖ್ಯಸ್ಥ ಸುಮೀತ್ ವರ್ಮಾ, ಸಿಐಟಿ ಅಧ್ಯಕ್ಷ ಡಿ.ಕೆ.ಮೋಹನ್, ಸಿಇಒ ನಿತಿನ್ ಮೋಹನ್, ಸಲಹೆಗಾರ ಡಾ.ಕೆ.ಎನ್‌.ಬಾಲಸುಬ್ರಹ್ಮಣ್ಯ ಮೂರ್ತಿ, ಪ್ರಾಚಾರ್ಯರಾದ ಜಿ.ಇಂದುಮತಿ ಉಪಸ್ಥಿತರಿದ್ದರು

'ಮಹದೇವಪುರ: ಮತ ಕಳ್ಳತನವಾಗಿಲ್ಲ'

ಕೆ.ಆರ್.ಪುರ: 'ಮಹದೇವಪುರ ಕ್ಷೇತ್ರದಲ್ಲಿ ಐಟಿ–ಬಿಟಿ ಕಂಪನಿಗಳು ಹೆಚ್ಚಾಗಿರುವುದರಿಂದ ವಲಸಿಗರ ಸಂಖ್ಯೆಯೂ ಏರಿಕೆಯಾಗುತ್ತದೆ. ಹೀಗಾಗಿ ಮತದಾರರ ಸಂಖ್ಯೆಯೂ ಹೆಚ್ಚಾಗಿರುತ್ತದೆ. ಇಲ್ಲಿ ಮತಕಳ್ಳತನವಾಗಿಲ್ಲ' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಲೋಕಸಭಾ ಚುನಾವಣೆಯಲ್ಲಿ ಮಹದೇವಪುರ ಕ್ಷೇತ್ರದಲ್ಲಿ ಮತ ಕಳ್ಳತನವಾಗಿದೆ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪವನ್ನು ನಿರಾಕರಿಸಿದ ಲಿಂಬಾವಳಿ, 'ಸಂಸದ ಪಿ.ಸಿ. ಮೋಹನ್ ಅವರಿಗೆ ಮಹದೇವಪುರ ಕ್ಷೇತ್ರದಿಂದ ಒಂದು ಲಕ್ಷಕ್ಕೂ ಅಧಿಕ ಮತಗಳ ಮುನ್ನಡೆ ಸಿಕ್ಕಿದೆ' ಎಂದೂ ಹೇಳಿದರು.

ಪ್ರಯಾಣ ದರ ವಿಪರೀತ ಆಗಿದ್ದು, ವೆಚ್ಚ ಕಡಿಮೆ ಮಾಡಲು ಬಸ್‌ಗಳನ್ನೇ ಅವಲಂಬಿಸುತ್ತಿರುವ ವಿದ್ಯಾರ್ಥಿಗಳು

ಮೆಟ್ರೊ ಪಾಸ್‌ಗಾಗಿ ವಿದ್ಯಾರ್ಥಿಗಳ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ'ದಲ್ಲಿ ವಿದ್ಯಾರ್ಥಿಗಳಿಗೆ ಬಸ್ ಪಾಸ್ ನೀಡಬೇಕು ಎಂದು 'ಕಲೆಕ್ಟಿವ್ ಸ್ಟೂಡೆಂಟ್ಸ್ ಬೆಂಗಳೂರು' ಯುವ ಸಂಘಟನೆಯು ಸಹಿ ಸಂಗ್ರಹ ಅಭಿಯಾನ ಆರಂಭಿಸಿದೆ.

ಒಂದು ತಿಂಗಳಿನಿಂದ ನಡೆಯುತ್ತಿರುವ ಈ ಅಭಿಯಾನದಲ್ಲಿ 30ಕ್ಕೂ ಅಧಿಕ ಕಾಲೇಜುಗಳ 450ಕ್ಕೂ ಅಧಿಕ ವಿದ್ಯಾರ್ಥಿಗಳು ಸಹಿ ಮಾಡಿದ್ದಾರೆ. 1000 ಸಹಿಗಳಾದ ಮೇಲೆ ಬೆಂಗಳೂರು ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಬಿಎಂಆರ್‌ಸಿಎಲ್) ಅಧಿಕಾರಿಗಳನ್ನು ಭೇಟಿ ಮಾಡಿ ಮನವಿ ಸಲ್ಲಿಸಲು 'ಕಲೆಕ್ಟಿವ್ ಸ್ಟೂಡೆಂಟ್ಸ್ ಬೆಂಗಳೂರು' ವಿದ್ಯಾರ್ಥಿಗಳು ನಿರ್ಧರಿಸಿದ್ದಾರೆ.

ಎಲ್ಲ ಮೆಟ್ರೊ ನಿಲ್ದಾಣಗಳಿಂದ ಫೀಡರ್ ಬಸ್‌ಗಳು ಇರಬೇಕು. ಆಗ ಮೆಟ್ರೊ ನಿಲ್ದಾಣಗಳಿಂದ ಕೊನೇ ಮೈಲಿ ತಲುಪಲು ಸುಲಭವಾಗಲಿದೆ. ಮೆಟ್ರೊದಲ್ಲಿ ಸಂಚರಿಸಲು ರಿಯಾಯಿತಿ ದರದಲ್ಲಿ ಪಾಸ್ ನೀಡಿದರೆ ವಿದ್ಯಾರ್ಥಿಗಳು ಕಡಿಮೆ ವೆಚ್ಚದಲ್ಲಿ ಸಂಚರಿಸಲು ಸಾಧ್ಯವಾಗಲಿದೆ ಎಂದು ಅಭಿಯಾನದಲ್ಲಿ ತೊಡಗಿರುವವರು ತಿಳಿಸಿದರು.

ಮೆಟ್ರೊ ಪ್ರಯಾಣ ದರವನ್ನು ಈ ವರ್ಷ ಶೇ 71ರಷ್ಟು ಹೆಚ್ಚಳ ಮಾಡಲಾಗಿದೆ. ಇದು ವಿದ್ಯಾರ್ಥಿಗಳಿಗೆ ದುಬಾರಿಯಾಗಿದೆ. ಖಾಸಗಿ ವಾಹನ ಅಥವಾ ಕ್ಯಾಬ್‌ಗಳಲ್ಲಿ ನಿತ್ಯ ಸಂಚರಿಸಲು ಸಾಧ್ಯವಿಲ್ಲ ಎಂದು ಹೇಳಿದರು. ಹೈದರಾಬಾದ್ ಸಹಿತ ಕೆಲವು ನಗರಗಳ ಮೆಟ್ರೊಗಳಲ್ಲಿ ವಿದ್ಯಾರ್ಥಿಗಳಿಗೆ ಪಾಸ್ ನೀಡಲಾಗುತ್ತಿದೆ. ಮುಂಬೈ, ದೆಹಲಿಯಲ್ಲಿ ವಿದ್ಯಾರ್ಥಿಗಳ ಗುರುತಿನ ಚೀಟಿ ತೋರಿಸಿದರೆ ರಿಯಾಯಿತಿ ನೀಡಲಾಗುತ್ತಿದೆ. ಇದೇ ರೀತಿ ಬೆಂಗಳೂರಿನಲ್ಲಿಯೂ ನೀಡಬೇಕು ಎಂಬುದು ನಮ್ಮ ನ್ಯಾಯಯುತ ಬೇಡಿಕೆ. ಅನೇಕ ಎಂಜಿನಿಯರಿಂಗ್ ಕಾಲೇಜುಗಳು ಹೊರವಲಯದಲ್ಲಿವೆ. ಅಲ್ಲೆಲ್ಲ ಮೆಟ್ರೊ ಸಂಪರ್ಕ ಇದೆ. ಆದರೆ, ಅಧಿಕ ದರದಿಂದಾಗಿ ಸಂಚರಿಸುವುದು ಕಷ್ಟವಾಗಿದೆ ಎಂದು ಸಂಘಟನೆಯ ಸದಸ್ಯರಾದ ಶಾಲೋಮ್ ಗೌರಿ, ಅಮಲ್‌ನಾಥ್ ಹೇಳಿದರು.

'ನಮ್ಮ ಮೆಟ್ರೊ ಪ್ರಯಾಣ ದರ ಹೆಚ್ಚಿಸಿದಾಗ ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘವು ಪ್ರತಿಭಟನೆ ನಡೆಸಿತ್ತು. ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಹಿರಿಯ ನಾಗರಿಕರಿಗೂ ಪಾಸ್ ನೀಡಬೇಕು ಎಂದು ಆಗಲೇ ನಾವು ಬಿಎಂಆರ್‌ಸಿಎಲ್‌ನ ಅಧಿಕಾರಿಗಳನ್ನು ಒತ್ತಾಯಿಸಿದ್ದೆವು. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಕೂಡ ಪ್ರತ್ಯೇಕ ನಿಗಮಗಳಾಗಿವೆ. ಅಲ್ಲಿ ರಿಯಾಯಿತಿ ನೀಡಲು ಸಾಧ್ಯವಾಗುವುದಾದರೆ, ಅಂಥದ್ದೇ ಸಂಸ್ಥೆಯಾಗಿರುವ ಮೆಟ್ರೊದಲ್ಲಿ ಯಾಕೆ ಸಾಧ್ಯವಿಲ್ಲ' ಎಂದು ಮೆಟ್ರೊ ಪ್ರಯಾಣಿಕರ ಸಂಘದ ಸಂಚಾಲಕ ರಾಜೇಶ್ ಭಟ್ ಪ್ರಶ್ನಿಸಿದರು.

ಕುಟುಂಬಗಳ ಆದಾಯವು ಬೆಲೆ ಏರಿಕೆಯ ಪ್ರಮಾಣದಲ್ಲಿ ಏರಿಕೆ ಕಾಣದೇ ಸ್ಥಗಿತಗೊಂಡಿದೆ. ಶೈಕ್ಷಣಿಕ ಸಂಸ್ಥೆಗಳಲ್ಲಿ ಬೋಧನಾ ಶುಲ್ಕ ಹೆಚ್ಚಳವಾಗಿದೆ. ಮೆಟ್ರೊ ದರ ಕೂಡ ಹೆಚ್ಚಳ ಆಗಿರುವುದು ಮತ್ತಷ್ಟು ಸಂಕಷ್ಟವನ್ನು ತಂದೊಡ್ಡಿದೆ. ವಿದ್ಯಾರ್ಥಿಗಳಷ್ಟೇ ಅಲ್ಲ, ಬಡವರು, ದಮನಿತರ ಕುಟುಂಬಗಳ ಕಾರ್ಮಿಕರಿಗೂ ಹೊರೆಯಾಗಿದೆ ಎಂದು ಅಖಿಲ ಭಾರತ ವಿದ್ಯಾರ್ಥಿ ಸಂಘದ ಕರ್ನಾಟಕ ಸಂಚಾಲಕಿ ಲೇಖಾ ಅಡವಿ ತಿಳಿಸಿದರು.

ಮೆಟ್ರೊ ದರ ವಿಪರೀತ ಹೆಚ್ಚಳ ಮಾಡಿರುವುದರಿಮದ ವಿದ್ಯಾರ್ಥಿಗಳು ಮೆಟ್ರೊವನ್ನು ಕಡಿಮೆ ಬಳಕೆ ಮಾಡುತ್ತಿದ್ದಾರೆ. ಬಸ್‌ಗಳನ್ನೇ ಹೆಚ್ಚು ಅವಲಂಬಿಸಿದ್ದಾರೆ. ಶಕ್ತಿ ಯೋಜನೆ ಜಾರಿಯಾದ ಬಳಿಕ ಬಹುತೇಕ ಮಹಿಳೆಯರು, ವಿದ್ಯಾರ್ಥಿನಿಯರು ಬಸ್‌ಗಳಲ್ಲೇ ಸಂಚರಿಸುತ್ತಿದ್ದಾರೆ. ಮೆಟ್ರೊ ಪಾಸ್ ನೀಡಿದರೆ ಮೆಟ್ರೊ ಪ್ರಯಾಣಿಕರ ಪ್ರಮಾಣ ಹೆಚ್ಚಾಗಲಿದೆ ಎಂದು ಸಾರ್ವಜನಿಕ ಸಾರಿಗೆ ಅಭಿಯಾನದ ಕಾರ್ಯಕರ್ತ ಶ್ರೀನಿವಾಸ್ ಅಲವಿಲ್ಲಿ ಅಭಿಪ್ರಾಯಪಟ್ಟರು.

ಸಂಜೆ ಕಾಲೇಜಿನವರಿಗೆ ಬಸ್ ಅಗತ್ಯ

ಸಂಜೆ ಕಾಲೇಜಿನಲ್ಲಿ ಓದುತ್ತಿರುವವರು ರಾತ್ರಿ 8.30ರ ನಂತರ ತರಗತಿ ಮುಗಿದ ಬಳಿಕ ಮನೆಗೆ ತೆರಳಲು ಪರದಾಟ ನಡೆಸಬೇಕಾಗಿದೆ. ಈ ಸಮಯದಲ್ಲಿ ಬಿಎಂಟಿಸಿ ಬಸ್‌ಗಳ ಸಂಖ್ಯೆ ಕಡಿಮೆ ಇರುತ್ತದೆ. ಜನದಟ್ಟಣೆ ಹೆಚ್ಚಿರುತ್ತದೆ. ಅದಕ್ಕಾಗಿ ಬಿಎಂಟಿಸಿ ಫೀಡರ್ ಬಸ್‌ಗಳ ಸಂಖ್ಯೆ ಹೆಚ್ಚಿಸಬೇಕು ಎಂದು ಶಾಲೋಮ್ ಗೌರಿ ಆಗ್ರಹಿಸಿದರು.

ಒಂದೆರಡು ಕಿಲೋಮೀಟರ್ ಇದ್ದರೆ ನಡೆದುಕೊಂಡೇ ಹೋಗೋಣ ಎಂದು ಸಾಗುವ ವಿದ್ಯಾರ್ಥಿಗಳು ಹಲವು ಬಾರಿ ಕಳ್ಳರ ಹಾವಳಿಗೆ ಸಿಲುಕಿ ಮೊಬೈಲ್, ಹಣ ಕಳೆದುಕೊಂಡಿದ್ದಾರೆ ಎಂದು ಅವರು ವಿವರಿಸಿದರು.



ಮೆಟ್ರೊ ಫೀಡರ್ ಬಸ್‌ಗಳನ್ನು ಕಾಲೇಜುಗಳಿಂದ ಮೆಟ್ರೊ ನಿಲ್ದಾಣಕ್ಕೂ ಆರಂಭಿಸಬೇಕು ಎಂದು ಅಮಲ್‌ನಾಥ್ ಒತ್ತಾಯಿಸಿದರು.

46 ವಸತಿ ಪ್ರದೇಶಗಳಿಗೆ ಫೀಡರ್ ಬಸ್

60 ಮೆಟ್ರೊ ನಿಲ್ದಾಣಗಳಿದ್ದು, 46 ನಿಲ್ದಾಣಗಳಿಂದ ಬಿಎಂಟಿಸಿ ಫೀಡರ್ ಬಸ್‌ಗಳ ಸಂಚಾರ ವ್ಯವಸ್ಥೆ ಮಾಡಲಾಗಿದೆ.

ಜನವಸತಿ ಪ್ರದೇಶಗಳಿಗೆ ಅಗತ್ಯ ಇರುವಷ್ಟು ಬಸ್‌ಗಳು ಸಂಚರಿಸುತ್ತಿವೆ. ಯಾವುದೇ ಸಂಚಾರ ಮಾರ್ಗವನ್ನು ಸ್ಥಗಿತಗೊಳಿಸಿಲ್ಲ ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ (ಕಾರ್ಯಾಚರಣೆ) ಜಿ.ಟಿ. ಪ್ರಭಾಕರ ರೆಡ್ಡಿ ತಿಳಿಸಿದ್ದಾರೆ.



ಆರ್ಥಿಕತೆಯ ದಿಕ್ಕು, ಷೇರುಪೇಟೆಯ ಬಗ್ಗೆ ಯಾರೂ ಭವಿಷ್ಯ ಹೇಳಲು ಸಾಧ್ಯವಿಲ್ಲ. ಭವಿಷ್ಯ ಹೇಳುವ ಮಾತುಗಳನ್ನು ಬದಿಗೆ ಇರಿಸಿ. ನೀವು ಹೂಡಿಕೆ ಮಾಡಿರುವ ಕಂಪನಿಗಳಲ್ಲಿ ವಾಸ್ತವವಾಗಿ ಏನು ನಡೆಯುತ್ತಿದೆ ಎಂಬುದರತ್ತ ಗಮನಹರಿಸಿ.
ಪೀಟರ್ ಲಿಂಚ್, ಹೂಡಿಕೆದಾರ ಮತ್ತು ಲೇಖಕ

ದುಡ್ಡಿನಂಥಾ ಮಾತು



ಸರಕುಗಳ ಮೇಲೆ ಹೂಡಿಕೆಯ ಪ್ರಸ್ತಾಪ ಬಂದಾಗಲೆಲ್ಲ ತಕ್ಷಣಕ್ಕೆ ನೆನಪಿಗೆ ಬರುವುದು ಚಿನ್ನ. ಚಿನ್ನದ ಮೇಲಿನ ಹೂಡಿಕೆಯು ದೀರ್ಘಾವಧಿಯಲ್ಲಿ ಲಾಭವನ್ನೇ ತಂದುಕೊಟ್ಟದೆಯಾದರೂ, ಬೆಳ್ಳಿಯನ್ನೂ ಹೂಡಿಕೆಗೆ ಪರಿಗಣಿಸಬೇಕಾದ ಕಾಲ ಇದು ಎಂದು ತಜ್ಞರು ಹೇಳುತ್ತಿದ್ದಾರೆ

ನಿಮ್ಮ ಹೂಡಿಕೆಗಳಲ್ಲಿ ಬೆಳ್ಳಿ ಏಕೆ ಸ್ಥಾನ ಪಡೆಯಬೇಕು?

• ಚಿಂತನ್ ಹರಿಯಾ

ದೇಶದ ಷೇರು ಮಾರುಕಟ್ಟೆಗಳಲ್ಲಿ ಸರಿಸುಮಾರು ಆರು ತಿಂಗಳವರೆಗೆ ತೀವ್ರ ಪ್ರಮಾಣದ ಕುಸಿತ ಕಂಡುಬಂತು. ಇದಾದ ನಂತರದಲ್ಲಿ, ಈ ವರ್ಷದ ಏಪ್ರಿಲ್‌ನಿಂದ ಈಚೆಗೆ ಷೇರುಪೇಟೆಗಳು ಚೇತರಿಕೆ ಕಂಡಿವೆ.

ಆದರೆ ಅಮೆರಿಕದ ಜೊತೆಗಿನ ವ್ಯಾಪಾರದ ವಿಚಾರದಲ್ಲಿನ ಅನಿಶ್ಚಿತತೆ, ಅಮೆರಿಕದಲ್ಲಿ ಬಡ್ಡಿ ದರವನ್ನು ಇಳಿಸುವ ವಿಚಾರದಲ್ಲಿ ಅಲ್ಲಿನ ಕೇಂದ್ರೀಯ ಬ್ಯಾಂಕ್ ತ್ವರಿತಗತಿಯಲ್ಲಿ ತೀರ್ಮಾನ ತೆಗೆದುಕೊಳ್ಳದೆ ಇರುವುದು ಹಾಗೂ ಇತರ ಕೆಲವು ಅಂಶಗಳು ಸೂಚ್ಯಂಕಗಳ ಚಲನೆಯನ್ನು ಅನಿಶ್ಚಿತಗೊಳಿಸಿವೆ.

ಹೂಡಿಕೆದಾರರು ತಮ್ಮ ಹಣವನ್ನು ಲೋಹದಂತಹ ಸರಕುಗಳ ಮೇಲೆ ತೊಡಗಿಸುವುದರಿಂದ ಷೇರುಪೇಟೆಯ ಚಂಚಲ ಸ್ಥಿತಿಯನ್ನು ನಿಭಾಯಿಸುವುದು ಸುಲಭವಾಗುತ್ತದೆ. ಲೋಹದ ಮೇಲಿನ ಹೂಡಿಕೆಯ ಪ್ರಸ್ತಾಪ ಬಂದಾಗಲೆಲ್ಲ ಬಂಗಾರದ ನೆನಪು ಆಗುತ್ತದೆಯಾದರೂ, ಈಗ ಬೆಳ್ಳಿಯ ಮೇಲೆ ಹೂಡಿಕೆ ಮಾಡುವ ಬಗ್ಗೆಯೂ ಪರಿಶೀಲಿಸಬೇಕಿದೆ. ಹೂಡಿಕೆದಾರರು ಬೆಳ್ಳಿಯನ್ನು ತಮ್ಮ ಹೂಡಿಕೆಗಳ ಪಟ್ಟಿಗೆ ಸೇರಿಸಿಕೊಳ್ಳುವುದಕ್ಕೆ ಇದು ಸರಿಯಾದ ಕಾಲ. ಹೀಗೆ ಹೇಳುವುದಕ್ಕೆ ಹಲವು ಕಾರಣಗಳಿವೆ.

ಬೆಳ್ಳಿಯು ಹೂಡಿಕೆದಾರರಿಗೆ ಹಣದುಬ್ಬರದ ಪ್ರಭಾವದಿಂದ ರಕ್ಷಣೆ ಒದಗಿಸುತ್ತದೆ. ಅಲ್ಲದೆ, ಬೆಳ್ಳಿಗೆ ಇರುವ ಬೇಡಿಕೆ ಹಾಗೂ ಬೆಳ್ಳಿಯ ಪೂರೈಕೆಯಲ್ಲಿನ ವ್ಯತ್ಯಾಸವು ಯಾವತ್ತಿನಿಂದಲೂ ಉಳಿದುಬಂದಿರುವ ಕಾರಣಕ್ಕೆ ಬೆಲೆಯಲ್ಲಿ ಸ್ಥಿರತೆ ಇರುತ್ತದೆ. ಸಾಂಪ್ರದಾಯಿಕ ಹಾಗೂ ಹೊಸದಾಗಿ ತೀವ್ರಗತಿಯಲ್ಲಿ ಬೆಳವಣಿಗೆ ಕಾಣುತ್ತಿರುವ ಹಲವು ಕೈಗಾರಿಕೆಗಳಿಗೆ ಬೆಳ್ಳಿಯ ಅಗತ್ಯ ಇರುವ ಕಾರಣಕ್ಕೆ, ಈ ಲೋಹಕ್ಕೆ ಯಾವಾಗಲೂ ಬೇಡಿಕೆಯು ಇರುವ ಸಾಧ್ಯತೆ ಹೆಚ್ಚು. ಈಚಿನ ವರ್ಷಗಳಲ್ಲಿ ಬೆಳ್ಳಿಯು ಒಳ್ಳೆಯ ಪ್ರಮಾಣದಲ್ಲಿ ಲಾಭ ತಂದುಕೊಟ್ಟಿದೆ. ಕೆಲವು ಸಾಲಪತ್ರಗಳಿಗಿಂತ ಹೆಚ್ಚಿನ ಲಾಭವನ್ನು ಬೆಳ್ಳಿ ನೀಡಿದೆ.

ಚಿನ್ನ–ಬೆಳ್ಳಿ ಅನುಪಾತದ ದೃಷ್ಟಿಯಿಂದ ಗಮನಿಸಿದಾಗ ಬೆಳ್ಳಿಯ ಬೆಲೆಯು ಅಗ್ಗವಾಗಿರುವಂತೆ ಕಾಣುತ್ತದೆ. ಈ ವರ್ಷದಲ್ಲಿ ಮುಂದಿನ ದಿನಗಳಲ್ಲಿ ಎರಡು ಬಾರಿ ಬಡ್ಡಿ ದರ ಇಳಿಕೆ ಮಾಡುವ ಸಾಧ್ಯತೆ ಇದೆ ಎಂದು ಅಮೆರಿಕದ ಫೆಡರಲ್ ರಿಸರ್ವ್ ಸೂಚ್ಯವಾಗಿ ಹೇಳಿರುವುದು ಕೂಡ ಬೆಳ್ಳಿಯ ಪಾಲಿಗೆ ಧನಾತ್ಮಕವಾದ ಅಂಶ. ಹೂಡಿಕೆದಾರರು ಬೆಳ್ಳಿಯ ಮೇಲೆ ಹಣ ತೊಡಗಿಸಲು ಇಟಿಎಫ್‌ಗಳನ್ನು ಆಶ್ರಯಿಸುವುದು ಸೂಕ್ತ.

ಬೆಳ್ಳಿಯ ಈಗ ಆಕರ್ಷಕವಾಗಿ ಕಾಣುವುದಕ್ಕೆ ಹಲವು ಅಂಶಗಳು ಕಾರಣವಾಗಿವೆ.

ಬೇಡಿಕೆ–ಪೂರೈಕೆ ಅಂತರ: ಬೆಳ್ಳಿಯನ್ನು ಹೆಚ್ಚಾಗಿ ಉತ್ಪಾದಿಸುವುದು ಗಣಿಗಾರಿಕೆ ಮೂಲಕ. ಇದರ ಉತ್ಪಾದನೆಯ ಇನ್ನೊಂದು ಮೂಲ ಇರುವುದು ಪುನರ್ಬಳಕೆಯಲ್ಲಿ. ಆದರೆ 2021ರ ನಂತರದಲ್ಲಿ ಜಾಗತಿಕ ಮಟ್ಟದಲ್ಲಿ ಬೆಳ್ಳಿಯ ಉತ್ಪಾದನೆಯು ಅದಕ್ಕೆ ಇರುವ ಬೇಡಿಕೆಗೆ ಅನುಗುಣವಾಗಿ ಇಲ್ಲ. ಉತ್ಪಾದನೆಯು ಬೇಡಿಕೆಗಿಂತ ಕಡಿಮೆ ಇದೆ.

2025ರಲ್ಲಿ ಸಿಲ್ವರ್ ಇನ್‌ಸ್ಟಿಟ್ಯೂಟ್ ಬಿಡುಗಡೆ ಮಾಡಿರುವ ವರದಿಯೊಂದರ ಪ್ರಕಾರ 2024ರಲ್ಲಿ ಬೆಳ್ಳಿಯ ಬೇಡಿಕೆಯು 116.4 ಕೋಟಿ ಔನ್ಸ್‌ನಷ್ಟು ಇತ್ತು. ಆದರೆ ಪೂರೈಕೆ ಇದ್ದಿದ್ದು 101.51 ಕೋಟಿ ಔನ್ಸ್ ಮಾತ್ರ.

2025ರಲ್ಲಿ ಬೆಳ್ಳಿಗೆ ಬೇಡಿಕೆಯು 114.8 ಕೋಟಿ ಔನ್ಸ್‌ನಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಆದರೆ ಪೂರೈಕೆಯು 103.06 ಕೋಟಿ ಔನ್ಸ್ ಮಾತ್ರವೇ ಇರಲಿದೆ ಎನ್ನಲಾಗಿದೆ. ಪೂರೈಕೆಯು ಬೇಡಿಕೆಗಿಂತ ಕಡಿಮೆ ಇರುವ ಕಾರಣಕ್ಕೆ ಸದ್ಯದಲ್ಲಿ ಹಾಗೂ ಭವಿಷ್ಯದಲ್ಲಿ ಬೆಳ್ಳಿಯ ಬೆಲೆಯು ಹೆಚ್ಚಳ ಕಾಣುತ್ತಲೇ ಇರುವ ಸಾಧ್ಯತೆ ಹೆಚ್ಚಿದೆ.

ಆಕರ್ಷಕ ಬೆಲೆ: ಒಂದು ಗ್ರಾಂ ಚಿನ್ನವನ್ನು ಖರೀದಿಸಲು ಎಷ್ಟು ಗ್ರಾಂ ಬೆಳ್ಳಿಯ ಅಗತ್ಯ ಇದೆ ಎಂಬುದನ್ನು ಚಿನ್ನ ಮತ್ತು ಬೆಳ್ಳಿ ಅನುಪಾತವು ಹೇಳುತ್ತದೆ. ಈ ಅನುಪಾತ ಹೆಚ್ಚಿದ್ದಂತೆಲ್ಲ, ಬೆಳ್ಳಿಯ ಬೆಲೆ ಕಡಿಮೆ ಎಂದು ಅರ್ಥ. ಅಂದರೆ ಅದಕ್ಕೆ ಇರಬೇಕಾದ ಬೆಲೆಗಿಂತ ಅದು ಕಡಿಮೆಗೆ ಸಿಗುತ್ತಿದೆ ಎಂದು ಅರ್ಥ. ಈ ಅನುಪಾತದ ಆಧಾರದಲ್ಲಿ ಹೇಳುವುದಾದರೆ ಬೆಳ್ಳಿಯು ಈಗ ಹೆಚ್ಚು ಆಕರ್ಷಕವಾದ ಬೆಲೆಗೆ ಸಿಗುತ್ತಿದೆ.

ಈಕ್ವಿಟಿ, ಹಣದುಬ್ಬರ: 2010ರಿಂದ 2024ರವರೆಗಿನ ದತ್ತಾಂಶಗಳ ಪ್ರಕಾರ, ಬೆಳ್ಳಿಯು ಈ ಅವಧಿಯ ಏಳು ವರ್ಷಗಳಲ್ಲಿ ನಿಫ್ಟಿ–50 ಟಿಆರ್‌ಐ ಸೂಚ್ಯಂಕಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಲಾಭ ತಂದುಕೊಟ್ಟಿದೆ. ಈಕ್ವಿಟಿಗೂ ಬೆಳ್ಳಿಗೂ ನೇರ ಸಂಬಂಧ ಇಲ್ಲವಾಗಿರುವ ಕಾರಣಕ್ಕೆ, ಜಾಗತಿಕ ಅನಿಶ್ಚಿತತೆಗಳ ಸಂದರ್ಭಗಳಲ್ಲಿ ಬೆಳ್ಳಿಯು ಈಕ್ವಿಟಿಗಿಂತ ಹೆಚ್ಚು ಲಾಭ ತಂದುಕೊಟ್ಟಿದೆ. ಈ ಮೂಲಕ ಅದು ಹೂಡಿಕೆದಾರರ ಪೋರ್ಟ್‌ಫೋಲಿಯೊ ಹೆಚ್ಚು ಆರೋಗ್ಯಕರವಾಗಿರುವಂತೆ ನೋಡಿಕೊಂಡಿದೆ.



ಹೂಡಿಕೆಗೆ ಇಟಿಎಫ್ ಮಾರ್ಗ

ಸಣ್ಣ ಹೂಡಿಕೆದಾರರ ಪಾಲಿಗೆ ಇಟಿಎಫ್ ಮೂಲಕ ಬೆಳ್ಳಿಯಲ್ಲಿ ಹಣ ತೊಡಗಿಸುವುದು ಸರಿಯಾದ ಆಯ್ಕೆಯಾಗುತ್ತದೆ. ಇಟಿಎಫ್ ಯೂನಿಟ್‌ಗಳು ಷೇರುಪೇಟೆಯಲ್ಲಿ ಖರೀದಿಗೆ ಮತ್ತು ಮಾರಾಟಕ್ಕೆ ಲಭ್ಯವಿರುತ್ತವೆ. ಅಲ್ಲದೆ ಇವುಗಳನ್ನು ಮಾರಾಟ ಮಾಡಿ ನಗದೀಕರಿಸಿಕೊಳ್ಳುವುದು ಬಹಳ ಸುಲಭ. ₹500 ಬಳಸಿಯೂ ಬೆಳ್ಳಿಯಲ್ಲಿ ಹೂಡಿಕೆ ಮಾಡಬಹುದು. ಬೆಳ್ಳಿಯನ್ನು ಭೌತಿಕ ರೂಪದಲ್ಲಿ ಕೊಂಡರೆ ಅದನ್ನು ಇರಿಸಿಕೊಳ್ಳಲು ಒಂದಿಷ್ಟು ಜಾಗ ಬೇಕಾಗುತ್ತದೆ, ಇಟಿಎಫ್ ಮೂಲಕ ಹೂಡಿಕೆ ಮಾಡಿದರೆ ಆ ಚಿಂತೆಯೂ ಇಲ್ಲ.

ಅಲ್ಲದೆ, ಈ ಲೋಹವು ಕಳೆದ ಆರು ವರ್ಷಗಳ ಪೈಕಿ ನಾಲ್ಕು ವರ್ಷಗಳಲ್ಲಿ ಹಣದುಬ್ಬರದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಗಳಿಕೆ ತಂದುಕೊಟ್ಟಿದೆ.

ಕೈಗಾರಿಕಾ ಬಳಕೆ: ಜಗತ್ತಿನ ಎಲ್ಲೆಡೆ ಬಳಕೆಯಲ್ಲಿ ಇರುವ ವಿದ್ಯುತ್ ಚಾಲಿತ ವಾಹನಗಳು, ಪರಿಸರ ಪೂರಕವಾದ ಇಂಧನ ಉತ್ಪಾದನೆ, 5ಜಿ ದೂರಸಂಪರ್ಕ ಜಾಲ, ವೈದ್ಯಕೀಯ ವಲಯದ ಕೆಲವು ವಿಭಾಗಗಳು, ವಿದ್ಯುತ್ ಉತ್ಪಾದನೆಯ ವಲಯವು ಬೆಳ್ಳಿಯ ಪ್ರಮುಖ ಬಳಕೆದಾರರಾಗಿ ಬೆಳೆದಿವೆ. ಅಲ್ಲದೆ, ಸಾಂಪ್ರದಾಯಿಕ ಉದ್ಯಮಗಳಾದ ಕನ್ನಡಿ ತಯಾರಿಕೆ, ಸೌರಫಲಕಗಳ ತಯಾರಿಕೆ, ವಾಹನ ತಯಾರಿಕೆ, ಕೈಗಾರಿಕೆಗಳಲ್ಲಿ ಬಳಸುವ ಬ್ಯಾಟರಿಗಳು, ತಯಾರಿಕೆ ಹಾಗೂ ಜವಳಿ ಉದ್ಯಮದಲ್ಲಿ ಕೂಡ ಈ ಲೋಹದ ಬಳಕೆ ಇದೆ.

ಆರ್ಥಿಕ ಅನಿಶ್ಚಿತತೆ, ಬಡ್ಡಿ ದರ ಇಳಿಕೆ: ಅಮೆರಿಕದ ಫೆಡರಲ್ ರಿಸರ್ವ್ ಕಳೆದ ವರ್ಷದಲ್ಲಿ ಬಡ್ಡಿ ದರ ಇಳಿಸಲು ಆರಂಭಿಸಿದೆ. ಆದರೆ ಅಮೆರಿಕದ ವಾಣಿಜ್ಯ ಸುಂಕ ಕ್ರಮಗಳು ಅಭಿವೃದ್ಧಿ ಹೊಂದಿರುವ ಹಲವು ದೇಶಗಳಿಗೆ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಪ್ರಮುಖ ಸವಾಲಾಗಿ ಎದುರಾಗಿವೆ. ಹೀಗಾಗಿ ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಇಳಿಸುವ ಪ್ರಕ್ರಿಯೆಯನ್ನು ನಿಧಾನವಾಗಿಸಿದೆ. ವರ್ಷದ ಅವಧಿಯಲ್ಲಿ ಇನ್ನೂ ಎರಡು ಬಾರಿ ಅದು ಬಡ್ಡಿ ದರವನ್ನು ಇಳಿಸುವ ಸಾಧ್ಯತೆ ಇದೆ.

ಆದರೆ ಜಾಗತಿಕ ಮಟ್ಟದಲ್ಲಿನ ಕೆಲವು ಅನಿಶ್ಚಿತತೆಗಳು ಆರ್ಥಿಕವಾಗಿಯೂ ಒಂದಿಷ್ಟು ಅನಿಶ್ಚಿತತೆಗಳನ್ನು ಸೃಷ್ಟಿಸುತ್ತವೆ. ಜಾಗತಿಕ ಮಾರುಕಟ್ಟೆಯಲ್ಲಿನ ಈ ಚಂಚಲ ಸ್ಥಿತಿಯ ಸಂದರ್ಭದಲ್ಲಿ ಚಿನ್ನದಂತೆಯೇ ಬೆಳ್ಳಿಯೂ ಒಂದಿಷ್ಟು ಬೆಲೆ ಹೆಚ್ಚಿಸಿಕೊಳ್ಳಬಹುದು.

ಭಾರತವು ಬಡ್ಡಿ ದರವನ್ನು ಇನ್ನಷ್ಟು ತಗ್ಗಿಸುವ ನಿರೀಕ್ಷೆ ಇದೆ, ಅಮೆರಿಕ ಕೂಡ ಮುಂದೆ ಬಡ್ಡಿ ದರವನ್ನು ತಗ್ಗಿಸಲಿದೆ ಎಂಬ ಆಶಾಭಾವನೆ ಇದೆ. ಹೀಗಾಗಿ ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್‌ಗಳು, ವಿದ್ಯುತ್ ಚಾಲಿತ ವಾಹನಗಳು ಸೇರಿದಂತೆ ಹಲವು ಕೈಗಾರಿಕಾ ವಲಯಗಳ ಬೆಳವಣಿಗೆ ಹೆಚ್ಚುವ ಅಂದಾಜು ಇದೆ. ಈ ವಲಯಗಳು ಬೆಳ್ಳಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುತ್ತವೆ.

ಲೇಖಕ ಐಸಿಐಸಿಐ ಪ್ರುಡೆನ್ಶಿಯಲ್ ಎಎಂಸಿಯ ಹೂಡಿಕೆ ಕಾರ್ಯತಂತ್ರ ವಿಭಾಗದ ಮುಖ್ಯಸ್ಥ

ಎಂ.ಎಫ್ ಹೂಡಿಕೆಯಿಂದ ಲಾಭಾಂಶ ಸಿಗುವುದಿಲ್ಲವೇ?



ಮಾಹಿತಿ ಕಣಜ

ನೇರವಾಗಿ ಷೇರುಗಳಲ್ಲಿ ಹಣ ತೊಡಗಿಸುವವರಿಗೆ ಲಾಭಾಂಶದ ಬಗ್ಗೆ ಮಾಹಿತಿ ಇದ್ದೇ ಇರುತ್ತದೆ. ಅವರು ಹಣ ತೊಡಗಿಸಿದ ಕಂಪನಿಯು ಲಾಭಾಂಶ ಘೋಷಿಸಿದಾಗಲೆಲ್ಲ, ಹೂಡಿಕೆದಾರರ ಖಾತೆಗೆ ಲಾಭಾಂಶದ ಹಣ ಸಂದಾಯ ಆಗುತ್ತದೆ. ಆದರೆ ಮ್ಯೂಚುವಲ್ ಫಂಡ್‌ಗಳ (ಎಂ.ಎಫ್) ಮೂಲಕ ಹಣ ತೊಡಗಿಸಿದವರಿಗೆ ಈ ಬಗೆಯಲ್ಲಿ ಲಾಭಾಂಶ ಸಿಗುವುದಿಲ್ಲ.

ಶುದ್ಧ ಈಕ್ವಿಟಿ ಫಂಡ್‌ಗಳಲ್ಲಿ ಹಣ ತೊಡಗಿಸಿದವರಿಗೂ ಲಾಭಾಂಶ ಸಿಗುವುದಿಲ್ಲ. ಈಕ್ವಿಟಿ ಫಂಡ್‌ಗಳು ಹೂಡಿಕೆದಾರರಿಂದ ಸಂಗ್ರಹಿಸಿದ ಹಣವನ್ನು ವಿವಿಧ ಕಂಪನಿಗಳ ಷೇರುಗಳ ಮೇಲೆ ತೊಡಗಿಸಿರುತ್ತವೆ. ಆದರೂ, ಕಂಪನಿಗಳು ಲಾಭಾಂಶ ಘೋಷಿಸಿದಾಗ ಮ್ಯೂಚುವಲ್ ಫಂಡ್ ಹೂಡಿಕೆದಾರರಿಗೆ ಲಾಭಾಂಶ ಸಿಗುವುದಿಲ್ಲ. ಇದೇಕೆ ಹೀಗೆ ಎಂಬ ಪ್ರಶ್ನೆಯು ಮ್ಯೂಚುವಲ್ ಫಂಡ್‌ಗಳ ಮೂಲಕ ಈಕ್ವಿಟಿಗಳಲ್ಲಿ ಹಣ ತೊಡಗಿಸುವವರನ್ನು ಕಾಡಿರಬಹುದು.

ನಿರ್ದಿಷ್ಟವಾಗಿ ಒಂದು ಬಗೆಯ ಮ್ಯೂಚುವಲ್ ಫಂಡ್‌ಗಳನ್ನು ಹೊರತುಪಡಿಸಿದರೆ ಬೇರೆ ಬಗೆಯ ಮ್ಯೂಚುವಲ್ ಫಂಡ್‌ಗಳು ಲಾಭಾಂಶವನ್ನು ನೇರವಾಗಿ ಹೂಡಿಕೆದಾರರಿಗೆ ವರ್ಗಾವಣೆ ಮಾಡುವುದಿಲ್ಲ. ಮ್ಯೂಚುವಲ್ ಫಂಡ್ ತಾನು ಹಣ ತೊಡಗಿಸಿರುವ ಕಂಪನಿಯು ಲಾಭಾಂಶವನ್ನು ಘೋಷಿಸಿದಾಗ, ಆ ಮೊತ್ತವು ಫಂಡ್‌ಗೆ ವರ್ಗಾವಣೆ ಆಗುತ್ತದೆ ಎಂಬುದು ನಿಜ. ಆದರೆ ಆ ಹಣವನ್ನು ಫಂಡ್‌ನ ನಿರ್ವಾಹಕ ಮತ್ತೆ ಹೊಸ ಹೂಡಿಕೆಗೇ ಬಳಸಿಕೊಳ್ಳುತ್ತಾನೆಯೇ ವಿನಾ ಅದನ್ನು ತನ್ನಲ್ಲಿ ಹಣ ತೊಡಗಿಸಿದ ಸಾರ್ವಜನಿಕರಿಗೆ ವಿತರಿಸುವುದಿಲ್ಲ.

ಲಾಭಾಂಶದ ರೂಪದಲ್ಲಿ ಬಂದ ಹಣವನ್ನು ಹೀಗೆ ಪುನಃ ಹೂಡಿಕೆ ಮಾಡುವುದರಿಂದ ಹೂಡಿಕೆದಾರರಿಗೆ ದೀರ್ಘಾವಧಿಯಲ್ಲಿ ಲಾಭವೇ ಆಗುತ್ತದೆ ಎಂದು ಹಣಕಾಸು ತಜ್ಞರು ಹೇಳುತ್ತಾರೆ. ಲಾಭಾಂಶವನ್ನು ಮತ್ತೆ ಉತ್ತಮ ಷೇರುಗಳಲ್ಲಿ ಹೂಡಿಕೆ ಮಾಡುವುದರಿಂದ, ಆ ಷೇರುಗಳ ಮೌಲ್ಯವರ್ಧನೆಯ ಪ್ರಯೋಜನವು ಹೂಡಿಕೆದಾರನಿಗೆ ಸಿಗುತ್ತದೆ.

ಲಾಭಾಂಶದ ರೂಪದಲ್ಲಿ ಸಿಗುವ ಹಣವನ್ನು ಮ್ಯೂಚುವಲ್ ಫಂಡ್ ನಿರ್ವಾಹಕರು ತಕ್ಷಣವೇ ಮರುಹೂಡಿಕೆ ಮಾಡಬೇಕು ಎಂಬುದೇನೂ ಇಲ್ಲ. ಅವರು ಆ ಹಣವನ್ನು ನಗದು ರೂಪದಲ್ಲಿ ತಮ್ಮಲ್ಲಿಯೇ ಇರಿಸಿಕೊಳ್ಳಬಹುದು. ಮಾರುಕಟ್ಟೆಯಲ್ಲಿ ಹೊಸದಾಗಿ ಹಣ ತೊಡಗಿಸಲು ಒಳ್ಳೆಯ ಅವಕಾಶ ಕಂಡಾಗ ಅವರು ಆ ಹಣವನ್ನು ತೊಡಗಿಸುವ ಕೆಲಸ ಮಾಡಬಹುದು.

ಎಲ್‌ಟಿ ಫುಡ್ಸ್

ಬ್ರೋಕರೇಜ್ ಮಾತು

‘ಎಲ್‌ಟಿ ಫುಡ್ಸ್’ ಕಂಪನಿಯ ಷೇರು ಮೌಲ್ಯವು ₹600ಕ್ಕೆ ತಲುಪಬಹುದು ಎಂದು ಬ್ರೋಕರೇಜ್ ಕಂಪನಿ ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ. ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಕಂಪನಿಯು ಶೇ 19ರಷ್ಟು ವರಮಾನ ಏರಿಕೆಯನ್ನು ದಾಖಲಿಸಿದೆ.

ಕಂಪನಿಯ ಬೆಳವಣಿಗೆಯು ವಿಸ್ತೃತ ನೆಲೆಯಲ್ಲಿ ಆಗಿದೆ. ಭಾರತದಲ್ಲಿನ ವಹಿವಾಟುಗಳು ಹಿಂದಿನ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ತ್ರೈಮಾಸಿಕದಲ್ಲಿ ಶೇ 10ರಷ್ಟು ಬೆಳವಣಿಗೆ ಕಂಡಿವೆ. ಅದೇ ರೀತಿ ವಿದೇಶಿ ವಹಿವಾಟುಗಳ ಪ್ರಮಾಣವು ಶೇ 15ರಷ್ಟು ಏರಿಕೆ ಕಂಡಿದೆ ಎಂದು ಮೋತಿಲಾಲ್ ಓಸ್ವಾಲ್ ಹೇಳಿದೆ.

ಕಂಪನಿಯ ಸಾವಯವ ಉತ್ಪನ್ನಗಳ ಮಾರಾಟವು ಯುರೋಪ್ ಮತ್ತು ಅಮೆರಿಕದಲ್ಲಿನ ಬಲಿಷ್ಠ ವಿತರಣಾ ಜಾಲದ ಕಾರಣದಿಂದಾಗಿ ಹೆಚ್ಚಳ ಕಂಡಿದೆ. ಬ್ರಿಟನ್ನಿನಲ್ಲಿ ಈ ಬಗೆಯ ಉತ್ಪನ್ನಗಳ ಮಾರಾಟವು ಹೆಚ್ಚಳ ಕಾಣುತ್ತಿದೆ. ಎಲ್‌ಟಿ ಫುಡ್ಸ್ ಕಂಪನಿಯು ಎರಡಂಕಿ ಪ್ರಮಾಣದಲ್ಲಿ ಬೆಳವಣಿಗೆ ಸಾಧಿಸಲು ಸಜ್ಜಾಗಿದೆ.

ಕಂಪನಿಯ ತೆರಿಗೆ ನಂತರದ ಲಾಭದ ಸಂಯುಕ್ತ ವಾರ್ಷಿಕ ಬೆಳವಣಿಗೆ ದರವು 2024–25ರಿಂದ 2026–27ರವರೆಗೆ ಶೇ 28ರಷ್ಟು ಆಗುವ ನಿರೀಕ್ಷೆ ಇದೆ ಎಂದು ಕೂಡ ಮೋತಿಲಾಲ್ ಓಸ್ವಾಲ್ ಹೇಳಿದೆ. ಬುಧವಾರದ ವಹಿವಾಟಿನ ಅಂತ್ಯಕ್ಕೆ ಎಲ್‌ಟಿ ಫುಡ್ಸ್ ಕಂಪನಿಯ ಷೇರುಮೌಲ್ಯವು ₹500.45 ಆಗಿತ್ತು.

(ಬ್ರೋಕರೇಜ್ ಸಂಸ್ಥೆಗಳು ನೀಡುವ ಮಾಹಿತಿ, ವಿವರಗಳಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

Second Language ENGLISH

Unit-2 PROSE

There's a Girl by the Tracks!

Task 1: Some sentences are given below. In each sentence the word 'compose' is used. Identify the meaning given above and write the corresponding number in the boxes.

1.Nayana sat at the desk, taking several deep breaths to compose herself ( )
2.Water is composed of hydrogen and oxygen.( )
3. A.R. Rehaman has composed music for the film Kocchadian ( )
4. The legal system is composed of people and people make legal systems. ( )
5. More than 17.6 million firms composed the business sector of our economy. ( )
6. I like the way Ravi composes photographs. ( )

Ans:-

1.Nayana sat at the desk, taking several deep breaths to compose herself (6)
2.Water is composed of hydrogen and oxygen.(1)
3. A.R. Rehaman has composed music for the film Kocchadian **(4)**
4. The legal system is composed of people and people make legal systems. (3)
5. More than 17.6 million firms composed the business sector of our economy. (2)
6. I like the way Ravi composes photographs. (5)

* * * * * * * * * * *

POEM

Quality of Mercy

About Author : William Shakespeare

William Shakespeare was born on April 23, 1564, in Stratford-on-Avon. He was regarded as the foremost dramatist of his time. His sonnets were composed between 1593 and 1601. The Sonnets of Shakespeare, consists of 154 sonnets, all written in the form of three quatrains and a couplet that is now recognized as Shakespearean. The sonnets fall into two groups: sonnets 1-126, addressed to a beloved friend, a handsome and noble young man, and sonnets 127-512, to a malignant but fascinating "Dark Lady", whom the poet loves inspite of himself. Nearly all of Shakespeare's sonnets examine the inevitable decay of time, and the immortalization of beauty and love in poetry.

In his and plays, Shakespeare invited thousands of words. His impressive expansion of the English language, according to the Oxford English Dictionary, includes such words as : birthplace. Blood sucking, courtship, dewdrop, downstairs, radiance, schoolboy, still born, watchdog ,etc.

Shakespeare wrote more than 30 plays. These are usually divided into four categories: histories, comedies, tragedies, and romances. His earliest plays were primarily comedies and histories such as Henry VI and The Comedy Of Errors, but in 1596, Shakespeare wrote a romantic book called " Romeo and Juliet", his second tragedy, and over the next dozen years he would return to the form, writing the plays for which he is now best known: Julius Caesar, Hamlet, Othello, King Lear, Macbeth and Antony and Cleopatra.

In his final year, Shakespeare turned to the romantic with Cymbeline, A Winter's Tale, and The Tempest.

Understand the poem

1. Mercy is compared with something in the first two lines of the poem. What is it? How is this comparison apt? Justify your answer.

Ans: The quality of mercy is compared with gentle drop of rain from heaven. It does not hurt. The comparison is apt as the showing mercy does not hurt the giver or taker instead it gives blessings of gentle peace to both.

2.The speaker says that mercy is twice blessed. What does she mean by this?

Ans: Mercy gently blesses both the giver and the receiver. Hence the speaker says mercy is twice blessed.

3.'Sceptre shows the force of temporal power'. In contrast, what or whose quality does mercy stand for?

Ans: Sceptre is a decorated rod or baton carried as symbol of authority or power by King or Queen. Sceptre creates fear of king in hearts of people. Sceptre is symbolic of early power. In contrast mercy is above the influence of earthly power of King or Queen; it is enthroned in the hearts of kings and it is an attribute to God himself. When king's justice is tempered by mercy, he will looks like that of God.

Some traits or qualities are mentioned below. Classify them into two categories of temporal power and divine (Godly) ¸ïattributes: Revenge, Tyranny, Cruelty, miserliness, hatred, tit for tat attitude, Love, Sympathy, Mercy, Compassion

Ans:

(Contd….)

Biology

REPRODUCTION

REPRODUCTIVE HEALTH

Answer the following:-

1. Mention two differences between GIFT and ZIFT.

Ans:- Differences Between GIFT and ZIFT are -

S. No	*GIFT*	*ZIFT*
1.	Fertilization occurs *invivo* i.e., in fallopian tube.	Fertilization occurs in vitro, i.e., outside the body of the female.
2.	Both eggs and sperms are introduced in the fallopian tube.	One day old zygote is introduced in the fallopian tube.

2. Mention two differences between IUT and GIFT or ZIFT.

Ans:- Differences Between IUT and GIFT or ZIFT are -

S. No.	*IUT*	*GIFT / ZIFT*
1.	It is transfer of early embryo directly into uterus.	It is transfer of zygote (in ZIFT) or gametes (in GIFT) into fallopian tube.
2.	The embryo consists of more than 8 blastomeres.	The embryo is either upto 8 blastomeres stage or in unfertilized ovum stage.

3. What is amniocentesis? Why is there a statutory ban on this?

Ans:- Amniocentesis is prenatal diagnostic test to find out genetic and metabolic disorders of the foetus by taking out small quantity of amniotic fluid and testing –
(i) Foetal cells for sex determination and chromosomal abnormalities.
(ii) Foetal enzymes, proteins and other biochemicals for metabolic disorders.

4. What is Invitro fertilization (IVF) and embryo transfer (ET)?

Ans:- Invitro fertilization (IVF) and embryo transfer (ET)– is a technique in which multiple ovulation is induced in a woman, the ova are collected and made to undergo fertilization, either the zygote of the embryo is transferred into the uterus of the mother for implantation and further development. Babies born out of such techniques are called test tube babies.

The first baby of the world, was Louise Joy Brown, born in the England and the first test tube baby of India, was Kanupriya Agarwal born on October 03, 1978.

5. Mention some Sexually transmitted diseases and the common techniques used to detect them.

Ans:- Some Important Sexually transmitted diseases and Common Techniques for their Detection are -

Sexually transmitted diseases	***Causal Agent***	***Detection Techniques***
Chlamydia	*Chlamydia trachomatis*	Clinical, Gram-staining of discharge, antigen detection, nucleic acid hybridation.
Gonorrhoea	*Nisseria gonorrhoea*	Gram-staining of discharge, culture.
Trichomon-iasis	*Trichomo-nas vaginalis*	Microscopic examination, culture
Genital Herpes	*Herpes simplex virus*	Clinical, antigen test, PCR
Syphilis	*Trepanema pallidum*	Antibody detection, e.g., VDRL (Veneral Disease Research Laboratory)
Chancroid	*Haemoph-ilus ducreyi*	Clinical, culture
Genital warts	*Human palillorna virus* (HPV)	Clinical, antibody detection, culture, DNA hybri-dization.

6. What is vasectomy?

Ans:- Vasectomy is a method of sterilization in male. It involves surgical removal of a small portion of each vas deferens. An incision is made in the scrotum on each side, the vas deferens is located and each one is tied in two places. Then the portion between the two ties is cut out. In this method, production of sperms continues in the testes but they cannot reach the urethra.

7. What is Tubectomy?

Ans:- Tubectomy is a method of female terilization. It involves surgical removal of a small portion of each uterine tube A small incision is made into the abdominal cavity and the uterine tubes are squeezed to form a small loop called a knuckle. A suture is tied tightly at the base of the knuckle and the knuckle is cut. In about 4 to 5 days

(Contd…)

ಹೆಬ್ಬಾಳದ ಎಂ.ಆರ್‌. ಪಾಳ್ಯದಲ್ಲಿ ನೆಲಸಿದ್ದ ಆರೋಪಿ

ಅಲ್‌ಖೈದಾ ನಂಟು: ಮಹಿಳೆ ಸೆರೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಅಲ್‌ಖೈದಾ ಭಯೋತ್ಪಾದಕ ಸಂಘಟನೆ ಪರ ಪ್ರಚಾರ ನಡೆಸುತ್ತಿದ್ದ ಹಾಗೂ ಉಗ್ರರ ಸಂಘಟನೆ ಗಳ ಮುಖಂಡರ ಪ್ರಚೋದನಕಾರಿ ಭಾಷಣ ಗಳನ್ನು ಹಂಚಿ ಕೊಳ್ಳುತ್ತಿದ್ದ ಆರೋಪದ ಮೇಲೆ ಜಾರ್ಖಂಡ್‌ನ ಶಮಾ ಪರ್ವೀನ್ (30) ಅವರನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳದ(ಎಟಿಎಸ್) ಅಧಿಕಾರಿಗಳು ಮಂಗಳವಾರ ರಾತ್ರಿ ಬಂಧಿಸಿದ್ದಾರೆ.

ಶಮಾ ಪರ್ವೀನ್

ಆರೋಪಿಯಿಂದ ಲ್ಯಾಪ್‌ಟಾಪ್, ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆರೋಪಿಯನ್ನು ಬಂಧಿಸಿ ಗುಜರಾತ್‌ಗೆ ಕರೆದೊಯ್ಯಲಾಗಿದೆ. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ತನ್ನ ಸಹೋದರನ ಜೊತೆಗೆ ಆರ್.ಟಿ.ನಗರದ ಮನೋರಾಯನಪಾಳ್ಯದಲ್ಲಿ ಶಮಾ ಪರ್ವೀನ್ ವಾಸವಿದ್ದರು. ಜಾರ್ಖಂಡ್‌ನಿಂದ ತಲೆಮರೆಸಿಕೊಂಡು ನಗರಕ್ಕೆ ಬಂದು ನೆಲಸಿದ್ದರು ಎಂದು ಮೂಲಗಳು ತಿಳಿಸಿವೆ.

ಶಮಾ ಪರ್ವೀನ್ ಪದವೀಧರೆಯಾಗಿದ್ದು, ಎಲ್ಲೂ ಕೆಲಸಕ್ಕೆ ಹೋಗುತ್ತಿರಲಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಅಲ್‌ಖೈದಾ ಸಂಘಟನೆಯ ಸಿದ್ಧಾಂತ ಬೆಂಬಲಿಸುತ್ತಿದ್ದರು. ಅಲ್‌ಖೈದಾದ ನಾಯಕರು, ಕಾರ್ಯಕರ್ತರ ವಿಡಿಯೊ ಹಂಚಿಕೊಳ್ಳುತ್ತಿದ್ದರು. ಈ ಸಂಬಂಧ ಗುಜರಾತ್‌ನಲ್ಲಿ ಪ್ರಕರಣ ದಾಖಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಇನ್‌ಸ್ಟಾಗ್ರಾಂ ಮೂಲಕ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿದ್ದ ಅಹಮದಾಬಾದ್‌ನ ತೇವಾಡಿಯ ಶೇಖ್, ಗುಜರಾತಿನ ಸೈಫುಲ್ಲಾ ಖುರೇಷಿ, ದೆಹಲಿಯ ಮೊಹಮ್ಮದ್ ಶೇಖ್, ಉತ್ತರ ಪ್ರದೇಶದ ಜೀಶನ್ ಅಲಿಯನ್ನು ಜುಲೈ 22ರಂದು ಗುಜರಾತ್ ರಾಜ್ಯದ ಎಸ್‌ಐಟಿ ಪೊಲೀಸರು ಬಂಧಿಸಿದ್ದರು.

ಶಂಕಿತ ಉಗ್ರರ ವಿಚಾರಣೆ ವೇಳೆ ದಕ್ಷಿಣ ಭಾರತದಲ್ಲಿ ಅಲ್ ಖೈದಾ ಉಗ್ರ ಸಂಘಟನೆ ಉಸ್ತುವಾರಿ ಹಾಗೂ ಸಾಮಾಜಿಕ ಜಾಲತಾಣಗಳ ಇತರೆ ಖಾತೆಗಳ ನಿರ್ವಹಣೆ ಮಾಡುತ್ತಿದ್ದ ಶಮಾ ಪರ್ವೀನ್ ಬಗ್ಗೆ ಬಾಯಿ ಬಿಟ್ಟಿದ್ದರು. ತಕ್ಷಣ ಎಚ್ಚೆತ್ತುಕೊಂಡ ಎಟಿಎಸ್ ಅಧಿಕಾರಿಗಳು, ಬೆಂಗಳೂರು ಪೊಲೀಸರ ನೆರವಿನೊಂದಿಗೆ ಮಂಗಳವಾರ ರಾತ್ರಿ ಕಾರ್ಯಾಚರಣೆ ನಡೆಸಿ ಶಮಾ ಪರ್ವೀನ್ ಅವರನ್ನು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆರೋಪಿಯನ್ನು ನ್ಯಾಯಾಲಯದ ಎದುರು ಹಾಜರುಪಡಿಸಿ, ಟ್ರಾನ್ಸಿಟ್ ವಾರಂಟ್ ಪಡೆದ ಬಳಿಕ ಗುಜರಾತ್‌ಗೆ ಕರೆದೊಯ್ಯಲಾಗಿದೆ.

'ಹಿಂಸಾಚಾರಕ್ಕೆ ಪ್ರಚೋದನೆ'

'ಬೆಂಗಳೂರಿನಲ್ಲಿ ಬಂಧಿಸಲಾಗಿರುವ ಶಮಾ ಪರ್ವೀನ್ ಹಾಗೂ ಈಗಾಗಲೇ ಬಂಧಿಸಲಾಗಿರುವ ಆರೋಪಿಗಳು ಭಾರತದಲ್ಲಿ ಅಲ್‌ಖೈದಾ ಸಿದ್ಧಾಂತ ಬೋಧಿಸುತ್ತಿದ್ದರು. ತನ್ನ ಸಿದ್ಧಾಂತದಲ್ಲಿ ನಂಬಿಕೆ ಇಲ್ಲದವರನ್ನು ಗುರಿಯಾಗಿಸಿ ಹಿಂಸಾಚಾರ ಅಥವಾ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗುವಂತೆ ಭಾರತದ ಮುಸ್ಲಿಮರನ್ನು ಪ್ರಚೋದಿಸುತ್ತಿದ್ದರು' ಎಂದು ಗುಜರಾತ್‌ನ ಭಯೋತ್ಪಾದನಾ ನಿಗ್ರಹ ದಳದ(ಎಟಿಎಸ್) ಅಧಿಕಾರಿಗಳು ತಿಳಿಸಿದ್ದಾರೆ.

'ಸರ್ಕಾರದ ವಿರುದ್ಧ ಸಶಸ್ತ್ರ ದಂಗೆ ಏಳುವ ಮೂಲಕ ಭಾರತದ ಬಗ್ಗೆ ಅಸಮಾಧಾನ ಹೊಂದುವಂತೆ ಮಾಡಬೇಕು. ಆ ಮೂಲಕ ಇಸ್ಲಾಮಿಕ್ ಷರೀಯತ್ ಅನುಸರಿಸುವ ಸರ್ಕಾರದ ಸ್ಥಾಪನೆ ಮಾಡಬೇಕು ಎಂಬ ದುರುದ್ದೇಶದಿಂದಲೂ ಪ್ರಚೋದನೆ ನೀಡುತ್ತಿದ್ದರು' ಎಂದು ಹೇಳಿದ್ದಾರೆ.

'ಮೂಲಭೂತವಾದ ಸಿದ್ಧಾಂತ ಹಾಗೂ ಉಗ್ರ ಸಂಘಟನೆಗಳತ್ತ ಸ್ಥಳೀಯ ಯುವಕರು ಆಕರ್ಷಿಸಿ, ಅವರಲ್ಲಿ ಅಶಾಂತಿ ಮೂಡಿಸುವುದು ಹಾಗೂ ಬಂಡಾಯವೇಳುವಂತೆ ಮಾಡುವ ಕಾರ್ಯದಲ್ಲಿಯೂ ತೊಡಗಿದ್ದರು' ಎಂದು ತಿಳಿಸಿದ್ದಾರೆ. 'ಪರ್ವೀನ್ ಅವರನ್ನು ಬಂಧಿಸಿ, ಸ್ಥಳೀಯ(ಬೆಂಗಳೂರು) ಪೊಲೀಸ್ ಠಾಣೆಗೆ ಕರೆದುಕೊಂಡ ಬಂದ ವೇಳೆ, ಆಕೆಯಲ್ಲಿ ಯಾವುದೇ ಪಶ್ಚಾತ್ತಾಪ ಕಂಡುಬರಲಿಲ್ಲ. ಆ ಮಟ್ಟಿಗೆ ಆಕೆ ಮೂಲಭೂತವಾದಿಯಾಗಿದ್ದರು. ತನ್ನ ಬಂಧನ ಕೂಡ ಜಿಹಾದ್‌ನ ಭಾಗವೇ ಆಗಿದೆ. ಇದಕ್ಕೆ ತಾನು ಸಿದ್ಧ ಎಂಬುದಾಗಿ ಹೇಳಿದ್ದಳು' ಎಂದೂ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ನಿಗಮ– ಮಂಡಳಿ: 3–4 ದಿನದಲ್ಲಿ ಪಟ್ಟಿ'

ಬೆಂಗಳೂರು: 'ನಿಗಮ- ಮಂಡಳಿಗಳಿಗೆ ನೇಮಕಗೊಂಡವರ ಪಟ್ಟಿಯನ್ನು 3-4 ದಿನದಲ್ಲಿ ಬಿಡುಗಡೆ ಮಾಡಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಆಗಸ್ಟ್ 5ರ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, 'ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ ಇಬ್ಬರಂತೆ ಸುಮಾರು 700 ಜನರಿಗೆ ಸ್ಥಾನಮಾನ ನೀಡಲು ತೀರ್ಮಾನಿಸಲಾಗಿದೆ. 30 ಜನರಿಗೆ ಕೆಲವರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ, ಕೆಲವರಿಗೆ ಉಪಾಧ್ಯಕ್ಷ ಹುದ್ದೆ ನೀಡಲಾಗುತ್ತಿದೆ. ಪಕ್ಷದ ಹೈಕಮಾಂಡ್ ಪಟ್ಟಿಯನ್ನು ಅಂತಿಮಗೊಳಿಸಲಿದೆ' ಎಂದರು.

ಮತ, ಹಕ್ಕು ರಕ್ಷಣೆಗೆ ಸಿದ್ಧರಾಗಿ: 'ರಾಜ್ಯದಲ್ಲಿ ನಡೆದ ಚುನಾವಣಾ ಅಕ್ರಮ, ಚುನಾವಣಾ ಆಯೋಗದಿಂದ ಆಗಿರುವ ಅನ್ಯಾಯದ ವಿರುದ್ಧ ರಾಹುಲ್ ಗಾಂಧಿ ನೇತೃತ್ವದಲ್ಲಿ ಆಗಸ್ಟ್ 5ರಂದು ಪ್ರತಿಭಟನೆ ನಡೆಯಲಿದ್ದು, ಪಕ್ಷದ ಕಾರ್ಯಕರ್ತರು, ಮುಖಂಡರು ತಮ್ಮ ಮತ, ಹಕ್ಕು ರಕ್ಷಣೆ ಮಾಡಿಕೊಳ್ಳಲು ಸಿದ್ಧರಾಗಬೇಕು' ಎಂದರು.

'ವಿಧಾನಸಭೆ ಚುನಾವಣೆ ನಂತರ ಮಹದೇವಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಚುನಾವಣಾ ಅಕ್ರಮದ ಕುರಿತು ಮಾಹಿತಿ ನನಗೆ ನೀಡಿದ್ದರು. ಲೋಕಸಭೆ ಚುನಾವಣೆಯಲ್ಲಿ ಅಕ್ರಮ ನಡೆದ ಬಗ್ಗೆ ನಮ್ಮ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಅವರು ಪರಿಶೀಲನೆ ಮುಂದುವರಿಸಿದ್ದಾರೆ. ಪಕ್ಷದ ವತಿಯಿಂದ ಅಧ್ಯಯನ ಮಾಡಿ ದೆಹಲಿಗೆ ಮಾಹಿತಿ ತಲುಪಿಸಿದ್ದೇವೆ. ಈ ವಿಚಾರ ಯಾರ ಬಾಯಿಂದ ಬರಬೇಕೊ ಅವರಿಂದಲೇ ಬರಬೇಕು' ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಮಾದರಿ

ಬರಗೂರು ರಾಮಚಂದ್ರಪ್ಪ ಸೇರಿ ಹಲವರ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರೀಯ ಶಾಲಾ ಪರೀಕ್ಷೆಗಳ ಮಾದರಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಸುವ ಶಾಲಾ ಶಿಕ್ಷಣ ಇಲಾಖೆ ನಿರ್ಧಾರಕ್ಕೆ ಸಾಹಿತಿ ಬರಗೂರು ರಾಮಚಂದ್ರಪ್ಪ ಸೇರಿ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ.

ಆಂತರಿಕ ಮೌಲ್ಯಮಾಪನದ ಅಂಕಗಳೂ ಸೇರಿ ಪ್ರತಿ ವಿಷಯದಲ್ಲಿ 33 ಅಂಕ ಗಳಿಸಿದರೆ ತೇರ್ಗಡೆ ಮಾಡುವ ಕ್ರಮ ಶಿಕ್ಷಣದ ಗುಣಮಟ್ಟಕ್ಕೆ ಮಾರಕವಾಗುತ್ತದೆ. ಆಂತರಿಕ ಮೌಲ್ಯಮಾಪನದಲ್ಲಿ ವಿದ್ಯಾರ್ಥಿಗೆ ಒಂದು ವಿಷಯದಲ್ಲಿ 20ಕ್ಕೆ 20 ಅಂಕ ನೀಡಿದರೆ ಆ ವಿದ್ಯಾರ್ಥಿ ಮುಖ್ಯ ಪರೀಕ್ಷೆಯಲ್ಲಿ ಕೇವಲ 13 ಅಂಕ ಪಡೆದರೂ ಸಾಕು. ಇದು ಅವೈಜ್ಞಾನಿಕ ಕ್ರಮ ಎಂದು ದೂರಿದ್ದಾರೆ.

ರಾಜ್ಯವು ಹೊಸ ಶಿಕ್ಷಣ ನೀತಿಯನ್ನು (ಎನ್‌ಇಪಿ) ತಿರಸ್ಕರಿಸಿ, ರಾಜ್ಯ ಶಿಕ್ಷಣ ನೀತಿಗೆ (ಎಸ್‌ಇಪಿ) ಆಯೋಗವನ್ನು ರಚಿಸಲಾಗಿದೆ. ಈಗ ಕೇಂದ್ರೀಯ ಶಾಲಾ ಪರೀಕ್ಷಾ ಮಾದರಿ ಅನುಸರಿಸುವುದು ಒಂದು ತಾತ್ವಿಕ ವಿಪರ್ಯಾಸ.

ಎನ್‌ಸಿಇಆರ್‌ಟಿ ಮಾದರಿಯಲ್ಲೇ ಪಠ್ಯಪುಸ್ತಕಗಳು ಇರಬೇಕು ಎನ್ನುವುದೂ ಸಾಕಾರಗೊಳ್ಳುವುದಾದರೆ ಎನ್‌ಇಪಿ ತಿರಸ್ಕರಿಸುವ ಅಗತ್ಯವೇ ಇರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪಠ್ಯಾಧಾರಿತ ಮೌಲ್ಯಮಾಪನ ಎಂಬ ಹೊಸ ಪ್ರಯೋಗವನ್ನು ಈಚೆಗೆ ಅನುಷ್ಠಾನಗೊಳಿಸುತ್ತಿದ್ದು, ಶಿಕ್ಷಕರು ವರ್ಷವಿಡೀ ಕಿರುಪರೀಕ್ಷೆಗಳನ್ನು ನಡೆಸುವ ಪ್ರಾಯೋಗಿಕವಲ್ಲದ ಪದ್ಧತಿಯಿಂದಾಗಿ ವಿದ್ಯಾರ್ಥಿಗಳು 25ಕ್ಕೂ ಹೆಚ್ಚು ಕಿರು ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. 'ಇಂತಹ ಪ್ರಯೋಗಗಳಿಂದ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆ, ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಒತ್ತಡ ಹೆಚ್ಚಾಗುತ್ತದೆ ಎಂದಿದ್ದಾರೆ.

ವೈಜ್ಞಾನಿಕವಾದ ಪ್ರಯೋಗಗಳಿಗೆ ಮುಂದಾಗುವ ಬದಲು, ಕೂಡಲೇ ರಾಜ್ಯ ಶಿಕ್ಷಣ ನೀತಿಯ ವರದಿ ಪಡೆದು ಚರ್ಚೆ–ಚಿಂತನೆ ನಡೆಸಬೇಕು. ನಿರ್ದಿಷ್ಟ ನಿರ್ಧಾರಕ್ಕೆ ಬರುವವರೆಗೆ ಹೊಸ ಪ್ರಯೋಗಗಳಿಗೆ ಮುಂದಾಗಬಾರದು ಎಂದು ಅವರು ಸಲಹೆ ನೀಡಿದ್ದಾರೆ.

ಚಿಟಿಕೆ ಸುದ್ದಿ

ಶಾ. ಬಾಲುರಾವ್ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನವು 'ಶಾ. ಬಾಲುರಾವ್ ಯುವ ಬರಹಗಾರ ಪ್ರಶಸ್ತಿ' ಮತ್ತು 'ಶಾ. ಬಾಲುರಾವ್ ಅನುವಾದ ಪ್ರಶಸ್ತಿ'ಗೆ ಕೃತಿಗಳನ್ನು ಆಹ್ವಾನಿಸಿದೆ.

ಯುವ ಬರಹಗಾರ ಪ್ರಶಸ್ತಿಗೆ 35 ವರ್ಷದೊಳಗಿನವರು 2024ರಲ್ಲಿ ಮೊದಲ ಮುದ್ರಣವಾಗಿ ಪ್ರಕಟವಾಗಿರುವ ಸಾಹಿತ್ಯದ ಯಾವುದೇ ಪ್ರಕಾರದ ಕೃತಿಗಳನ್ನು ಸಲ್ಲಿಸಬಹುದು. ಅನುವಾದ ಪ್ರಶಸ್ತಿಗೆ 2024ರಲ್ಲಿ ಮೊದಲ ಮುದ್ರಣವಾಗಿ ಪ್ರಕಟಗೊಂಡ, ಅನ್ಯ ಭಾಷೆಯಿಂದ ಕನ್ನಡಕ್ಕೆ ಅನುವಾದವಾಗಿರುವ ಕೃತಿಗಳನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿಗಳು ತಲಾ ₹ 25 ಸಾವಿರ ನಗದು ಬಹುಮಾನವನ್ನು ಒಳಗೊಂಡಿವೆ.

ಲೇಖಕರು ಸ್ವವಿವರದ ಜತೆಗೆ ಪ್ರಕಟಗೊಂಡ ಕೃತಿಯ ಮೂರು ಪ್ರತಿಗಳನ್ನು ಗೌರವ ಕಾರ್ಯದರ್ಶಿ, ಬಿ.ಎಂ.ಶ್ರೀ. ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೊನಿ, ಬೆಂಗಳೂರು–560019 ಈ ವಿಳಾಸಕ್ಕೆ ಆಗಸ್ಟ್ 30ರೊಳಗೆ ಕಳುಹಿಸಬೇಕು ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಶಾಂತರಾಜು ತಿಳಿಸಿದ್ದಾರೆ.

ಪುಸ್ತಕ: ಶೇ 50ರಷ್ಟು ರಿಯಾಯಿತಿ

ಬೆಂಗಳೂರು: ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ ಕನ್ನಡ ಪುಸ್ತಕ ಪ್ರಾಧಿಕಾರವು ತನ್ನ ಪ್ರಕಟಣೆಯ ಪುಸ್ತಕಗಳಿಗೆ ಆಗಸ್ಟ್ ತಿಂಗಳ ಪೂರ್ತಿ ಶೇ 50ರಷ್ಟು ರಿಯಾಯಿತಿ ಘೋಷಿಸಿದೆ.

ಬೆಂಗಳೂರಿನ ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಎಲ್ಲ ಜಿಲ್ಲೆಗಳ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಪ್ರಾಧಿಕಾರದಿಂದ ತೆರೆಯಲಾದ ಎಲ್ಲ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ ಈ ರಿಯಾಯಿತಿ ಇರಲಿದೆ ಎಂದು ಪ್ರಾಧಿಕಾರದ ಆಡಳಿತಾಧಿಕಾರಿ ಕೆ.ಬಿ. ಕಿರಣ್ ಸಿಂಗ್ ತಿಳಿಸಿದ್ದಾರೆ.

‘ಯೂರಿಯಾ: ಕೇಂದ್ರದಿಂದಲೇ ಸಮಸ್ಯೆ’

ರೈತರ ವಿಚಾರದಲ್ಲಿ ರಾಜಕೀಯ ಮಾಡಿದರೆ ಸುಮ್ಮನಿರಲ್ಲ– ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ಬೇಡಿಕೆಯಷ್ಟು ರಸಗೊಬ್ಬರ ಪೂರೈಸದ ಕಾರಣ ರಾಜ್ಯದಲ್ಲಿ ಯೂರಿಯಾ ಸಮಸ್ಯೆ ಸೃಷ್ಟಿಯಾಗಿದೆ. ಆದರೆ, ಬಿಜೆಪಿ ನಾಯಕರು ರಾಜಕೀಯ ಆಟವಾಡುತ್ತಿದ್ದಾರೆ. ರೈತರ ವಿಚಾರದಲ್ಲಿ ರಾಜಕೀಯ ಮಾಡಿದರೆ ಸುಮ್ಮನಿರಲ್ಲ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಬಿಜೆಪಿ ನಾಯಕರಾದ ಆರ್. ಅಶೋಕ, ಬಿ.ವೈ. ವಿಜಯೇಂದ್ರ ಮುಂತಾದವರು ರಸಗೊಬ್ಬರ ಕೊರತೆಗೆ ರಾಜ್ಯ ಸರ್ಕಾರವೇ ಕಾರಣ ಎಂದು ಆರೋಪಿಸುತ್ತಿದ್ದಾರೆ. ಅವರು ವಾಸ್ತವ ವಿಚಾರ ಅರಿತು ಮಾತನಾಡಬೇಕು’ ಎಂದರು.

‘ರಾಜ್ಯಕ್ಕೆ ಕೇಂದ್ರ ಸರ್ಕಾರ ನಿಗದಿತ ಪ್ರಮಾಣದಲ್ಲಿ ಯೂರಿಯಾ ಪೂರೈಕೆ ಮಾಡಿಲ್ಲ. ಜುಲೈ ತಿಂಗಳ ಅಂತ್ಯಕ್ಕೆ 1.36 ಲಕ್ಷ ಟನ್ ಯೂರಿಯಾ ಕೊರತೆಯಾಗಿದೆ. ಮುಂಗಾರು ಬೇಗ ಆರಂಭವಾಗಿ ಉತ್ತಮ ಮಳೆಯಾದ ಕಾರಣ ಹೆಚ್ಚುವರಿಯಾಗಿ 2 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದೆ. ಇದರಿಂದ ಯೂರಿಯಾ ಬೇಡಿಕೆ ಹಠಾತ್ ಏರಿಕೆಯಾಗಿದೆ. ಅದಕ್ಕೆ ತಕ್ಕಂತೆ ಕೇಂದ್ರ ಸರ್ಕಾರ ಯೂರಿಯಾ ಸರಬರಾಜು ಮಾಡಿಲ್ಲ’ ಎಂದರು.

‘ಶ್ರೀಲಂಕಾ ಮತ್ತು ಬಾಂಗ್ಲಾದೇಶಕ್ಕೆ ರಸಗೊಬ್ಬರ ರಫ್ತಾಗುತ್ತಿದೆ’ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ಗೊತ್ತಿಲ್ಲದೇ ಆರೋಪ ಮಾಡುವ ಬದಲು ವಾಸ್ತವ ಅರಿತುಕೊಂಡು ಮಾತಾಡಬೇಕು. ಬಾಂಗ್ಲಾ ಹಾಗೂ ಶ್ರೀಲಂಕಾ ಗಡಿ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದೆ. ಹೀಗಾದರೆ, ಕೇಂದ್ರ ಸರ್ಕಾರದ ಭದ್ರತಾ ವೈಫಲ್ಯವನ್ನು ಬಿಜೆಪಿ ನಾಯಕರು ಪ್ರಶ್ನೆ ಮಾಡುತ್ತಿದ್ದಾರೆಯೇ?’ ಎಂದು ವ್ಯಂಗ್ಯವಾಗಿ ಕೇಳಿದರು.



ಚಲುವರಾಯ ಸ್ವಾಮಿ

ಇತರೆ ರಾಜ್ಯಗಳಲ್ಲೂ ಸಮಸ್ಯೆ: ‘ತೆಲಂಗಾಣ, ಕೇರಳ, ತಮಿಳುನಾಡು ರಾಜ್ಯಗಳಿಗೂ ರಸಗೊಬ್ಬರ ಸಮರ್ಪಕವಾಗಿ ಪೂರೈಕೆ ಆಗಿಲ್ಲ ಎಂಬ ಮಾಹಿತಿಯಿದೆ. ನಮ್ಮಲ್ಲಿ ರಸಗೊಬ್ಬರ ಕೊರತೆಯಾದಾಗ ಬೇರೆ ರಾಜ್ಯಗಳಿಂದ ತರಿಸಿಕೊಳ್ಳಲು ನಿಯಮದಲ್ಲಿ ಅವಕಾಶವಿಲ್ಲ’ ಎಂದು ಸಚಿವರು ಸ್ಪಷ್ಟಪಡಿಸಿದರು.

‘ಕೇಂದ್ರ ರಸಗೊಬ್ಬರ ಸಚಿವ ಜೆ.ಪಿ. ನಡ್ಡಾ ಮತ್ತು ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಭೇಟಿ ಮಾಡಲು ನಿರ್ಧರಿಸಿದ್ದು, ಸಮಯಾವಕಾಶ ಕೋರಿ ಪತ್ರ ಬರೆಯಲಾಗಿದೆ’ ಎಂದೂ ಅವರು ಹೇಳಿದರು.

ನ್ಯಾನೊ ಯೂರಿಯಾ ಬಳಕೆಗೆ ಕ್ರಮ: ‘ನ್ಯಾನೊ ಯೂರಿಯಾ ಬಳಕೆ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಹೀಗಾಗಿ ಪ್ರಸಕ್ತ ಸಾಲಿನಲ್ಲಿ 38 ಸಾವಿರ ಟನ್ ಡಿಎಪಿ ಬಳಕೆ ಕಡಿಮೆಯಾಗಿದೆ. ಒಮ್ಮೆಲೇ ನ್ಯಾನೊ ಯೂರಿಯಾ ಬಳಕೆ ಮಾಡುವಂತೆ ಒತ್ತಡ ಹೇರಲು ಸಾಧ್ಯವಿಲ್ಲ’ ಎಂದೂ ತಿಳಿಸಿದರು.

ರಾಜ್ಯದಲ್ಲಿ ಸ್ಥಿತಿಗತಿ

- ಕೇಂದ್ರದಿಂದ ಏಪ್ರಿಲ್‌ನಿಂದ ಜುಲೈವರೆಗೆ 6.82 ಲಕ್ಷ ಟನ್ ಹಂಚಿಕೆ
- ಏಪ್ರಿಲ್‌ನಿಂದ ಈವರೆಗೆ 5.46 ಲಕ್ಷ ಟನ್ ಸರಬರಾಜು
- ಸದ್ಯ ದಾಸ್ತಾನು 1.26 ಲಕ್ಷ ಟನ್
- ಕೇಂದ್ರದಿಂದ ಸರಬರಾಜು ಬಾಕಿ 1.36 ಲಕ್ಷ ಟನ್

ಲೋಕಸಭೆಯಲ್ಲಿ ಪ್ರತಿಧ್ವನಿ

ನವದೆಹಲಿ: ಕರ್ನಾಟಕದಲ್ಲಿ ಕಾಳಸಂತೆಯಲ್ಲಿ ದುಪ್ಪಟ್ಟು ಬೆಲೆಗೆ ರಸಗೊಬ್ಬರ ಮಾರಾಟ ಮಾಡಲಾಗುತ್ತಿದೆ ಎಂದು ಚಿಕ್ಕಬಳ್ಳಾಪುರ ಸಂಸದ ಡಾ.ಕೆ. ಸುಧಾಕರ್ ಆರೋಪಿಸಿದರು.

ಲೋಕಸಭೆಯಲ್ಲಿ ಬುಧವಾರ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ‘ಮುಂಗಾರು ಅವಧಿ ಕೃಷಿಗೆ ನಿರ್ಣಾಯಕ. ಈ ಸಮಯದಲ್ಲಿ ಭತ್ತ, ಜೋಳ, ದ್ವಿದಳಧಾನ್ಯ, ಸೋಯಾಬಿನ್ ಸೇರಿದಂತೆ ವಿವಿಧ ಬೆಳೆಗಳನ್ನು ರೈತರು ಬೆಳೆಯುತ್ತಾರೆ. ದುರದೃಷ್ಟವಶಾತ್ ಜಾಗತಿಕ ಮಟ್ಟದಲ್ಲಿ ಯುದ್ಧದ ವಾತಾವರಣದ ನಡುವೆಯೂ ನಡುವೆಯೂ ಕೇಂದ್ರದ ಬಿಜೆಪಿ ಸರ್ಕಾರವು ಈ ಹಂಗಾಮಿನಲ್ಲಿ 8.13 ಲಕ್ಷ ಟನ್ ಯೂರಿಯಾವನ್ನು ರಾಜ್ಯಕ್ಕೆ ಕಳುಹಿಸಿದೆ. ಭ್ರಷ್ಟಾಚಾರ ಹಾಗೂ ದುರಾಡಳಿತದಲ್ಲಿ ತೊಡಗಿರುವ ಕಾಂಗ್ರೆಸ್ ಸರ್ಕಾರದ ಅಸಮರ್ಪಕ ಆಡಳಿತದಿಂದ ರೈತರಿಗೆ ಭಾರಿ ತೊಂದರೆ ಆಗಿದೆ’ ಎಂದು ಗಮನ ಸೆಳೆದರು.

‘ರಾಜ್ಯದಲ್ಲಿ ದಾಸ್ತಾನು ಇದ್ದರೂ ಯೂರಿಯಾ ಹಾಗೂ ಡಿಎಪಿ ಹಂಚಿಕೆ ಮಾಡಿಲ್ಲ. ಈ ಮೂಲಕ ರೈತರಿಗೆ ಅನ್ಯಾಯ ಮಾಡಿದೆ. ರಾಜ್ಯದಲ್ಲಿ ₹258ದಲ್ಲಿ ಕ್ವಿಂಟಲ್ ಯೂರಿಯಾ ಸಿಗಬೇಕಿತ್ತು. ಆದರೆ, ಅದನ್ನು ₹500ಕ್ಕೆ ಮಾರಾಟ ಮಾಡಲಾಗುತ್ತಿದೆ. ಡಿಎಪಿಯನ್ನು ಕ್ವಿಂಟಲ್‌ಗೆ ₹1200 ಬದಲು ₹2000ಕ್ಕೆ ಮಾರಲಾಗುತ್ತಿದೆ. ಕೇಂದ್ರ ಸರ್ಕಾರವು ಮಧ್ಯ ಪ್ರವೇಶ ಮಾಡಿ ಸಮರ್ಪಕ ರಸಗೊಬ್ಬರ ಪೂರೈಕೆಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಸೂಚನೆ ಕೊಡಬೇಕು’ ಎಂದು ಅವರು ಆಗ್ರಹಿಸಿದರು.

ತೆಂಗಿಗೆ ರೋಗ ಬಾಧೆ: ಹಾಸನ ಜಿಲ್ಲೆಯಲ್ಲಿ ರೋಗಬಾಧೆಯಿಂದ ಮೆಕ್ಕೆಜೋಳ ಹಾಗೂ ತೆಂಗಿನ ಕೃಷಿಗೆ ಅಪಾರ ಪ್ರಮಾಣದ ಹಾನಿ ಆಗಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಗಮನ ಸೆಳೆದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ‘ಬಿಳಿ ಸುಳಿ ರೋಗದಿಂದ ಫಂಗಲ್ ಕಾಯಿಲೆಯಿಂದ ಮೆಕ್ಕೆಜೋಳಕ್ಕೆ ಭಾರಿ ಹಾನಿ ಆಗಿದೆ. 45 ಸಾವಿರ ಹೆಕ್ಟೇರ್ ಪೈಕಿ 12 ಸಾವಿರ ಹೆಕ್ಟೇರ್ ಕೃಷಿ ಈಗಾಗಲೇ ಹಾನಿಗೀಡಾಗಿದೆ. ಕೃಷಿಕರಿಗೆ ಪರಿಹಾರ ನೀಡಬೇಕು ಎಂದು ಐಸಿಎಆರ್ ತಜ್ಞರ ತಂಡ ಶಿಫಾರಸು ಮಾಡಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಅರಸಿಕೆರೆ ಹಾಗೂ ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲೇ 1.18 ಲಕ್ಷ ಹೆಕ್ಟೇರ್ ತೆಂಗು ಬೆಳೆ ರೋಗಪೀಡಿತವಾಗಿದೆ. ಹೀಗಾಗಿ, ತೆಂಗು ಅಭಿವೃದ್ಧಿ ಮಂಡಳಿಗೆ ವಿಶೇಷ ಪ್ಯಾಕೇಜ್ ಘೋಷಿಸಿ ರೈತರಿಗೆ ನೆರವಾಗಬೇಕು ಎಂದು ಅವರು ಒತ್ತಾಯಿಸಿದರು.

ನರೇಗಾ ಬಾಕಿ ಬಿಡುಗಡೆಗೆ ಒತ್ತಾಯ: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯಕ್ಕೆ ₹374 ಕೋಟಿ ಬಿಡುಗಡೆಗೆ ಬಾಕಿ ಇದೆ. ಈ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಬಳ್ಳಾರಿ ಸಂಸದ ಇ.ತುಕಾರಾಮ್ ಮನವಿ ಮಾಡಿದರು. ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು, ‘ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ವಿವಿಧ ರಾಜ್ಯಗಳಿಗೆ ₹14,603 ಕೋಟಿ ಬಿಡುಗಡೆ ಮಾಡಬೇಕಿದೆ. ಇದರಲ್ಲಿ ಕೂಲಿ ಹಾಗೂ ಸಾಮಗ್ರಿಗಳ ಮೊತ್ತ ಸೇರಿದೆ. ಬಾಕಿ ಬಿಡುಗಡೆ ಮಾಡದಿರುವುದರಿಂದ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ತೊಂದರೆ ಆಗಿದೆ’ ಎಂದರು.

‘ಹೆಚ್ಚುವರಿ ₹600 ಕೋಟಿ ನೀಡಲು ಸಿದ್ಧ’

‘ರಸಗೊಬ್ಬರ ಪೂರೈಕೆಗೆ ಮೀಸಲಿಟ್ಟ ಅನುದಾನ ಕಡಿತಗೊಳಿಸಲಾಗಿದೆ ಎಂದೂ ಬಿಜೆಪಿಯವರು ಆರೋಪಿಸುತ್ತಿದ್ದಾರೆ. ಆದರೆ, ಈ ಹಿಂದೆ ಬಿಜೆಪಿ ಸರ್ಕಾರ ನಿಗದಿ ಮಾಡಿದ್ದ ₹400 ಕೋಟಿಯನ್ನು ನಾವು ಯಥಾಸ್ಥಿತಿ ಮುಂದುವರಿಸಿದ್ದೇವೆ. ಇನ್ನೂ ₹600 ಕೋಟಿ ಹೆಚ್ಚುವರಿ ನೀಡಲು ಸರ್ಕಾರ ಸಿದ್ಧವಿದೆ. ದಾವಣಗೆರೆ, ಗದಗ, ಕೊಪ್ಪಳ, ಧಾರವಾಡ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಯೂರಿಯಾ ಕೊರತೆಯಾಗಿದೆ. ಕೇಂದ್ರ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ, ಪರ್ಯಾಯ ಕ್ರಮಕ್ಕೆ ಚಿಂತನೆ ನಡೆಸಬೇಕಿದೆ’ ಎಂದು ಚಲುವರಾಯಸ್ವಾಮಿ ಹೇಳಿದರು.

ಚಟಾಕಿ ಸುದ್ದಿ

ನಾಲ್ವರು ಸಮುದ್ರಪಾಲು



ಅಳ್ವೆಕೋಡಿ ಬಳಿ ಪತ್ತೆಯಾದ ಮೀನುಗಾರಿಕೆ ದೋಣಿ

ಭಟ್ಕಳ (ಉತ್ತರ ಕನ್ನಡ): ಸಾಂಪ್ರದಾಯಿಕ ದೋಣಿಯಲ್ಲಿ ಜಾಲಿ ಕಡಲತೀರದಿಂದ ಮೀನುಗಾರಿಕೆಗೆ ತೆರಳಿದ್ದ ಆರು ಜನರ ಪೈಕಿ ನಾಲ್ವರು ಬುಧವಾರ ನೀರುಪಾಲಾಗಿದ್ದಾರೆ. ಅಳ್ವೆಕೋಡಿ ಬಳಿ ಅಲೆಗಳ ರಭಸಕ್ಕೆ ದೋಣಿ ಮಗುಚಿದ್ದು, ಅದು ದಡದ ಬಳಿ ಪತ್ತೆಯಾಗಿದೆ.

ಜಾಲಿಕೋಡಿಯ ರಾಮಕೃಷ್ಣ ಮೊಗೇರ (40), ಅಳ್ವೆಕೋಡಿಯ ಸತೀಶ ಮೊಗೇರ (26), ಗಣೇಶ ಮೊಗೇರ (27), ನಿಶ್ಚಿತ ಮೊಗೇರ (30) ನೀರುಪಾಲಾದವರು. ಮನೋಹರ ಮೊಗೇರ ಮತ್ತು ರಾಮ ಖಾರ್ವಿ ಎಂಬುವರು ಈಜಿ ದಡ ಸೇರಿದ್ದಾರೆ. ನಾಪತ್ತೆಯಾದವರಿಗೆ ಹುಡುಕಾಟ ಮುಂದುವರೆದಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನಗರಸಭೆ: ನಾಲ್ವರ ಸದಸ್ಯತ್ವ ರದ್ದು

ಮೈಸೂರು: ನಂಜನಗೂಡು ನಗರಸಭೆಯಲ್ಲಿ ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಿದ್ದ ನಾಲ್ವರು ಬಿಜೆಪಿ ಸದಸ್ಯರ ಸದಸ್ಯತ್ವವನ್ನು ಜಿಲ್ಲಾ ದಂಡಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ರದ್ದುಗೊಳಿಸಿ ಆದೇಶಿಸಿದ್ದಾರೆ.

ನಗರಸಭೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಬಹುಮತ ಹೊಂದಿತ್ತು. ಆದರೆ,ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಶ್ರೀಕಂಠಸ್ವಾಮಿ ಗೆಲುವು ಸಾಧಿಸಿದ್ದರು. ಬಿಜೆಪಿಯ ಸದಸ್ಯರಾದ ಗಿರೀಶ್ ಕುಮಾರ್, ಗಾಯತ್ರಿ ಮುರುಗೇಶ್, ಮೀನಾಕ್ಷಿ ನಾಗರಾಜ್ ಹಾಗೂ ವಿಜಯಲಕ್ಷ್ಮಿ ಕುಮಾರ್ ಅವರು ಪಕ್ಷದ ‘ವಿಪ್’ ಉಲ್ಲಂಘಿಸಿ, ಗೈರು ಹಾಜರಾಗಿದ್ದರು. ಇದು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಕಾರಣವಾಗಿತ್ತು.

ಬಿಜೆಪಿ ನಂಜನಗೂಡು ನಗರ ಘಟಕದ ಅಧ್ಯಕ್ಷ ಸಿದ್ದರಾಜು, ಸದಸ್ಯ ದೇವ ಅವರು 2024ರ ಅ.29ರಂದು ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ್ದರು.

ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ತನ್ನ ಪ್ರಕಟಣೆಯ ಮೇಲೆ ಶೇ 50 ರಷ್ಟು ರಿಯಾಯಿತಿ ಘೋಷಿಸಿದೆ.


ಆಗಸ್ಟ್ ತಿಂಗಳು ರಿಯಾಯಿತಿ ದರದಲ್ಲಿ ಪುಸ್ತಕಗಳು ಲಭ್ಯವಾಗಲಿವೆ. ಕನ್ನಡ ಭವನದ ಸಿರಿಗನ್ನಡ ಪುಸ್ತಕ ಮಳಿಗೆ, ಕಲಾಗ್ರಾಮದಲ್ಲಿರುವ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಿ ಖರೀದಿಸಬಹುದಾಗಿದೆ.

ದೂರವಾಣಿ ಸಂಖ್ಯೆ 080 22113147, 7338640080ಗೆ ಕರೆ ಮಾಡಿ, ಅಂಚೆ ಮೂಲಕವೂ ಪುಸ್ತಕ ಖರೀದಿಸಬಹುದು. ಗೂಗಲ್ ಪೇ, ಫೋನ್ ಪೇ ಮೂಲಕವೂ ಹಣ ಕಳುಹಿಸಬಹುದು ಎಂದು ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

‘ಖಾಸಗಿ ಆಂಬುಲೆನ್ಸ್: ಸೇವಾ ದರ ನಿಗದಿಗೆ ಕಾನೂನು’

ಕಾರವಾರ: ‘ಖಾಸಗಿ ಆಂಬುಲೆನ್ಸ್‌ಗಳ ಸೇವೆಯನ್ನು ಮೊಬೈಲ್ ಆ್ಯಪ್ ಮೂಲಕ ಪಡೆಯಲು ಮತ್ತು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ (ಕೆಪಿಎಂಇ) ಕಾಯ್ದೆಯಂತೆ ಅವುಗಳ ಸೇವೆಗೆ ನಿರ್ದಿಷ್ಟ ದರ ನಿಗದಿಪಡಿಸಲು ಕಾಯ್ದೆ ರೂಪಿಸಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಇಲ್ಲಿ ಹೇಳಿದರು.



‘ಅಧಿವೇಶನದಲ್ಲಿ ಈ ಕುರಿತು ಮಸೂದೆ ಮಂಡಿಸಲಾಗುವುದು. ‘ಖಾಸಗಿ ಆಂಬುಲೆನ್ಸ್‌ಗಳು ಅಧಿಕ ದರ ವಿಧಿಸದಂತೆ ನಿಯಂತ್ರಿಸಲಾಗುವುದು. ಆಂಬುಲೆನ್ಸ್, ಸಂಚಾರಿ ಆರೋಗ್ಯ ಘಟಕಗಳು ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗುವುದು’ ಎಂದು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಗೋವಾ: ಕನ್ನಡ ಭವನ ನಿರ್ಮಾಣಕ್ಕೆ ಭೂಮಿ ಖರೀದಿ

ಕಾರವಾರ: ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಗಡಿ ಅಭಿವೃದ್ಧಿ ಪ್ರಾಧಿಕಾರವು ನಿವೇಶನ ಖರೀದಿಸಿದೆ. ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರದ ಅವರು ಬುಧವಾರ ನಿವೇಶನದಲ್ಲಿ ಪೂಜೆ ಸಲ್ಲಿಸಿ, ಫಲಕ ಅಳವಡಿಸಿದರು.

‘ಮರ್ಮುಗೋವಾ ತಾಲ್ಲೂಕಿನ ಕಾರ್ಟೋಲಿಮ್ ಗ್ರಾಮದ ಸರ್ವೆ ನಂ.113/9ರ 11,572 ಚದರ ಅಡಿ ಜಾಗ ಖರೀದಿಸಲಾಗಿದೆ. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಿವೇಶನ ಖರೀದಿಗೆ ಅನುದಾನ ಒದಗಿಸಿದ್ದರು’ ಎಂದು ಸೋಮಣ್ಣ ತಿಳಿಸಿದರು.

‘ಗೋವಾ ರಾಜ್ಯದಲ್ಲಿ 6 ಲಕ್ಷ ಕನ್ನಡ ಭಾಷಿಕರಿದ್ದು, 2021ರಿಂದ ಕನ್ನಡ ಭವನ ನಿರ್ಮಾಣಕ್ಕಾಗಿ ಜಾಗ ಖರೀದಿಗೆ ಪ್ರಯತ್ನ ನಡೆದಿತ್ತು. ಆದರೆ, ಗೋವಾ ಸರ್ಕಾರ ಸ್ಪಂದಿಸಿರಲಿಲ್ಲ. ಈಗ ವಿಶಾಲ ಭವನ ನಿರ್ಮಿಸಲಿದ್ದು, ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

ಪ್ರಾಧಿಕಾರದ ಕಾರ್ಯದರ್ಶಿ ಪ್ರಕಾಶ ಮತ್ತೀಹಳ್ಳಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೋವಾ ಗಡಿನಾಡು ಘಟಕದ ಅಧ್ಯಕ್ಷ ಸಿದ್ದಣ್ಣ ಮೇಟಿ, ಹನುಮಂತ ರೆಡ್ಡಿ ಶಿರೂರು ಇದ್ದರು.

ಐವರ ವಿರುದ್ಧ ಪ್ರಕರಣ; ಎಫ್‌ಐಆರ್ ದಾಖಲು ವಿಳಂಬ, ಆಕ್ರೋಶ

ಶೌಚ ಗುಂಡಿ ಸ್ವಚ್ಛತೆಗೆ ಕಾರ್ಮಿಕರ ಬಳಕೆ

ಪ್ರಜಾವಾಣಿ ವಾರ್ತೆ

ಮಾಗಡಿ (ರಾಮನಗರ): ತಾಲ್ಲೂಕಿನ ಬೀಚನಹಳ್ಳಿ ಗ್ರಾಮ ಪಂಚಾಯಿತಿಯ ಮೂವರು ಪೌರ ಕಾರ್ಮಿಕರನ್ನು ಮನೆಯೊಂದರ ಮಲದ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಿದ ಘಟನೆ ನಡೆದಿದೆ.

ಕಳೆದ ವಾರ ಈ ಘಟನೆ ನಡೆದಿದೆ. ಆದರೆ ಒತ್ತಡ ಹೆಚ್ಚಾದ ಬಳಿಕವಷ್ಟೇ ಪೊಲೀಸರು ಬುಧವಾರ ಸಂಜೆ ಐವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಘಟನೆ ಕುರಿತು ಸಮಗ್ರ ವರದಿ ನೀಡಲು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗವು ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತಿ ಸಿಇಒ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಸೂಚಿಸಿದೆ.

ಘಟನೆ ಗೊತ್ತಾದುದು ಹೇಗೆ?: ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ನೇಮಕಾತಿ ನಿಷೇಧ ಮತ್ತು ಅವರ ಪುನರ್ವಸತಿ ಅಧಿನಿಯಮ–2013 ಅನುಷ್ಠಾನಕ್ಕೆ (ಎಂ.ಎಸ್ ಕಾಯ್ದೆ) ಸಂಬಂಧಿಸಿದ ಜಾಗೃತಿ ಸಭೆಯಲ್ಲಿ ಘಟನೆ ಕುರಿತು ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂಬಂಧ ಹುಳ್ಳೇನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಒ ಅಮಾನತುಗೊಳಿಸಬೇಕು, ಪ್ರಕರಣ ದಾಖಲಿಸಲು ನಿರ್ಲಕ್ಷಿಸಿದ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯರು ಆಗ್ರಹಿಸಿದರು. ಆಗ ಹೆಚ್ಚುವರಿ ಜಿಲ್ಲಾಧಿಕಾರಿ ಸೂಚನೆ ಮೇರೆಗೆ ಪೊಲೀಸರು ಎಂ.ಎಸ್ ಕಾಯ್ದೆ ಹಾಗೂ ಎಸ್‌.ಸಿ–ಎಸ್‌ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಸಂಜೆ ಐವರ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.



ಮಾಗಡಿ ತಾಲ್ಲೂಕಿನ ಬೀಚನಹಳ್ಳಿಯಲ್ಲಿ ಗ್ರಾಮದ ಮನೆಯೊಂದರ ಮಲದ ಗುಂಡಿಗಿಳಿದು ಸ್ವಚ್ಛಗೊಳಿಸಿದ್ದ ಗ್ರಾಮ ಪಂಚಾಯಿತಿ ಪೌರ ಕಾರ್ಮಿಕರು

ಬೀಚನಹಳ್ಳಿಯ ಗ್ರಾಮದ ಮನೆ ಮಾಲೀಕ ಶ್ರೀನಿವಾಸ್, ಪತ್ನಿ ವಿಜಯಲಕ್ಷ್ಮಿ, ಪುತ್ರರಾದ ಪ್ರದೀಪ್, ಕೃಷ್ಣಮೂರ್ತಿ ಹಾಗೂ ಗುಂಡಿಗೆ ಇಳಿಸಲು ಪ್ರೇರಣೆ ನೀಡಿದ ಆರೋಪದ ಮೇಲೆ ಅಂಕಯ್ಯನಪಾಳ್ಯದ ವಿಜಯಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಪಂಚಾಯತಿ ಟ್ರಾಕ್ಟರ್‌ನಲ್ಲಿ ಬಂದಿದ್ದರು: ‘ಶ್ರೀನಿವಾಸ್ ಅವರ ಮನೆಯ ಶೌಚದ ಗುಂಡಿ ಸ್ವಚ್ಛತೆ ಯಂತ್ರ ತರಿಸುವ ಬದಲು ಪರಿಚಿತರ ಮೂಲಕ ಪೌರ ಕಾರ್ಮಿಕರಾದ ಯೋಗೇಶ್, ಪ್ರವೀಣ್ (ಇಬ್ಬರೂ ಪರಿಶಿಷ್ಟ ಜಾತಿ), ನರಸಿಂಹಮೂರ್ತಿ (ಪರಿಶಿಷ್ಟ ಪಂಗಡ) ಎಂಬುವರನ್ನು ಪಂಚಾಯಿತಿ ಟ್ರಾಕ್ಟರ್ ಸಮೇತ ಸ್ಥಳಕ್ಕೆ ಕರೆಯಿಸಿದ್ದರು.

‘ಜುಲೈ 26ರಂದು ಇವರು ಗುಂಡಿ ಸ್ವಚ್ಛಗೊಳಿಸಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಜುಲೈ 28ರಂದು ಸ್ಥಳಕ್ಕೆ ತೆರಳಿ ಮಹಜರು ಮಾಡಲಾಯಿತು. ನಂತರ ಠಾಣೆಗೆ ತೆರಳಿ ದೂರು ನೀಡಿದೆ. ಪ್ರಕರಣ ದಾಖಲಿಸದ ಇನ್‌ಸ್ಪೆಕ್ಟರ್ ನವೀನ್, ಇದು ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಉಪ ವಿಭಾಗಾಧಿಕಾರಿ ಗಮನಕ್ಕೆ ತನ್ನಿ ಎಂದು ಹೇಳಿ ಕಳಿಸಿದ್ದರು’ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಉಮಾ ‘ಪ್ರಜಾವಾಣಿ’ಗೆ ತಿಳಿಸಿದರು.

ಮನುಷ್ಯರನ್ನು ಶೌಚ ಗುಂಡಿಗಳಿಸಿ ಸ್ವಚ್ಛಗೊಳಿಸಬಾರದು. ಇಲ್ಲಿ ಕಾಯ್ದೆ ಉಲ್ಲಂಘಿಸಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿ, ಜಿ.ಪಂ ಸಿಇಒ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳಿಂದ ವರದಿ ಕೇಳಲಾಗಿದೆ

ಚಂದ್ರಕಲಾ, ಕಾರ್ಯದರ್ಶಿ, ಸಫಾಯಿ ಕರ್ಮಚಾರಿ ಆಯೋಗ

ಇಂತಹ ಘಟನೆ ನಡೆದಾಗ ನೇರವಾಗಿ ಎಫ್‌ಐಆರ್ ದಾಖಲಿಸಲು ಅವಕಾಶವಿಲ್ಲ. ಉಪ ವಿಭಾಗಾಧಿಕಾರಿ ಪರಿಶೀಲಿಸಿ ಸೂಚಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಗಮನಕ್ಕೆ ತರಲಾಗಿತ್ತು

ನವೀನ್, ಕುದೂರು ಠಾಣೆ ಇನ್‌ಸ್ಪೆಕ್ಟರ್

ಪ್ರತಿಭಟನೆ

ಪ್ರಜಾವಾಣಿ ಚಿತ್ರ



ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ರಸ್ತೆಗಳು ಹಾಳಾಗಿದ್ದನ್ನು ಖಂಡಿಸಿ ಬುಧವಾರ ಗ್ರಾಮಸ್ಥರೊಂದಿಗೆ ಪ್ರತಿಭಟನೆ ನಡೆಸಿದ ರೈತ ಸಂಘದ ಕಾರ್ಯಕರ್ತರು ರಸ್ತೆಯಲ್ಲಿ ಬಾಳೆ ಕಂದು ನೆಟ್ಟು ಘೋಷಣೆ ಕೂಗಿದರು

ಮಳೆ: ‘ನವಿಲುತೀರ್ಥ’ ಶೀಘ್ರ ಭರ್ತಿ

ಪ್ರಜಾವಾಣಿ ವಾರ್ತೆ

ಸವದತ್ತಿ (ಬೆಳಗಾವಿ ಜಿಲ್ಲೆ): ಜಲಾನಯನ ಪ್ರದೇಶದಲ್ಲಿ ನಿರಂತರ ಮಳೆ ಆಗುತ್ತಿರುವ ಕಾರಣ ಜಿಲ್ಲೆಯ ನವಿಲುತೀರ್ಥ ಜಲಾಶಯ (ಇಂದಿರಾ ಅಣೆಕಟ್ಟೆ) ಅವಧಿಗೂ ಮುನ್ನ ಭರ್ತಿಯಾಗುವ ಸಾಧ್ಯತೆಗಳಿವೆ. ಗರಿಷ್ಠ 2079.50 ಅಡಿ ಸಾಮರ್ಥ್ಯದ ಜಲಾಶಯ ಭರ್ತಿಗೆ ಇನ್ನು 4.7 ಅಡಿ ಬಾಕಿ ಇದೆ.

‘ಸದ್ಯಕ್ಕೆ 2074.80 ಅಡಿ ನೀರು ಸಂಗ್ರಹವಿದೆ. ಒಳಹರಿವು 7,286 ಕ್ಯೂಸೆಕ್ ಇದೆ. 2,894 ಕ್ಯೂಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ನದಿಪಾತ್ರದಲ್ಲಿ ಜನರು ಮುನ್ನೆಚ್ಚರಿಕೆ ವಹಿಸಲು ಸೂಚಿಸಲಾಗಿದೆ ’ ಎಂದು ಸವದತ್ತಿ ತಹಶೀಲ್ದಾರ್ ಎಂ.ಎನ್. ಹೆಗ್ಗಣ್ಣವರ ತಿಳಿಸಿದ್ದಾರೆ.

ನೀರಿನ ಹರಿವು ಇಳಿಕೆ: ಚಿಕ್ಕೋಡಿ- ಮಹಾರಾಷ್ಟ್ರದ ಕೊಂಕಣ ಪ್ರದೇಶದಲ್ಲಿ ಮಳೆ ತಗ್ಗಿದ್ದು, ಕೃಷ್ಣಾ ಹಾಗೂ ಉಪನದಿಗಳಲ್ಲಿ ನೀರಿನ ಹರಿವಿನ ಪ್ರಮಾಣ ಬುಧವಾರ ಇಳಿಮುಖವಾಗಿದೆ.

ಮಹಾರಾಷ್ಟ್ರದ ರಾಜಾಪೂರೆ ಬ್ಯಾರೇಜ್‌ನಿಂದ ಕೃಷ್ಣಾ ನದಿಗೆ 1,07,750 ಕ್ಯೂಸೆಕ್ ಹೊರ ಹರಿವು ಇದ್ದು, ಸದಲಗಾ ಪಟ್ಟಣದ ಬಳಿಯಲ್ಲಿ ದೂಧಗಂಗಾ ನದಿಗೆ 18,656 ಕ್ಯೂಸೆಕ್ ಹೊರ ಹರಿವು ಇದೆ. ಚಿಕ್ಕೋಡಿ ಉಪ ವಿಭಾಗ ವ್ಯಾಪ್ತಿಯ 8ಕ್ಕೂ ಹೆಚ್ಚು ಸೇತುವೆಗಳು ಜಲಾವೃತಗೊಂಡ ಸ್ಥಿತಿಯಲ್ಲೇ ಇವೆ.

ಮಡಿಕೇರಿಯಲ್ಲಿ ಮಳೆ: ನಗರದಲ್ಲಿ ಬುಧವಾರ ಆಗಾಗ್ಗೆ ಬಿರುಸಿನ ಮಳೆ ಸುರಿಯಿತು. ಬಿರುಗಾಳಿ ತೀವ್ರತೆ ತಗ್ಗಿದೆ. ಗಾಳಿಗೆ ಅಲ್ಲಲ್ಲಿ ಮರಗಳು ಉರುಳಿವೆ. 5 ದಿನಗಳಲ್ಲಿ 800ಕ್ಕೂ ಅಧಿಕ ವಿದ್ಯುತ್ ಕಂಬ ಮುರಿದುಬಿದ್ದಿವೆ.

ಮುಂಜಾಗ್ರತೆಯಾಗಿ ಜಿಲ್ಲಾಡಳಿತ ಬುಧವಾರ ಜಿಲ್ಲೆಯ ಎಲ್ಲ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಿತ್ತು. ಶಾಂತಳ್ಳಿಯಲ್ಲಿ 4 ಸೆಂ.ಮೀ., ಮಡಿಕೇರಿಯಲ್ಲಿ 3.5, ಸೋಮವಾರಪೇಟೆಯಲ್ಲಿ 3, ಭಾಗಮಂಡಲದಲ್ಲಿ 2.5 ಸೆಂ.ಮೀ. ಮಳೆ ಸುರಿದಿರುವುದು ದಾಖಲಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	121.35	24,633	17,447
ಹಾರಂಗಿ	2,859	2,854.49	7,422	5,350
ಕಬಿನಿ	2,284.00	2,281.46	18,717	20,000
ಹೇಮಾವತಿ	2,922	2,920.90	13,518	12,900
ಲಿಂಗನಮಕ್ಕಿ	1,819	1,811	12,466	7658
ಸೂಪಾ (ಮೀ)	564	551.60	14,731.2	4,831.59
ಮಾಣಿ	595	590.34	3,653	717
ತುಂಗಭದ್ರಾ	1,633	1,624.80	1,01,537	94,488
ಮಲಪ್ರಭಾ	2,079.5	2,074.80	7,286	2,894
ಘಟಪ್ರಭಾ	2175	2,170.43	13,035	15,968
ಭದ್ರಾ *	186	180.3	16,694	16,694
ಆಲಮಟ್ಟಿ (ಮೀ)	519.6	517.95	1,51,730	1,38,883
ನಾರಾಯಣಪುರ (ಮೀ)	492.25	491.19	1,40,000	1,50,950

* ನೆಲಮಟ್ಟದಿಂದ

ಹಿಜಾಬ್ ಧರಿಸುವಂತೆ ಸಿಯುಕೆ ವಿದ್ಯಾರ್ಥಿನಿಯರಿಗೆ ಒತ್ತಾಯ: ಆರೋಪ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಶೈಕ್ಷಣಿಕ ಕ್ಷೇತ್ರ ಅಧ್ಯಯನ ಪ್ರವಾಸದ ವೇಳೆ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಜೂನ್ 19ರಂದು ಬೀದರ್ ಜಿಲ್ಲೆ ಫೀಯಾಸುದ್ದಿನ್ ತುಘಲಕ್ ಮಸೀದಿಗೆ ಬಲವಂತವಾಗಿ ಕರೆದೊಯ್ದು, ವಿದ್ಯಾರ್ಥಿನಿಯರಿಗೆ ಹಿಜಾಬ್ (ತಲೆ ಮೇಲೆ ಸೆರಗು) ಧರಿಸುವಂತೆ ಒತ್ತಾಯಿಸಲಾಗಿದೆ’ ಎಂದು ಹೈದರಾಬಾದ್‌ನ ಲೀಗಲ್ ರೈಟ್ಸ್ ಪ್ರೊಟೆಕ್ಷನ್ ಫೋರಂ ಆರೋಪಿಸಿದೆ.



‘ಪ್ರೊ.ಅಬ್ದುಲ್ ಮಜೀದ್ ಅವರು ಇತಿಹಾಸ ವಿಭಾಗದ ಬಿ.ಎ ಪ್ರಥಮ ವರ್ಷ ದ್ವಿತೀಯ ಸೆಮಿಸ್ಟರ್‌ನ ಹಲವು ವಿದ್ಯಾರ್ಥಿಗಳನ್ನು ಮಸೀದಿಗೆ ಕರೆದೊಯ್ದಿದ್ದಾರೆ. ಒಳಪ್ರವೇಶಿಸಲು ಹಿಜಾಬ್ ಧರಿಸುವಂತೆ ವಿದ್ಯಾರ್ಥಿನಿಯರಿಗೆ ಒತ್ತಾಯಿಸಲಾಗಿದೆ. ತನಿಖೆ ನಡೆಸಿ ಕ್ರಮಕ್ಕೆ ಗೊಳ್ಳಬೇಕು’ ಎಂದು ಫೋರಂನ ಪ್ರಧಾನ ಕಾರ್ಯದರ್ಶಿ ಎ.ಎಸ್.ಸಂತೋಷ ಅವರು ವಿ.ವಿ.ಯ ಕುಲಪತಿ ಹಾಗೂ ಕುಲಸಚಿವರಿಗೆ ಪತ್ರ ಬರೆದಿದ್ದಾರೆ.

‘ಹಿಜಾಬ್ ಧರಿಸುವಂತೆ ಹೇಳಿಲ್ಲ. ದರ್ಗಾದವರ ಸೂಚನೆಯಂತೆ ತಲೆಯ ಮೇಲೆ ಸೆರಗು ಹೊದ್ದುಕೊಳ್ಳಲು ಹೇಳಲಾಗಿತ್ತು’ ಎಂದು ಕರ್ನಾಟಕ ಕೇಂದ್ರೀಯ ವಿ.ವಿ ಸಹಾಯಕ ಪ್ರಾಧ್ಯಾಪಕ ಅಬ್ದುಲ್ ಮಜೀದ್ ಪ್ರತಿಕ್ರಿಯಿಸಿದ್ದಾರೆ.

ಅಧ್ಯಯನ ಪ್ರವಾಸದ ಕುರಿತು ಜುಲೈ 26ರಂದು ದೂರು ಬಂದಿದ್ದು, ಆರೋಪದ ಕುರಿತು ಪರಿಶೀಲಿಸಲು ಶೀಘ್ರವೇ ತನಿಖಾ ಸಮಿತಿ ರಚಿಸಲಾಗುವುದು

ಪ್ರೊ.ಆರ್.ಆರ್.ಬಿರಾದಾರ, ಕುಲಸಚಿವ, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ

ಆ. 2ರಂದು ದಲಿತ ಸಚಿವ, ಶಾಸಕರ ಸಭೆ

ಬೆಂಗಳೂರು: ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಕಾಂಗ್ರೆಸ ನಲ್ಲಿರುವ ದಲಿತ ಶಾಸಕರ ಸಭೆ ಆಗಸ್ಟ್ 2ರಂದು ನಡೆಯಲಿದೆ.

ಪರಮೇಶ್ವರ ಅವರ ನಿವಾಸದಲ್ಲಿ ನಡೆಯಲಿರುವ ಈ ಸಭೆಗೆ ದಲಿತ ಎಡಗೈ ಹಾಗೂ ಬಲಗೈ ಎರಡೂ ಸಮುದಾಯದ ಶಾಸಕರು ಹಾಗೂ ಸಚಿವರಿಗೆ ಆಹ್ವಾನ ನೀಡಲಾಗುವುದು. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ಈಗಾಗಲೇ ಸಮೀಕ್ಷೆ ಮುಗಿದಿರುವ ಕಾರಣ ಮುಂದಿನ ನಿರ್ಧಾರಗಳ ಬಗ್ಗೆ ಚರ್ಚಿಸಲು ಈ ಸಭೆ ನಡೆಯಲಿದೆ ಎಂದು ಗೊತ್ತಾಗಿದೆ.

ಆಗಸ್ಟ್ 4ರಂದು ವರದಿ ಸಲ್ಲಿಕೆ?: ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ನೇತೃತ್ವದ ಏಕ ಸದಸ್ಯ ಆಯೋಗವು ಆ. 4ರಂದು ಒಳ ಮೀಸಲಾತಿ ಸಂಬಂಧಿಸಿದ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವ ಸಾಧ್ಯತೆ ಇದೆ.

ಪಿಎಸ್‌ಐ ಹಗರಣ: ಆರ್.ಡಿ.ಪಾಟೀಲ ಜಾಮೀನು ಅರ್ಜಿ ‘ಸುಪ್ರೀಂ’ನಲ್ಲಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಿಎಸ್‌ಐ ಹಗರಣ ಹಾಗೂ ಕೆಇಎ ನೇಮಕಾತಿ ಪರೀಕ್ಷೆ ಬರೆಯಲು ಹಣ ಪಡೆದು ಬ್ಲೂಟೂತ್ ನೀಡಿದ ಪ್ರಮುಖ ಆರೋಪಿ ಆರ್. ಡಿ. ಪಾಟೀಲ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

ಪಾಟೀಲ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠ, ‘ಒಂದು ವರ್ಷದ ವರೆಗೆ ಜಾಮೀನು ಅರ್ಜಿ ಸಲ್ಲಿಸದಂತೆ ಪೀಠವು ಜನವರಿಯಲ್ಲಿ ಸೂಚಿಸಿತ್ತು. ವರ್ಷ ಆಗುವ ಮುನ್ನವೇ ಮತ್ತೊಮ್ಮೆ ಜಾಮೀನಿಗೆ ಅರ್ಜಿ ಸಲ್ಲಿಸಿದ್ದೀರಿ’ ಎಂದು ಅಸಮಾಧಾನ ವ್ಯಕ್ತ- ಪಡಿಸಿತು.

ಪಾಟೀಲ ಪರ ವಕೀಲರು, ‘ನನ್ನ ಕಕ್ಷಿದಾರರು ಎರಡು ವರ್ಷ ಜೈಲಿನಲ್ಲಿ ಕಾಲ ಕಳೆದಿದ್ದಾರೆ. ಅವರ ಪಾಸ್‌ಪೋರ್ಟ್ ವಶಕ್ಕೆ ಪಡೆಯಲಾಗಿದೆ. ಅನಾರೋಗ್ಯದಿಂದ ಬಳಲುತ್ತಿರುವ ಅವರಿಗೆ ಚಿಕಿತ್ಸೆಯ ಅಗತ್ಯವಿದೆ. ಕನಿಷ್ಠ ಎಂಟು ವಾರಗಳ ಮಟ್ಟಿಗಾದರೂ ಜಾಮೀನು ನೀಡಬೇಕು’ ಎಂದು ಮನವಿ ಮಾಡಿದರು. ಈ ಮನವಿಯನ್ನು ಪೀಠ ತಿರಸ್ಕರಿಸಿತು.

ಆರೋಪಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಪಾಟೀಲ ಅವರು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಜಾಮೀನು ಅರ್ಜಿಯನ್ನು ನ್ಯಾಯಪೀಠ ಈ ಹಿಂದೆ ವಜಾಗೊಳಿಸಿತ್ತು. ಆ ಬಳಿಕ, ವೈದ್ಯಕೀಯ ಕಾರಣ ನೀಡಿ ಜಾಮೀನು ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ವರದಿ ನೀಡುವಂತೆ ಕಲಬುರಗಿ ವೈದ್ಯಕೀಯ ವಿಜ್ಞಾನ ಸಂಸ್ಥೆಗೆ ಸೂಚಿಸಿತ್ತು. ಆರೋಪಿಗೆ ಶಸ್ತ್ರಚಿಕಿತ್ಸೆಯ ಅಗತ್ಯ ಇಲ್ಲ ಎಂದು ಸಂಸ್ಥೆ ವರದಿ ನೀಡಿತ್ತು.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮಾಹಿತಿ

ರೈಲ್ವೆ: 8,280 ಎಕರೆ ಭೂಸ್ವಾಧೀನ ಬಾಕಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ರೈಲ್ವೆ ಯೋಜನೆಗಳಿಗೆ 8,280 ಎಕರೆ ಭೂಸ್ವಾಧೀನ ಬಾಕಿ ಇದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಲೋಕಸಭೆಗೆ ಬುಧವಾರ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ರಾಯಚೂರು ಸಂಸದ ಜಿ.ಕುಮಾರ ನಾಯಕ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, ‘ನಾಲ್ಕು ಪ್ರಮುಖ ಯೋಜನೆಗಳಿಗೆ ಒಂದೇ ಒಂದು ಎಕರೆ ಭೂಮಿಯನ್ನು ಸ್ವಾಧೀನಪಡಿಸಿ ಕೊಂಡಿಲ್ಲ’ ಎಂದರು.

‘ರಾಜ್ಯದಲ್ಲಿ 25 ರೈಲ್ವೆ (ಹೊಸ ಹಾಗೂ ಜೋಡಿ ಹಳಿ) ಯೋಜನೆಗಳು ಅನುಷ್ಠಾನಗೊಳ್ಳುತ್ತಿವೆ. ಈ ಯೋಜನೆಗಳ ಒಟ್ಟು ಉದ್ದ 3,264 ಕಿ.ಮೀ. ಈ ತನಕ 1,394 ಕಿ.ಮೀ. ಪೂರ್ಣಗೊಂಡಿದೆ. ಭೂಸ್ವಾಧೀನ ಪ್ರಕ್ರಿಯೆ ವಿಳಂಬವಾಗಿರುವುದರಿಂದ ಯೋಜನೆಗಳ ಅನುಷ್ಠಾನ ತಡವಾಗಿದೆ. ಶೇ 37ರಷ್ಟು ಜಮೀನು ಸ್ವಾಧೀನಪಡಿಸಿಕೊಳ್ಳಬೇಕಿದೆ’ ಎಂದು ಅವರು ಮಾಹಿತಿ ನೀಡಿದರು.

ಹೆಜ್ಜಾಲ–ಚಾಮರಾಜನಗರ ನಡುವೆ ರೈಲು ಮಾರ್ಗ ನಿರ್ಮಾಣಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ಯೋಜನೆಗೆ ರಾಜ್ಯ ಸರ್ಕಾರ ಶೇ 50ರಷ್ಟು ಅನುದಾನ ನೀಡಬೇಕಿತ್ತು. ಆದಾಗ್ಯೂ, ಕರ್ನಾಟಕ ಸರ್ಕಾರ ಇದೀಗ ನಿಲುವು ಬದಲಿಸಿದ್ದರಿಂದ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲು ಆಗುತ್ತಿಲ್ಲ ಎಂದು ವೈಷ್ಣವ್ ತಿಳಿಸಿದರು.

ಭೂಸ್ವಾಧೀನದಿಂದ ಯಾವೆಲ್ಲ ಯೋಜನೆಗಳು ವಿಳಂಬ (ಹೆಕ್ಟೇರ್‌ಗಳಲ್ಲಿ)

ಯೋಜನೆ	ಕಿ.ಮೀ	ಬೇಕಿರುವ ಭೂಮಿ	ಸ್ವಾಧೀನ	ಬಾಕಿ
ಶಿವಮೊಗ್ಗ–ರಾಣೆಬೆನ್ನೂರು	96	559	226	333
ಬೆಳಗಾವಿ– ಧಾರವಾಡ	73	531	0	531
ಶಿವಮೊಗ್ಗ–ಹರಿಹರ	79	488	0	488
ವೈಟ್‌ಫೀಲ್ಡ್–ಕೋಲಾರ	53	337	0	337
ಹಾಸನ–ಬೇಲೂರು	27	206	0	206

8,969 ಹೆಕ್ಟೇರ್ ರಾಜ್ಯದಲ್ಲಿ ರೈಲ್ವೆ ಯೋಜನೆಗಳಿಗೆ ಬೇಕಿರುವ ಭೂಮಿ

5,657 ಹೆಕ್ಟೇರ್ ಈವರೆಗೆ ಭೂಸ್ವಾಧೀನ

ರೈಲ್ವೆ ಯೋಜನೆಗಳ ಸ್ಥಿತಿಗತಿ

ವರ್ಗ	ಯೋಜನೆ	ಒಟ್ಟು ಉದ್ದ (ಕಿ.ಮೀ)	ಈವರೆಗೆ ಪೂರ್ಣ (ಕಿ.ಮೀ)	ಈವರೆಗೆ ವೆಚ್ಚ (₹ಕೋಟಿಗಳಲ್ಲಿ)
ಹೊಸ ಮಾರ್ಗ	15	2,034	421	8,794
ಜೋಡಿ ಹಳಿ	10	1,230	973	12,516

ಅಲ್ಪಸಂಖ್ಯಾತರ ಶೈಕ್ಷಣಿಕ ಸಾಲ: ₹20 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ವಿತರಿಸಲು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ₹20 ಕೋಟಿ ಬಿಡುಗಡೆ ಮಾಡಿದೆ.

ನೀಟ್, ಸಿಇಟಿ ಬರೆದು ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಾಲ ನೀಡಲು ಈ ಹಣ ಬಳಸಿಕೊಳ್ಳಲಾಗುತ್ತದೆ. ಆಯಾ ಕಾಲೇಜುಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ನಿಗದಿಪಡಿಸಿದ ಶುಲ್ಕದ ಆಧಾರದಲ್ಲಿ ಪ್ರತಿ ವಿದ್ಯಾರ್ಥಿಗೆ ₹50 ಸಾವಿರದಿಂದ ₹5 ಲಕ್ಷದವರೆಗೆ ಸಾಲಸೌಲಭ್ಯ ನೀಡಲಾಗುತ್ತದೆ. ಈ ಕುರಿತ ಒಪ್ಪಂದ ಪತ್ರವನ್ನು ಕೆಇಎಗೆ ಹಸ್ತಾಂತರಿಸ ಲಾಗಿದೆ ಎಂದು ಸಚಿವ ಜಮೀರ್ ಅಹಮದ್ ಖಾನ್ ಮಾಹಿತಿ ನೀಡಿದರು. 2025-26ನೇ ಸಾಲಿನಲ್ಲಿ ಅಲ್ಪಸಂಖ್ಯಾತ ಸಮುದಾಯದ 5,890 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ನೀಟ್, ಸಿಇಟಿ ಮೂಲಕ ಆಯ್ಕೆ ಆದವರಿಗಷ್ಟೇ ಶೈಕ್ಷಣಿಕ ಸಾಲದ ನೆರವು ಸಿಗಲಿದೆ.

2024-25ನೇ ಸಾಲಿನಲ್ಲಿ ಅರಿವು ಶಿಕ್ಷಣ ಸಾಲ ಯೋಜನೆಯಲ್ಲಿ ಕೆಲವು ತಾಂತ್ರಿಕ ಕಾರಣದಿಂದ ಶಿಕ್ಷಣ ಸಂಸ್ಥೆಗಳಿಗೆ ಹಣ ಸಂದಾಯ ಆಗಿರಲಿಲ್ಲ. 1,018 ವಿದ್ಯಾರ್ಥಿಗಳ ಬಾಕಿ ಮೊತ್ತ ₹12.50 ಕೋಟಿ ಬಿಡುಗಡೆ ಮಾಡಲಾಗಿದೆ ಎಂದರು.

ಹಿಂದುಳಿದ ವರ್ಗದ ಉದ್ಯಮಿಗಳಿಗೆ ಪ್ರತ್ಯೇಕ ನಿಧಿ: ಲಾಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದುಳಿದ ವರ್ಗಗಳ ಯುವ ಕೈಗಾರಿಕೋದ್ಯಮಿಗಳಿಗೆ ಪ್ರತ್ಯೇಕ ನಿಧಿ ಸ್ಥಾಪಿಸಬೇಕು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.



ಸಂತೋಷ್ ಲಾಡ್

ರಾಜ್ಯದಲ್ಲಿ 2015ರಲ್ಲಿ ನಡೆದ ಸಮೀಕ್ಷೆ ಪ್ರಕಾರ ಹಿಂದುಳಿದ ವರ್ಗಗಳ ಜನಸಂಖ್ಯೆ ಶೇ 70ರಷ್ಟು (4.42 ಕೋಟಿ) ಇದೆ. 1,880 ಜಾತಿ ಮತ್ತು ಉಪಜಾತಿಗಳು ಬರುತ್ತವೆ. ಈ ವರ್ಗದ ಯುವ ಕೈಗಾರಿಕೋದ್ಯಮಿಗಳನ್ನು ಪ್ರೋತ್ಸಾಹಿಸಲು ಪ್ರತ್ಯೇಕ ಬಂಡವಾಳ, ಅನುದಾನ ವ್ಯವಸ್ಥೆ ಇಲ್ಲ. ಹಾಗಾಗಿ, ಹಿಂದುಳಿದ ವರ್ಗಗಳ ಯುವಕರು ಕೈಗಾರಿಕೆಗಳ ಸ್ಥಾಪನೆಗೆ ಒಲವು ತೋರುತ್ತಿಲ್ಲ. ಅದಕ್ಕಾಗಿ ಪ್ರತ್ಯೇಕ ನಿಧಿ ಸ್ಥಾಪಿಸಬೇಕು. ಹೊಸ ನೀತಿ ರೂಪಿಸಬೇಕು ಎಂದು ಕೋರಿದ್ದಾರೆ.

ನಿಧಿಗೆ ಅಗತ್ಯವಾದ ಅನುದಾನವನ್ನು ಸರ್ಕಾರ ನೀಡಬೇಕು. ಖಾಸಗಿ ವಲಯದ ಹೂಡಿಕೆದಾರರ ಮೂಲಕವೂ ಸಂಗ್ರಹಿಸಬೇಕು. ನವೋದ್ಯಮಗಳಿಗೆ ಹೆಚ್ಚಿನ ಆರ್ಥಿಕ ನೆರವು ಒದಗಿಸಬೇಕು ಎಂದು ಮನವಿ ಮಾಡಿದ್ದಾರೆ.

ಜಂಟಿ ಹೊಣೆಗಾರಿಕೆ ಗುಂಪಿಗೆ 'ಗೃಹಲಕ್ಷ್ಮಿ'ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಲಕ್ಷ್ಮಿಯರಿಗೆ ಇನ್ನಷ್ಟು ಆರ್ಥಿಕ ಶಕ್ತಿ ತುಂಬಲು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಮಾದರಿಯಲ್ಲಿ ಜಂಟಿ ಹೊಣೆಗಾರಿಕೆ ಗುಂಪುಗಳನ್ನು ರಚಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಇಲಾಖೆಯ ಉನ್ನತಮಟ್ಟದ ಅಧಿಕಾರಿಗಳು, ಬ್ಯಾಂಕ್ ಪ್ರತಿನಿಧಿಗಳ ಜತೆ ಬುಧವಾರ ನಡೆದ ಪೂರ್ವಭಾವಿ ಸಭೆಯ ನಂತರ ಮಾತನಾಡಿದ ಅವರು, ಗೃಹಲಕ್ಷ್ಮಿ ಯೋಜನೆ ಜಾರಿಯಾದ ನಂತರ ಪ್ರತಿ ಫಲಾನುಭವಿ ಕುಟುಂಬದ ಮಹಿಳೆಯರ ಆರ್ಥಿಕ ಸ್ಥಿತಿ ಸುಧಾರಿಸುತ್ತಿದೆ.

ಗೃಹಲಕ್ಷ್ಮಿ ಯೋಜನೆ ಈಗಾಗಲೇ ಜನಪ್ರಿಯಗೊಂಡಿದ್ದು, ಫಲಾನುಭವಿಗಳನ್ನು ಒಳಗೊಂಡ ಜಂಟಿ ಹೊಣೆಗಾರಿಕೆ ಗುಂಪುಗಳನ್ನು ರಚಿಸಲು ನಿರ್ಧರಿಸಲಾಗಿದೆ. ಶೀಘ್ರ ಅಂತಿಮ ರೂಪು ರೇಷೆ ಸಿದ್ಧಪಡಿಸಲಾಗುವುದು. ಆರಂಭದಲ್ಲಿ ಪ್ರಾಯೋಗಿಕವಾಗಿ 500 ಗುಂಪುಗಳನ್ನು ರಚಿಸಲಾಗುವುದು ಎಂದರು. ಕರ್ನಾಟಕದಲ್ಲಿ ಅಂಗನವಾಡಿ ಕೇಂದ್ರಗಳು ಆರಂಭಗೊಂಡು 50 ವರ್ಷವಾಗಿದೆ. ಅ.2ರಂದು ಸುವರ್ಣ ಮಹೋತ್ಸವ ಸಮಾರಂಭ ನಡೆಯಲಿದ್ದು, ಈ ವೇಳೆಗೆ ಜಂಟಿ ಹೊಣೆಗಾರಿಗೆ ಗುಂಪುಗಳ ರಚನೆಗೆ ಚಾಲನೆ ನೀಡಲಾಗುತ್ತಿದೆ ಎಂದು ಹೇಳಿದರು.

ಕಿಶೋರ ಕನಕ ಕಾವ್ಯ ಸ್ಪರ್ಧೆ

ಬೆಂಗಳೂರು: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಪ್ರಸಕ್ತ ಸಾಲಿನಿಂದ ಕಿಶೋರ ಕನಕ ಕಾವ್ಯ ಸ್ಪರ್ಧೆ ಆಯೋಜಿಸುತ್ತಿದೆ.

ಕನಕದಾಸರ ಕಾವ್ಯಗಳನ್ನು ಮಾತ್ರ ಗಮಕ ವಾಚನಕ್ಕೆ ಪರಿಗಣಿಸಲಾಗುತ್ತದೆ. 10ರಿಂದ 15 ವರ್ಷದೊಳಗಿನವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಪ್ರಥಮ ಸ್ಥಾನ ಪಡೆದವರಿಗೆ ₹20 ಸಾವಿರ, ದ್ವಿತೀಯ ಸ್ಥಾನ ಪಡೆದವರಿಗೆ ₹15 ಸಾವಿರ, ತೃತೀಯ ಸ್ಥಾನ ಪಡೆದವರಿಗೆ ₹10 ಸಾವಿರ ಹಾಗೂ ಇಬ್ಬರಿಗೆ ಸಮಾಧಾನಕರ ಬಹುಮಾನವಾಗಿ ತಲಾ ₹5 ಸಾವಿರ ನೀಡಲಾಗುತ್ತದೆ.

ಸ್ಪರ್ಧೆಯಲ್ಲಿ ಪಾಲ್ಗೊಳ್ಳುವವರು https://kanakadasaresearchcenter.karnataka.gov.in/ ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು kanakaresearchcentre@gmail.comಗೆ ಅಥವಾ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು–560056 ಈ ವಿಳಾಸಕ್ಕೆ ಸೆಪ್ಟೆಂಬರ್ 20ರೊಳಗೆ ತಲುಪುವಂತೆ ಕಳುಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 63645 29319 ಅನ್ನು ಸಂಪರ್ಕಿಸಬಹುದು.

ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಸಂಖ್ಯೆ: ಮನಪಾಬ/ತಾಶಾ/ವಿ/15ನೇ/2023–24/ಉಳಿತಾಯ/ಟಿ.ಪ್ರ./2025–26 ದಿನಾಂಕ : 30.06.2024

ಟೆಂಡರ್ ಪ್ರಕಟಣೆ (ಇ–ಪ್ರೊರ್‌ಮೆಂಟ್ ಮೂಲಕ ಮಾತ್ರ)

ಬಳ್ಳಾರಿ ಮಹಾನಗರ ಪಾಲಿಕೆ ವತಿಯಿಂದ 2023–24ನೇ ಸಾಲಿನ 15ನೇ ಹಣಕಾಸು 2023–24ನೇ ಸಾಲಿನ 15ನೇ ಹಣಕಾಸು ಉಳಿತಾಯ ಮೊತ್ತದ ಅನುದಾನದಲ್ಲಿ ಇಂಡೆಂಟ್ ಸಂಖ್ಯೆ: DMA/2025-26/WS/WORK_INDENT39803/CALL-2(SC), DMA/2025-26/WS/ WORK_INDENT39851/CALL-2 (Others) ಮತ್ತು DMA/2025- 26/WS/WORK_INDENT39804/CALL-2 (Others) ಮತ್ತು ಪಾಲಿಕೆಯ ಸಾಮಾನ್ಯ ಅನುದಾನದಲ್ಲಿ ಮನಪಾಬ/ತಾಶಾ/ವಿ/ಕ.ಸ್ವ/81/2024–25 (ಅಂದಾಜು ಮೊತ್ತ ರೂ. 2.60ಲಕ್ಷ) ಕಾಮಗಾರಿಗಳ ಟೆಂಡರ್‌ನ್ನು ದಿನಾಂಕ: 15.07.2025 ರಂದು ಸಂಜೆ 4.30 ಗಂಟೆಯೊಳಗಾಗಿ ಸಲ್ಲಿಸಬಹುದು. ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.07.2025 ಸಾಯಂಕಾಲ 05.00 ಗಂಟೆಗೆ ಮತ್ತು ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: 21.07.2025 ಸಾಯಂಕಾಲ 5.00 ಗಂಟೆಗೆ ಕಾಮಗಾರಿಗಳ ಎಲ್ಲಾ ವಿವರಗಳಿಗಾಗಿ ವೆಬ್ ಸೈಟ್: https://kppp.karnataka.gov.in/#/portal/portal-home ಅನ್ನು ಮತ್ತು www.ballaricity.mrc.gov.in ಗಮನಿಸಲು ಹಾಗೂ ಬಳ್ಳಾರಿ ಮಹಾನಗರ ಪಾಲಿಕೆಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಸಹಿ/– ಆಯುಕ್ತರು,
ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/5050/ಎಸ್‌ಸಿಪಿ&ಟಿಎಸ್‌ಪಿ/ಟೆ.ಪ್ರ/ತಾಸ–1/2025–26/687
ದಿನಾಂಕ: 28.07.2025

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) ಕಾಮಗಾರಿಗಳ ವಿವರ.: (1)ಸುರಪೂರ ತಾಲೂಕಿನ ಬೈಲಕುಂಟಿ ಗ್ರಾಮದ ದಾಸಯ್ಯಮುತ್ಯಾ ಗುಡಿಯಿಂದ ಹಣಮಸಾಗರ ದೊಡ್ಡಿಯ ವರೆಗೆ ಸಿ.ಸಿ. ರಸ್ತೆ ನಿರ್ಮಾಣ (2)ಸುರಪೂರ ತಾಲೂಕಿನ ಕಡದರಾಳ ಕ್ರಾಸ್ ದಿಂದ ಸೇದಿಭಾವಿವರೆಗೆ ಸಿ.ಸಿ. ರಸ್ತೆ ನಿರ್ಮಾಣ. ಇಂಟೆಂಡರ್ ಸಂಖ್ಯೆ:–RDPR/2025-26/RD/WORK_INDENT17647(1) ಸುರಪೂರ ತಾಲೂಕಿನ ಹುಲ್ಲಿಕೇರಾ ದೊಡ್ಡಿಯಿಂದ ಆಸ್ಕೇರದೊಡ್ಡಿಯ ಶಾಲೆಯ ವರೆಗೆ ಸಿ.ಸಿ. ರಸ್ತೆ ನಿರ್ಮಾಣ (2) ಸುರಪೂರ ತಾಲೂಕಿನ ಪುಟ್ಟೇರದೊಡ್ಡಿಯಿಂದ ಮಲ್ಕೋಜಿಯರ ದೊಡ್ಡಿಯ ವರೆಗೆ ಸಿ.ಸಿ. ರಸ್ತೆ ನಿರ್ಮಾಣ. ಇಂಟೆಂಡರ್ ಸಂಖ್ಯೆ:– RDPR/2025-26/RD/WORK_INDENT17649 **2) ಲೆಕ್ಕ ಶೀರ್ಷಿಕೆ:** 2024–25ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಯೋಜನೆ **3) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ಮತ್ತು ಗರಿಷ್ಠ ರೂ. 50.00 ಲಕ್ಷ **4) ಗುತ್ತಿಗೆದಾರರ ದರ್ಜೆ:** 3ನೇ ಮೇಲ್ಪಟ್ಟು ದರ್ಜೆ ಮೇಲ್ಪಟ್ಟು **5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:**30.07.2025 ರಿಂದ 08.08.2025 ಸಾಯಂಕಾಲ 4:00 ಗಂಟೆವರೆಗೆ **6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕು ಹಿಂದಿರುಗಿಸಲಾಗುವುದಿಲ್ಲಾ) **7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 08.08.2025 ಸಾಯಂಕಾಲ 4:00 ಗಂಟೆವರೆಗೆ **8) ಟೆಂಡರ ತೆರೆಯುವ ದಿನಾಂಕ ಆರ್ಥಿಕ:** 12.08.2025 ಬೆಳ್ಳಿಗೆ 11:00 ನಂತರ **9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. **10) ಅಂತರಜಾಲ ತಾಣದ ವಿಳಾಸ:**https://kppp.karnataka.gov.in

ಸೂಚನೆ :– ಟೆಂಡರರಿಗೆಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/–ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/177/ಕೆ.ಎಸ್.ಎಂ.ಸಿ.ಎ/2025–26

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009

ಸಂಖ್ಯೆ. ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಸಿಎಂಟಿ/ಟಿಎನ್‌ಡಿ/2025–26 ದಿನಾಂಕ:28.07.2025

ಟೆಂಡರ್ ಪ್ರಕಟಣೆ

ಕರ್ನಾಟಕದಲ್ಲಿ ಇರುವ ಕೆಆರ್‌ಐಡಿಎಲ್‌ನ ಉಪ ವಿಭಾಗಗಳಿಗೆ ಸಿಮೆಂಟ್‌ನ ಸರಬರಾಜಿಗಾಗಿ ಕಳೆದ 3 ಹಣಕಾಸಿನ ವರ್ಷಗಳಲ್ಲಿ ಕೆಳಗಿನ ತಃಖ್ತೆಯಲ್ಲಿ ತಿಳಿಸಿರುವಂತೆ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ತಯಾರಕರು ಇ–ಆಡಳಿತ ಕಾರ್ಯಾಲಯದ ಹೊಸ ವೆಬ್‌ಸೈಟ್:www.kppp.karnataka.gov.in ಮೂಲಕ ಮಾತ್ರ ವಿವರಗಳನ್ನು ನೋಡಬಹುದು. ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ಸಂಪರ್ಕ ಸಂ: +91 9240214000, +91 9240214001, +91 80 68948777, +91 80 46010000.

ಕ್ರ. ಸಂ.	ಟೆಂಡರ್ ವಿವರ	ಟೆಂಡರಿ ಗಿಟ್ಟಿರುವ ಪ್ರಮಾಣ ಚೀಲಗಳಲ್ಲಿ	ಟೆಂಡರ್ ಗಿಟ್ಟಿರುವ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರ ಬೇಕಾದ ವಾರ್ಷಿಕ ವಹಿವಾಟು ರೂ. ಲಕ್ಷಗಳಲ್ಲಿ
1	ಟೆಂಡರ್ ಭಾಗ–1 ಬೆಂಗಳೂರು ಮತ್ತು ಬಿಬಿಎಂಪಿ ವಲಯ	225000	784.50	11.77	2510.00
2	ಟೆಂಡರ್ ಭಾಗ–2 ಕೇಂದ್ರ (ಚಿತ್ರದುರ್ಗ) ವಲಯ	380000	1321.00	15.00	4227.00
3	ಟೆಂಡರ್ ಭಾಗ–3 ಮೈಸೂರು ವಲಯ	370000	1303.70	15.00	4171.00
4	ಟೆಂಡರ್ ಭಾಗ–4 ಬೆಳಗಾವಿ ವಲಯ	285000	895.14	13.43	2864.00
5	ಟೆಂಡರ್ ಭಾಗ–5 ಕಲಬುರಗಿ ವಲಯ	240000	762.40	11.45	2439.00

ಸರಬರಾಜು ಅವಧಿ: ಸರಬರಾಜಿಗೆ ಅದೇಶ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳು.

- ವಿಚಾರಣೆಯ ಕಡೆಯ ದಿನಾಂಕ ಮತ್ತು ಸಮಯ: **25.08.2025 ರಂದು 14.00 ಗಂಟೆವರೆಗೆ**
- ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **25.08.2025 ರಂದು 15.00 ಗಂಟೆವರೆಗೆ.**
- ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **28.08.2025 ರಂದು 15.00 ಗಂಟೆಗೆ.**
- ಆರ್ಥಿಕ ಬಿಡ್ ತೆರೆಯುವ ದಿನಾಂಕ: **30.08.2025 ರಂದು 15.00 ಗಂಟೆಗೆ.**

ಹೆಚ್ಚಿನ ವಿವರಗಳಿಗೆ ದಯವಿಟ್ಟು ಸಂಪರ್ಕಿಸಿ:
ಮುಖ್ಯ ಅಭಿಯಂತರರು (ಉತ್ತರ),
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09.
ದೂ.ಸಂಖ್ಯೆ: 080–28015605 ಇ–ಮೇಲ್: ddworkskridl@gmail.com
ಮಾಹಿತಿಗಾಗಿ ದಯವಿಟ್ಟು ಇಲ್ಲಿಗೆ ಲಾಗ್‌ಆನ್ ಆಗಿ: www.kridl.org.in

ಸಹಿ/– ಮುಖ್ಯ ಅಭಿಯಂತರರು (ಉತ್ತರ)

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಕಲಬುರಗಿ
ಇ–ಮೇಲ್:– eecivil.gescom@gmail.com CIN:U04010KA2002SGC030436

ಸಂ: ಜೆಸ್ಕಾಂ/ಮುಇ(ವಿ)/ಕಾಇ(ಕಾ)/ಸಕಾಇ(ಕಾ)/2025–26/30511–540 ದಿನಾಂಕ: 29–07–2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯುರಮೆಂಟ್‌ನ ಮುಖಾಂತರ ಮಾತ್ರ)

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿಯ ನಿಯಮಿತದ ಪರವಾಗಿ, ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರು, ಇ–ಪ್ರೋಕ್ಯುರಮೆಂಟ್ ಮುಖಾಂತರ ಹೊರಡಿಸಿರುವ https://www.kppp.karnataka.gov.in ಮೂಲಕ ಈ ಕೆಳಕಂಡ ಕೆಲಸಗಳಿಗಾಗಿ ಅರ್ಹ ಲೋಕೋಪಯೋಗಿ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. 1) ಕಾಮಗಾರಿಯ ಹೆಸರು : ಕಲಬುರಗಿ ಜೆಸ್ಕಾಂ ನಿಗಮ ಕಛೇರಿ, ವಲಯ ಕಛೇರಿ ಮತ್ತು ಬಳ್ಳಾರಿ, ರಾಯಚೂರಿನಲ್ಲಿರುವ ವೃತ್ತ ಕಛೇರಿಗೆ ಸಂವಾದಾತ್ಮಕ ಪ್ರದರ್ಶನದೊಂದಿಗೆ ವೀಡಿಯೋ ಕಾನ್ಫರೆನ್ಸಿಂಗ್ ವ್ಯವಸ್ಥೆಯ ಪೂರೈಕೆ ಮತ್ತು ಸ್ಥಾಪನೆ. 2) ಟೆಂಡರ್‌ನ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : **78.00,** 3) ಮುಂಗಡ ಮೊತ್ತ (ರೂ. ಲಕ್ಷಗಳಲ್ಲಿ) : 02.00, 4) ಕೆಲಸದ ಅವಧಿ (ಮಳೆಗಾಲ ಸೇರಿ) : 3 ತಿಂಗಳು, 5) ಕಾರ್ಯಕ್ಷಮತೆ ಮತ್ತು ಕೆಲಸದ ಅರ್ಹತೆ : ಬಿಡ್ದಾರರು ಕಂಪನಿಗಳ ಕಾಯ್ದೆ, 1956/2013ರ ಅಡಿಯಲ್ಲಿ ನೋಂದಾಯಿತ ಕಂಪನಿಯಾಗಿರಬೇಕು ಅಥವಾ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಕಾಯ್ದೆ, 2008ರ ಅಡಿಯಲ್ಲಿ ನೋಂದಾಯಿತ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ (LLP) ಸಂಸ್ಥೆಯಾಗಿರಬೇಕು.

ಟೆಂಡರ್ ಅರ್ಜಿದಾರರು https://www.kppp.karnataka.gov.in ನಲ್ಲಿ ಲಾಗ್ ಆನ್ ಮಾಡಿ ಟೆಂಡರಗೆ ಸಲ್ಲಿಸಬೇಕಾಗಿರುವ ದಾಖಲೆಗಳನ್ನು ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಇಚ್ಛೆಯುಳ್ಳ ಗುತ್ತಿಗೆದಾರರು ಟೆಂಡರ್ ವಿವರಗಳನ್ನು ಈ ಕೆಳಗಿನ ವೆಬಸೈಟ್ https://www.kppp.karnataka.gov.in ನಲ್ಲಿ ದಿನಾಂಕ.30–07–2025 ರಂದು ಅಥವಾ ನಂತರ ಲಾಗ್ ಆನ್‌ಮಾಡಿ ಪಡೆದುಕೊಳ್ಳಬಹುದಾಗಿದೆ. ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಇ–ಪ್ರೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ನೋಂದಣಿಯನ್ನು ಹೊಂದಿರಬೇಕು ಹಾಗೂ ಆನ್‌ಲೈನ್ ಮುಖಾಂತರ ಮಾತ್ರ ಅರ್ಜಿಯನ್ನು ಸಲ್ಲಿಸಬೇಕು. ಇತರೆ ಯಾವುದೆ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಲಾದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಕ್ಯಾಲೆಂಡರ ಆಫ್ ಇವೆಂಟ್ಸ ಮತ್ತು ವಿಸ್ತರಿಸಿದ ದಿನಾಂಕ : 1) ವಿವರಣೆ ಮತ್ತು ಮಾಹಿತಿಯನ್ನು ಪಡೆಯುವ ಕೊನೆಯ ದಿನಾಂಕ ಮತ್ತು ಸಮಯ : **05–08–2025 ಸಾಯಂಕಾಲ 5.00 ಗಂಟೆಗೆ,** 2) ಟೆಂಡರ್ ಪೂರ್ವ ಸಭೆಯ ಕೊನೆಯ ದಿನಾಂಕ ಮತ್ತು ಸಮಯ: **05–08–2025 ಮುಂಜಾನೆ 11.00 ಗಂಟೆಗೆ,** 3) ತುಂಬಿದ ಎಲೆಕ್ಟ್ರಾನಿಕ್ ಬಿಡ್ ಶೀಟಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **11–08–2025 ಸಾಯಂಕಾಲ 5.00 ಗಂಟೆಗೆ,** 4) ಟೆಕ್ನಿಕಲ್ ಬಿಡ್ ಶೀಟಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **13–08–2025 ಸಾಯಂಕಾಲ 5.00 ಗಂಟೆಗೆ,** 5) ದರ ಪಟ್ಟಿಯನ್ನು (Price Bid) ತೆರೆಯುವ ದಿನಾಂಕ ಮತ್ತು ಸಮಯ : **18–08–2025 ಸಾಯಂಕಾಲ 5.00 ಗಂಟೆಗೆ**

ಸಹಿ/– ಮುಖ್ಯ ಇಂಜಿನಿಯರ್ ವಿದ್ಯುತ್
(ಕಾರ್ಯಚರಣೆ), ನಿಗಮ ಕಛೇರಿ ಜೆಸ್ಕಾಂ ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/345/ಕೆ.ಎಸ್.ಎಂ.ಸಿ.&ಎ/2025–26

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–1 ರವರ ಕಛೇರಿ ಬೆಂಘತ್ಯಾನಿನಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ,
ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂ: ಉಪ್ರವ್ಯ–1/ಬೆಂಘತ್ಯಾನಿನಿ/ಟೆಂಡ್/08/2025–26 ದಿನಾಂಕ:30.07.2025

ಟೆಂಡರ್‌ಗಾಗಿ ಆಹ್ವಾನ
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಸೇವೆಗಳಿಗೆ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ಉಪ ಪ್ರಧಾನ ವ್ಯವಸ್ಥಾಪಕರು–1 ರವರು ಅರ್ಹ ಗುತ್ತಿಗೆದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.


Sl No	Package Name	Amount Put to Tender per annum (Rs. in Lakhs)	EMD (in Rs.) through e payment mode only under of the following i.e., online / RTGS/ NEFT / OTC	Cost of Tender Document	Contract period
1	Primary Collection and Secondary Transportation of Municipal solid waste (MSW) and Street sweeping waste in CV Ramanagara division (Package-P1) **Call-2**	1,477.85	Rs.15,00,000/-	As per e-Portal	84 Months
2	Primary Collection and Secondary Transportation of Municipal solid waste (MSW) and Street sweeping waste in Shanthinagara division (Package-P2) **Call-2**	1,411.47	Rs.15,00,000/-	As per e-Portal	84 Months
3	Primary Collection and Secondary Transportation of Municipal solid waste (MSW) and Street sweeping waste in Sarvagnanagara division (Package-P3) **Call-2**	1,751.21	Rs.17,51,000/-	As per e-Portal	84 Months
4	Primary Collection and Secondary Transportation of Municipal solid waste (MSW) and Street sweeping waste in Shivajinagara division (Package-P4) **Call-2**	1,723.87	Rs.17,24,000/-	As per e-Portal	84 Months
5	Primary Collection and Secondary Transportation of Municipal solid waste (MSW) and Street sweeping waste in Hebbal division (Package-P5) **Call-2**	1,516.13	Rs.15,16,000/-	As per e-Portal	84 Months
6	Primary Collection and Secondary Transportation of Municipal solid waste (MSW) and Street sweeping waste in Pulakeshinagara division (Package-P6) **Call-2**	1,670.62	Rs.16,71,000/-	As per e-Portal	84 Months
7	Primary Collection and Secondary Transportation of Municipal solid waste (MSW) and Street sweeping waste in Gandhinagara division (Package-P7) **Call-2**	1,596.60	Rs.15,97,000/-	As per e-Portal	84 Months
8	Primary Collection and Secondary Transportation of Municipal solid waste (MSW) and Street sweeping waste in Govindarajanagara division (Package-P8) **Call-2**	1,338.43	Rs.15,00,000/-	As per e-Portal	84 Months
9	Primary Collection and Secondary Transportation of Municipal solid waste (MSW) and Street sweeping waste in Rajajinagara division (Package-P9) **Call-2**	1,344.67	Rs.15,00,000/-	As per e-Portal	84 Months
10	Primary Collection and Secondary Transportation of Municipal solid waste (MSW) and Street sweeping waste in Malleshwaram division (Package-P10) **Call-2**	1,796.89	Rs.17,97,000/-	As per e-Portal	84 Months
11	Primary Collection and Secondary Transportation of Municipal solid waste (MSW) and Street sweeping waste in Mahalaxmi Layout division. (Package-P11) **Call-2**	1,284.40	Rs.15,00,000/-	As per e-Portal	84 Months
12	Primary Collection and Secondary Transportation of Municipal solid waste (MSW) and Street sweeping waste in Chamarajpete division (Package-P12) **Call-2**	1,485.14	Rs.15,00,000/-	As per e-Portal	84 Months
13	Primary Collection and Secondary Transportation of Municipal solid waste (MSW) and Street sweeping waste in Chickpete division (Package-P13) **Call-2**	2,016.27	Rs. 20,16,000/-	As per e-Portal	84 Months
14	Primary Collection and Secondary Transportation of Municipal solid waste (MSW) and Street sweeping waste in Basavanagudi division (Package-P14) **Call-2**	1,724.99	Rs.17,25,000/-	As per e-Portal	84 Months
15	Primary Collection and Secondary Transportation of Municipal solid waste (MSW) and Street sweeping waste in Vijayanagara division (Package-P15) **Call-2**	2,141.86	Rs. 21,42,000/-	As per e-Portal	84 Months
16	Primary Collection and Secondary Transportation of Municipal solid waste (MSW) and Street sweeping waste in Padmanabhanagara division (Package-P16) **Call-2**	2,294.65	Rs. 22,95,000/-	As per e-Portal	84 Months
17	Primary Collection and Secondary Transportation of Municipal solid waste (MSW) and Street sweeping waste in Jayanagara division (Package-P17) **Call-2**	1,284.64	Rs.15,00,000/-	As per e-Portal	84 Months
18	Primary Collection and Secondary Transportation of Municipal solid waste (MSW) and Street sweeping waste in BTM Layout division (Package-P18) **Call-2**	1,769.59	Rs.17,70,000/-	As per e-Portal	84 Months
19	Primary Collection and Secondary Transportation of Municipal solid waste (MSW) and Street sweeping waste in Bommanahalli division (Package-P19) **Call-2**	2,597.46	Rs. 25,97,000/-	As per e-Portal	84 Months
20	Primary Collection and Secondary Transportation of Municipal solid waste (MSW) and Street sweeping waste in Bangalore South-1 division. (Package-P20) **Call-2**	1,438.14	Rs.15,00,000/-	As per e-Portal	84 Months
21	Primary Collection and Secondary Transportation of Municipal solid waste (MSW) and Street sweeping waste in Bangalore South-2 division (Package-P21) **Call-2**	955.72	Rs.14,34,000/-	As per e-Portal	84 Months
22	Primary Collection and Secondary Transportation of Municipal solid waste (MSW) and Street sweeping waste in Dasarahalli-1 division (Package-P22) **Call-2**	1,505.73	Rs.15,06,000/-	As per e-Portal	84 Months
23	Primary Collection and Secondary Transportation of Municipal solid waste (MSW) and Street sweeping waste in Dasarahalli-2 division (Package-P23) **Call-2**	1,494.27	Rs.15,00,000/-	As per e-Portal	84 Months
24	Primary Collection and Secondary Transportation of Municipal solid waste (MSW) and Street sweeping waste in Mahadevapura-1 division (Package-P24) **Call-2**	1,898.76	Rs.18,99,000/-	As per e-Portal	84 Months
25	Primary Collection and Secondary Transportation of Municipal solid waste (MSW) and Street sweeping waste in Mahadevapura-2 division (Package-P25) **Call-2**	1,865.37	Rs.18,65,000/-	As per e-Portal	84 Months
26	Primary Collection and Secondary Transportation of Municipal solid waste (MSW) and Street sweeping waste in KR Puram-1 division (Package-P26) **Call-2**	1,416.48	Rs.15,00,000/-	As per e-Portal	84 Months
27	Primary Collection and Secondary Transportation of Municipal solid waste (MSW) and Street sweeping waste in KR Puram-2 division (Package-P27) **Call-2**	1,690.51	Rs.16,91,000/-	As per e-Portal	84 Months
28	Primary Collection and Secondary Transportation of Municipal solid waste (MSW) and Street sweeping waste in Yeshwanthpura-1division (Package-P28) **Call-2**	1,457.77	Rs.15,00,000/-	As per e-Portal	84 Months
29	Primary Collection and Secondary Transportation of Municipal solid waste (MSW) and Street sweeping waste in Yeshwanthpura-2 division (Package-P29) **Call-2**	1,569.52	Rs.15,70,000/-	As per e-Portal	84 Months
30	Primary Collection and Secondary Transportation of Municipal solid waste (MSW) and Street sweeping waste in RR Nagara-1 division (Package-P30) **Call-2**	1,633.64	Rs.16,34,000/-	As per e-Portal	84 Months
31	Primary Collection and Secondary Transportation of Municipal solid waste (MSW) and Street sweeping waste in RR Nagara-2division (Package-P31) **Call-2**	1,859.56	Rs.18,60,000/-	As per e-Portal	84 Months
32	Primary Collection and Secondary Transportation of Municipal solid waste (MSW) and Street sweeping waste in Yelahanka division (Package-P32) **Call-2**	1,214.38	Rs.15,00,000/-	As per e-Portal	84 Months
33	Primary Collection and Secondary Transportation of Municipal solid waste (MSW) and Street sweeping waste in Byatarayanapura division (Package-P33) **Call-2**	2,265.34	Rs. 22,65,000/-	As per e-Portal	84 Months

1) ಕೆಪಿಪಿ ಪೋರ್ಟಲ್‌ನಲ್ಲಿ ಪೂರ್ವ–ಬಿಡ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **12.08.2025 ರಂದು ಸಂಜೆ 4:00 ಗಂಟೆಯವರೆಗೆ.** 2) ಟೆಂಡರ್ ಪೂರ್ವ ಬಿಡ್ ಸಭೆ: **13.08.2025 ರಂದು ಸಂಜೆ 4:00 ಗಂಟೆಗೆ,** ಐಪಿಪಿ ಕೇಂದ್ರ, #72/4, 16 ನೇ ಅಡ್ಡ ರಸ್ತೆ, ವೈಯಾಲಿಕಾವಲ್, ಕೋದಂಡರಾಮಪುರ, ಮಲ್ಲೇಶ್ವರಂ, ಬೆಂಗಳೂರು–560003. 3) ಟೆಂಡರ್ ಸ್ವೀಕರಿಸಿದ ಕೊನೆಯ ದಿನಾಂಕ: **30.08.2025 ರಂದು ಸಂಜೆ 4:00 ಗಂಟೆಯವರೆಗೆ. 4)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01.09.2025 ರಂದು ಬೆಳಿಗ್ಗೆ 10:30 ಗಂಟೆಯ ನಂತರ.** ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1, ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/ಜಿಎ/2116/2025–26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in



ಸುಭಾಷಿತ

ಅಸಮಾನತೆಯಿಂದ ನರಳುವವರಿಗೆ ಸಮಾನತೆಯನ್ನು ಕಲ್ಪಿಸುವುದೇ ನಿಜವಾದ ಪ್ರಜಾಪ್ರಭುತ್ವ.

ಪ್ಲೇಟೊ

ಸಂಪಾದಕೀಯ

ಯೂರಿಯಾ: ರಾಜಕೀಯ ಬಿಡಿ ರೈತರ ಸಮಸ್ಯೆಗೆ ಪರಿಹಾರ ಕೊಡಿ

ರಾಜ್ಯದ ವಿವಿಧ ಭಾಗಗಳಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಕೃಷಿ ಚಟುವಟಿಕೆಗಳು ಗರಿಗೆದರಿವೆ. ಆದರೆ, ಪ್ರತಿ ಮುಂಗಾರಿನಲ್ಲಿ ತಲೆದೋರುವ ರಸಗೊಬ್ಬರದ ಕೊರತೆ ಈ ಬಾರಿಯೂ ಮರುಕಳಿಸಿದೆ; ರೈತರನ್ನು ಕಂಗೆಡಿಸಿದೆ. ಕೆಲವೆಡೆ, ಬಿತ್ತನೆಬೀಜದ ಕೊರತೆಯೂ ಕಾಣಿಸಿಕೊಂಡಿದೆ. ಬಾಗಲಕೋಟೆ, ಕೊಪ್ಪಳ, ದಾವಣಗೆರೆ, ಧಾರವಾಡ ಸೇರಿದಂತೆ ವಿವಿಧ ಜಿಲ್ಲೆಗಳ ರೈತರು ರಸಗೊಬ್ಬರದ ಕೊರತೆಯಿಂದಾಗಿ ತೊಂದರೆ ಅನುಭವಿಸುತ್ತಿದ್ದಾರೆ. ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದೊರೆಯದ ಕಾರಣದಿಂದಾಗಿ ಕೆಲವೆಡೆ ರೈತರು ಪ್ರತಿಭಟನೆ ನಡೆಸಿದ್ದಾರೆ. ಕೊಪ್ಪಳ ಜಿಲ್ಲೆಯ ರೈತರೊಬ್ಬರು ರಸಗೊಬ್ಬರ ಸಿಗದ ಕಾರಣಕ್ಕೆ ಮಣ್ಣು ತಿಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರೈತರ ಪರವಾಗಿ ಬಿಜೆಪಿ ನಾಯಕರೂ ದನಿಯೆತ್ತಿದ್ದು, ರಸಗೊಬ್ಬರದ ಸಮರ್ಪಕ ಹಂಚಿಕೆಯಲ್ಲಿ ವಿಫಲವಾಗಿರುವ ರಾಜ್ಯ ಸರ್ಕಾರದ ವಿರುದ್ಧ ಹರಿಹಾಯುತ್ತಿದ್ದಾರೆ. ರಾಜ್ಯದ ಕೃಷಿ ಇಲಾಖೆ ಸೂಕ್ತ ಪೂರ್ವಸಿದ್ಧತೆ ಮಾಡಿಕೊಳ್ಳದ ಕಾರಣದಿಂದಾಗಿ ಸಮಸ್ಯೆ ಸೃಷ್ಟಿಯಾಗಿದೆ ಹಾಗೂ ದಾಸ್ತಾನು ಇರುವ ಗೊಬ್ಬರವನ್ನು ಅವಶ್ಯಕತೆ ಆಧಾರದ ಮೇಲೆ ಹಂಚಿಕೆ ಮಾಡುತ್ತಿಲ್ಲ ಎನ್ನುವುದು ಬಿಜೆಪಿ ನಾಯಕರ ಆರೋಪ. ರಸಗೊಬ್ಬರ ವಿತರಣೆಯಲ್ಲಿ ಭ್ರಷ್ಟಾಚಾರ ನಡೆದಿದೆ. ಸಣ್ಣ ಮತ್ತು ಅತಿಸಣ್ಣ ರೈತರು ಸರತಿ ಸಾಲಲ್ಲಿ ನಿಂತಿರುವಾಗಲೇ, ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಯೂರಿಯಾ ಮಾರಾಟ ನಡೆಯುತ್ತಿದೆ ಎಂದೂ ಬಿಜೆಪಿ ಆರೋಪಿಸಿದೆ. ಇದಕ್ಕೆ ಪ್ರತಿಯಾಗಿ, ರಸಗೊಬ್ಬರದ ಸಮಸ್ಯೆಗೆ ಕೇಂದ್ರ ಸರ್ಕಾರವೇ ಕಾರಣವೆಂದು ರಾಜ್ಯ ಸರ್ಕಾರ ಹೇಳಿದೆ. ಏಪ್ರಿಲ್‌ನಿಂದ ಜುಲೈವರೆಗಿನ ಅವಧಿಯಲ್ಲಿ ರಾಜ್ಯಕ್ಕೆ 6.80 ಲಕ್ಷ ಟನ್ ಯೂರಿಯಾ ಅಗತ್ಯವಿದೆ; ಅದರಲ್ಲಿ 5.16 ಲಕ್ಷ ಟನ್ ಮಾತ್ರ ಕೇಂದ್ರ ಸರ್ಕಾರದಿಂದ ಪೂರೈಕೆಯಾಗಿದ್ದು, 1.65 ಲಕ್ಷ ಟನ್ ಯೂರಿಯಾ ಪೂರೈಕೆ ಬಾಕಿಯಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಪ್ರತಿಭಟನೆಯ ರಾಜಕೀಯ ಕೈಬಿಟ್ಟು, ಕೇಂದ್ರದಿಂದ ರಾಜ್ಯಕ್ಕೆ ಹೆಚ್ಚಿನ ರಸಗೊಬ್ಬರ ಕೊಡಿಸಬೇಕು ಎಂದೂ ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ.



ರೈತರಿಗೆ ಅಗತ್ಯ ಪ್ರಮಾಣದಲ್ಲಿ ರಸಗೊಬ್ಬರ ದೊರಕಿಸಿಕೊಡುವುದು ಸರ್ಕಾರದ ಕರ್ತವ್ಯ. ಕಚ್ಚಾಟ ಮರೆತು, ರೈತರ ಸಮಸ್ಯೆ ಪರಿಹರಿಸುವುದು ಆಡಳಿತ ಹಾಗೂ ಪ್ರತಿಪಕ್ಷಗಳ ಆದ್ಯತೆ ಆಗಬೇಕು.

ರಸಗೊಬ್ಬರದ ಕೊರತೆ ಈ ಮುಂಗಾರಿಗೆ ಸೀಮಿತವಾದ ಸಮಸ್ಯೆಯಲ್ಲ. ಬಿತ್ತನೆಬೀಜ ಮತ್ತು ಗೊಬ್ಬರ ಸಮಯಕ್ಕೆ ಸರಿಯಾಗಿ, ಅಗತ್ಯ ಪ್ರಮಾಣದಲ್ಲಿ ದೊರೆಯದೆ ರೈತರು ಸಮಸ್ಯೆಗೆ ಸಿಲುಕುವುದು ಪ್ರತಿ ಮುಂಗಾರಿನ ವಾರ್ಷಿಕ ವಿದ್ಯಮಾನ ಎನ್ನುವಂತಾಗಿದೆ. ಬೀಜ ಮತ್ತು ಗೊಬ್ಬರ ದೊರೆಯದೆ ಆಕ್ರೋಶಗೊಂಡಿದ್ದ ರೈತರ ಮೇಲೆ 2008ರಲ್ಲಿ ಗೋಲಿಬಾರ್ ನಡೆದು, ಇಬ್ಬರು ರೈತರು ಮೃತಪಟ್ಟ ಘಟನೆ ಹಾವೇರಿಯಲ್ಲಿ ನಡೆದಿತ್ತು. ಆ ರೈತರ ಸಾವಿನಿಂದ ಆಡಳಿತ ಯಂತ್ರ ಪಾಠ ಕಲಿತಂತಿಲ್ಲ. ತಪ್ಪುಗಳನ್ನು ಸರಿಪಡಿಸಿಕೊಂಡು, ಸಮಯಕ್ಕೆ ಸರಿಯಾಗಿ ರೈತರಿಗೆ ಗೊಬ್ಬರ ಒದಗಿಸಲು ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿಲ್ಲ. ರೈತರಿಗೆ ರಸಗೊಬ್ಬರ ಒದಗಿಸುವಲ್ಲಿ ಯಾವ ಪಕ್ಷವೂ ಪ್ರಾಮಾಣಿಕತೆಯಿಂದ ವರ್ತಿಸಿಲ್ಲ. ಈಗಲೂ ಆಡಳಿತ ಮತ್ತು ಪ್ರತಿಪಕ್ಷಗಳು ಆರೋಪ ಪ್ರತ್ಯಾರೋಪಗಳ ಶಕ್ತಿ ಪ್ರದರ್ಶನದಲ್ಲಿ ತೊಡಗಿವೆ. ಸಂಕಷ್ಟದ ಸಮಯದಲ್ಲಿ ಕ್ಷುಲ್ಲಕ ರಾಜಕಾರಣ ಮಾಡುವುದನ್ನು ಬಿಟ್ಟು, ರೈತರಿಗೆ ರಸಗೊಬ್ಬರ ದೊರಕಿಸಿಕೊಡುವುದು ಆದ್ಯತೆಯ ಕೆಲಸ ಎನ್ನುವುದನ್ನು ಮರೆತಿವೆ.

ಯೂರಿಯಾ ಬಿಕ್ಕಟ್ಟಿಗೆ, ಭ್ರಷ್ಟಾಚಾರ ಹಾಗೂ ರಸಗೊಬ್ಬರ ತಯಾರಿಕಾ ಕಂಪನಿಗಳ ದುರಾಸೆಯೂ ಕಾರಣ ಎಂದು ಹೇಳಲಾಗುತ್ತಿದೆ. ಯೂರಿಯಾ ಜೊತೆಗೆ ಇತರ ಉಪ ಉತ್ಪನ್ನಗಳನ್ನು ಖರೀದಿಸುವಂತೆ ಮಾರಾಟಗಾರರು ರೈತರನ್ನು ಒತ್ತಾಯಿಸುತ್ತಿದ್ದು, ಯೂರಿಯಾ ಒಂದೇ ಬೇಕಾದರೆ ದುಪ್ಪಟ್ಟು ದರ ಕೇಳುತ್ತಿದ್ದಾರೆ ಎನ್ನುವ ವರದಿಗಳಿವೆ. ಯೂರಿಯಾ ಜೊತೆಗೆ ನ್ಯಾನೊ ಯೂರಿಯಾ ಹಾಗೂ ನ್ಯಾನೊ ಡಿಎಪಿ ಖರೀದಿಯನ್ನು ಕೆಲವು ಕಂಪನಿಗಳು ಕಡ್ಡಾಯಪಡಿಸುತ್ತಿವೆ. ಕೃತಕ ಅಭಾವವನ್ನು ಸೃಷ್ಟಿಸಿ, ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಯೂರಿಯಾ ಮಾರಲಾಗುತ್ತಿದೆ ಎನ್ನುವ ದೂರುಗಳೂ ಇವೆ. ರಸಗೊಬ್ಬರದ ಅಕ್ರಮ ದಾಸ್ತಾನು ಹಾಗೂ ಕಾಳಸಂತೆ ವ್ಯಾಪಾರದ ಬಗ್ಗೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕಾಗಿದೆ. ರಸಗೊಬ್ಬರ ಕೊರತೆಯ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ, ಹಸಿರೆಲೆ ಗೊಬ್ಬರ ಮತ್ತು ಜೈವಿಕ ಗೊಬ್ಬರಗಳ ಬಳಕೆ ಹೆಚ್ಚಿಸುವ ಸಾಧ್ಯತೆಗಳ ಕುರಿತು ಸರ್ಕಾರ, ಕೃಷಿ ಇಲಾಖೆ ಗಂಭೀರ ಚಿಂತನೆ ನಡೆಸಬೇಕಾಗಿದೆ. ಸದ್ಯದ ಸಂದರ್ಭದಲ್ಲಿ ರಸಗೊಬ್ಬರಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸುವುದು ಸಾಧ್ಯವಿಲ್ಲವಾದರೂ, ಪರ್ಯಾಯಗಳನ್ನು ಕಂಡುಕೊಳ್ಳದೆ ಹೋದರೆ ಮಣ್ಣಿನ ಫಲವತ್ತತೆ ಸಂಪೂರ್ಣ ನಶಿಸುವ ದಿನಗಳು ದೂರವಿಲ್ಲ. ಆ ದುರಂತಕ್ಕೆ ಅವಕಾಶ ಕಲ್ಪಿಸದೆ, ಪ್ರಾಕೃತಿಕವಾಗಿ ಮಣ್ಣನ್ನು ಫಲವತ್ತಾಗಿಸುವ ಸಾಧ್ಯತೆಗಳ ಬಗ್ಗೆ ರೈತ ಸಮುದಾಯಕ್ಕೆ ಜಾಗೃತಿ ಮೂಡಿಸಬೇಕಾಗಿದೆ ಹಾಗೂ ರಸಗೊಬ್ಬರಗಳ ಕನಿಷ್ಠ ಬಳಕೆಯ ಪ್ರಯತ್ನಗಳನ್ನು ಸರ್ಕಾರ ಉತ್ತೇಜಿಸಬೇಕಾಗಿದೆ.

ಚಾವಡಿ



ಸಾಮಾಜಿಕ ಜ್ಞಾನ ಬೇಕು

ದಲಿತ ರಾಜಕಾರಣಿಗಳ ಸಾಫ್ಟ್ ಕಾರ್ನರ್ ಹಿಂದುತ್ವವೇ ದಲಿತರ ಸಾಮಾಜಿಕ ಶಕ್ತಿಗೆ ಕುಂದು ತರುತ್ತದೆ. 'ದಲಿತ ಹಿಂದೂ', 'ಹಿಂದೂ ದಲಿತ'– ಏನೀ ಅಪಕಲ್ಪನೆಗಳು? ಈ ದೇಶದಲ್ಲಿ ಸಂವಿಧಾನ ಹಾಗೂ ಅಂಬೇಡ್ಕರ್ ವರ್ಸಸ್ ಹಿಂದುತ್ವವಷ್ಟೇ ಇರುವುದು. ಇದರ ಅರಿವಿರದ ನಗರದ ದಲಿತ ರಾಜಕಾರಣಿಗಳು ಮೇಲ್ಜಾತಿಗಳ ಭ್ರಾಂತಿಯಲ್ಲಿ ಮಾತಾಡುತ್ತಾರೆ.

ಪ್ರಕಾಶ್ ಮಂಟೇದ, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ



ನಮ್ಮ ಹಿಂದಣ ಹೆಜ್ಜೆ ಗೊತ್ತಿಲ್ಲದೇ ಇರುವುದರಿಂದಲೇ ಸಾಂಸ್ಕೃತಿಕ ಗುಲಾಮಗಿರಿ ಮುಂದುವರಿದಿದೆ. ಚಾತುರ್ವರ್ಣ ನೀತಿಯ ಭಿನ್ನ ಭೇದ ಮುಂದುವರಿದಿದೆ. ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಸಮಾನತೆಯ ಕಸ ತಲೆಯಲ್ಲಿ ತುಂಬಿದೆ. ಯುವಪೀಳಿಗೆ ವಾಟ್ಸ್‌ಆ್ಯಪ್‌ನಲ್ಲಿ ಬಂದಿರುವುದನ್ನೇ ಸತ್ಯ ಎಂದು ನಂಬುತ್ತಿದ್ದಾರೆ.

ಎಸ್.ಜಿ. ಸಿದ್ಧರಾಮಯ್ಯ, ಸಾಹಿತಿ

25 ವರ್ಷಗಳ ಹಿಂದೆ

ಸೋಮವಾರ, 31-7-2000

• ಕಾಶ್ಮೀರ ಚರ್ಚೆಗೆ ಹಿಜಬುಲ್‌ನ ಮೂವರ ನಿಯೋಗ

ಇಸ್ಲಾಮಾಬಾದ್, ಜುಲೈ 30 (ಪಿಟಿಐ)– ಕಾಶ್ಮೀರದಲ್ಲಿ ಕದನ ವಿರಾಮ ಘೋಷಿಸಿ ಮಾತುಕತೆಗೆ ಮುಂದಾಗಿರುವ ಪಾಕಿಸ್ತಾನಿ ಮೂಲದ ಉಗ್ರಗಾಮಿ ಸಂಘಟನೆ ಹಿಜಬುಲ್ ಮುಜಾಹಿದ್ದೀನ್, ಭಾರತದ ಜತೆ ನವದೆಹಲಿಯಲ್ಲಿ ಮಾತುಕತೆ ನಡೆಸಲು ತನ್ನ ಮೂವರು ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮೂಲಕ ಶಾಂತಿ ಸಂಧಾನಕ್ಕೆ ದೃಢಹೆಜ್ಜೆ ಇಟ್ಟಿದೆ.

ಆದರೆ, ಉದ್ದೇಶಿತ ಮಾತುಕತೆಗೆ ಸಿದ್ಧವಾಗಲು ಗಡಿ ನಿಯಂತ್ರಣ ರೇಖೆಯ ಎರಡೂ ಕಡೆಗಿರುವ ತನ್ನ ನಾಯಕರನ್ನು ಭೇಟಿಯಾಗಿ ಮಾತುಕತೆಯ ವಿಧಿ ವಿಧಾನ ಮತ್ತು ಕಾರ್ಯತಂತ್ರದ ಬಗೆಗೆ ಪೂರ್ವಭಾವಿ ಚರ್ಚಿಸಲು ಭಾರತ ಅವಕಾಶ ಕಲ್ಪಿಸಿಕೊಡಬೇಕು ಎಂದು ಹಿಜಬುಲ್ ಮುಜಾಹಿದ್ದೀನ್ ಸಂಘಟನೆಯ ನಾಯಕ ಸಲಾಹುದ್ದೀನ್ ಇಂದು ರಾತ್ರಿ ತಿಳಿಸಿದರು.

75 ವರ್ಷಗಳ ಹಿಂದೆ

ಸೋಮವಾರ, 31-7-1950


• ಬಯಸಿದ್ದನ್ನೆಲ್ಲ ಹಣ ಕೊಡಿಸದು!

ಲಕ್ನೋ, ಜುಲೈ 30– ಉಕ್ಕಿನ ರಹದಾರಿಗಾಗಿ ಸರಬರಾಜು ಸಚಿವ ಸಿ.ಬಿ. ಗುಪ್ತ ಅವರಿಗೆ ರುಜು ಹಾಕಿದ ಖಾಲಿ ಚೆಕ್ಕನ್ನು ಕಳಿಸಿದ್ದ ಬಾರಾಬಂಕಿ ವರ್ತಕರೊಬ್ಬರು ಇಂದು ನ್ಯಾಯಾಸ್ಥಾನದಲ್ಲಿ ವಿಚಾರಣೆಗೊಳಗಾಗಿದ್ದಾರೆ.

ಈ ವರ್ತಕ ರಹದಾರಿಗೆ ಅರ್ಜಿ ಹಾಕಿದರಂತೆ. ವರ್ಷವಾದರೂ ಉತ್ತರ ಬರಲಿಲ್ಲ. ಆ ನಂತರ ಈತ ಸಹಿ ಹಾಕಿದ ಖಾಲಿ ಚೆಕ್ಕನ್ನು ಉತ್ತರ ಪ್ರದೇಶ ಸರ್ಕಾರದ ಹೆಸರಿಗೆ ಬರೆದು ಒಂದು ಪತ್ರವೊಂದಿಗೆ ಕಳಿಸಿದರಂತೆ.

ಸಚಿವರು ಈ ಸಂಗತಿಯನ್ನು ಪೊಲೀಸರಿಗೆ ತಿಳಿಸಿದರು.

ಸಂಗೀತಲೋಕದ 'ಶ್ರೀರಾಮ'



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್. ಗೋಪಿನಾಥ್

ಚೆನ್ನೈನ ಮ್ಯೂಸಿಕ್ ಅಕಾಡೆಮಿಯು ವಿದ್ವಾನ್ ಆರ್.ಕೆ. ಶ್ರೀರಾಮಕುಮಾರ್ ಅವರಿಗೆ 2025ರ ಸಾಲಿನ ಪ್ರತಿಷ್ಠಿತ ಸಂಗೀತ ಕಲಾನಿಧಿ ಪ್ರಶಸ್ತಿಯನ್ನು ಘೋಷಿಸಿದೆ. 59 ವರ್ಷ ವಯಸ್ಸಿನ ಶ್ರೀರಾಮಕುಮಾರ್ ಕೇವಲ ಪಿಟೀಲುವಾದಕರಷ್ಟೆ ಅಲ್ಲ, ಸಂಗೀತ ವಿದ್ವಾಂಸರೂ ಹೌದು; ಜೊತೆಗೆ ಬೇಡಿಕೆಯಲ್ಲಿರುವ ಪಕ್ಕವಾದ್ಯಗಾರ; ಅಪಾರ ಸಂಖ್ಯೆಯ ಶಿಷ್ಯರನ್ನು ಪಡೆದಿರುವ ಗುರುವೂ ಹೌದು.

ಶ್ರೀರಾಮಕುಮಾರ್ ನಮ್ಮ ರಾಜ್ಯದ ರುದ್ರಪಟ್ಟಣದವರು; ಕಾವೇರಿ ತೀರದಲ್ಲಿರುವ ಈ ಸುಂದರ ಹಳ್ಳಿ ಹಲವರು ಶಾಸ್ತ್ರೀಯ ಸಂಗೀತಗಾರರಿಗೆ ಜನ್ಮಕೊಟ್ಟು ಪೋಷಿಸಿರುವ ತೊಟ್ಟಿಲು.

'ನನ್ನ ಗುರುಗಳೇ ನನಗೆ ಒದಗಿದ ವರ' ಎಂದು ವಿನಯದಿಂದ ಸ್ಮರಿಸಿಕೊಳ್ಳುತ್ತಾರೆ, ಶ್ರೀರಾಮಕುಮಾರ್. ಸಾವಿತ್ರಿ ಸತ್ಯಮೂರ್ತಿ ಅವರಿಂದ ಆರಂಭಿಕ ಪಿಟೀಲು ಪಾಠಗಳು ನಡೆದವು. ಬಳಿಕ ತಮ್ಮ ಅಜ್ಜ ವೆಂಕಟರಾಮ ಶಾಸ್ತ್ರಿಗಳಿಂದ ಪಿಟೀಲು ವಾದನದ ಜೊತೆಗೆ ಗಾಯನದ ಶಿಕ್ಷಣವನ್ನೂ ಪಡೆದರು. ಸಂಗೀತ ಕಲಾನಿಧಿ ಡಿ.ಕೆ. ಜಯರಾಮನ್ ಮತ್ತು ಪ್ರಸಿದ್ಧ ಪಿಟೀಲು ವಾದಕ ವಿ.ವಿ. ಸುಬ್ರಹ್ಮಣ್ಯಂ ಅವರಿಂದ ಮುಂದಿನ ಪ್ರೌಢಪಾಠಗಳು ನಡೆದವು. ಅನಂತರದಲ್ಲಿ ಶೆಮ್ಮಂಗುಡಿ ಶ್ರೀನಿವಾಸ ಅಯ್ಯರ್, ಎಂ.ಎಸ್. ಸುಬ್ಬುಲಕ್ಷ್ಮಿ, ಡಿ.ಕೆ. ಪಟ್ಟಮ್ಮಾಳ್, ಕೆ.ವಿ. ನಾರಾಯಣಸ್ವಾಮಿ ಮತ್ತು ಟಿ.ಎನ್. ಕೃಷ್ಣನ್ ಅವರಂತಹ ದಿಗ್ಗಜಗಳಿಂದ ಸಂಗೀತ ಕಲೆಯ ಕಲಿಕೆಗೂ ಅನುಸಂಧಾನಕ್ಕೂ ಅವಕಾಶ ಒದಗಿತು.

ಪರಿಶುದ್ಧ ಜ್ಞಾನ ಮತ್ತು ಪರಂಪರೆಯಲ್ಲಿ ಶ್ರದ್ಧೆ, ಜೊತೆಗೆ ಗಾಢ ಸಂವೇದನೆ ಮತ್ತು ಸಮಗ್ರತೆ – ಇವು ಶ್ರೀರಾಮಕುಮಾರ್ ಸಂಗೀತದ ವೈಶಿಷ್ಟ್ಯಗಳು. ಅವರ ಸಂಗೀತ ಪ್ರಯಾಣದಲ್ಲಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಪ್ರಭಾವ ಹೆಚ್ಚು. ತಾಯಿಯ ಗರ್ಭದಲ್ಲಿರುವಾಗಲೇ ಎಂ.ಎಸ್. ಸಂಗೀತವನ್ನು ಕೇಳಿದವರು ಅವರು; ಎಂದರೆ, ಅವರ ತಾಯಿಯ ಸೀಮಂತದಲ್ಲಿ ಎಂ.ಎಸ್. ಹಾಡಿದ್ದರು. ಶ್ರೀರಾಮಕುಮಾರ್ ಅವರ ಅಜ್ಜ ವೆಂಕಟರಾಮ ಶಾಸ್ತ್ರಿ ಹಲವು ವರ್ಷಗಳ ಕಾಲ ಎಂ.ಎಸ್. ಅವರಿಗೆ ಪಿಟೀಲು ಪಕ್ಕವಾದ್ಯಗಾರರಾಗಿದ್ದರು. ಹೀಗಾಗಿ ಅವರ ಕುಟುಂಬದೊಂದಿಗೆ ಎಂ.ಎಸ್. ಅವರಿಗೆ ಆತ್ಮೀಯ ಸಂಬಂಧವಿತ್ತು. ಎಂ.ಎಸ್. ಅವರ ಕೊನೆಯ ದಿನದವರೆಗೂ ಶ್ರೀರಾಮಕುಮಾರ್ ಕೂಡ ಅವರ ಸಂಪರ್ಕದಲ್ಲಿದ್ದರು. ಅವರಿಂದ ಹಲವಾರು ಕೃತಿಗಳನ್ನು ಕಲಿತರು; ಅವರೊಂದಿಗೆ ಹಲವು ಕಛೇರಿಗಳ ಅಮೂಲ್ಯ ಅವಕಾಶವನ್ನೂ ಪಡೆದರು. ಎಂ.ಎಸ್. ಸಂಗೀತ ಮತ್ತು ವ್ಯಕ್ತಿತ್ವ –ಎರಡೂ ತಮ್ಮ ಸಂಗೀತದ ತಿಳಿವಳಿಕೆಯನ್ನೂ ಸೂಕ್ಷ್ಮತೆಯನ್ನೂ ಆಳವಾಗಿ ಪ್ರಭಾವಿಸಿ, ರೂಪಿಸಿರುವುದನ್ನು ಗೌರವದಿಂದ ಸ್ಮರಿಸಿಕೊಳ್ಳುತ್ತಾರೆ.

ಇನ್ನೂ ಹಲವರು ಶ್ರೇಷ್ಠ ಸಂಗೀತಗಾರರಿಂದಲೂ ಸಂಗೀತ ಕಲೆಯ ಶ್ರೇಷ್ಠ ಮೌಲ್ಯಗಳನ್ನು ಮೈಗೂಡಿಸಿಕೊಂಡ ಶ್ರೀರಾಮಕುಮಾರ್, ತಮ್ಮದೇ ಆದ ಒಂದು ವಿಶಿಷ್ಟ ಸ್ಥಾನವನ್ನೂ ಸಂಗೀತ ಲೋಕದಲ್ಲಿ ಪಡೆದುಕೊಂಡಿದ್ದಾರೆ.

ಕಳೆದ ವರ್ಷದ ಸಂಗೀತ ಕಲಾನಿಧಿ ಪ್ರಶಸ್ತಿಯಿಂದ ಪುರಸ್ಕೃತರಾದ ಟಿ.ಎಂ. ಕೃಷ್ಣ ಅವರೊಂದಿಗೆ ಶ್ರೀರಾಮಕುಮಾರ್ ಅನೇಕ ಸಂಗೀತ ಸಾಹಸಗಳಲ್ಲಿ ಸಹಕರಿಸಿದ್ದಾರೆ. ಶ್ರೀರಾಮ್‌ಗಿಂತ ಕೃಷ್ಣ ಹತ್ತು ವರ್ಷಗಳಷ್ಟು ಕಿರಿಯರು. ಕೃಷ್ಣ 12ನೇ ವಯಸ್ಸಿನಲ್ಲಿ ಮ್ಯೂಸಿಕ್ ಅಕಾಡೆಮಿಯಲ್ಲಿ ತಮ್ಮ ಮೊದಲ ಸಂಗೀತ ಕಛೇರಿಯನ್ನು ನೀಡಿದಾಗ, ಶ್ರೀರಾಮ್‌ಕುಮಾರ್ ಪಿಟೀಲು ಪಕ್ಕವಾದ್ಯದ ಸಹಕಾರವನ್ನು ನೀಡಿದ್ದರು.

ಸಂಪ್ರದಾಯವಾದಿ, ಧಾರ್ಮಿಕ ಶ್ರದ್ಧಾಳು ಮತ್ತು ಪರಂಪರೆಯಲ್ಲಿ ನಿಷ್ಠೆಯಿರುವ ಶ್ರೀರಾಮ್ ಅವರಿಗೂ ಅಸಾಂಪ್ರದಾಯಿಕ ಗಾಯಕ, ಪರಂಪರೆಯ ಭಂಜಕ, ಬಂಡಾಯಗಾರ, ಹೋರಾಟಗಾರ ಮತ್ತು ರಾಜಕೀಯ ವ್ಯಾಖ್ಯಾನಕಾರ ಕೃಷ್ಣ ಅವರಿಗೂ ಹೇಗಾದರೂ ಹೊಂದಾಣಿಕೆ ಸಾಧ್ಯವಾದೀತು ಎಂಬುದೇ ಹಲವರಿಗೆ ಕುತೂಹಲದ ವಿಷಯವಾಗಿದೆ.

ಶ್ರೀರಾಮ್ ಅವರೊಬ್ಬ ಪೂರ್ವಗ್ರಹವಿಲ್ಲದ ವ್ಯಕ್ತಿ. ಸಂಗೀತವನ್ನು ಕುರಿತಾದ ಕೃಷ್ಣ ಅವರ ಆಲೋಚನೆಗಳು ಹಾಗೂ ಕೆಳಜಾತಿಯವರನ್ನು ಗುರುತಿಸುವಲ್ಲಿ ಬ್ರಾಹ್ಮಣ್ಯದ ಪೂರ್ವಗ್ರಹಗಳು, ಮೇಲ್ಜಾತಿಗಳ ಪ್ರಾಬಲ್ಯವಿರುವ ಸಂಗೀತ ಸಭೆಗಳ ರಾಜಕೀಯ ಮತ್ತು ಅವುಗಳ ಗುಂಪುಗಾರಿಕೆ ಮುಂತಾದ ಅವರ ಆರೋಪಗಳ ಬಗ್ಗೆಯೂ ಕೃಷ್ಣ ಅವರೊಂದಿಗೆ ಶ್ರೀರಾಮ್ ಚರ್ಚೆಗಳಲ್ಲಿ ತೊಡಗಿದ್ದಾರೆ ಎಂದು ಅವರೇ ಹೇಳಿದ್ದಾರೆ. ಅವರು ಕೃಷ್ಣ ಅವರ ಹಲವು ಅಭಿಪ್ರಾಯಗಳನ್ನು ತೀವ್ರವಾಗಿಯೇ ವಿರೋಧಿಸಿದ್ದಾರೆ ಸಹ. ಎಲ್ಲ ಅನಿಷ್ಟಗಳಿಗೂ ಬ್ರಾಹ್ಮಣರನ್ನು ದೂಷಿಸುವುದು ಅನ್ಯಾಯವೇ ಹೌದು ಎಂದೂ ಪ್ರತಿಪಾದಿಸುತ್ತಾರೆ. ಹೀಗೆ ಇವರಿಬ್ಬರ ಅಭಿಪ್ರಾಯಗಳು ಸಂಪೂರ್ಣವಾಗಿ ವಿರುದ್ಧವಾಗಿದ್ದರೂ, ಈ ಚರ್ಚೆಗಳೂ ಎಂದಿಗೂ ವೈಯಕ್ತಿಕವಾಗುವುದಿಲ್ಲ; ಮಾತ್ರವಲ್ಲ, ಅವು ಎಂದಿಗೂ ದೀರ್ಘಕಾಲೀನ ಸ್ನೇಹಕ್ಕೆ ಮಾರಕವಾಗುವುದಿಲ್ಲ ಎಂದೂ ಅವರು ಹೇಳುತ್ತಾರೆ.

ಕೃಷ್ಣ ಅವರು ಸಾಂಪ್ರದಾಯಿಕ ಕ್ರಮವಾದ ವರ್ಣದ ಬದಲು ತಾನಂ ಅಥವಾ ವಿಳಂಬ ಕಾಲದ ಕೀರ್ತನೆ ಅಥವಾ ಆಲಾಪನೆಯೊಂದಿಗೆ ಕಛೇರಿಯನ್ನು ಆರಂಭಿಸುವುದು, ಪದ್ಯದೊಂದಿಗೆ ಅಥವಾ ಕನ್ನಯ್ಯ ಕುರಿತಾದ ಉರ್ದು ಗಜಲ್‌ನಿಂದ ಕಛೇರಿಯನ್ನು ಕೊನೆಗೊಳಿಸುವುದು ಸಂಪೂರ್ಣವಾಗಿ ಅಸಾಂಪ್ರದಾಯಿಕ ವಿಧಾನವೇ ಎಂದು ಕೇಳಿದಾಗ, ಶ್ರೀರಾಮ್ ಭಿನ್ನಸ್ವರದಲ್ಲಿ ಉತ್ತರಿಸುತ್ತಾರೆ. ಕಛೇರಿಯ ಕ್ರಮ ಅಸಾಂಪ್ರದಾಯಿಕವಾಗಿದ್ದರೂ, ಕೃಷ್ಣ ಅವರ ಗಾಯನ ಅಥವಾ ಮನೋಧರ್ಮಗಳು ಕರ್ನಾಟಕ ಶಾಸ್ತ್ರೀಯ ಸಂಗೀತದ ಸಮಗ್ರತೆಯನ್ನೇ ಎತ್ತಿಹಿಡಿಯುತ್ತವೆ ಎನ್ನುತ್ತಾರೆ. ಸಂಗೀತದಲ್ಲಿ ಕೃಷ್ಣ ತಾವೂ ತಲ್ಲೀನರಾಗುತ್ತಾರೆ, ಪಕ್ಕವಾದ್ಯಗಾರರೂ ಕೇಳುಗರೂ ತಲ್ಲೀನತೆಯನ್ನು ಸಾಧಿಸುತ್ತಾರೆ; ಆ ಸಂಗೀತ ಸಹೃದಯರನ್ನು ಅಲೌಕಿಕ ಸ್ಥಿತಿಗೆ ಒಯ್ದಿದೆ ಎನ್ನುವುದಕ್ಕೆ ಸಾಕ್ಷಿಯಾಗಿ ಅವರ ಕೆನ್ನೆಗಳ ಮೇಲೆ ಆನಂದಬಾಷ್ಪಗಳು ಇಳಿಯುತ್ತಿರುತ್ತವೆ.

> ಚೆನ್ನೈ ಮ್ಯೂಸಿಕ್ ಅಕಾಡೆಮಿಯ 2025ರ ಸಾಲಿನ 'ಸಂಗೀತ ಕಲಾನಿಧಿ' ಪ್ರಶಸ್ತಿಗೆ ಪಾತ್ರರಾಗಿರುವ ಶ್ರೀರಾಮಕುಮಾರ್, ನಮ್ಮ ಕಾವೇರಿತೀರದವರು. ಸಂತೋಷ ಹಾಗೂ ಶಾಂತಿಯ ಅಭಿವ್ಯಕ್ತಿಯ ರೂಪದಲ್ಲಿ ಕಲೆಯನ್ನು ನೆಚ್ಚಿಕೊಂಡಿರುವ ಅವರು, ಭಿನ್ನಮತಗಳ ಬಗ್ಗೆ ಸೈರಣೆಯುಳ್ಳ ಮುಕ್ತ ಮನಸ್ಸಿನ ಸಂಗೀತ ಸಾಧಕ.

ಸಂಗೀತ, ಸಾಹಿತ್ಯ, ಚಿತ್ರಕಲೆ ಅಥವಾ ಶಿಲ್ಪಕಲೆ – ಯಾವುದೇ ಕಲಾಪ್ರಕಾರ ಮತ್ತು ಕಲಾವಿದ ಎಂತಹ ನಿರ್ಬಂಧಗಳ ನಡುವೆಯೂ ಹೊಸತನವನ್ನು ಕಂಡುಕೊಳ್ಳಲು ತವಕಿಸುವುದು ಸಹಜ. ಹಲವು ಶ್ರೇಷ್ಠ ನಾಗರಿಕತೆಗಳಲ್ಲಿ ಹಲವರು ಮಹಾಕಲಾವಿದರು ಹಲವಾರು ಮೇರುಕೃತಿಗಳನ್ನು ರಚಿಸಿದ್ದಾರೆ. ಮಹಾಕಾವ್ಯಗಳು, ಕಾದಂಬರಿಗಳು, ಸಂಗೀತ, ದೇವಾಲಯಗಳು, ಕೋಟೆಗಳು, ಪಿರಮಿಡ್‌ಗಳು, ವರ್ಣಚಿತ್ರಗಳು, ಕಂಚಿನ ಮೂರ್ತಿಗಳು, ಪಿಂಗಾಣಿ ವಸ್ತುಗಳು ಮತ್ತು ಮೂರ್ತಿಶಿಲ್ಪಗಳಂಥ ಕಲಾಕೃತಿಗಳಿಂದ ಸಮೃದ್ಧವಾಗಿವೆ. ಈಜಿಪ್ಟ್‌ನ ಪಿರಮಿಡ್‌ಗಳು, ರೋಮ್‌ನ ಕೊಲೋಸಿಯಮ್, ನಮ್ಮ ಚೋಳ, ಹೊಯ್ಸಳ ಮತ್ತು ವಿಜಯನಗರ ದೇವಾಲಯಗಳು ಅಥವಾ ತಾಜ್‌ಮಹಲ್ –ಇವೆಲ್ಲವೂ ಮಹಾಪ್ರತಿಭೆಗಳ ಫಲಗಳೇ. ಆದರೆ ಅವುಗಳನ್ನು ಗುಲಾಮರ ಬೆವರಿನಿಂದಲೋ ರಕ್ತದಿಂದಲೂ ನಿರ್ಮಿಸಿರಬಹುದು; ಅವರ ಹೆಸರುಗಳೂ ನಮಗೆ ತಿಳಿದಿಲ್ಲ. ಆದರೆ ಬಿಥೋವನ್ ಮತ್ತು ತ್ಯಾಗರಾಜರ ಸಂಗೀತ, ಮೈಕೆಲ್ಯಾಂಜೆಲೊ ಅವರ ಶಿಲ್ಪಗಳು, ಲಿಯೊನಾರ್ಡೊ ಡ ವಿಂಚಿಯ ವರ್ಣಚಿತ್ರಗಳು, ಷೇಕ್ಸ್‌ಪಿಯರ್ ಮತ್ತು ಕಾಳಿದಾಸರ ನಾಟಕಗಳು ಆಯಾ ಕರ್ತೃಗಳ ಹೆಸರಿನಿಂದಲೇ ಪ್ರಸಿದ್ಧಿಯನ್ನು ಪಡೆದಿವೆ. ಎಲ್ಲಿಯವರೆಗೂ ತಮ್ಮ ಕಾಲದ ರಾಜರು ಮತ್ತು ನಿರಂಕುಶಾಧಿಕಾರಿಗಳ ವಿರುದ್ಧ ದಂಗೆ ಏಳುತ್ತಿರಲಿಲ್ಲವೋ ಅಲ್ಲಿಯವರೆಗೂ ಪ್ರಾಚೀನ ಕಾಲದ ಕಲಾವಿದರಿಗೆ ಅಭಿವ್ಯಕ್ತಿಯ ಸ್ವಾತಂತ್ರ್ಯ ಇರುತ್ತಿತ್ತು.

'ಬಲ' ಮತ್ತು 'ಎಡ' ಎಂಬ ಸರ್ವಾಧಿಕಾರಿ ಆಡಳಿತಗಳ ನೂತನ ಯುಗದಲ್ಲಿ ಪ್ರಪಂಚದಾದ್ಯಂತ ನಿರಂಕುಶಾಧಿಕಾರಿಗಳು ಜನರನ್ನು ಕಬ್ಬಿಣದ ಮುಷ್ಟಿಯಿಂದ ಆಳುತ್ತಿದ್ದಾರೆ. ಮೆಷಿನ್ ಗನ್‌ಗಳನ್ನು ಹಿಡಿದು ಸಮವಸ್ತ್ರವನ್ನು ಧರಿಸಿರುವವರು ಇವರ ಆದೇಶ ಪಾಲನೆಗಾಗಿ ಕಾಯುತ್ತಿರುತ್ತಾರೆ. ಇವರ ಸೇವೆಗಾಗಿ ಕೋಟ್ಯಧಿಪತಿಗಳು, ದೊಡ್ಡ ದೊಡ್ಡ ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಬಲ್ಲ ತಂತ್ರಜ್ಞಾನಿಗಳು ಕೂಡ ಸಿದ್ಧರಿರುತ್ತಾರೆ. 'ಗುಲಾಮಗಿರಿಯೇ ಶ್ರೀರಕ್ಷೆ' ಎಂಬ ನಂಬಿಕೆಯನ್ನು ಜನರಲ್ಲಿ ಬಿತ್ತುವಲ್ಲಿ ಈ ಪುಢಾರಿಗಳು ಯಶಸ್ವಿಯಾಗಿದ್ದಾರೆ.

ಆದರೆ, ಅನ್ನದ ಬಳಿಕ ಮನುಷ್ಯನ ಎರಡನೆಯ ಆದ್ಯತೆಯೇ ಸ್ವಾತಂತ್ರ್ಯ. ಹೀಗಾಗಿ ಸ್ವಾತಂತ್ರ್ಯದ ಜ್ವಾಲೆ ಹಲವರನ್ನು, ಬೆಂಕಿಯು ಪತಂಗಗಳನ್ನು ಆಕರ್ಷಿಸುವಂತೆ ಸೆಳೆಯುತ್ತಲೇ ಇರುತ್ತದೆ. ಕಲೆ ಫಲವತ್ತಾಗಬೇಕಾದರೆ ಅದು ಜನಸಾಮಾನ್ಯರ ಸಂತೋಷ ಮತ್ತು ದುಃಖಗಳಿಂದ ತನ್ನ ಪೋಷಣೆ ಮತ್ತು ಸ್ಫೂರ್ತಿಯನ್ನು ಪಡೆಯಬೇಕು. ಕಲಾವಿದನೂ ಮಾನವೀಯತೆಯ ಶಾಶ್ವತ ಸಂವೇದನೆಗಳ ಬಗ್ಗೆ ಅಗಾಧವಾದ ನಿಷ್ಠೆಯನ್ನು ಹೊಂದಿರಬೇಕು.

ಶೋಷಣೆ, ಅನ್ಯಾಯ, ತಾರತಮ್ಯ, ದುರ್ಬಲರ ಮತ್ತು ನಿರ್ಗತಿಕರ ವಿರುದ್ಧದ ಕ್ರೌರ್ಯಗಳ ಜಗತ್ತಿನ ಕಡೆಗೆ ಮುಖ ಮಾಡಿರುವ ಕಲಾವಿದ ತಾನು ಮೌನವಾಗಿರಬೇಕೆ ಅಥವಾ ಇವುಗಳ ಬಗ್ಗೆ ದನಿ ಎತ್ತಬೇಕೆ ಎಂಬುದರ ಆಯ್ಕೆಯನ್ನು ಅವನೇ ಮಾಡಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಅವನು ದನಿಯಿಲ್ಲದವರ ಪರವಾಗಿ ಮಾತನಾಡಲು ನಿರ್ಧರಿಸಿ, ವ್ಯವಸ್ಥೆಯ ಅವ್ಯವಹಾರಗಳ ಸುಳಿಗೆ ಸಿಲುಕಿದರೆ, ಆಗ ಸೃಜನಶೀಲತೆಗೆ ಅವಶ್ಯಕವಾಗಿರುವ ಏಕಾಂತದಿಂದ ಅವನು ವಂಚಿತನಾಗಬೇಕಾಗುತ್ತದೆ.

ಕೆಲವರು ಆಟವನ್ನು ಹೊರಗಿನಿಂದ ನೋಡುವವರಂತೆ ಇಂಥ ವಿದ್ಯಮಾನಗಳಿಗೆ ಕೇವಲ ಪ್ರೇಕ್ಷಕರಾಗಿರುತ್ತಾರಷ್ಟೆ. ಕಲಾವಿದರಾಗಿ ದಂತಗೋಪುರದಲ್ಲಿ ಆಶ್ರಯ ಪಡೆಯುವುದನ್ನೇ ತಮ್ಮ ಹಕ್ಕು ಎಂದೂ ಅವರು ಭಾವಿಸಿಕೊಂಡಿರುತ್ತಾರೆ. ಕೇವಲ ಪರಿಶುದ್ಧ ಕಲ್ಪನೆಯಿಂದ ಮಾತ್ರವೇ ಹುಟ್ಟಿದ ಅಂತಹ ಕಲೆ ಜಡವೂ ಬರಡೂ ಆಗಿರಬಹುದಷ್ಟೆ.

ಕಲಾಸೇವೆ ಎಂದರೆ ಸೌಂದರ್ಯಕ್ಕೂ ದುಃಖಕ್ಕೂ ಸೇವೆ ಸಲ್ಲಿಸುವುದು ಎಂದು ಆಲ್ಬರ್ಟ್ ಕಮೂ ಹೇಳಿದಂತೆ, ಕೃಷ್ಣ ಅವರಂತಹ ಕೆಲವು ಕಲಾವಿದರು ಅನ್ಯಾಯಕ್ಕೆ ಒಳಗಾದವರ ಮತ್ತು ಶೋಷಿತರ ಪರವಾಗಿ ನಿಲ್ಲಬೇಕು ಎಂದು ಸಹಜವಾಗಿಯೇ ಭಾವಿಸುತ್ತಾರೆ.

ಕಲಾವಿದನೊಬ್ಬ ಹೋರಾಟಗಾರನಾಗಿಯೂ ಗುರುತಿಸಿಕೊಳ್ಳುವುದರ ಬಗ್ಗೆ ಶ್ರೀರಾಮಕುಮಾರ್ ಅವರ ಅಭಿಪ್ರಾಯಗಳ ಬಗ್ಗೆ ಕೇಳಿದಾಗ, ಅವರ ನಿಲುವಿನ ಬಗ್ಗೆ ಅವರಿಗೆ ಸ್ವಲ್ಪವೂ ಅಸ್ಪಷ್ಟತೆಯಿರಲಿಲ್ಲ. ಯಾರಿಗೆ ಹೋರಾಟದತ್ತ ಸೆಳೆತ ಇದೆಯೋ ಅವರು ಹಾಗೆ ಮಾಡಬಹುದು ಎನ್ನುತ್ತಾರೆ. ತಮ್ಮ ತಮ್ಮ ಇಚ್ಛೆಯ ಪ್ರಕಾರ ನಡೆಯುವ ಮೂಲಕ ಪ್ರತಿಯೊಬ್ಬರೂ ಸಮಾಜಕ್ಕೆ ಸೇವೆಯನ್ನು ಸಲ್ಲಿಸಬಹುದು ಎಂಬ ದೃಢ ನಂಬಿಕೆಯೂ ಅವರಲ್ಲಿತ್ತು. ಉತ್ಸಾಹ, ಶ್ರದ್ಧೆ ಮತ್ತು ಸಮರ್ಪಣೆಗಳಿಂದ ಕೂಡಿದ ಕಲೆ ಜಗತ್ತಿಗೆ ಸಂತೋಷವನ್ನೂ ಶಾಂತಿಯನ್ನೂ ತರುತ್ತದೆ ಎಂಬ ವಿಶ್ವಾಸ ಅವರದ್ದು: 'ದೇವರು ನನಗೆ ನಿರ್ದೇಶಿಸಿದ ದಾರಿಯಲ್ಲಿ ಸಾಗಬೇಕು; ಅವನ ಆಜ್ಞೆಯನ್ನು ಪಾಲಿಸಬೇಕು.'

'ಸರತಿಯಲ್ಲಿ ಸಾವಧಾನವಾಗಿ ನಿಂತವರಿಗೂ ಅವಕಾಶ ನಿಶ್ಚಿತ' ಎಂಬ ಜಾನ್ ಮಿಲ್ಟನ್‌ನ ಮಾತಿಗೆ ಪ್ರಚಾರದಿಂದ ವಿಮುಖರೂ ನಿಸ್ಪೃಹರೂ ಆಗಿರುವ ಸಂಗೀತ ಕಲಾನಿಧಿ ಶ್ರೀರಾಮಕುಮಾರ್ ಸಾಕ್ಷಿಯಾಗಿದ್ದಾರೆ.

ವಾಚಕರ ವಾಣಿ

'ಆಯುಷ್'ಗೆ ಕಾಯಂ ನಿರ್ದೇಶಕರಿಲ್ಲ

ಎರಡು ದಶಕಗಳಿಂದ ರಾಜ್ಯ ಆಯುಷ್ ಇಲಾಖೆಗೆ ಕಾಯಂ ನಿರ್ದೇಶಕರೇ ಇಲ್ಲ. ಪರಿಸ್ಥಿತಿ ಹೀಗಿರುವಾಗ ಜನರ ಕೆಲಸಗಳು ಹೇಗೆ ನಡೆಯುತ್ತವೆ? ತಾತ್ಕಾಲಿಕವಾಗಿ ಒಬ್ಬರಾದ ಮೇಲೆ ಒಬ್ಬರಂತೆ ನಿರ್ದೇಶಕರ ಹುದ್ದೆಯಲ್ಲಿ ಕೂರುವ ಅಧಿಕಾರಿಗಳಿಂದ ಏನನ್ನು ನಿರೀಕ್ಷಿಸಲು ಸಾಧ್ಯ. ಸರ್ಕಾರವೇ ಕಣ್ಣುಮುಚ್ಚಿ ಕುಳಿತರೆ, ಇಲಾಖೆಯ ಪ್ರಗತಿ ಕಷ್ಟಸಾಧ್ಯ. ಇಲಾಖೆಯು ಪರಭಾರೆ ಆಗುತ್ತಿರುವಾಗ, ವಿಧಾನಸೌಧದ ಮುಂಭಾಗ ಉಪವಾಸ ಕುಳಿತು, ಸ್ವತಂತ್ರ ಆಯುಷ್ ಇಲಾಖೆಯನ್ನು ಪಡೆಯಲು ಹೋರಾಟ ಮಾಡಿದವರ ಹೊಟ್ಟೆ ಉರಿಯುವುದು ಯಾರಿಗೂ ಕಾಣುವುದಿಲ್ಲ.

ಡಾ. ಈಶ್ವರ ಶಾಸ್ತ್ರಿ ಮೋಟಿನಸರ, ಶಿರಸಿ

ಶಿಕ್ಷಕರ ನೇಮಕಾತಿ ಎಂದು?

ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಹುದ್ದೆಗಳಿಗೆ ಶೀಘ್ರವೇ 25 ಸಾವಿರಕ್ಕೂ ಹೆಚ್ಚು ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಶಿಕ್ಷಣ ಸಚಿವರು ಆಗಾಗ್ಗೆ ಕಾರ್ಯಕ್ರಮಗಳಲ್ಲಿ ಹೇಳುವುದು ವರದಿ ಆಗುತ್ತಿದೆ. ಆದರೆ, ಪ್ರತಿ ವರ್ಷ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವುದು ಮುಂದುವರಿದಿದೆ. ಗ್ರಾಮೀಣ ಶಾಲೆಗಳಲ್ಲಿ ಇಂಗ್ಲಿಷ್, ವಿಜ್ಞಾನ, ಗಣಿತ, ದೈಹಿಕ ಶಿಕ್ಷಣ ಶಿಕ್ಷಕರ ಕೊರತೆ ಇದೆ. ಇದರಿಂದ ಪೋಷಕರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿದ್ದಾರೆ. ತ್ವರಿತವಾಗಿ ಶಿಕ್ಷಕರ ನೇಮಕಾತಿ ಪ್ರಕ್ರಿಯೆಗೆ ಸರ್ಕಾರ ಚಾಲನೆ ನೀಡಬೇಕಿದೆ.

ರವಿ ಎಸ್.ಎಂ., ಮೈಸೂರು

ಸಿನಿಮಾ ಯಶಸ್ಸಿನ ಸೂತ್ರ ಯಾವುದು?

'ಸು ಫ್ರಮ್ ಸೋ' ಕನ್ನಡ ಸಿನಿಮಾ ಭರ್ಜರಿ ಪ್ರದರ್ಶನ ಕಾಣುತ್ತಿದೆ. ದೊಡ್ಡ ಬಜೆಟ್‌ನ ಪರಭಾಷಾ ಚಿತ್ರಗಳಿಗೆ ಸಡ್ಡು ಹೊಡೆದು ಮುನ್ನುಗ್ಗುತ್ತಿದ್ದು, ಚಂದನವನಕ್ಕೆ ಉತ್ಸಾಹ ತುಂಬಿದೆ. ದುಬಾರಿ ಸಂಭಾವನೆ ಪಡೆಯುವ ಯಶಸ್ವಿ ನಟ, ನಟಿಯರು, ತಂತ್ರಜ್ಞರು ಇರುವ ಸಿನಿಮಾಗಳಷ್ಟೇ ಗಲ್ಲಾಪೆಟ್ಟಿಗೆಯಲ್ಲಿ ಗೆಲ್ಲುತ್ತವೆ ಎಂಬ ಮಾತನ್ನು ಹುಸಿಗೊಳಿಸಿದೆ. ಇನ್ನಾದರೂ ಕನ್ನಡದ ನಿರ್ದೇಶಕರು, ನಿರ್ಮಾಪಕರು ಒಳ್ಳೆಯ ಕಥೆಗಳಿಗೆ ಆದ್ಯತೆ ನೀಡುವಂತಾಗಲಿ. ಮನೆಮಂದಿಯೆಲ್ಲ ಕುಳಿತು ವೀಕ್ಷಿಸುವಂತಹ ಚಿತ್ರ ನಿರ್ಮಿಸಲಿ. ಚಿತ್ರಮಂದಿರದಲ್ಲಿ ಪ್ರೇಕ್ಷಕ ತನ್ನನ್ನು ತಾನು ಮರೆತು ಕೆಲ ಸಮಯ ನಗು ನಗುತ್ತಾ ಕಾಲ ಕಳೆಯುವುದೇ ಚಿತ್ರದ ಬಹುದೊಡ್ಡ ಯಶಸ್ಸು. ಚಿತ್ರ ನಿರ್ಮಾಣಕ್ಕೆ ಮಾಡುವ ದುಂದು ವೆಚ್ಚ ಕಡಿಮೆಯಾದರೆ ಟಿಕೆಟ್ ದರವೂ ತಂತಾನೇ ಕಡಿಮೆಯಾಗುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಭ್ರಷ್ಟಾಚಾರಕ್ಕೆ ಕಡಿವಾಣ ಬೀಳಲಿ

ದೇಶದ ಸಂಪತ್ತನ್ನು ಸೂರೆ ಮಾಡುವವರಲ್ಲಿ ರಾಜಕಾರಣಿಗಳಷ್ಟೇ ಅಲ್ಲ, ಸರ್ಕಾರಿ ಇಲಾಖೆಯ ಉನ್ನತ ಅಧಿಕಾರಿಗಳ ಪಾಲೂ ಇದೆ. ಐ.ಟಿ, ಇ.ಡಿ, ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದಾಗ ಭ್ರಷ್ಟ ಅಧಿಕಾರಿಗಳು ಸಂಪಾದಿಸಿರುವ ಅಕ್ರಮ ಸಂಪತ್ತಿನ ಅನಾವರಣವಾಗುತ್ತದೆ. ಅದು ಮಾಧ್ಯಮಗಳಲ್ಲಿ ದೊಡ್ಡದಾಗಿ ಸುದ್ದಿಯಾಗುತ್ತದೆ. ಬಳಿಕ ಆ ಪ್ರಕರಣ ಏನಾಯಿತು ಎಂಬುದೇ ಜನರಿಗೆ ತಿಳಿಯುವುದಿಲ್ಲ.

ವಿದೇಶಿ ಆಕ್ರಮಣಕಾರರು ದೇಶವನ್ನು ಲೂಟಿ ಹೊಡೆದ ಇತಿಹಾಸವನ್ನು ಶಾಲಾಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯವಾಗಿ ಬೋಧಿಸಲಾಗುತ್ತದೆ. ಸ್ವಾತಂತ್ರ್ಯ ನಂತರ ದೇಶದ ಸಂಪತ್ತನ್ನು ಲೂಟಿ ಮಾಡುತ್ತಿರುವ ಭ್ರಷ್ಟ ಅಧಿಕಾರಿಗಳಿಗೆ ಕಡಿವಾಣ ಹಾಕುವವರು ಯಾರು ಎನ್ನುವುದು ಉತ್ತರ ದೊರಕದೆ ಉಳಿದ ಪ್ರಶ್ನೆಯಾಗಿದೆ.

ಮಹಾಂತೇಶ ಬೇತೂರು, ದಾವಣಗೆರೆ

ಮುಟ್ಟು: ಪರ್ಯಾಯ ಪದ ಅಗತ್ಯ

'ಮುಟ್ಟು: ಮೂಢನಂಬಿಕೆ ಕೊನೆಯಾಗಲಿ' ಲೇಖನವು (ಲೇ: ರಾಜಕುಮಾರ ಕುಲಕರ್ಣಿ, ಪ್ರ.ವಾ., ಜುಲೈ 29) ಮೌಢ್ಯದ ಬಗ್ಗೆ ಬೆಳಕು ಚೆಲ್ಲಿದೆ. ಆದರೆ, 'ಮುಟ್ಟು' ಎಂಬ ಪದ ಸಕಾರಾತ್ಮಕ ಅರ್ಥ ಕಳೆದುಕೊಂಡಿದೆ; ಮುಟ್ಟಿಸಿಕೊಳ್ಳದಿರುವ, ಹೊರಗಿಡುವ, ಮೌಢ್ಯವನ್ನು ಸಮರ್ಥಿಸುವ ಹೀನಾರ್ಥ ಪಡೆದುಕೊಂಡಿದೆ. ಈ ಮೌಢ್ಯದ ವಿರುದ್ಧ ಜಾಗೃತಿಯ ಆರಂಭಿಕ ಹೆಜ್ಜೆಯಾಗಿ 'ಮುಟ್ಟು' ಪದವನ್ನೇ ಬಳಸದಿರುವ ಬಗ್ಗೆ ಯೋಚಿಸುವುದು ಉತ್ತಮ. ಈ ಪದಕ್ಕೆ ಬದಲಾಗಿ ಮಾಸಿಕ ಋತುಸ್ರಾವ, ರಜಸ್ವಾಲೆ ಪದಗಳನ್ನು ಬಳಸಬಹುದು. ಆ ಮೂಲಕ, ನಿಸರ್ಗ ಸಹಜ ಜೈವಿಕ ಪ್ರಕ್ರಿಯೆಯೊಂದನ್ನು ಹೊರಗಿಡುವುದರ ಬದಲಾಗಿ ಒಳಗೊಳ್ಳುವುದರತ್ತ ಮೊದಲ ಹೆಜ್ಜೆ ಇಡೋಣ.


ಜ್ಯೋತಿಕುಮಾರಿ ಕೆ.ವಿ., ಶಿವಮೊಗ್ಗ

ಮೇಲ್ಸೇತುವೆ ನಿರ್ಮಾಣವೇ ಪರಿಹಾರ

ಪ್ರತಿ ವರ್ಷವೂ ತುಂಗಭದ್ರಾ ಜಲಾಶಯದಿಂದ ಅಪಾರ ಪ್ರಮಾಣದ ನೀರು ಬಿಡುಗಡೆಯಾದಾಗ ಕಂಪ್ಲಿ– ಗಂಗಾವತಿ ನಡುವಿನ ಸಂಪರ್ಕ ಕಡಿತಗೊಳ್ಳುತ್ತದೆ. ನೀರಿನ ಹರಿವಿನ ಪ್ರಮಾಣ ಕಡಿಮೆಯಾದ ನಂತರ ಯಥಾಪ್ರಕಾರ ಸಂಪರ್ಕ ಶುರುವಾಗುತ್ತದೆ. ನದಿ ಪಾತ್ರದ ಮನೆಗಳ ಬಳಿ ವಿಷಜಂತುಗಳ ದರ್ಶನ, ಕೋಟೆ ಪ್ರದೇಶದ ಹೊಳೆ ಆಂಜನೇಯ ದೇವಸ್ಥಾನಕ್ಕೆ ನೀರು ನುಗ್ಗುವುದು, ಕೋಟೆ ಬಳಿಯ ಸ್ಮಶಾನದ ಹಾದಿ ಜಲಾವೃತ, ಯುವಜನರ 'ಸೆಲ್ಫಿ ಹುಚ್ಚಾಟ' ಇತ್ಯಾದಿ ಸುದ್ದಿಗಳನ್ನು ಬಾಲ್ಯದಿಂದಲೂ ಪತ್ರಿಕೆಗಳಲ್ಲಿ ಓದುತ್ತಿದ್ದೇನೆ. ಇಷ್ಟೆಲ್ಲಾ ಸಮಸ್ಯೆಗಳಿಗೆ ಕಾರಣವಾಗುವ ಕೆಳಸೇತುವೆಯ ಜೊತೆ ಜೊತೆಗೆ ಎತ್ತರದ, ಸರ್ವಋತು ಮತ್ತು ಶಾಶ್ವತವಾದ ಮೇಲ್ಸೇತುವೆ ನಿರ್ಮಾಣದತ್ತ ಸರ್ಕಾರ ಗಮನಹರಿಸದಿರುವುದು ಸೋಜಿಗವೇ ಸರಿ.

ಪರಮೇಶ್ವರ ಜೆ.ಎಂ., ಸಂಡೂರು

ಚುರುಮುರಿ



ಜನರಿಗೆ ಪ್ರವೇಶವಿಲ್ಲ!

• ಗುರು ಪಿ.ಎಸ್.

ಕಾಡಿನ ಪ್ರಾಣಿಗಳೆಲ್ಲ ಸಭೆ ಸೇರಿ ಗುಸು ಗುಸು ಮಾತನಾಡುತ್ತಲೇ ಇದ್ದವು.

'ಸದ್ದು...' ರಾಜಗಾಂಭೀರ್ಯದಲ್ಲಿ ಬಂದು ಕುಳಿತು ಗರ್ಜಿಸಿತು ಸಿಂಹ.

ಪ್ರಾಣಿಗಳು ಸೈಲೆಂಟ್ ಆದವು. 'ಇಂದಿನ ಸಭೆಯ ಅಜೆಂಡಾ ಏನು' ಕೇಳಿತು ಕಾಡಿನ ರಾಜ.

'ಕರ್ನಾಟಕ ಸರ್ಕಾರದ ನಿರ್ಧಾರ ಕುರಿತು ಚರ್ಚಿಸುವುದು ಮಹಾರಾಜ' ವಿನಯದಿಂದ ಹೇಳಿತು ಜಿಂಕೆ.

'ಸರ್ಕಾರದ ನಿರ್ಧಾರವೇ? ಏನಂತೆ ಅವರದು?'

'ದನ–ಕರುಗಳನ್ನು ಕಾಡಿನೊಳಗೆ ಬಿಡಬಾರದು ಎಂದು ಆದೇಶ ಹೊರಡಿಸಿದ್ದಾರೆ ಪ್ರಭು'.

'ಜಾನುವಾರುಗಳು ಯಾಕ್ ಬರಬಾರದಂತೆ?'

'ನಮ್ಮ ರಕ್ಷಣೆಗೆ, ಅಂದ್ರೆ ಕಾಡು ಮತ್ತು ಕಾಡಿನ ಪ್ರಾಣಿಗಳನ್ನು ಕಾಪಾಡುವ ಉದ್ದೇಶವಂತೆ ರಾಜ'.

ಜೋರಾಗಿ ನಕ್ಕ ಸಿಂಹ, 'ದನ–ಕರುಗಳು ಕಾಡಿನೊಳಗೆ ಬಂದರೆ ನಮಗೆ ಭಯವಿಲ್ಲ, ಈ ಜನ–ಪ್ರಭುಗಳು ಅರಣ್ಯದೊಳಗೆ ಬಂದರೆ ನಮಗೆ ಆತಂಕ' ಎಂದಿತು.

'ಹೌದು, ದನಗಳು ಬಂದರೆ ಏನೋ ಒಂದಿಷ್ಟು ಹುಲ್ಲು ತಿಂದು ಹೋಗುತ್ತವೆ. ಆದರೆ, ಈ ಜನಗಳು ಬಂದರೆ ಕಾಡನ್ನೇ ನುಂಗಿಬಿಡ್ತಾರೆ' ಗಂಭೀರವಾಗಿ ಹೇಳಿತು ಆನೆ.

ಸಭೆಯಲ್ಲಿ ಮತ್ತೆ ಗುಸುಗುಸು ಆರಂಭವಾಯಿತು.

'ಸದ್ದು..! ಏನದು ಗುಸುಗುಸು' ಎಂದಿತು ಸಿಂಹ.

'ಪ್ರಭು, ಇಲ್ಲಿ ಭಿನ್ನಮತೀಯ ಚಟುವಟಿಕೆ ನಡೆಯುತ್ತಿದೆ' ಎಂದಿತು ಜಿಂಕೆ.

'ಏನಂತೆ ವಿಷಯ?'

'ಈ ಕಾಡಿನ ಅಭಿವೃದ್ಧಿಗೆ ನಿಮಗಿಂತ ಮಂತ್ರಿ ಹುಲಿಯದ್ದೇ ಹೆಚ್ಚಿನ ಕೊಡುಗೆ ಇದೆಯಂತೆ. ಹಾಗಂತ ಮರಿ ಹುಲಿ ಹೇಳಿಕೊಂಡು ಓಡಾಡುತ್ತಿದೆ.

ಸಿಂಹ ಏನೂ ಪ್ರತಿಕ್ರಿಯಿಸಲಿಲ್ಲ. ಆದರೆ, ನಗುತ್ತಾ ಆನೆ ಹೇಳಿತು, 'ರಾಜ ರಾಜನೇ, ಮಂತ್ರಿ ಮಂತ್ರಿಯೇ'.

'ಅನಗತ್ಯ ಚರ್ಚೆ ಬೇಡ. ದನಗಳು ಬರಬಹುದು. ಆದರೆ, ಪ್ರಭಾವಿ ಜನಗಳಿಗೆ ಈ ಕಾಡಿನೊಳಗೆ ಪ್ರವೇಶವಿಲ್ಲ ಎಂದು ಅರಣ್ಯದ ಮುಂದೆ ಬೋರ್ಡ್ ಹಾಕಿ' ಎಂದು ಪುನರುಚ್ಚರಿಸಿದ ಸಿಂಹ ಎದ್ದು ಹೊರಟಿತು.

ಸಂಗತ

ಕ್ವಾಂಟಮ್ ವಿಜ್ಞಾನದ ಬೆಳಕಿನಲ್ಲಿ...

ಬದುಕನ್ನು ಆವರಿಸಿಕೊಂಡಿರುವ ವಿಜ್ಞಾನ– ತಂತ್ರಜ್ಞಾನದ ಸಲಕರಣೆಗಳು, 'ಕ್ವಾಂಟಮ್ ವಿಜ್ಞಾನ'ದ ಸ್ಪರ್ಶದಿಂದ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬಲ್ಲವು.

• ಶ್ರೀಗುರು

ಅಡುಗೆ ಮನೆಯ ಲೈಟರ್‌ನಿಂದ ಹಿಡಿದು ಸಂಕೀರ್ಣ ವೈದ್ಯಕೀಯ ಚಿಕಿತ್ಸೆಗಳವರೆಗೆ ವಿಜ್ಞಾನದ ಅಳವಡಿಕೆ ಇದೆ. ಬದುಕಿನ ಎಲ್ಲಾ ರಂಗಗಳಲ್ಲೂ ಆಧುನಿಕ ತಂತ್ರಜ್ಞಾನ ಆಧಾರಿತ ಸಲಕರಣೆಗಳ ಬಳಕೆ ವ್ಯಾಪಕವಾಗಿದೆ. ಈ ವೈಜ್ಞಾನಿಕ ಪ್ರಗತಿಗಳಲ್ಲಿ ಮೂಲ ವಿಜ್ಞಾನದ ತತ್ವ ಮತ್ತು ಕ್ರಮಗಳಲ್ಲದೆ, ಕ್ವಾಂಟಮ್ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವೂ ಕಾಣಿಸುತ್ತಿದೆ.

'ಕ್ವಾಂಟಮ್ ಮೆಕ್ಯಾನಿಕ್ಸ್'ನ 100 ವರ್ಷಗಳನ್ನು ಆಚರಿಸಲು ಮತ್ತು ಅದರ ಅನ್ವಯಗಳ ಬಗ್ಗೆ ಅರಿವು ಮೂಡಿಸಲು 2025 ಅನ್ನು 'ಕ್ವಾಂಟಮ್ ವಿಜ್ಞಾನ ಮತ್ತು ತಂತ್ರಜ್ಞಾನದ ಅಂತರರಾಷ್ಟ್ರೀಯ ವರ್ಷ' ಎಂದು ಘೋಷಿಸಲಾಗಿದೆ. ಅಂದಹಾಗೆ, ಕ್ವಾಂಟಮ್ ತಂತ್ರಜ್ಞಾನ ಎಂದರೆ ಏನು? ಮೂಲ ವಿಜ್ಞಾನಕ್ಕಿಂತ ಇದು ಹೇಗೆ ಭಿನ್ನ?

ಕ್ವಾಂಟಮ್ ವಿಜ್ಞಾನವು ಮೂಲ ವಿಜ್ಞಾನದ ಒಂದು ಭಾಗ; 20ನೇ ಶತಮಾನದ ಆರಂಭದಲ್ಲಿ ರೂಪುಗೊಂಡ ಒಂದು ಸಂಕೀರ್ಣ ವೈಜ್ಞಾನಿಕ ಕ್ಷೇತ್ರ. ಇದು ಸಾಂಪ್ರದಾಯಿಕ ಭೌತ ವಿಜ್ಞಾನವು ವಿವರಿಸದ ಪರಮಾಣು ಮತ್ತು ಉಪ–ಪರಮಾಣು ಮಟ್ಟದಲ್ಲಿ ಕಣಗಳ ವರ್ತನೆಯನ್ನು ಅರ್ಥ ಮಾಡಿಸುತ್ತದೆ. ಕ್ವಾಂಟಮ್ ವಿಜ್ಞಾನವನ್ನು ಅತಿ ಚಿಕ್ಕ ಕಣಗಳ ವಿಚಿತ್ರ ಲೋಕ ಎನ್ನಬಹುದು. ಪರಮಾಣುಗಳು, ಎಲೆಕ್ಟ್ರಾನ್‌ಗಳು ಮತ್ತು ಫೋಟಾನ್‌ಗಳಂತಹ ಅತಿ ಚಿಕ್ಕ ಕಣಗಳು ಒಂದೇ ಸಮಯದಲ್ಲಿ ಎರಡು ಸ್ಥಳಗಳಲ್ಲಿ ಇದ್ದಂತೆ ಭಾಸವಾಗುತ್ತವೆ! ವಿಪರೀತ ದೂರದಲ್ಲಿದ್ದರೂ ಒಂದಕ್ಕೊಂದು ಅದೃಶ್ಯ ಸಂಪರ್ಕದಲ್ಲಿರುತ್ತವೆ ಮತ್ತು ಅವುಗಳನ್ನು ಅಳೆದಾಗ ಮಾತ್ರ ನೈಜ ರೂಪವನ್ನು ಪ್ರಕಟಪಡಿಸುತ್ತವೆ.



ಕ್ವಾಂಟಮ್ ವಿಜ್ಞಾನವು ಐದು ಪ್ರಮುಖ ಪರಿಕಲ್ಪನೆಗಳ ಮೇಲೆ ರೂಪುಗೊಂಡಿದೆ. ಅವುಗಳೆಂದರೆ: ಶಕ್ತಿಯು ನಿರಂತರವಾಗಿ ಹರಿಯುವುದಿಲ್ಲ, ಬದಲಿಗೆ ನಿರ್ದಿಷ್ಟ 'ಕ್ವಾಂಟಾ' ಅಥವಾ ಪ್ಯಾಕೆಟ್‌ಗಳಲ್ಲಿ ಇರುತ್ತದೆ. ಫೋಟಾನ್ ಮತ್ತು ಎಲೆಕ್ಟ್ರಾನ್‌ಗಳಂತಹ ಉಪ– ಪರಮಾಣು ಕಣಗಳು ಕೆಲವೊಮ್ಮೆ ತರಂಗದಂತೆ, ಕೆಲವೊಮ್ಮೆ ಕಣದಂತೆ ವರ್ತಿಸುತ್ತವೆ. ಒಂದು ಕ್ವಾಂಟಮ್ ಕಣವು ಒಂದೇ ಸಮಯದಲ್ಲಿ ಒಂದಕ್ಕಿಂತ ಹೆಚ್ಚು ಸ್ಥಿತಿ ಮತ್ತು ಶಕ್ತಿಗಳಲ್ಲಿ ಇರಬಲ್ಲ ಸಾಮರ್ಥ್ಯ ಪಡೆದಿರುತ್ತದೆ. ಎರಡು ಅಥವಾ ಹೆಚ್ಚು ಕ್ವಾಂಟಮ್ ಕಣಗಳು ಎಷ್ಟೇ ದೂರವಿದ್ದರೂ, ಪರಸ್ಪರ ಸಂಬಂಧ ಹೊಂದಿರುತ್ತವೆ ಮತ್ತು ಒಂದು ಕಣದ ನಿರ್ದಿಷ್ಟ ಸ್ಥಾನ ಮತ್ತು ವೇಗವನ್ನು ಏಕಕಾಲದಲ್ಲಿ ನಿಖರವಾಗಿ ಅಳೆಯಲು ಸಾಧ್ಯವಿಲ್ಲ.


ಸ್ಮಾರ್ಟ್‌ಫೋನ್, ಟಿ.ವಿ., ಎಲ್‌ಇಡಿ ದೀಪಗಳಲ್ಲಿರುವ ಸೆಮಿಕಂಡಕ್ಟರ್‌ಗಳು ಕ್ವಾಂಟಮ್ ಮೆಕ್ಯಾನಿಕ್ಸ್‌ನ ತತ್ವಗಳನ್ನು ಆಧರಿಸಿ ಕೆಲಸ ಮಾಡುತ್ತವೆ. ಸಿಲಿಕಾನ್ ಚಿಪ್‌ಗಳಲ್ಲಿ ಎಲೆಕ್ಟ್ರಾನ್‌ಗಳು ಹೇಗೆ ವರ್ತಿಸುತ್ತವೆ ಎಂಬುದನ್ನು ಕ್ವಾಂಟಮ್ ವಿಜ್ಞಾನ ವಿವರಿಸುತ್ತದೆ. 'ಕ್ಯು ಎಲ್‌ಇಡಿ' ಟಿ.ವಿಗಳು, ಕ್ವಾಂಟಮ್ ಡಾಟ್‌ಗಳೆಂಬ ಅತಿಸಣ್ಣ ಸೆಮಿಕಂಡಕ್ಟರ್ ನ್ಯಾನೊ ಕಣಗಳನ್ನು ಬಳಸುತ್ತವೆ. ಈ ಕಣಗಳು ತಮ್ಮ ಗಾತ್ರಕ್ಕನುಗುಣವಾಗಿ ವಿಭಿನ್ನ ಬಣ್ಣಗಳ ಬೆಳಕನ್ನು ಹೊರಸೂಸುತ್ತವೆ. ಇದರಿಂದಾಗಿ ಪರದೆ ಮೇಲೆ ಹೆಚ್ಚು ಪ್ರಕಾಶಮಾನವಾದ ಮತ್ತು ನಿಖರವಾದ ಬಣ್ಣಗಳು ಮೂಡುತ್ತವೆ.

ವೈದ್ಯಕೀಯ ಕ್ಷೇತ್ರದಲ್ಲಿ ಎಂಆರ್‌ಐ ಯಂತ್ರಗಳು ಮಾನವ ದೇಹದ ಒಳಗಿನ ವಿವರವಾದ ಚಿತ್ರಗಳನ್ನು ಪಡೆಯಲು ಕ್ವಾಂಟಮ್ ವಿಜ್ಞಾನದ ತತ್ವಗಳನ್ನು ಬಳಸುತ್ತವೆ. ಈಗ ಅಭಿವೃದ್ಧಿ ಪಡಿಸಲಾಗುತ್ತಿರುವ ಹೆಚ್ಚು ಸೂಕ್ಷ್ಮವಾದ ಕ್ವಾಂಟಮ್ ಸಂವೇದಕಗಳು ದೇಹದೊಳಗಾಗುವ ಅತಿಸಣ್ಣ ಜೈವಿಕ ಬದಲಾವಣೆ, ಮರೆಗುಳಿತನ (ಅಲ್ಝೀಮರ್ಸ್), ಪಾರ್ಕಿನ್ಸನ್ ರೀತಿಯ ನರರೋಗಗಳನ್ನು ಆರಂಭಿಕ ಹಂತದಲ್ಲೇ ಪತ್ತೆಹಚ್ಚಲು ನೆರವಾಗಲಿವೆ. ಕೃಷಿ ಕ್ಷೇತ್ರದಲ್ಲಿ, ಸೂಕ್ಷ್ಮ ಹವಾಮಾನ ಮಾದರಿಗಳನ್ನು ಊಹಿಸಲು, ಮಣ್ಣಿನ ಪೋಷಕಾಂಶಗಳ ಬಳಕೆಯನ್ನು ಉತ್ತಮಗೊಳಿಸಲು, ಹೊಸ ರೋಗನಿರೋಧಕ ಬೆಳೆ ತಳಿಗಳನ್ನು ವಿನ್ಯಾಸಗೊಳಿಸಲು ಮತ್ತು ಕೃಷಿ ನಿರ್ವಹಣೆಯನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತವೆ.

ಸೈಬರ್ ಸೆಕ್ಯುರಿಟಿ, ಆನ್‌ಲೈನ್ ಬ್ಯಾಂಕಿಂಗ್, ಇ–ಮೇಲ್ ಸಂವಹನ ಮತ್ತು ಇತರ ಡಿಜಿಟಲ್ ಡೇಟಾವನ್ನು ರಕ್ಷಿಸಲು ಬಳಸುವ ಎನ್‌ಕ್ರಿಪ್ಷನ್ (ಗೌಪ್ಯ ಸಂಕೇತೀಕರಣ) ವಿಧಾನಗಳನ್ನು ಸಮರ್ಥವಾಗಿ ನಿಭಾಯಿಸಲು, 'ಕ್ವಾಂಟಮ್ ಕೀ ಡಿಸ್ಟ್ರಿಬ್ಯೂಷನ್' ತಂತ್ರಜ್ಞಾನದಲ್ಲಿ, ಮಾಹಿತಿಯನ್ನು ಎನ್‌ಕ್ರಿಪ್ಟ್ ಮಾಡಲು ಬಳಸುವ 'ಕೀ'ಯನ್ನು ಕ್ವಾಂಟಮ್ ಕಣಗಳ ರೂಪದಲ್ಲಿ ರವಾನಿಸಲಾಗುತ್ತದೆ. ಯಾರಾದರೂ ಈ ಕೀಲಿಯನ್ನು ಕದಿಯಲು ಪ್ರಯತ್ನಿಸಿದರೆ, ಕ್ವಾಂಟಮ್ ಭೌತ ವಿಜ್ಞಾನದ ನಿಯಮಗಳ ಪ್ರಕಾರ ಕಣಗಳ ಸ್ಥಿತಿ ಬದಲಾಗುತ್ತದೆ ಮತ್ತು ಕಳ್ಳತನ ತಕ್ಷಣವೇ ಪತ್ತೆಯಾಗುತ್ತದೆ. ಇದು ಹ್ಯಾಕಿಂಗ್ ಅಥವಾ ಕದ್ದಾಲಿಕೆಯನ್ನು ತಡೆಯುತ್ತದೆ ಮತ್ತು ಡೇಟಾ ಸಂವಹನವನ್ನು ಅಭೇದ್ಯವನ್ನಾಗಿಸುತ್ತದೆ. ಡಿಜಿಟಲ್ ಯುಗದಲ್ಲಿ ನಮ್ಮ ದೈನಂದಿನ ಚಟುವಟಿಕೆಗಳಿಗೆ ಅತಿಹೆಚ್ಚು ಭದ್ರತೆ ಸಿಗುತ್ತದೆ.

ಕ್ವಾಂಟಮ್ ಕಂಪ್ಯೂಟರ್‌ಗಳು ಅತ್ಯಂತ ಸಂಕೀರ್ಣ ಗಣನೆಗಳನ್ನು ಕೆಲವೇ ಸೆಕೆಂಡ್‌ಗಳಲ್ಲಿ ನಿರ್ವಹಿಸುತ್ತವೆ. ಇದರಿಂದಾಗಿ, ಹೊಸ ಮತ್ತು ಹೆಚ್ಚು ಪರಿಣಾಮಕಾರಿ ಔಷಧಗಳ ವಿನ್ಯಾಸ, ಕಡಿಮೆ ಇಂಧನದಲ್ಲಿ ಹೆಚ್ಚು ದೂರ ಚಲಿಸುವ ವಾಹನ ಬ್ಯಾಟರಿ ಅಭಿವೃದ್ಧಿ, ಹವಾಮಾನ ಮಾದರಿಗಳನ್ನು ಹೆಚ್ಚು ನಿಖರವಾಗಿ ಊಹಿಸುವುದು, ವಾಹನಗಳು ಸರಾಗವಾಗಿ ಓಡಾಡಲು ದಟ್ಟಣೆ ಇಲ್ಲದ ಮಾರ್ಗಗಳನ್ನು ನಿರ್ಧರಿಸುವುದು, ವಿದ್ಯುತ್ ಗ್ರಿಡ್‌ಗಳನ್ನು ಹೆಚ್ಚು ದಕ್ಷವಾಗಿಸುವುದು, ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿ ಆಗಿಸುವುದು ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿ ಅಪಾಯಗಳನ್ನು ನಿರ್ವಹಿಸಲು ಅಗತ್ಯವಾದ ಮುನ್ಸೂಚನೆ, ಮುನ್ನೆಚ್ಚರಿಕೆ ಸಾಧ್ಯವಾಗಲಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ವಿದ್ಯಾರ್ಥಿಗಳ ಆತ್ಮಹತ್ಯೆ
ಉಸಿರು ಕಸಿಯುತ್ತಿರುವ 'ಶಿಕ್ಷಣ'

ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಭಾರತದಲ್ಲಿ ಹೆಚ್ಚಾಗಿದೆ. ವಿದ್ಯಾರ್ಥಿಗಳು ಇಷ್ಟೊಂದು ಪ್ರಮಾಣದಲ್ಲಿ ಏಕೆ ಸಾಯುತ್ತಿದ್ದಾರೆ ಎಂದು ರಾಷ್ಟ್ರದ ಅತ್ಯುನ್ನತ ನ್ಯಾಯಾಲಯವೇ ಪ್ರಶ್ನಿಸುವ ಮಟ್ಟಕ್ಕೆ ಈ ಸಮಸ್ಯೆ ತೀವ್ರ ಸ್ವರೂಪ ತಾಳಿದೆ. 2012ರಲ್ಲಿ ಶೇ 4.9ರಷ್ಟಿದ್ದ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಮಾಣವು 2022ರ ಹೊತ್ತಿಗೆ ಶೇ 7.6ಕ್ಕೆ ಹೆಚ್ಚಾಗಿದೆ. ಶಿಕ್ಷಣದಲ್ಲಿ ವಿಫಲವಾದರೆ, ಜೀವನದಲ್ಲಿಯೇ ವಿಫಲವಾದಂತೆ ಎಂದು ಕೆಲವು ವಿದ್ಯಾರ್ಥಿಗಳು ಭಾವಿಸುತ್ತಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳು, ನೀಟ್, ಐಐಟಿ ಕನಸುಗಳು ಆಕಾಂಕ್ಷಿಗಳ ಸಾವಿನಲ್ಲಿ ಪರ್ಯವಸಾನಗೊಳ್ಳುತ್ತಿವೆ. ಹಲವು ರೀತಿಯ ಒತ್ತಡ ಮತ್ತು ವೈಫಲ್ಯದಿಂದ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಶೈಕ್ಷಣಿಕ ವ್ಯವಸ್ಥೆಯ ಪ್ರತಿಬಿಂಬವೂ ಆಗಿದೆ

ದಶಕದಲ್ಲಿ ಗಣನೀಯ ಹೆಚ್ಚಳ

- **3.02** ಕೋಟಿ: 2012ರಲ್ಲಿ ಉನ್ನತ ಶಿಕ್ಷಣದಲ್ಲಿ ತೊಡಗಿದ್ದ ವಿದ್ಯಾರ್ಥಿಗಳ ಸಂಖ್ಯೆ
- **4.33** ಕೋಟಿ: 2022ರಲ್ಲಿ ಉನ್ನತ ಶಿಕ್ಷಣದಲ್ಲಿ ತೊಡಗಿದ್ದ ವಿದ್ಯಾರ್ಥಿಗಳ ಸಂಖ್ಯೆ
- **6,654**: 2012ರಲ್ಲಿ ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿಗಳ ಸಂಖ್ಯೆ
- **13,044**: 2022ರಲ್ಲಿ ಆತ್ಮಹತ್ಯೆಗೆ ಶರಣಾದ ವಿದ್ಯಾರ್ಥಿಗಳ ಸಂಖ್ಯೆ
- **26%**: 10 ವರ್ಷದಲ್ಲಿ ಒಟ್ಟು ಆತ್ಮಹತ್ಯೆಗಳಲ್ಲಿ ಹೆಚ್ಚಳ
- **55%**: 10 ವರ್ಷದಲ್ಲಿ ವಿದ್ಯಾರ್ಥಿ ಆತ್ಮಹತ್ಯೆಗಳಲ್ಲಿ ಹೆಚ್ಚಳ
- **7.6%**: ಭಾರತದಲ್ಲಿ ಒಟ್ಟು ಆತ್ಮಹತ್ಯೆಗಳ ಪೈಕಿ ವಿದ್ಯಾರ್ಥಿ ಆತ್ಮಹತ್ಯೆಗಳ ಪಾಲು
- **35**: ದೇಶದಲ್ಲಿ ಪ್ರತಿದಿನ ಆತ್ಯಹತ್ಯೆಗೆ ಶರಣಾಗುತ್ತಿರುವ ಯುವಕ/ಯುವತಿಯರು

ಆಧಾರ: ದಿ ಲ್ಯಾನ್ಸೆಟ್ ರೀಜನಲ್ ಹೆಲ್ತ್-ಸೌತ್ ಈಸ್ಟ್ ಏಷ್ಯಾ, ಎನ್‌ಸಿಆರ್‌ಬಿ, ಮಾಧ್ಯಮ ವರದಿಗಳು

• ಬಿ.ವಿ.ಶ್ರೀನಾಥ್

ಐಐಟಿ ಖರಗಪುರದಲ್ಲಿ ನಾಲ್ಕನೇ ವರ್ಷದ ಮೆಕ್ಯಾನಿಕಲ್ ಎಂಜಿನಿಯರಿಂಗ್ ಅಧ್ಯಯನ ಮಾಡುತ್ತಿದ್ದ ಕೋಲ್ಕತ್ತದ ರಿತಂ ಮಂಡಲ್ ಅವರು ಇದೇ ಜುಲೈ 18ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ವರ್ಷದ ಜನವರಿಯಿಂದ ಖರಗಪುರದ ಐಐಟಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ನಾಲ್ಕನೇ ವಿದ್ಯಾರ್ಥಿ ಅವರು. ಇದೇ ರೀತಿ ಗ್ರೇಟರ್ ನೋಯ್ಡಾದ ಶಾರದಾ ವಿಶ್ವವಿದ್ಯಾಲಯದಲ್ಲಿ ಎರಡನೇ ವರ್ಷದ ದಂತವೈದ್ಯಕೀಯ ಅಭ್ಯಾಸ ಮಾಡುತ್ತಿದ್ದ ಜ್ಯೋತಿ ಶರ್ಮಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇವರ ಆತ್ಮಹತ್ಯೆಗಳಿಗೆ ಸಂಬಂಧಿಸಿದಂತೆ ತೀವ್ರ ಕಳವಳ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ಈ ಸಂಬಂಧ ತನಿಖೆ ಕ್ರಮ ಜರುಗಿಸುವಂತೆ ನಿರ್ದೇಶನ ನೀಡಿದೆ. ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯುವ ದಿಸೆಯಲ್ಲಿ 15 ಅಂಶಗಳ ಮಾರ್ಗಸೂಚಿಯನ್ನು ಸುಪ್ರೀಂ ಕೋರ್ಟ್ ಇತ್ತೀಚೆಗಷ್ಟೇ ಪ್ರಕಟಿಸಿದೆ.

ದೇಶದ ಯಾವುದೋ ಭಾಗದಲ್ಲಿ ಯಾವುದೋ ವಿದ್ಯಾಸಂಸ್ಥೆಯಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಲೇ ಇದ್ದಾರೆ. ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಂಡರೆ, ಅದರ ಹಿಂದೆ ಆತ/ಆಕೆಯ ಸಾಮಾಜಿಕ, ಆರ್ಥಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಕಾರಣಗಳಿರುತ್ತವೆ. ಒಬ್ಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡರೆ, ಅದಕ್ಕೆ ಪ್ರಮುಖವಾಗಿ ಪರೀಕ್ಷೆಯ ಒತ್ತಡ ಮತ್ತು ಶೈಕ್ಷಣಿಕ ವೈಫಲ್ಯ ಕಾರಣವಾಗಿರುತ್ತವೆ. ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವುದು ಶೈಕ್ಷಣಿಕ ವ್ಯವಸ್ಥೆಯ ಪ್ರತಿಬಿಂಬವೂ ಆಗಿದೆ.



ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ, ವಿದ್ಯಾರ್ಥಿಗಳ ಆತ್ಮಹತ್ಯೆ ಏಷ್ಯಾದಲ್ಲಿಯೇ ಹೆಚ್ಚು. ಕೊರಿಯಾದಲ್ಲಿ ಒಟ್ಟು ಆತ್ಮಹತ್ಯೆಗಳ ಪೈಕಿ ವಿದ್ಯಾರ್ಥಿ ಆತ್ಮಹತ್ಯೆಗಳ ಪಾಲು ಶೇ 12.9. ಇರಾನ್‌ನ ಒಟ್ಟು ಆತ್ಮಹತ್ಯೆಗಳ ಪೈಕಿ ವಿದ್ಯಾರ್ಥಿ ಆತ್ಮಹತ್ಯೆಗಳ ಪಾಲು ಶೇ 5. ಬಾಂಗ್ಲಾದಲ್ಲಿ, ಪ್ರವೇಶ ಪರೀಕ್ಷೆಗಳ ಮುಂಚೆಯೇ ಶೇ 25ರಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಯತ್ನಿಸುತ್ತಿದ್ದಾರೆ.

ಸಾವಿಗೆ ಕಾರಣವಾಗುತ್ತಿರುವ ನಿರೀಕ್ಷೆ, ಒತ್ತಡ: ಭಾರತದಲ್ಲಿ ಶೈಕ್ಷಣಿಕ ಸಾಧನೆಗೆ ಅತಿಯಾದ ಒತ್ತು ನೀಡಲಾಗುತ್ತಿದ್ದು, ಅದು ಉತ್ತಮ ಭವಿಷ್ಯಕ್ಕೆ ದಾರಿ ಎಂದೇ ಪರಿಗಣಿಸಲಾಗುತ್ತಿದೆ. ನಿರ್ದಿಷ್ಟ ವಿಶ್ವವಿದ್ಯಾಲಯ/ಕಾಲೇಜುಗಳಲ್ಲಿ, ನಿರ್ದಿಷ್ಟ ಕೋರ್ಸ್‌ಗಳಲ್ಲಿಯೇ ಸೀಟು ಗಳಿಸಬೇಕು ಎನ್ನುವ ಪೋಷಕರ ಮತ್ತು ವಿದ್ಯಾರ್ಥಿಗಳ ಮನೋಭಾವವು ಒತ್ತಡ ಸೃಷ್ಟಿಸುತ್ತಿದೆ. ಅತಿ ಹೆಚ್ಚು ಅಂಕ ಗಳಿಸಬೇಕು ಎನ್ನುವ ಒತ್ತಡ, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳು, ನೀಟ್, ಐಐಟಿ ಕನಸುಗಳು ಆಕಾಂಕ್ಷಿಗಳ ಸಾವಿನಲ್ಲಿ ಪರ್ಯವಸಾನಗೊಳ್ಳುತ್ತಿವೆ. ದೆಹಲಿ, ಚೆನ್ನೈ, ಬೆಂಗಳೂರು ಸೇರಿದಂತೆ ದೇಶದ ಪ್ರಮುಖ ನಗರಗಳಲ್ಲಿ ಪರೀಕ್ಷೆಗಳು ನಡೆಯುವ ಮತ್ತು ಫಲಿತಾಂಶ ಪ್ರಕಟಗೊಳ್ಳುವ ಸಂದರ್ಭದಲ್ಲಿ ಮನಶ್ಶಾಸ್ತ್ರಜ್ಞರು, ಆಪ್ತ ಸಮಾಲೋಚಕರ ಬಳಿಗೆ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿರುವುದು, ಕರೆ ಮಾಡುತ್ತಿರುವುದು ಸಮಸ್ಯೆಗೆ ಕನ್ನಡಿ ಹಿಡಿಯುತ್ತಿದೆ.

ರಾಜಸ್ಥಾನದ ಕೋಟಾಕ್ಕೆ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ, ವಿವಿಧ ಪ್ರವೇಶ ಪರೀಕ್ಷೆಗಳ ತರಬೇತಿಗಾಗಿ ಪ್ರತಿವರ್ಷ 2 ಲಕ್ಷಕ್ಕೂ ಹೆಚ್ಚು ಮಂದಿ ಬರುತ್ತಾರೆ. ದೆಹಲಿ, ಹೈದರಾಬಾದ್, ಬೆಂಗಳೂರು ನಗರಗಳಲ್ಲಿಯೂ ಅನೇಕ ಕೋಚಿಂಗ್ ಕೇಂದ್ರಗಳಿವೆ. ಇವುಗಳಲ್ಲಿ ಲಕ್ಷಾಂತರ ಮಂದಿ ತರಬೇತಿ ಪಡೆದರೂ ಯಶಸ್ಸು ಗಳಿಸುವುದು ಕೆಲವರು ಮಾತ್ರ. ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಕೋಟಾದಿಂದ ವರದಿಯಾಗುತ್ತಲೇ ಇರುತ್ತವೆ.


ದೇಶದಲ್ಲಿ, ಕಳೆದ ಹತ್ತು ವರ್ಷಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗಳು ಹೆಚ್ಚಾಗಿದ್ದು, ಉನ್ನತ ಶಿಕ್ಷಣದಲ್ಲಿ ತೊಡಗಿರುವ ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯ ಬಗ್ಗೆ ಕಳವಳ ಹುಟ್ಟಿಸುತ್ತಿದೆ. 18 ವರ್ಷದವರೆಗಿನ ವಿದ್ಯಾರ್ಥಿಗಳ ಆತ್ಮಹತ್ಯೆಗೆ ಪರೀಕ್ಷೆಗಳು ಪ್ರಮುಖ ಕಾರಣವಾದರೆ, 19ರಿಂದ 24 ವರ್ಷದವರೆಗಿನ ವಿದ್ಯಾರ್ಥಿಗಳಲ್ಲಿ ಇತರೆ ಕಾರಣಗಳೂ ಮುಖ್ಯ ಪಾತ್ರ ವಹಿಸುತ್ತಿವೆ. ಪರೀಕ್ಷೆಗಳ ಭಯ, ಅದರಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳ ಭಯ ಯುವಜನರನ್ನು ಕೊಲ್ಲುತ್ತಿದೆ. 2022ರಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಪೈಕಿ ಪರೀಕ್ಷಾ ಭಯದಿಂದ ಸತ್ತವರು ಶೇ 16ರಷ್ಟು.

ನಾಲ್ಕು ಪಟ್ಟು ಹೆಚ್ಚು: ವಿದ್ಯಾರ್ಥಿಗಳ ಅತ್ಮಹತ್ಯೆಗಳ ಬಗ್ಗೆ ಅಧಿಕೃತವಾದ, ಇತ್ತೀಚಿನ ಅಂಕಿಅಂಶಗಳೇ ಲಭ್ಯವಿಲ್ಲ. ರಾಷ್ಟ್ರೀಯ ಅಪರಾಧ ದಾಖಲೆಗಳ ವಿಭಾಗದ (ಎನ್‌ಸಿಆರ್‌ಬಿ) ಲಭ್ಯವಿರುವ 2022ರ ದತ್ತಾಂಶವೇ ಈ ಕುರಿತ ಇತ್ತೀಚಿನ ಅಂಕಿಅಂಶವಾಗಿದೆ. ಎನ್‌ಸಿಆರ್‌ಬಿ ದತ್ತಾಂಶವು ಪೊಲೀಸ್ ಇಲಾಖೆಯ ಎಫ್‌ಐಆರ್ ಆಧರಿಸಿದೆ. ವಾಸ್ತವವಾಗಿ, ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆಯು ಅಧಿಕೃತ ಸಂಖ್ಯೆಗಿಂತ ನಾಲ್ಕು ಪಟ್ಟು ಹೆಚ್ಚಿರಬಹುದು ಎಂದು ಅಂದಾಜಿಸಲಾಗುತ್ತಿದೆ. ಭಾರತದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸುವುದು ಒಂದು ಅಪರಾಧವಾಗಿರುವುದರಿಂದ ಮತ್ತು ಅದಕ್ಕೆ ಸಾಮಾಜಿಕ ತಾರತಮ್ಯವೂ ಇರುವುದರಿಂದ ಅನೇಕ ಪ್ರಕರಣಗಳು ದಾಖಲಾಗುತ್ತಿಲ್ಲ ಎನ್ನಲಾಗುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ವಿದ್ಯಾರ್ಥಿಗಳ ಮಾನಸಿಕ ಆರೋಗ್ಯಕ್ಕೂ ಒತ್ತು ನೀಡಲಾಗಿದೆ. ಶಾಲೆಗಳು, ಪೋಷಕರು ಮತ್ತು ಸಮುದಾಯದ ಸಹಭಾಗಿತ್ವದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ತಡೆಯಲು ಮಾರ್ಗಸೂಚಿಗಳನ್ನೂ ರೂಪಿಸಲಾಗಿದೆ. ಪ್ರತಿ ವಿಶ್ವವಿದ್ಯಾಲಯದಲ್ಲಿಯೂ ಆಪ್ತ ಸಮಾಲೋಚನೆಯ ವ್ಯವಸ್ಥೆ ಕಲ್ಪಿಸಬೇಕೆಂದು ಯುಜಿಸಿ 2016ರಲ್ಲಿಯೇ ಆದೇಶಿಸಿದೆ. ಆತ್ಮಹತ್ಯೆ ತಡೆ ರಾಷ್ಟ್ರೀಯ ಕಾರ್ಯತಂತ್ರ (ಎನ್‌ಎಸ್‌ಪಿಎಸ್) 2022ರ ನವೆಂಬರ್ 21ರಿಂದ ಜಾರಿ ಮಾಡಲಾಗಿದೆ. ಎಲ್ಲ ಹಂತದ ಪರೀಕ್ಷಗಳಲ್ಲೂ ಪೂರಕ ಪರೀಕ್ಷೆಗಳನ್ನು ನಡೆಸುವುದು ಸೇರಿದಂತೆ ಹಲವು ಕ್ರಮಗಳನ್ನು ಶಿಫಾರಸು ಮಾಡಲಾಗಿದೆ. ಸಹಾಯವಾಣಿಗಳನ್ನೂ ಆರಂಭಿಸಲಾಗಿದೆ. ಆದರೆ, ಹೆಚ್ಚಿನ ಕ್ರಮಗಳು ಕಾಗದದಲ್ಲಿಯೇ ಉಳಿದಿವೆ. ಪರಿಣಾಮವಾಗಿ, ದೇಶದ ಒಳಿತಿಗೆ ಬಳಕೆಯಾಗಬೇಕಾದ ಯುವಜನರ ಕೌಶಲ, ಕ್ರಿಯಾ ಸಾಮರ್ಥ್ಯ, ಪ್ರತಿಭೆ ಸಂಪೂರ್ಣವಾಗಿ ಅರಳುವ ಮುನ್ನವೇ ಕಮರಿಹೋಗುತ್ತಿವೆ. ಈ ದಿಸೆಯಲ್ಲಿ, ಶೈಕ್ಷಣಿಕ ಸಾಧನೆ ಅಷ್ಟೇ ಬದುಕಲ್ಲ ಎನ್ನುವುದನ್ನು, ಎಲ್ಲ ಸೋಲು, ವೈಫಲ್ಯಗಳ ಆಚೆಗೂ ಬದುಕಿದೆ ಎನ್ನುವುದನ್ನು ಯುವಜನರಿಗೆ ಅರ್ಥ ಮಾಡಿಸುವುದು ಮುಖ್ಯ ಎಂದು ಶಿಕ್ಷಣ ತಜ್ಞರು ಒತ್ತಾಯಿಸುತ್ತಲೇ ಇದ್ದಾರೆ.

ಪುರುಷರೇ ಹೆಚ್ಚು

ದೇಶದ ವಿದ್ಯಾರ್ಥಿ ಆತ್ಮಹತ್ಯೆಗಳಲ್ಲಿ (2022) ಮಹಾರಾಷ್ಟ್ರ (ಶೇ 14), ತಮಿಳುನಾಡು (ಶೇ 11), ಮಧ್ಯಪ್ರದೇಶ (ಶೇ 10), ಉತ್ತರ ಪ್ರದೇಶ (ಶೇ 8) ಮತ್ತು ಜಾರ್ಖಂಡ್ (ಶೇ 6) ಅಗ್ರ ಸ್ಥಾನ ಪಡೆದಿವೆ. 2021ರ ಅಗ್ರ ಐದು ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವೂ (ಶೇ 7) ಸ್ಥಾನ ಪಡೆದಿತ್ತು; ರಾಜಸ್ಥಾನವು 571 ಆತ್ಮಹತ್ಯೆಗಳೊಂದಿಗೆ 10ನೇ ಸ್ಥಾನ ಪಡೆದಿತ್ತು. ಆತ್ಮಹತ್ಯೆಯಿಂದ ಸಾಯುತ್ತಿರುವ ವಿದ್ಯಾರ್ಥಿಗಳಲ್ಲಿ ಮಹಿಳೆಯರಿಗಿಂತ ಪುರುಷರೇ ಹೆಚ್ಚಿದ್ದಾರೆ.



ಕಾರಣಗಳು

ಶೈಕ್ಷಣಿಕ ಒತ್ತಡ, ಅತಿಯಾದ ನಿರೀಕ್ಷೆ, ಆತ್ಮವಿಶ್ವಾಸದ ಕೊರತೆ, ವಿವೇಚನೆಯ ಕೊರತೆ, ಜಾತಿ ತಾರತಮ್ಯ/ದೌರ್ಜನ್ಯ, ದೈಹಿಕ ಹಾಗೂ ಲೈಂಗಿಕ ದೌರ್ಜನ್ಯ, ಕಲಿಕಾ ನ್ಯೂನತೆ ಸೇರಿದಂತೆ ವಿದ್ಯಾರ್ಥಿಗಳ ಆತ್ಮಹತ್ಯೆಗಳಿಗೆ ಹಲವು ಕಾರಣಗಳಿರುತ್ತವೆ. ಜತೆಗೆ, ಮಕ್ಕಳ ಬಗೆಗಿನ ಪೋಷಕರ ಮಹತ್ವಾಕಾಂಕ್ಷೆ, ಕುಟುಂಬದಲ್ಲಿನ ಸಾಮಾಜಿಕ, ಆರ್ಥಿಕ ಸಮಸ್ಯೆಗಳು, ಸಂಬಂಧಗಳಲ್ಲಿನ ಸಮಸ್ಯೆಗಳು, ಹಿರಿಯರ ಟೀಕೆ, ಸಾಮರ್ಥ್ಯದ ಹೋಲಿಕೆ, ಬೆಂಬಲದ ಕೊರತೆ, ಮದ್ಯ, ಮಾದಕ ವಸ್ತು ಸೇವನೆಯ ಚಟವೂ ಯುವ ಮನಸ್ಸುಗಳು ಕಮರಲು ಕಾರಣವಾಗುತ್ತಿವೆ.

ಏನು ಮಾಡಬೇಕು?

- ಪ್ರತಿಯೊಂದು ವಿ.ವಿ./ಕಾಲೇಜಿನಲ್ಲಿಯೂ ಆಪ್ತ ಸಮಾಲೋಚನೆಯ ವ್ಯವಸ್ಥೆ ಇರಬೇಕು; ಖಿನ್ನತೆ, ಒತ್ತಡದಿಂದ ಬಳಲುತ್ತಿರುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಅಗತ್ಯ ನೆರವು ನೀಡಬೇಕು
- ಮಾನಸಿಕ ಮತ್ತು ದೈಹಿಕ ಆರೋಗ್ಯ ನಿರ್ವಹಣೆಯ ಬಗ್ಗೆ ಶಾಲಾ–ಕಾಲೇಜುಗಳಲ್ಲಿಯೇ ವಿದ್ಯಾರ್ಥಿಗಳಿಗೆ ತರಬೇತಿ ನೀಡಬೇಕು
- ಸರ್ಕಾರ, ಪೋಷಕರು, ಶಿಕ್ಷಣ ಸಂಸ್ಥೆಗಳು ಮತ್ತು ಎನ್‌ಜಿಒ ಸಹಭಾಗಿತ್ವದಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು
- ರ‍್ಯಾಗಿಂಗ್, ಜಾತಿ/ಲಿಂಗ ತಾರತಮ್ಯ, ಲೈಂಗಿಕ ದೌರ್ಜನ್ಯಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು
- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಚಾಲ್ತಿಯಲ್ಲಿರುವ ಅತ್ಯುತ್ತಮ ಪದ್ಧತಿಗಳನ್ನು ಎಲ್ಲೆಡೆ ಅಳವಡಿಸಿಕೊಳ್ಳಬೇಕು
- ರಾಜ್ಯ, ರಾಷ್ಟ್ರ ಮಟ್ಟದಲ್ಲಿಯೂ ಸಹಾಯವಾಣಿಗಳನ್ನು ಸ್ಥಾಪಿಸಿ, ಅವು ಸಮರ್ಪಕವಾಗಿ ಕೆಲಸ ನಿರ್ವಹಿಸುವಂತೆ ನೋಡಿಕೊಳ್ಳಬೇಕು
- ವಿದ್ಯಾರ್ಥಿಯ ಸಮಗ್ರ ವ್ಯಕ್ತಿತ್ವ ಹಾಗೂ ಪ್ರತಿಭಾ ವಿಕಾಸಕ್ಕೆ ಪೂರಕವಾದ ಶೈಕ್ಷಣಿಕ ವ್ಯವಸ್ಥೆಯನ್ನು ರೂಪಿಸಬೇಕು

ರಾಷ್ಟ್ರೀಯ



ಭಾರಿ ಮಳೆ: ಅಮರನಾಥ ಯಾತ್ರೆ ಸ್ಥಗಿತ

ಶ್ರೀನಗರ (ಪಿಟಿಐ): ಕಾಶ್ಮೀರದದಲ್ಲಿ ಭಾರಿ ಮಳೆ ಸುರಿಯುತ್ತಿರುವುದರಿಂದ ಪಹಲ್ಗಾಮ್ ಮತ್ತು ಬಾಲ್‌ಟಾಲ್ ಹಾದಿಯಿಂದ ಅಮರನಾಥ ಯಾತ್ರೆಯನ್ನು ಬುಧವಾರ ಸ್ಥಗಿತಗೊಳಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪ್ರತಿಕೂಲ ಹವಮಾನ ಪರಿಸ್ಥಿತಿಯ ಕಾರಣಕ್ಕೆ ಜಮ್ಮುವಿನಿಂದ ಕೂಡ ಯಾತ್ರೆ ಸ್ಥಗಿತಗೊಳಿಸಲಾಗುವುದು. 'ಪಹಲ್ಗಾಮ್ ಮತ್ತು ಬಾಲ್‌ಟಾಲ್ ಬೇಸ್ ಕ್ಯಾಂಪ್‌ನ ಶ್ರೀ ಅಮರನಾಥ ಯಾತ್ರೆಯನ್ನು ಜುಲೈ 30ರಿಂದ ಸ್ಥಗಿತಗೊಳಿಸಲಾಗುವುದು' ಎಂದು ಜಮ್ಮುಕಾಶ್ಮೀರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ 'ಎಕ್ಸ್'ನಲ್ಲಿ ತಿಳಿಸಿದೆ.

ಸುರಿಯುತ್ತಿರುವ ಭಾರಿ ಮಳೆಯಿಂದಾಗಿ, ಬಾಲ್‌ಟಾಲ್ ಮತ್ತು ನುನ್ವಾನ್, ಚಂದನವಾಡಿ ಶಿಬಿರಗಳಿಂದ ಯಾತ್ರೆಗೆ ಅವಕಾಶ ನೀಡಲಾಗಿಲ್ಲ ಎಂದು ಕಾಶ್ಮೀರ ವಿಭಾಗೀಯ ಆಯುಕ್ತ ವಿಜಯ್ ಕುಮಾರ್ ಬಿಧುರಿ ತಿಳಿಸಿದ್ದಾರೆ.



ವಯನಾಡ್ ದುರಂತಕ್ಕೆ ವರ್ಷ: ಮೃತರ ಸ್ಮರಣೆ

ವಯನಾಡ್ (ಕೇರಳ) (ಪಿಟಿಐ): ಇಲ್ಲಿನ ಮುಂಡಕ್ಕೈ ಮತ್ತು ಚೂರಲ್‌ಮಲ ಭಾಗಗಳಲ್ಲಿ ಭೂಕುಸಿತ ಸಂಭವಿಸಿ ವರ್ಷ ಕಳೆದಿದ್ದು, ದುರಂತದಲ್ಲಿ ಅಸುನೀಗಿದವರ ಸ್ಮರಣೆಗಾಗಿ ಬುಧವಾರ ಪುತ್ತುಮಲ ಸ್ಮಶಾನದಲ್ಲಿ ಮೃತರ ಸಂಬಂಧಿಕರು ಸೇರಿದ್ದರು.

2024ರ ಜುಲೈ 29ರ ಮಧ್ಯರಾತ್ರಿ ಮತ್ತು 30ರಂದು ಸಂಭವಿಸಿದ ಭೀಕರ ಭೂಕುಸಿತದಲ್ಲಿ 264 ಜನರು ಜೀವಂತ ಸಮಾಧಿಯಾಗಿದ್ದರು. ಅವರ ಮೃತದೇಹಗಳನ್ನು ಅಂತ್ಯಸಂಸ್ಕಾರ ಮಾಡಿರುವ ಸ್ಮಶಾನಕ್ಕೆ 'ಹೃದಯ ಭೂಮಿ' ಎಂದು ಇಲ್ಲಿನ ಪಂಚಾಯಿತಿ ಹೆಸರಿಟ್ಟಿದೆ.

ಆ ಕರಾಳ ದಿನದಂದು ತಮ್ಮ ಸಂಬಂಧಿಕರು, ಬಂದುಗಳು ಮತ್ತು ಪ್ರೀತಿಪಾತ್ರರನ್ನು ಕಳೆದುಕೊಂಡ ನೂರಾರು ಜನ 'ಹೃದಯ ಭೂಮಿ'ಯಲ್ಲಿ ಮೌನ ಆಚರಿಸಿದರು. ನೆರೆದಿದ್ದ ಕೆಲವರು ಆ ದಿನದ ನೆನಪುಗಳನ್ನು ಮೆಲುಕುಹಾಕಿದರೆ, ಇನ್ನು ಕೆಲವರು ತಮ್ಮ ಪ್ರೀತಿಪಾತ್ರರ ನೆನೆದು ಕಣ್ಣೀರು ಹಾಕಿದರು. ಮತ್ತೂ ಕೆಲವರು ಮೌನಕ್ಕೆ ಜಾರಿದ್ದರು.

'ಆ ಕರಾಳ ದಿನವನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ಬಯಸುವುದಿಲ್ಲ. ಆದರೆ ಏನು ಮಾಡುವುದು ಆ ನೆನಪುಗಳು ಕಾಡುತ್ತಿವೆ' ಎಂದು ಅಲ್ಲಿನ ನಿವಾಸಿ ಮನೋಜ್ ಹೇಳಿದರು. ಅವರು ಈ ದುರಂತದಲ್ಲಿ ತಮ್ಮ 26 ಸಂಬಂಧಿಗಳನ್ನು ಕಳೆದುಕೊಂಡಿದ್ದಾರೆ.

ಬಿಹಾರ: ವಾಸಸ್ಥಾನ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದ 'ಡಾಗೇಶ್ ಬಾಬು'

ನವಾದಾ (ಬಿಹಾರ) (ಪಿಟಿಐ): ಬಿಹಾರದ ಪಟ್ನಾದ 'ಡಾಗ್ ಬಾಬು' ಪ್ರಕರಣದ ನಂತರ, ರಾಜ್ಯದ ನವಾದಾ ಜಿಲ್ಲೆಯಲ್ಲಿ ಮತ್ತೊಂದು ನಾಯಿಯ ಹೆಸರಿನಲ್ಲಿ ವಾಸಸ್ಥಾನ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಆಗಿರುವ ರವಿ ಪ್ರಕಾಶ್ ಅವರು 'ಡಾಗೇಶ್ ಬಾಬು' ಪ್ರಕರಣವನ್ನು ಬಯಲಿಗೆಳೆದಿದ್ದಾರೆ.

'ರಜೌಲಿಯ ಸಿರ್ದಲಾದಿಂದ ವಾಸಸ್ಥಾನ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಲು ಯತ್ನಿಸಲಾಗಿದೆ. ಕೃತ್ಯವನ್ನು ನಾವು ಕಂಡುಹಿಡಿದಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿದೆ' ಎಂದು ಪ್ರಕಾಶ್ ಅವರು 'ಎಕ್ಸ್'ನಲ್ಲಿ ಬರೆದಿದ್ದು, ಅರ್ಜಿಯ ಸ್ಕ್ರೀನ್‌ಶಾಟ್ ಹಂಚಿಕೊಂಡಿದ್ದಾರೆ.

ಜುಲೈ 29ಕ್ಕೆ ಸಲ್ಲಿಸಲಾದ ಅರ್ಜಿಯಲ್ಲಿ ತುಪ್ಪಳವಿರುವ ನಾಯಿಯ ಚಿತ್ರವಿದ್ದು, ಪೋಷಕರ ಹೆಸರನ್ನು 'ಡಾಗೇಶ್ ಕೆ ಪಾಪ' ಮತ್ತು 'ಡಾಗೇಶ್ ಕಿ ಮಮ್ಮಿ' ಎಂದು ಬರೆಯಲಾಗಿದೆ. ಬಿಹಾರದಲ್ಲಿ ವಾರದಲ್ಲಿ ನಡೆಯುತ್ತಿರುವ ಈ ರೀತಿಯ ಮೂರನೇ ಪ್ರಕರಣ ಇದಾಗಿದೆ. ಈ ಹಿಂದೆ 'ಡಾಗ್ ಬಾಬು' ಮತ್ತು 'ಸೋನಾಲಿಕಾ ಟ್ರ್ಯಾಕ್ಟರ್' ಹೆಸರಿನಲ್ಲಿ ಅರ್ಜಿಗಳನ್ನು ಸಲ್ಲಿಕೆಯಾಗಿದ್ದವು. ಎಲ್ಲಾ ಅರ್ಜಿದಾರರ ವಿರುದ್ಧ ಪ್ರಕರಣ ದಾಖಲಾಗಿದ್ದು, ಸೈಬರ್ ತಂತ್ರಜ್ಞರ ಸಹಾಯದೊಂದಿಗೆ ಅವರನ್ನು ಪತ್ತೆ ಮಾಡಲಾಗುತ್ತಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**


2025ರ ಜುಲೈ 25, 26ರಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾಲ್ದೀವ್ಸ್‌ಗೆ ಭೇಟಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಮಾಲೆಯಲ್ಲಿರುವ ರಕ್ಷಣಾ ಸಚಿವಾಲಯ ಕಟ್ಟಡದ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಕ್ಷಣಾ ಸಚಿವಾಲಯ ಕಟ್ಟಡದ ಮೇಲೆ ಮೋದಿ ಅವರ ಚಿತ್ರವಿದ್ದು, ಅವರ ಚಿತ್ರದ ಮೇಲೆ 'ಸರೆಂಡರ್' (ಶರಣಾಗತಿ) ಎಂದು ಬರೆಯಲಾಗಿದೆ. 'ಇದು ಮಾಲ್ದೀವ್ಸ್ ರಕ್ಷಣಾ ಸಚಿವಾಲಯದ ಮೇಲಿನ ಚಿತ್ರವಾಗಿದ್ದು, ಇದನ್ನು ಮಾಡಿದವರು ಯಾರು' ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಚಿತ್ರವನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಅದು 'ಡಿಡಿ ನ್ಯೂಸ್'ನ ಅಧಿಕೃತ ಇನ್‌ಸ್ಟಾಗ್ರಾಂ ಖಾತೆಯಲ್ಲಿ 2025ರ ಜುಲೈ 25ರಂದು ಪ್ರಕಟವಾಗಿದ್ದ ಚಿತ್ರಕ್ಕೆ ಸಂಪರ್ಕ ನೀಡಿತು. 'ಮಾಲ್ದೀವ್ಸ್‌ನ ಮಾಲೆಯಲ್ಲಿನ ರಕ್ಷಣಾ ಸಚಿವಾಲಯವು ಇಂದು ಕಂಡಿದ್ದು ಹೀಗೆ' ಎಂದು 'ಡಿಡಿ ನ್ಯೂಸ್' ಅಡಿಬರಹದಲ್ಲಿ ಉಲ್ಲೇಖಿಸಿತ್ತು. ಮಾಲ್ದೀವ್ಸ್‌ನ ರಾಷ್ಟ್ರೀಯ ಭದ್ರತಾ ಪಡೆ ಮತ್ತು ಭಾರತದ ಪ್ರಧಾನ ಮಂತ್ರಿ ಕಾರ್ಯಾಲಯದ ಅಧಿಕೃತ ಖಾತೆಗಳಲ್ಲಿನ ವಿಡಿಯೊಗಳಲ್ಲಿಯೂ ಕಟ್ಟಡದ ಮೇಲಿನ ಮೋದಿ ಅವರ ಚಿತ್ರದ ಮೇಲೆ 'ಸರೆಂಡರ್' ಎನ್ನುವ ಪದ ಇಲ್ಲ. ಚಿತ್ರದಲ್ಲಿ ಕೆಲವು ವ್ಯತ್ಯಾಸಗಳಿದ್ದು, ಅದನ್ನು 'ಹೈವ್ ಮಾಡರೇಷನ್' ಮತ್ತು 'ವಾಸ್ ಇಟ್ ಎಐ' ಎಂಬ ಎಐ ಪತ್ತೆ ಸಾಧನಗಳ ಮೂಲಕ ಪರಿಶೀಲಿಸಿದಾಗ, ಚಿತ್ರವನ್ನು ಎಐ ತಾಂತ್ರಿಕತೆ ಮೂಲಕ ತಿರುಚಲಾಗಿದೆ ಎನ್ನುವುದು ಸ್ಪಷ್ಟವಾಯಿತು ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ಅವಮಾನ ಸಾಧನೆಯ ಆರಂಭ



ಪಿ.ಚಂದ್ರಿಕಾ

ಬುದ್ಧನ ಬಳಿಗೆ ಬಂದ ಶಿಷ್ಯ ಕೇಳಿದ; 'ನೀನು ಧ್ಯಾನದ ಬಗ್ಗೆ ಹೇಳುತ್ತಿದ್ದೀಯ. ನೀನು ಹೇಳಿದ ಹಾಗೆ ನನ್ನ ಮನಸ್ಸು ಮತ್ತು ದೇಹ ಕೇಳುತ್ತಿಲ್ಲ. ನನ್ನ ಜೊತೆಯವರನ್ನೆಲ್ಲಾ ಕೇಳಿದೆ, 'ಗುರು ಹೇಳಿದ್ದು ನಿಮಗೆ ಸಾಧ್ಯವಾಗುತ್ತದೆ, ನನಗೆ ಮಾತ್ರ ಯಾಕೆ ಅಲ್ಲ' ಎಂದು. ಅವರೆಲ್ಲಾ ನನ್ನ ಸಾಮರ್ಥ್ಯವನ್ನು ಅಣಕಿಸಿ ಮಾತನಾಡಿದರು. ನನಗೆ ತುಂಬಾ ಅವಮಾನವಾಯಿತು. ನನಗೆ ಎಲ್ಲವೂ ಸಾಕೆನ್ನಿಸಿದೆ, ನಾನಿನ್ನು ಇಲ್ಲಿಂದ ಹೊರಡುವೆ' ಎಂದು ತನ್ನ ನೋವನ್ನು ತೋಡಿಕೊಂಡ. ಸೂರ್ಯ ಮೆಲ್ಲಮೆಲ್ಲನೆ ಮೇಲೇರತೊಡಗಿದ್ದ. ಬುದ್ಧ ಮಂದಸ್ಮಿತನಾಗಿ ತನ್ನೆದುರು ನಿಂತ ಶಿಷ್ಯನ ನೆರಳು ಬೆಳೆಯುವುದನ್ನು ನೋಡುತ್ತಿದ್ದ. ಶಿಷ್ಯನಿಗೆ ಗುರು ಏನನ್ನು ನೋಡುತ್ತಿದ್ದಾನೆ ಎಂದು ಕುತೂಹಲವೂ ತನ್ನ ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಳ್ಳದೆ ಇದ್ದದ್ದಕ್ಕೆ ಬೇಸರವೂ ಆಯಿತು. ಬುದ್ಧನಿಗೆ ಶಿಷ್ಯನಲ್ಲಿ ಯಾವ ವಿಚಾರ ಮಂಥನ ನಡೆಯುತ್ತಿದೆ ಎಂದು ಗೊತ್ತಾಯಿತು.

ಬುದ್ಧ, 'ನನ್ನೆದುರು ನಿಂತ ನೀನು ಇತರರು ಮಾಡಿದ ಅವಮಾನದ ಬಗ್ಗೆ ಹೇಳುತ್ತಿರುವಿ. ನಿನ್ನ ನೆರಳು ನಿನಗೂ ಅದಕ್ಕೂ ಸಂಬಂಧವೇ ಇಲ್ಲ ಎನ್ನುವ ಹಾಗೆ ಸೂರ್ಯನ ಬೆಳಕನ್ನು ಆಶ್ರಯಿಸಿ ಬೆಳೆಯುತ್ತಿದೆ. ನಿನ್ನೊಳಗಿನ ನೋವು, ಅವಮಾನ ನಿನ್ನ ನೆರಳಿಗೂ ತಟ್ಟುತ್ತಿಲ್ಲ. ನಿನ್ನನ್ನು ಯಾಕೆ ಕಾಡುತ್ತಿದೆ?' ಎಂದ. ಶಿಷ್ಯನಿಗೆ ಬೇಸರವಾಯಿತು. 'ಅದು ನೆರಳು. ಅದಕ್ಕೆ ನೋಯುವ ಗುಣವಾದರೂ ಎಲ್ಲಿದೆ?' ಎಂದ. ಬುದ್ಧ ನಕ್ಕು ಹೇಳಿದ: 'ನೋಡು, ನೆರಳನ್ನು ನೋಡಿ ಕಲಿಯುವುದು ಬಹಳ ಇದೆ. ಅದು ತನ್ನ ಪಾಡಿಗೆ ತಾನು ಬೆಳೆಯುತ್ತೆ. ಯಾವುದೇ ಅಡ್ಡಬಂದರೂ ಅದಕ್ಕೆ ಲೆಕ್ಕವಿಲ್ಲ. ಮುಳ್ಳಿನ ಮೇಲೆ ಹರಿದರೂ ನೋಯದು. ಹೇಸಿಗೆಯ ಮೇಲೆ ಸರಿದಾಡಿದರೂ ಆ ಅಸಹ್ಯ ವಾಸನೆ ಯಾವುದೂ ಅದಕ್ಕೆ ಅಂಟದು. ಇಷ್ಟೆಲ್ಲಾ ಗುಣವಿರುವ ಅದನ್ನು ಕುರಿತಂತೆ ನೀನು ಹೇಳುತ್ತೀಯೆ ಅದಕ್ಕೆ ಗುಣವಿಲ್ಲವೆಂದು'. 'ಗುರುವೇ, ನೆರಳಿಗೆ ಏನಾಗುತ್ತದೆ ಎನ್ನುವುದು ಅನವಶ್ಯಕ ಚಿಂತನೆ. ನನ್ನ ನೋವನ್ನು ನೀನೂ ಅಪಹಾಸ್ಯ ಮಾಡುತ್ತಿದ್ದೀಯೆ. ಎಲ್ಲರಿಗೂ ಸಾಧ್ಯವಾಗಿದ್ದು ನನಗೆ ಯಾಕೆ ಸಾಧ್ಯವಾಗುತ್ತಿಲ್ಲ ಅದನ್ನು ಹೇಳು' ಎಂದ ಶಿಷ್ಯ. ಬುದ್ಧ ದೀರ್ಘವಾಗಿ ನಿಟ್ಟುಸಿರಿಟ್ಟು, 'ನಿನ್ನದೇ ನೆರಳಿನ ಬಗ್ಗೆ ನಿನಗೆ ಗೊತ್ತಾಗುತ್ತಿಲ್ಲ. ಇನ್ನೊಬ್ಬರ ಬಗ್ಗೆ ಹೇಗೆ ಗೊತ್ತಾಯಿತು ಅದನ್ನು ಮೊದಲು ಹೇಳು. ನಿನಗೆ ಅಸಾಧ್ಯವಾಗಿದ್ದು ಅವರಿಗೆ ಸಾಧ್ಯವಾಗಿದೆ ಎಂದು ಹೇಗೆ ಭಾವಿಸಿದೆ? ನೆರಳಿನ ಬಗ್ಗೆ ಅನವಶ್ಯಕ ಚರ್ಚೆ ಬೇಡವೆಂದೆ. ಆದರೆ, ಇನ್ನೊಬ್ಬರ ಮಾತುಗಳ ಬಗ್ಗೆ ಅನವಶ್ಯಕವಾಗಿ ಯಾಕೆ ಚಿಂತಿಸುತ್ತಿರುವೆ? ನಿನ್ನೊಳಗೆ ನಿನ್ನನ್ನಿರಿಸಿಕೋ. ಅದೂ ನಿನ್ನ ಶುದ್ಧ ಮಾಡಿಕೊಳ್ಳಲು. ಆಗ ನಿನ್ನೊಳಗೆ ಏನೂ ಇರುವುದಿಲ್ಲ. ಅವಮಾನ ಎಂದು ನೀನು ಭಾವಿಸುತ್ತಿರುವೆಯಲ್ಲಾ, ಇದೂ ಒಂದು ಹೆಜ್ಜೆ. ಅದು ನಿನ್ನ ಗುರಿಯ ಕಡೆಗಿನದ್ದು ಎಂದು ಭಾವಿಸು. ಪ್ರಿಯ ಶಿಷ್ಯ, ನೆರಳೇ ನಿನ್ನ ಗುರು. ಅದಕ್ಕೆ ಕಾಮ, ಕ್ರೋಧ, ಮದ, ಮತ್ಸರ ಯಾವುದೂ ಇಲ್ಲ. ಅದಕ್ಕೆ ನೀನು ಮಾತ್ರ ಗುರಿ. ಅದು ನಿನ್ನನ್ನು ಮಾತ್ರ ಅನುಸರಿಸುತ್ತದೆ. ಅದರಂತೆಯೇ ಧ್ಯಾನದಿಂದ ನೀನೂ ಇವೆಲ್ಲವನ್ನೂ ಕಳೆದುಕೋ. ನಿನ್ನ ಒಳಗಿನದ್ದು ಸಾಧಿಸು- ಅದೂ ವಿಚಾರಗಳ ಶುದ್ಧಿಗಾಗಿ ಮಾತ್ರ ಎನ್ನುವುದನ್ನು ಮರೆಯದಿರು' ಎಂದ.

ಅವಮಾನವಾದ ತಕ್ಷಣ ಬಿಟ್ಟು ಹೋಗುವುದಲ್ಲ. ಅರ್ಥ ಮಾಡಿಕೊಳ್ಳಬೇಕು, ಅಲ್ಲೇ ಇದ್ದು ಸಾಧಿಸಬೇಕು. ಯಾಕೆಂದರೆ, ಅವಮಾನ ಎಂದೂ ಕೊನೆಯಲ್ಲ; ಅದು ಸಾಧನೆಯ ಆರಂಭ. ❖

ಪದಬಂಧ 6120

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಳು ಇಲ್ಲಿಗೆ ಬಂದಿದ್ದಾನೆ (3)
3.ಅನ್ಯಮಾರ್ಗವು ಈ ತರಹ ಬಂದಿದೆ (4)
5.ಎಳ್ಳಿನಿಂದಿರಿಸಿದ ಬೊಟ್ಟು (3)
7.ಕಾಲಸೂಚಕ ಯಂತ್ರ (4)
9.ನಯವಾದ ನುಡಿ (4)
12.ಅಷ್ಟಮಿ ನಂತರದ ತಿಥಿ (3)
14.ಕನ್ನಡಿಗನಾಡಿರುವ ಚೆಸ್! (4)
15.ಇದು ಬಲು ಕಠಿಣವಾದುದು (3)

ಮೇಲಿಂದ ಕೆಳಕ್ಕೆ
1.ಗತಿಸಿದ ಹಿರಿಯರ ಹುಟ್ಟುಹಬ್ಬ (3)
2.ಇದು ಮೃತ್ಯುಲೋಕ (3)
3.ಎಲ್ಲೆಯ ಹತ್ತಿರ ತೋರಿದ ಅವಸರ (4)
4.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
6.ಭೋಜನ ಸಮಾರಂಭಕ್ಕೆ ಬೇಕಾಗುವ ಸಾಮಗ್ರಿ (4)
7.ಅಶ್ವವಿಲ್ಲಿ ಉಲ್ಟಾ ಪಲ್ಟಾ ನಿಂತಿದೆಯಲ್ಲಾ! (3)
8.ದೇವರನ್ನು ರಥದಲ್ಲಿ ಕೂರಿಸಿ ಮಾಡುವ ಮೆರವಣಿಗೆ (4)
10.ಆನೆಯನ್ನು ನಡೆಸುವವನು (4)
11.ಚೇಲನ ಕೈಯಲ್ಲಿರುವ ಸ್ಪೂನ್! (3)
12.ನಡುವೆಯೇ ಉಂಟಾದ ಕಂಪನ (3)
13.ಸೂರ್ಯ ಇಲ್ಲಿಯೇ ಕಾಣುತ್ತಿದ್ದಾನೆ (3)

6119ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಯದಾನ 3.ವರ್ಗ 4.ಪ್ರಧಾನ 5.ಕಲಭ 7.ಕರ 8.ರಸ 10.ಮಸ್ತಕ 11.ಹಸು 13.ಕಾಲ 14.ಹಮ್ಮೀರ 15.ಸುಪಥ 16.ಸಾರ 17.ಆಮ್ಲಜನಕ

ಮೇಲಿಂದ ಕೆಳಕ್ಕೆ: 2.ಭಯಂಕರ 3.ವನಚರ 4.ಪ್ರಣಯಕಲಹ 6.ಭಗ್ನಮನೋರಥ 7.ಕಲಹ 9.ಸಕಾಲ 12.ಸುರಾಸುರ 13.ಕಾರಸ್ಥಾನ

ಸುಡೊಕು 6504

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9		6			5	3
2					5			
		1	2			4		9
		2					4	
4				9				5
	1		3		2		7	
	2			1		8		
1			8					4
	8			3	7		1	

6503 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

31 ಜುಲೈ 2025 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಸಪ್ತಮಿ ಗಂ. 28-59 **ನಕ್ಷತ್ರ:** ಚಿತ್ರಾ ಗಂ. 24-42 **ಯೋಗ:** ಸಾಧ್ಯ ಗಂ. 28-32 ಕರಣ: ಗರಜೆ ಗಂ. 15-49, ಕರ್ಕಾಟಕ ಮಾಸದ 15 ನೇ ದಿನ. **ಮಳೆ ನಕ್ಷತ್ರ:** ಪುಷ್ಯ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 01-30 03-00 **ಸೂರ್ಯೋದಯ:** 06-19 **ಸೂರ್ಯಾಸ್ತ:** 06-55, **ಮುಸ್ಲಿಂ ದಿನಾಂಕ:** 05 ಸಫರ್, ಅದೃಷ್ಟ ಸಂಖ್ಯೆ: 2, 7

ಮೇಷ: ಮುಂದಿನ ವ್ಯವಹಾರಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ಈ ದಿನ ಮಾಡಿಕೊಳ್ಳುವುದು ಉತ್ತಮ. ಧಾರ್ಮಿಕ ಕಾರ್ಯ ನಡೆಸುವಲ್ಲಿ ಯಶಸ್ವಿ ಆಗುವಿರಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಆಸಕ್ತಿ ಇರುವುದು.

ವೃಷಭ: ಪ್ರವಾಸಿ ಏಜೆಂಟರಿಗೆ ಅಧಿಕ ಆದಾಯವಿರುವುದರ ಜೊತೆಗೆ ಅಧಿಕ ಸಮಸ್ಯೆಯೂ ಎದುರಾಗಬಹುದು. ಈ ದಿನ ತೆರಿಗೆ ಸಂಬಂಧದ ಕೆಲಸಗಳೆಲ್ಲವನ್ನೂ ಪೂರ್ಣಗೊಳಿಸಿರಿ. ಅವಿವಾಹಿತರಿಗೆ ಹೊಸ ಸಂಬಂಧ ಕೂಡಿ ಬರಲಿದೆ.

ಮಿಥುನ: ನ್ಯಾಯವಾದಿಗಳು ತಮ್ಮ ಕಾರ್ಯಗಳನ್ನು ಉತ್ತಮ ರೀತಿಯಲ್ಲಿ ನೆಡೆಸಿದರೂ ತೀರ್ಪಿನ ಬಗ್ಗೆ ಕಳವಳ ಇರಲಿದೆ. ಸಾಮಾಜಿಕ ಕೆಲಸವನ್ನು ಬದಿಗಿಟ್ಟು ನಿಮ್ಮ ಜವಾಬ್ದಾರಿಯ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿ.

ಕರ್ಕಾಟಕ: ನಿಮ್ಮ ಸಾಮಾನ್ಯ ಜ್ಞಾನವನ್ನು ಉಪಯೋಗಿಸಿ ಜೀವನವನ್ನು ಉತ್ತಮ ಹಾದಿಯಲ್ಲಿ ಮುನ್ನಡೆಸುವಿರಿ. ಉದ್ವೇಗವನ್ನು ಹತೋಟಿಯಲ್ಲಿ ಇಡುವದು ಉತ್ತಮ. ಭರತನಾಟ್ಯ ಕಲಾವಿದರಿಗೆ ಉತ್ತಮ ವೇದಿಕೆ ಸಿಗಲಿದೆ.

ಸಿಂಹ: ಉದ್ಯೋಗಿ ವಿಚಾರಗಳತ್ತ ಹೆಚ್ಚಿನ ಗಮನವನ್ನು ಕೊಡಬೇಕಾಗುವುದು. ಯೋಚಿಸಿರುವ ಕೆಲಸಗಳು ಉತ್ತಮವಾಗಿ ನೆರವೇರಿವುದರಿಂದ ನೆಮ್ಮದಿ ಇರುವುದು. ಸಂದಿಗ್ಧ ಪರಿಸ್ಥಿತಿಗಳನ್ನು ಧೈರ್ಯದಿಂದ ಎದುರಿಸಿ.

ಕನ್ಯಾ: ನಿಮ್ಮ ಕ್ರಿಯಾತ್ಮಕತೆಗೆ ಇಂದು ಉತ್ಕೃಷ್ಟ ಮಟ್ಟದಲ್ಲಿ ಬೇಡಿಕೆ ಸಿಗಲಿದೆ. ಉದ್ಯೋಗ ಕ್ಷೇತ್ರದಲ್ಲಿ ಇಂದು ಹಲವು ಸವಾಲು ಎದುರಿಸಬೇಕಾಗುತ್ತದೆ. ವಿದೇಶದಲ್ಲಿರುವ ಮಕ್ಕಳಿಂದ ಸಂತಸದ ಸುದ್ದಿ ಕೇಳುವಿರಿ.

ತುಲಾ: ವಿಷಯಗಳನ್ನು ಹಿಡಿತಕ್ಕೆ ತೆಗೆದುಕೊಂಡು ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗಿ. ಕೆಲಸಕ್ಕೆ ಸಂಬಂಧಿಸಿದಂತೆ ಅಧ್ಯಯನವೂ ಅವಶ್ಯವಾಗಿ ಬೇಕಾಗುತ್ತದೆ. ಬ್ಯಾಂಕ್ ಸಿಬ್ಬಂದಿಗೆ ಹೆಚ್ಚಿನ ಕೆಲಸವಿರುವುದು.

ವೃಶ್ಚಿಕ: ಆಫೀಸಿನಲ್ಲಿ ಅಚ್ಚರಿಯ ಸಂಗತಿಗಳು ನಡೆಯಲಿವೆ. ನಿಮ್ಮ ಕೆಲಸಕ್ಕೆ ಕುಟುಂಬದ ಸದಸ್ಯರು ಹೆಚ್ಚಿನ ಸಹಾಯವನ್ನು ಮಾಡುವರು. ಇಂದು ರಾಜಕೀಯ ಪ್ರಭಾವೀ ವ್ಯಕ್ತಿಗಳೊಂದಿಗಿನ ಮಾತುಕಥೆ ಲಾಭವನ್ನು ತರಲಿದೆ.

ಧನು: ಊರಿನ ಅಭಿವೃದ್ಧಿ ಕಾರ್ಯದ ಜವಾಬ್ದಾರಿಗಳು ನಿಮ್ಮ ಸಾಮಾಜಿಕ ಬದುಕಿನ ಮೇಲೆ ಹೆಚ್ಚಿನ ಪರಿಣಾಮ ಬೀರುವುದು. ಪಾಲುದಾರರೊಂದಿಗೆ ಎಚ್ಚರಿಕೆಯಿಂದ ವ್ಯವಹರಿಸಿ. ತಂದೆಯ ಆರೋಗ್ಯ ಸುಧಾರಣೆಯಿಂದ ನೆಮ್ಮದಿ.

ಮಕರ: ಸರ್ಕಾರಿ ಸಂಬಂಧವಾದ ಅಧಿಕಾರಿಗಳೊಂದಿಗೆ ವ್ಯವಹರಿಸಲು ಇದು ಉತ್ತಮ ದಿನ. ಶಸ್ತ್ರ ವೈದ್ಯರಿಗೆ ಇಂದು ಹೆಚ್ಚಿನ ಅವಕಾಶಗಳು ದೊರೆಯಲಿವೆ. ಸ್ವ ಉದ್ಯೋಗಿಗಳಿಗೆ ಒಳ್ಳೆಯ ಲಾಭ ಗಳಿಸುವ ಅವಕಾಶ ಇರುವುದು.

ಕುಂಭ: ಮಂದಗತಿಯಲ್ಲಿ ಕೆಲಸ ಕಾರ್ಯಗಳು ನೆರವೇರಿದರೂ ದಿನಾಂತ್ಯದಲ್ಲಿ ಸಂಪೂರ್ಣವಾಗುವುದರ ಬಗ್ಗೆ ಸಂಶಯ ಬೇಡ. ಕೆಲಸದ ಮೇಲಿನ ಪ್ರಯಾಣಗಳು ಹಿತಕರವಾಗಿರುವುದು. ಹಣಕಾಸಿನ ಕೊರತೆ ಕಾಣುವುದಿಲ್ಲ.

ಮೀನ: ವ್ಯವಹಾರದ ಮಾತುಕತೆಗಳಿಗೆ ಒಳ್ಳೆಯ ದಿನ. ನಿರುದ್ಯೋಗಿಗಳಿಗೆ ಉತ್ತಮ ನೌಕರಿ ದೊರೆಯಲಿದೆ. ಉಸಿರಾಟದ ಸಮಸ್ಯೆ ಹೊಂದಿದವರಿಗೆ ವೈದ್ಯರ ಸಲಹೆ ಬೇಕಾಗುತ್ತದೆ. ಉಮಾಮಹೇಶ್ವರನನ್ನು ಆರಾಧಿಸಿ.

ಗುಂಡಣ್ಣ



ಭಿನ್ನ ಕೆನೆಪದರ; ವಿದ್ಯಾರ್ಥಿಗಳಿಗೆ ಫಜೀತಿ

ವೈದ್ಯಕೀಯ, ಎಂಜಿನಿಯರಿಂಗ್ ಪ್ರವೇಶ: ಅಖಿಲ ಭಾರತ ಕೋಟಾದ ಅಡಿ ಅವಕಾಶ, ರಾಜ್ಯ ಕೋಟಾಕ್ಕೆ ನಕಾರ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಭಿನ್ನ ಕೆನೆಪದರ ನೀತಿ ಅನ್ವಯಿಸುತ್ತಿರುವುದರಿಂದಾಗಿ, ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟಾದಡಿ ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವಾಗ ತಾರತಮ್ಯ ಅನುಭವಿಸುತ್ತಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಪಶುವೈದ್ಯಕೀಯ, ಹೋಮಿಯೋಪಥಿ ಕೋರ್ಸ್‌ಗಳ ಪ್ರವೇಶಕ್ಕಾಗಿ ಪ್ರತಿ ವರ್ಷ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್), ಐಐಟಿ ಸೇರಿದಂತೆ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ನಡೆಸುತ್ತದೆ. ನೀಟ್, ಜೆಇಇ ಸೇರಿದಂತೆ ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆಗಳನ್ನು ಬರೆದು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪೋಷಕರ ವೇತನ ಆದಾಯ ₹8 ಲಕ್ಷಕ್ಕಿಂತ ಹೆಚ್ಚಿದ್ದರೂ ಅಂತಹ ಮಕ್ಕಳಿಗೆ ಅಖಿಲ ಭಾರತ ಕೋಟಾದ ಅಡಿ ಪ್ರವೇಶ ನೀಡಲಾಗುತ್ತದೆ. ಅದೇ ವಿದ್ಯಾರ್ಥಿಗಳು ರಾಜ್ಯದ ಕೋಟಾದಡಿ ಪ್ರವೇಶ ಪಡೆಯುವಾಗ ಕೆನೆಪರದ ನೀತಿ ಅನ್ವಯಿಸಲಾಗುತ್ತಿದೆ.

ರಾಜ್ಯದಲ್ಲಿನ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ಕ್ಕೆ ಕೆನೆಪದರ ಅನ್ವಯವಾಗುವುದಿಲ್ಲ. ಆದರೆ, 2ಎ, 2ಬಿ, 3ಎ, ಮತ್ತು 3ಬಿ ಪ್ರವರ್ಗದಲ್ಲಿ ಬರುವ ಇತರೆ ಹಿಂದುಳಿದ ಜಾತಿಗಳಿಗೆ ಕೆನೆಪದರ ಅನ್ವಯವಾಗುತ್ತದೆ. ಹೀಗಾಗಿ, ₹8 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಪಡೆಯುವ ನೌಕರರ ಮಕ್ಕಳು ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯಲು ಸಾಮಾನ್ಯ ವರ್ಗದಡಿಯೇ ಸ್ಪರ್ಧಿಸುವ ಪರಿಸ್ಥಿತಿ ಇದೆ.

> **₹8 ಲಕ್ಷಕ್ಕಿಂತ ಕಡಿಮೆ ವೇತನವಿದ್ದ ಒಂದು ಲಕ್ಷಕ್ಕೂ ಹೆಚ್ಚು ನೌಕರರ ಆದಾಯ 7ನೇ ವೇತನ ಪರಿಷ್ಕರಣೆಯ ನಂತರ ಹೆಚ್ಚಾಗಿದೆ. ಕೆನೆಪದರ ಮಿತಿಯನ್ನು ₹15 ಲಕ್ಷಕ್ಕೆ ಮರುನಿಗದಿ ಮಾಡಲು ಮನವಿ ಸಲ್ಲಿಸಿದ್ದೇವೆ**
> **ಸಿ.ಎಸ್. ಷಡಾಕ್ಷರಿ,** ಅಧ್ಯಕ್ಷ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

‘ನೀಟ್‌ನಲ್ಲಿ ನನ್ನ ಮಗಳು ಅಖಿಲ ಭಾರತ ರ‍್ಯಾಂಕಿಂಗ್‌ನಲ್ಲಿ ಉತ್ತಮ ಸ್ಥಾನ ಪಡೆದಿದ್ದಾಳೆ. ನಮ್ಮದು ಈಡಿಗ ಸಮುದಾಯ. 7ನೇ ವೇತನ ಆಯೋಗದ ಶಿಫಾರಸಿನ ಅನುಷ್ಠಾನದ ನಂತರ ವಾರ್ಷಿಕ ವೇತನ ₹8 ಲಕ್ಷ ದಾಟಿದೆ. ಕೇಂದ್ರದ ನಿಯಮಗಳ ಪ್ರಕಾರ ಹಿಂದುಳಿದ ವರ್ಗಗಳ ಕೆನೆಪದರಕ್ಕೆ ಕೃಷಿ ಹಾಗೂ ವೇತನ ಆದಾಯ ಪರಿಗಣಿಸುವುದಿಲ್ಲ. ಹಾಗಾಗಿ, ಅಖಿಲ ಭಾರತ ಕೋಟಾದ ಸೀಟುಗಳು ಸುಲಭವಾಗಿ ಸಿಗುತ್ತವೆ. ಆದರೆ, ಅವಳನ್ನು ಬೇರೆ ರಾಜ್ಯಗಳಿಗೆ ಕಳುಹಿಸಲು ಕುಟುಂಬದಲ್ಲಿ ಸಮ್ಮತಿ ಇಲ್ಲ. ರಾಜ್ಯದ ಕೋಟಾಕ್ಕೆ ಕೆನೆಪದರ ಅನ್ವಯವಾಗುವುದರಿಂದ ಸಾಮಾನ್ಯ ವರ್ಗದಡಿ ಸೀಟು ಸಿಗುವುದು ಕಷ್ಟ. ಕೇಂದ್ರ ಸರ್ಕಾರದ 1993ರ ಅಧಿಸೂಚನೆಯಂತೆ ರಾಜ್ಯವೂ ಕೃಷಿ ಮತ್ತು ವೇತನ ಆದಾಯ ಹೊರಗಿಟ್ಟು ಕೆನೆಪದರ ನೀತಿ ಅನುಸರಿಸಬೇಕು’ ಎನ್ನುತ್ತಾರೆ ಪ್ರೌಢಶಾಲಾ ಶಿಕ್ಷಕ ಎಚ್‌.ಬಿ. ಧರ್ಮಪ್ಪ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗ ಮೀಸಲಾತಿಯಲ್ಲಿ ಕೆನೆಪದರ ಕುರಿತು ವಿವಿಧ ಆದೇಶಗಳನ್ನು ಹೊರಡಿಸಿವೆ. ಕೇಂದ್ರ ಸರ್ಕಾರ ಕೆನೆಪದರ ನೀತಿ ಕುರಿತು ಸ್ಪಷ್ಟ ಮಾರ್ಗಸೂಚಿ ಹೊರಡಿಸಿದೆ. ಹಿಂದುಳಿದ ವರ್ಗದ ಕುಟುಂಬಗಳ ವಾರ್ಷಿಕ ಆದಾಯ ಲೆಕ್ಕ ಹಾಕುವಾಗ ಕೃಷಿ ಮತ್ತು ವೇತನ ಪರಿಗಣಿಸದೆ, ವ್ಯಾಪಾರ, ವ್ಯವಹಾರ, ಕೈಗಾರಿಕೆ ಮತ್ತಿತರ ಸಂಪತ್ತಿನ ಆದಾಯಗಳನ್ನು ಪರಿಗಣಿಸಲಾಗುತ್ತದೆ. ಕರ್ನಾಟಕ ಹೊರತುಪಡಿಸಿ, ಇತರ ಬಹುತೇಕ ರಾಜ್ಯಗಳು ಕೇಂದ್ರದ ನಿಯಮಗಳನ್ನೇ ಅಳವಡಿಸಿಕೊಂಡಿವೆ. ಕರ್ನಾಟಕದಲ್ಲಿ ಮಾತ್ರ ವೇತನವನ್ನು ಒಳಗೊಂಡು ವಾರ್ಷಿಕ ಆದಾಯ ಲೆಕ್ಕ ಹಾಕಲಾಗುತ್ತದೆ.

ಅಂಕಿ ಅಂಶಗಳು

10,745
ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟು

9,133
ರಾಜ್ಯ ಕೋಟಾದ ಸೀಟು

1,612
ಅಖಿಲ ಭಾರತ ಕೋಟಾಕ್ಕೆ ರಾಜ್ಯದಿಂದ ನೀಡಿದ ಸೀಟು

ಮಕ್ಕಳ ಶಿಕ್ಷಣಕ್ಕೆ ಕೆನೆಪದರ ಅನ್ವಯ

ಸರ್ಕಾರಿ ಕೆಲಸದಲ್ಲಿ ಇದ್ದು ಇತರೆ ಉದ್ಯೋಗ ಅಥವಾ ಉನ್ನತ ಸ್ಥಾನಕ್ಕೆ ನೇಮಕಗೊಳ್ಳುವಾಗ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ರಾಜ್ಯ ಸರ್ಕಾರ ಅವರು ಪಡೆಯುತ್ತಿರುವ ವೇತನ ಆದಾಯ ಪರಿಗಣಿಸುತ್ತಿಲ್ಲ. ಆದರೆ, ಅವರ ಮಕ್ಕಳ ಶೈಕ್ಷಣಿಕ ಮೀಸಲಾತಿಗೆ ಕೆನೆಪದರ ಅನ್ವಯಿಸಲಾಗುತ್ತಿದೆ.

‘ರಾಜ್ಯ ಸರ್ಕಾರದ ಭಿನ್ನ ನೀತಿಯಿಂದಾಗಿ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಅನ್ಯಾಯವಾಗುತ್ತಿದೆ. ಅದರಲ್ಲೂ ರಾಜ್ಯ ಸರ್ಕಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್‌- ಬಿ, ಗ್ರೂಪ್‌-ಸಿ, ಮತ್ತು ಡಿ ದರ್ಜೆಯ ನೌಕರರ ಮಕ್ಕಳು, ಕುಟುಂಬದ ಸದಸ್ಯರು ಶೈಕ್ಷಣಿಕ ಹಾಗೂ ಉದ್ಯೋಗ ಮೀಸಲಾತಿ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ಈ ತಾರತಮ್ಯ ಸರಿಪಡಿಸಬೇಕು’ ಎನ್ನುತ್ತಾರೆ ಹಿಂದುಳಿದ ವರ್ಗಗಳ ಮುಖಂಡ ಎಸ್‌.ಕೆ. ಶಿವಾನಂದ್.

ಸುದ್ದಿ 2 ನಿಮಿಷ

‘ಡ್ರಗ್ಸ್’: ಕಾರ್ಯಾಚರಣೆ ಬಿರುಸು

ಮೈಸೂರು: ನಗರದಲ್ಲಿ ಮಾದಕವಸ್ತು ತಯಾರಿಕೆ ಘಟಕ ಪತ್ತೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು, ಮೂರು ದಿನಗಳಿಂದ ನಿರಂತರ ಕಾರ್ಯಾಚರಣೆ ನಡೆಸಿದ್ದು, 100ಕ್ಕೂ ಅಧಿಕ ಮಂದಿಯನ್ನು ಪರೀಕ್ಷೆಗೆ ಒಳಪಡಿಸಿದ್ದಾರೆ.

‘60ಕ್ಕೂ ಹೆಚ್ಚು ಮಂದಿ ಗಾಂಜಾ ಸೇವಿಸಿದ್ದು ಪತ್ತೆಯಾಗಿದೆ. 6 ಮಂದಿಯನ್ನು ಬಂಧಿಸಿದ್ದು, ಪ್ರಕರಣ ದಾಖಲಿಸಲಾಗಿದೆ. ಗಾಂಜಾ ಅಥವಾ ಡ್ರಗ್ಸ್ ಮಾರಾಟ ಪ್ರಕರಣಗಳಲ್ಲಿ ಹೆಚ್ಚು ಬಾರಿ ಭಾಗಿಯಾದವರನ್ನು ಗಡೀಪಾರು ಮಾಡುವ ಕುರಿತು ಚಿಂತನೆ ನಡೆದಿದೆ ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

‘ಮಂಗಳವಾರ ರಾತ್ರಿ ನಡೆದ ಕಾರ್ಯಾಚರಣೆಯಲ್ಲಿ 584 ಗ್ರಾಂ. ಗಾಂಜಾ, 5 ಗ್ರಾಂ. ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. 10 ಮೆಡಿಕಲ್ ಸ್ಟೋರ್‌ಗಳಲ್ಲಿ ತಪಾಸಣೆ ನಡೆಸಿದೆ. ಜಯಲಕ್ಷ್ಮೀಪುರಂ ಹಾಗೂ ಪಡುವಾರಹಳ್ಳಿಯಲ್ಲಿ ಹುಡುಗರ ಐದು ಪಿ.ಜಿಗಳಲ್ಲಿ ತಪಾಸಣೆ ನಡೆಸಲಾಗಿದೆ. ಮಂಡಿ ಮೊಹಲ್ಲಾ, ಉದಯಗಿರಿ ಹಾಗೂ ಲಷ್ಕರ್ ಠಾಣೆಗಳ ವ್ಯಾಪ್ತಿಯಲ್ಲಿ, ನಂಬರ್ ಪ್ಲೇಟ್ ಇಲ್ಲದೆ ಸಂಚರಿಸುತ್ತಿದ್ದ ಕೆಲವು ವಾಹನಗಳನ್ನು ವಶಕ್ಕೆ ಪಡೆಯಲಾಗಿದೆ. ಕಾರ್ಯಾಚರಣೆ ಮುಂದುವರಿಯಲಿದೆ’ ಎಂದರು.



‘ಉದಯಗಿರಿ, ಮಂಡಿಮೊಹಲ್ಲಾ ಮತ್ತು ಲಷ್ಕರ್ ಠಾಣಾ ವ್ಯಾಪ್ತಿಯ 10 ಮೆಡಿಕಲ್ ಶಾಪ್‌ಗಳಿಗೆ ಗ್ರಾಹಕರ ಸೋಗಿನಲ್ಲಿ ತೆರಳಿದ್ದ ಪೊಲೀಸರು, ವೈದ್ಯರ ಚೀಟಿ ಇಲ್ಲದೆ ಕೆಲ ಔಷಧಿಗಳನ್ನು ನೀಡಲಾಗುತ್ತಿದೆಯೇ ಎಂದು ಪರಿಶೀಲಿಸಿದರು. ಒಂದು ಮೆಡಿಕಲ್ ಶಾಪ್‌ನಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚುವರಿ ಔಷಧಿ ದಾಸ್ತಾನು ಇದ್ದುದ್ದು ಪತ್ತೆಯಾಗಿದ್ದು, ಅದರ ನೋಂದಣಿ ರದ್ದುಪಡಿಸುವಂತೆ ಔಷಧ ನಿಯಂತ್ರಕರಿಗೆ ಪತ್ರ ಬರೆಯಲಾಗಿದೆ’ ಎಂದು ತಿಳಿಸಿದರು.

‘ಅಕ್ರಮದ ಪುರಾವೆ ಸಲ್ಲಿಸಿ’

ಬೆಂಗಳೂರು: ‘ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಸಾಧ್ಯವಾಗದ ಹತಾಶೆಯಿಂದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಚುನಾವಣಾ ಅಕ್ರಮದ ಆರೋಪ ಮಾಡುತ್ತಿದ್ದಾರೆ. ಕಾಂಗ್ರೆಸ್ ಬಳಿ ಪುರಾವೆಗಳಿದ್ದರೆ ನ್ಯಾಯಾಲಯಕ್ಕೆ ಸಲ್ಲಿಸಲಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸವಾಲು ಹಾಕಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಹುಲ್ ಅವರು ಮಹದೇವಪುರ ವಿಧಾನಸಭಾ ಕ್ಷೇತ್ರದಿಂದ ಪಾದಯಾತ್ರೆ ಮಾಡುತ್ತಾರಂತೆ. ಅವರು ಹತಾಶರಾಗಿದ್ದಾರೆ. ದಿಕ್ಕು ತೋಚುತ್ತಿಲ್ಲ. ಒಂದೆಡೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಬೀದಿಗೆ ಬಂದಿದ್ದಾರೆ. ಜಾಮೀನು ಪಡೆದಿದ್ದಾರೆ. ಕಾಂಗ್ರೆಸ್ ಮತ್ತು ರಾಹುಲ್ ನಡವಳಿಕೆ ಗಮನಿಸಿದರೆ ಅಯ್ಯೋ ಪಾಪ ಅನಿಸುತ್ತದೆ’ ಎಂದರು.

2024ರ ಲೊಕಸಭಾ ಚುನಾವಣೆಯಲ್ಲಿ ಹೇಗಾದರೂ ಮಾಡಿ ಗೆದ್ದು ಕೇಂದ್ರದಲ್ಲಿ ಅಧಿಕಾರಕ್ಕೆ ಬರಬೇಕೆಂದು ಕಾಂಗ್ರೆಸ್ ಪ್ರಯತ್ನ ಮಾಡಿತ್ತು. ಆದರೆ, ಗೆಲುವು ಸಾಧ್ಯವಾಗಲಿಲ್ಲ. ಈಗ ಚುನಾವಣಾ ಅಕ್ರಮದ ಬಗ್ಗೆ ಮಾತನಾಡುತ್ತಿದ್ದಾರೆ. ಬಿಜೆಪಿಗೆ ಅಕ್ರಮ ಎಸಗುವ ದಾರಿ ಗೊತ್ತಿದ್ದರೆ 2023ರ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಬಹುದಿತ್ತು. ಕಾಂಗ್ರೆಸ್ 136 ಸ್ಥಾನ ಹೇಗೆ ಪಡೆಯಿತು? ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲಿ ಹೇಗೆ ಗೆಲುವು ಪಡೆಯಿತು ಎಂದು ಪ್ರಶ್ನಿಸಿದರು. ‘ಆಗಸ್ಟ್‌ನಲ್ಲಿ ಕರ್ನಾಟಕಕ್ಕೆ ಬಂದು ಏನು ಮಾಡುತ್ತಾರೆ ನೋಡುತ್ತೇವೆ. ಬಿಜೆಪಿ ಸುಮ್ಮನೆ ಕೂರದೇ ಕಾರ್ಯತಂತ್ರ ರೂಪಿಸಲಿದೆ. ರಾಜ್ಯದ ಪೊಲೀಸರು ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕಲು ಅವಕಾಶ ನೀಡುವುದಿಲ್ಲ. ಆದರೆ, ರಾಹುಲ್, ಸಿದ್ದರಾಮಯ್ಯ ಅವರು ಎಲ್ಲಿ ಬೇಕಾದರೂ ಪಾದಯಾತ್ರೆ ನಡೆಸಬಹುದು. ಮೆರವಣಿಗೆ ಮಾಡಬಹುದೇ? ಕಾನೂನು ಎಲ್ಲರಿಗೂ ಒಂದೇ ಇರಬೇಕು’ ಎಂದರು.

ಆ.5ರಿಂದ ಅನಿರ್ದಿಷ್ಟಾವಧಿ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 38 ತಿಂಗಳ ಹಿಂಬಾಕಿ ಪಾವತಿ, 2024ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಪದಾಧಿಕಾರಿಗಳು ಬುಧವಾರ ಉಪವಾಸ ಸತ್ಯಾಗ್ರಹ ನಡೆಸಿದರು.

ಸರ್ಕಾರ ಆಗಸ್ಟ್ 4ರೊಳಗೆ ಬೇಡಿಕೆ ಈಡೇರಿಸದಿದ್ದರೆ, ಆಗಸ್ಟ್ 5ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ಸಮಿತಿಯ ಮುಖಂಡರು ಎಚ್ಚರಿಕೆ ನೀಡಿದರು.

‘2020ರ ಜನವರಿ 1ರಿಂದ ಸಾರಿಗೆ ನೌಕರರ ವೇತನ ಶೇ 15ರಷ್ಟು ಹೆಚ್ಚಳವಾಗಿತ್ತು. ಪರಿಷ್ಕರಣೆ ನಂತರದ 38 ತಿಂಗಳ ಹಣ ನೀಡುವುದು ಬಾಕಿ ಇದೆ. 2023ರ ಡಿಸೆಂಬರ್ 31ರಂದು ಇದ್ದ ಮೂಲ ವೇತನದಲ್ಲಿ ಶೇ 31ರಷ್ಟು ತುಟ್ಟಿ ಭತ್ಯೆ ವಿಲೀನಗೊಳಿಸಿ, 2024ರ ಜನವರಿ 1ರಿಂದ ಅನ್ವಯವಾಗುವಂತೆ ಶೇ 25ರಷ್ಟು ವೇತನ ಹೆಚ್ಚಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಏಪ್ರಿಲ್ 15ರಂದು ಕರೆದಿದ್ದ ಸಭೆಯಲ್ಲಿ ‘ನಮ್ಮ ಬೇಡಿಕೆಗಳನ್ನು ಶೀಘ್ರವೇ ಈಡೇರಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಆದರೆ, ಜುಲೈ 4ರಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಾರಿಗೆ ನಿಗಮಗಳ ನೌಕರರಿಗೆ 38 ತಿಂಗಳ ಹಿಂಬಾಕಿ ಕೊಡಬೇಕಾಗಿಲ್ಲ. 2027ರವರೆಗೆ ವೇತನ ಪರಿಷ್ಕರಣೆ ಮಾಡುವುದಿಲ್ಲ ಎಂದು ತೀರ್ಮಾನಿಸಿದ್ದಾರೆ. ಹೀಗಾಗಿ ಮುಷ್ಕರದ ಹಾದಿ ಹಿಡಿಯುವುದು ಅನಿವಾರ್ಯ’ ಎಂದು ಪ್ರತಿಭಟನಕಾರರು ತಿಳಿಸಿದರು.

ಜಂಟಿ ಕ್ರಿಯಾ ಸಮಿತಿಯ ವಿವಿಧ ಸಂಘಟನೆಗಳ ಮುಖಂಡರಾದ ಎಚ್‌.ವಿ. ಅನಂತಸುಬ್ಬರಾವ್, ಬಿ.ಜಯದೇವರಾಜೇ ಅರಸು, ಎಚ್‌.ಡಿ.ರೇವಪ್ಪ, ವೆಂಕಟ ರಮಣಪ್ಪ, ಎ.ಸೋಮಣ್ಣ ಸೇರಿದಂತೆ ನೂರಾರು ಸದಸ್ಯರು ಪಾಲ್ಗೊಂಡಿದ್ದರು.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಸದಸ್ಯರು ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಮುಷ್ಕರಕ್ಕೆ ಬಾಹ್ಯ ಬೆಂಬಲ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಆಗಸ್ಟ್ 5ರಂದು ಕರೆ ನೀಡಿರುವ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಬಾಹ್ಯ ಬೆಂಬಲ ನೀಡಲಾಗುವುದು ಎಂದು ರಾಜ್ಯ ರಸ್ತೆ ಸಾರಿಗೆ ಮಜ್ದೂರ್ ಸಂಘ ತಿಳಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸುರೇಶ ನಾಡಗೇರ, ‘2021ರ ಸಾರಿಗೆ ಮುಷ್ಕರದ ಸಮಯದಲ್ಲಿ ನೌಕರರನ್ನು ವಜಾ ಮಾಡಿರುವ ಆದೇಶವನ್ನು ರದ್ದುಗೊಳಿಸಬೇಕು. ಚಾಲಕರು,ನಿರ್ವಾಹಕ ಸಿಬ್ಬಂದಿಗೆ ವಸತಿ ಸೌಲಭ್ಯ ಕಲ್ಪಿಸಬೇಕು. ನಾಲ್ಕು ನಿಗಮಗಳಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದನ್ನು ಸ್ಥಗಿತಗೊಳಿಸಬೇಕು’ ಎಂದರು.

ಮತ ಕಳ್ಳತನ: 5ರಂದು ರಾಜ್ಯಕ್ಕೆ ರಾಹುಲ್

ಬೆಂಗಳೂರು: ‘ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಇತರ ಮುಖಂಡರ ಜೊತೆ ಚರ್ಚಿಸಿದ ಬಳಿಕ ರಾಹುಲ್ ಗಾಂಧಿ ಭಾಗವಹಿಸಲಿರುವ ಆಗಸ್ಟ್ 5ರ ಕಾರ್ಯಕ್ರಮದ ಸ್ವರೂಪ ಹಾಗೂ ಸ್ಥಳದ ಬಗ್ಗೆ ತೀರ್ಮಾನಿಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಸುರ್ಜೇವಾಲಾ ಅವರು ಶಾಸಕರು, ವಿಧಾನ ಪರಿಷತ್ ಸದಸ್ಯರು, ಪರಾಜಿತ ಅಭ್ಯರ್ಥಿಗಳು, ಕೆಪಿಸಿಸಿ ಪದಾಧಿಕಾರಿಗಳು, ಪಕ್ಷದ ವಿವಿಧ ಘಟಕಗಳ ಅಧ್ಯಕ್ಷರ ಜೊತೆ ಗುರುವಾರ ಸಭೆ ನಡೆಸಲಿದ್ದಾರೆ. ಈ ಸಭೆಯಲ್ಲಿ ಮುಖ್ಯಮಂತ್ರಿ ಕೂಡಾ ಭಾಗವಹಿಸಲಿದ್ದಾರೆ’ ಎಂದರು.

‘ಕಾರ್ಯಕ್ರಮಕ್ಕೆ ಕೆಲವು ಸ್ಥಳಗಳನ್ನು ನಾವು ಸೂಚಿಸಿದ್ದೇವೆ. ಸುರ್ಜೇವಾಲಾ ಅವರು ಸ್ಥಳ ಪರಿಶೀಲನೆ ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಎಲ್ಲ ಕ್ಷೇತ್ರಗಳಿಂದ ಜನ ಬರಬೇಕು. ಆಗಸ್ಟ್ 3ರ ಒಳಗೆ ಬ್ಲಾಕ್ ಮಟ್ಟದಲ್ಲಿ ಕಾರ್ಯಕರ್ತರ ಸಭೆ ಮಾಡಬೇಕು. ತಮ್ಮ ಕ್ಷೇತ್ರಗಳಲ್ಲಿ ಶಾಸಕರು ಸಭೆ ಮಾಡಬೇಕು ಎಂದು ಸೂಚನೆ ನೀಡಲಾಗಿದೆ’ ಎಂದರು.

ಮನೆಗೆಲಸದ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ

ಪ್ರಜ್ವಲ್ ಪ್ರಕರಣ: ಸ್ಪಷ್ಟನೆ ಕೇಳಿದ ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನೆಗೆಲಸದ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಪ್ರಕರಣದಲ್ಲಿ ಕೆಲವು ತಾಂತ್ರಿಕ ಸಾಕ್ಷ್ಯಗಳ ಕುರಿತಂತೆ ಸ್ಪಷ್ಟನೆ ಅಗತ್ಯವಿದ್ದು ಅವುಗಳನ್ನು ನ್ಯಾಯಾಲಯಕ್ಕೆ ವಿಶದಪಡಿಸಿ’ ಎಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಪ್ರಾಸಿಕ್ಯೂಷನ್ ಮತ್ತು ಪ್ರಜ್ವಲ್ ಪರ ವಕೀಲರಿಗೆ ಸೂಚಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಆದೇಶ ಪ್ರಕಟಿಸಬೇಕಿದ್ದ, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು, ‘ಗೂಗಲ್ ಮ್ಯಾಪ್ ಆಧರಿಸಿ ವಾದ ಮಂಡಿಸಿದ್ದೀರಿ. ಗೂಗಲ್ ಸಂಸ್ಥೆಯಿಂದ ಅಧಿಕೃತ ಮಾಹಿತಿ ಇಲ್ಲದ ದಾಖಲೆ ಪರಿಗಣಿಸಬಹುದೇ’ ಎಂದು ಉಭಯ ಪಕ್ಷಗಾರರನ್ನು ಪ್ರಶ್ನಿಸಿದರು.

'ಹೊಳೆನರಸೀಪುರ ಫಾರ್ಮ್ ಹೌಸ್ ತೋರಿಸಲು ಗೂಗಲ್ ಮ್ಯಾಪ್ ಬಳಕೆ ಮಾಡಲಾಗಿದೆ ಎಂಬುದು ಮತ್ತು ಮಹಜರು ವೇಳೆ ಆರೋಪಿಯ ಮೊಬೈಲ್ ಫೋನ್ ಸ್ಯಾಮ್ಸಂಗ್ ಜೆ 4 ಜಪ್ತಿ ಮಾಡಲಾಗಿರುವುದನ್ನು ಪರಿಶೀಲಿಸಲಾಗಿದೆ. ಈ ಕುರಿತಂತೆ ವಿಚಾರಣೆ ವೇಳೆ ಗೂಗಲ್ ಮ್ಯಾಪ್ ಆಧರಿಸಿ ಉಭಯತ್ರರೂ ವಾದ ಮಂಡಿಸಿದ್ದೀರಿ. ಹೀಗಾಗಿ, ಗೂಗಲ್ ಸಂಸ್ಥೆಯ ಅಧಿಕೃತ ಮಾಹಿತಿ ಇಲ್ಲದೆ ದಾಖಲೆ ಪರಿಗಣಿಸಬಹುದೇ ಎಂಬುದನ್ನು ಸ್ಪಷ್ಟಪಡಿಸಿ’ ಎಂದು ನ್ಯಾಯಾಧೀಶರು ಉಭಯ ಪಕ್ಷಗಾರರಿಗೆ ಸೂಚಿಸಿದರು. ಬಳಿಕ, ಆಗಸ್ಟ್ 1ಕ್ಕೆ ಆದೇಶ ಪ್ರಕಟಿಸುವುದಾಗಿ ತಿಳಿಸಿದರು. ಪ್ರಾಸಿಕ್ಯೂಷನ್ ಪರ ಬಿ.ಎನ್. ಜಗದೀಶ್, ಅಶೋಕ್ ನಾಯಕ್ ಮತ್ತು ಪ್ರಜ್ವಲ್ ಪರ ಅರುಣ್ ಹಾಗೂ ವಿಪುಲ್ ಜೈನ್ ಹಾಜರಿದ್ದರು.

ಪ್ರಸ್ತಾವ ಮಂಡನೆಗೆ ನಿರ್ದೇಶನ

ನಾಗರಬಾವಿಯಲ್ಲಿರುವ ಭಾರತ ವಿಶ್ವವಿದ್ಯಾಲಯದ ರಾಷ್ಟ್ರೀಯ ಕಾನೂನು ಶಾಲೆಯ (ಎನ್‌ಎಲ್‌ಎಸ್‌ಯುಐ) ಪ್ರವೇಶಾತಿಯಲ್ಲಿ ಲೈಂಗಿಕ ಅಲ್ಪಸಂಖ್ಯಾತರಿಗೆ ಶೇ 0.5ರಷ್ಟು ಮೀಸಲಾತಿ ಒದಗಿಸುವ ಪ್ರಸ್ತಾವವನ್ನು ಮುಂಬರುವ ಆಗಸ್ಟ್‌-ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸುವಂತೆ ಹೈಕೋರ್ಟ್ ನಿರ್ದೇಶಿಸಿದೆ.

‘ಲೈಂಗಿಕ ಅಲ್ಪಸಂಖ್ಯಾತರಿಗೆ ಮೀಸಲು ಒದಗಿಸಿ’ ಎಂಬ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಎನ್‌ಎಲ್‌ಎಸ್‌ಯುಐ ಸಲ್ಲಿಸಿರುವ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನು ಶಿವರಾಮನ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಮೂಲ ಅರ್ಜಿದಾರರ ಮನವಿ ಮತ್ತು ಹಣಕಾಸಿನ ನೆರವು ನೀಡಿಕೆಯೂ ಸೇರಿದಂತೆ ಒಟ್ಟಾರೆ ಮೀಸಲು ಒದಗಿಸುವ ವಿಚಾರವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಬೇಕು’ ಎಂದು ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಅಕ್ಟೋಬರ್‌ಗೆ ಮುಂದೂಡಿದೆ.

‘ವಿಶ್ವವಿದ್ಯಾಲಯ ಮೀಸಲು ಒದಗಿಸುವಂತೆ ನಿರ್ದೇಶಿಸಲು ನ್ಯಾಯಾಲಯ ಅಥವಾ ರಾಜ್ಯ ಸರ್ಕಾರಕ್ಕೆ ಅಧಿಕಾರವಿಲ್ಲ. ಶೇ 0.5ರಷ್ಟು ಮೀಸಲಾತಿ ಒದಗಿಸಬೇಕೆನ್ನುವ ಆದೇಶಕ್ಕೆ ಯಾವುದೇ ವೈಜ್ಞಾನಿಕ ತಳಹದಿಯೂ ಇಲ್ಲ’ ಎಂದು ವಿಶ್ವ ವಿದ್ಯಾಲಯ ಪ್ರತಿಪಾದಿಸಿದೆ.

ಎಲ್ಲೂ ಸಿಕ್ಕಿಲ್ಲ ಶವಗಳ ಅವಶೇಷ

ಒಂದನೇ ಪುಟದಿಂದ....

ಇಲ್ಲಿಗೆ ನೆಲ ಅಗೆಯುವ ಯಂತ್ರ ಒಯ್ಯುವುದು ಕಷ್ಟ. ಆದ್ದರಿಂದ ಬುಧವಾರ ಸುಮಾರು 20 ಕಾರ್ಮಿಕರನ್ನು ಬಳಸಿಕೊಂಡು ಹಾರೆ, ಪಿಕ್ಕಾಸಿ ಬಳಸಿಯೇ ಈ ಜಾಗಗಳನ್ನು ಅಗೆಯಲಾಯಿತು.

ಸಾಕ್ಷಿ ದೂರುದಾರನನ್ನು ಎಸ್‌ಐಟಿ ಅಧಿಕಾರಿಗಳ ತಂಡ ಬುಧವಾರ ಬೆಳಿಗ್ಗೆ 11.15ರ ವೇಳೆಗೆ ಕಾಡಿನ ಒಳಕ್ಕೆ ಕರೆದೊಯ್ಯಿತು. ಮಧ್ಯಾಹ್ನದ ವರೆಗೆ ಎರಡು ಕಡೆ ಅಗೆಯುವ ಕಾರ್ಯ ಪೂರ್ಣಗೊಂಡಿತು. ಮಧ್ಯಾಹ್ನದ ಬಳಿಕ ಮತ್ತೆರಡು ಜಾಗಗಳನ್ನು ಅಗೆಯಲಾಯಿತು. ಪ್ರತಿ ಜಾಗದಲ್ಲಿ ಸುಮಾರು 6 ಅಡಿಗಳಷ್ಟು ಆಳಕ್ಕೆ ಗುಂಡಿ ತೆಗೆಯಲಾಗಿದೆ ಎಂದು ಎಸ್‌ಐಟಿ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಅವರು ಸ್ಥಳದಲ್ಲಿದ್ದರು. ಸಾಕ್ಷಿ ದೂರುದಾರ ವ್ಯಕ್ತಿಯೂ ಮುಖಕ್ಕೆ ಮುಸುಕು ಧರಿಸಿಕೊಂಡು ಶೋಧ ಕಾರ್ಯ ನಡೆದ ಸ್ಥಳದಲ್ಲಿ ಹಾಜರಿದ್ದರು. ಆತನ ವಕೀಲರ ತಂಡವೂ ಸ್ಥಳಕ್ಕೆ ಬಂದಿತ್ತು.

ಪ್ರತ್ಯೇಕ ಊಟ: ಸಾಕ್ಷಿ ದೂರುದಾರನಿಗೆ ಎಸ್‌ಐಟಿ ಸಿಬ್ಬಂದಿಗೆ ಪೂರೈಸಿದ ಊಟದ ಬದಲು ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಬುಧವಾರ ಮಧ್ಯಾಹ್ನವೂ ಸ್ನಾನಘಟ್ಟದಲ್ಲಿ ಜನರಿಂದ ದೂರಕ್ಕೆ ಸಾಗಿದ ಅವರು ವಕೀಲರ ತಂಡವು ಹೋಟೆಲ್‌ನಿಂದ ತರಿಸಿದ ಊಟವನ್ನು ಸೇವಿಸಿದರು.



ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶೋಧಕಾರ್ಯ ನಡೆಯುತ್ತಿರುವ ಜಾಗಕ್ಕೆ ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಅವರು ಬುಧವಾರ ಭೇಟಿ ನೀಡಿದರು ಚಿತ್ರ: ಫಕ್ರುದ್ದೀನ್ ಎಚ್

ಮೊಹಾಂತಿ ಭೇಟಿ

ಧರ್ಮಸ್ಥಳದಲ್ಲಿ ಹೂತು ಹಾಕಿದೆ ಎನ್ನಲಾದ ಶವಗಳ ಪತ್ತೆಗೆ ಶೋಧ ನಡೆಯುತ್ತಿರುವ ಸ್ಥಳಕ್ಕೆ ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಬುಧವಾರ ಭೇಟಿ ನೀಡಿದರು. ಶವಗಳ ಅವಶೇಷ ಪತ್ತೆಗಾಗಿ ಅಗೆದ ಸ್ಥಳಗಳನ್ನು ಪರಿಶೀಲಿಸಿದರು. ಎಸ್‌ಐಟಿ ಡಿಐಜಿ ಎಂ.ಎನ್. ಅನುಚೇತ್, ಎಸ್‌.ಪಿ.ದರ್ಜೆಯ ಅಧಿಕಾರಿಗಳಾದ ಜಿತೇಂದ್ರ ಕುಮಾರ್ ದಯಾಮ, ಸಿ.ಎ.ಸೈಮನ್ ಇದ್ದರು.

ಪ್ರಕರಣ ಸಂಬಂಧ ಸಹಾಯವಾಣಿ ಆರಂಭಿಸಲಾಗಿದೆ. ಸಂಪರ್ಕಸಂಖ್ಯೆ: 0824–2005301; ವಾಟ್ಸ್‌ಆ್ಯಪ್ ಸಂಖ್ಯೆ: 8277986369.
ಇ–ಮೇಲ್: sitdps@ksp ov.in

ಸಿ.ಎಂ–ಡಿಸಿಎಂ ಗುಂಪುಗಾರಿಕೆ: ಬಿಜೆಪಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಸಿದ ಶಾಸಕರ ಸಭೆಗೆ ಉಪ ಮುಖ್ಯಮಂತ್ರಿಗೆ ಆಹ್ವಾನ ಇಲ್ಲ. ಇದು ಇಬ್ಬರ ಮಧ್ಯದ ಗುಂಪುಗಾರಿಕೆಗೆ ಸಾಕ್ಷಿ ಎಂದು ಬಿಜೆಪಿ ಟೀಕಿಸಿದೆ.

ಈ ಕುರಿತು ಬುಧವಾರ ಪ್ರತ್ಯೇಕವಾಗಿ ಮಾತನಾಡಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು, ಸಿದ್ದರಾಮಯ್ಯ ತಮ್ಮ ಶಕ್ತಿ ತೋರಿಸಲು ಡಿ.ಕೆ. ಶಿವಕುಮಾರ್ ಅವರನ್ನು ಆಹ್ವಾನಿಸಿಲ್ಲ. ಸಿದ್ದರಾಮಯ್ಯ ಎಲ್ಲ ವರ್ಗಗಳ ನಾಯಕರಾಗಿ ಈಗ ಉಳಿದಿಲ್ಲ. ಅವರು ಸ್ವಹಿತಾಸಕ್ತಿ ನೋಡಿಕೊಳ್ಳುತ್ತಿದ್ದಾರೆ. ಶಾಸಕರ ಮೇಲೆ ಹಿಡಿತ ಕಳೆದುಕೊಂಡಿದ್ದಾರೆ. ಅವರ ವಿಶ್ವಾಸ ಮರಳಿಗಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಶಾಸಕರ ಮಧ್ಯೆಯೂ ವ್ಯತ್ಯಾಸ ಕಾಣಿಸುತ್ತಿದೆ. ರಷ್ಯಾ–ಉಕ್ರೇನ್ ರೀತಿ ಕಾಂಗ್ರೆಸ್‌ನಲ್ಲೂ ಯುದ್ಧ ಪ್ರಾರಂಭವಾಗಲಿದೆ ಎಂದಿದ್ದಾರೆ.

ಎರಡು ವರ್ಷಗಳಿಂದ ನಯಾಪೈಸೆ ಕೊಡದ ಮುಖ್ಯಮಂತ್ರಿ ಪ್ರತಿ ಕ್ಷೇತ್ರಕ್ಕೂ ₹50 ಕೋಟಿ ಕೊಡುವ ನಾಟಕ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಎಂಟು ಜಿಲ್ಲೆಗಳ ಸಚಿವರು, ಶಾಸಕರ ಜೊತೆ ದಿನವಿಡೀ ಪ್ರತ್ಯೇಕ ಸಭೆ

ಬಾಂಧವ್ಯ ಗಟ್ಟಿಗೊಳಿಸಲು ಸಿ.ಎಂ ಕಸರತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟು ಜಿಲ್ಲೆಗಳ ಉಸ್ತುವಾರಿ ಸಚಿವರು, ಆ ಜಿಲ್ಲೆಗಳನ್ನು ಪ್ರತಿನಿಧಿಸುವ ಸಚಿವರು, ಶಾಸಕರ ಜೊತೆ ಬುಧವಾರ ಪ್ರತ್ಯೇಕವಾಗಿ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭಾ ಕ್ಷೇತ್ರಗಳಲ್ಲಿನ ಸಮಸ್ಯೆಗಳು, ಯೋಜನೆಗಳ ಅನುಷ್ಠಾನ, ವಿಶೇಷವಾಗಿ ಹಂಚಿಕೆ ಆಗಲಿರುವ ₹ 50 ಕೋಟಿ ಅನುದಾನದ ಶೇಕಡಾ 100ರಷ್ಟು ಸದ್ಬಳಕೆ ಕುರಿತು ಚರ್ಚೆ ನಡೆಸಿದರು.

ವಿಧಾನಸೌಧದಲ್ಲಿರುವ ತಮ್ಮ ಕಚೇರಿಯಲ್ಲಿ ಇಡೀ ದಿನ ವಿಚಾರವಿನಿಮಯ ನಡೆಸಿದ ಮುಖ್ಯಮಂತ್ರಿ, ಸಚಿವರು– ಶಾಸಕರ ನಡುವೆ ವಿಶ್ವಾಸ ಮೂಡಿಸಿ, ಬಾಂಧವ್ಯ ಗಟ್ಟಿಗೊಳಿಸುವ ಕಸರತ್ತು ನಡೆಸಿದರು. .

ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯನಗರ, ಬಳ್ಳಾರಿ, ಬೆಳಗಾವಿ, ಧಾರವಾಡ, ಉತ್ತರಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರೂ, ಜಿಲ್ಲೆಯ ಸಚಿವರೂ ಶಾಸಕರ ಜೊತೆ ಮುಖ್ಯಮಂತ್ರಿ ಸಭೆ ನಡೆಸಿದರು.

‘ರಾಜ್ಯದ ಆರ್ಥಿಕತೆಯು ಕೇಂದ್ರ ಸರ್ಕಾರದ ಅಸಹಕಾರ, ಹಿಂದಿನ ಸರ್ಕಾರದ ಆರ್ಥಿಕ ದುರಾಡಳಿತ, ಅಶಿಸ್ತುಗಳಿಂದಾಗಿ ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿದ್ದರೂ ಆಡಳಿತ ಉತ್ತಮ ದಿಕ್ಕಿನ ಕಡೆ ನಡೆಸುತ್ತಿದ್ದೇವೆ. ಎಲ್ಲ ಸಂಕಷ್ಟಗಳ ನಡುವೆಯೂ ವಿಶೇಷ ಅನುದಾನದ ರೂಪದಲ್ಲಿ ₹ 50 ಕೋಟಿ ನೀಡಲಾಗಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು’ ಎಂದು ಶಾಸಕರಿಗೆ ಮುಖ್ಯಮಂತ್ರಿ ಸಲಹೆ ನೀಡಿದ್ದಾರೆ.

‘ನಾವು ಜಾರಿಗೆ ತಂದ ಯೋಜನೆಗಳಿಂದಾಗಿ ತಲಾ ಆದಾಯದ ವಿಚಾರದಲ್ಲಿ ನಮ್ಮ ರಾಜ್ಯ ದೇಶದಲ್ಲಿ ಮೊದಲ ಸ್ಥಾನದಲ್ಲಿದೆ. ಇತ್ತೀಚೆಗೆ ನಡೆದಿರುವ ಅಧ್ಯಯನಗಳ ಪ್ರಕಾರ ‘ಶಕ್ತಿ’ ಯೋಜನೆಯಿಂದ ಮಹಿಳೆಯರ ಉದ್ಯೋಗದ ಪ್ರಮಾಣ ಬೆಂಗಳೂರಿನಲ್ಲಿ ಶೇಕಡಾ 23ರಷ್ಟು, ಧಾರವಾಡದಲ್ಲಿ ಶೇಕಡಾ 21ರಷ್ಟು ಹೆಚ್ಚಾಗಿದೆ’ ಎಂದಿದ್ದಾರೆ.

‘ರಾಜ್ಯದ ಜನರ ತಲಾ ಆದಾಯ ಇಡೀ ದೇಶದಲ್ಲಿ ನಂಬರ್ ಒನ್ ಆಗಿರುವುದನ್ನು ಕ್ಷೇತ್ರದ ಮತದಾರರಿಗೆ ಅರ್ಥ ಮಾಡಿಸಬೇಕು. ರಾಜ್ಯದ ಆರ್ಥಿಕ ಸಾಧನೆಗೆ ನಾವು ಜಾರಿ ಮಾಡಿದ ಐದು ಗ್ಯಾರಂಟಿಗಳು ನೇರ ಕಾರಣವಾಗಿದೆ ಎನ್ನುವುದನ್ನು ನೀವು ಅರ್ಥ ಮಾಡಿಕೊಂಡು, ಜನರಿಗೆ ಅರ್ಥ ಮಾಡಿಸಬೇಕು’ ಎಂದು ಸಲಹೆ ನೀಡಿದ್ದಾರೆ.

ಆರ್ಥಿಕ ಸ್ಥಿತಿಗತಿಯ ಚಿತ್ರಣವನ್ನು ಸಭೆಯಲ್ಲಿ ತೆರೆದಿಟ್ಟ ಮುಖ್ಯಮಂತ್ರಿ, ‘ಹಿಂದಿನ ಬಿಜೆಪಿ ಸರ್ಕಾರ ಮಾಡಿರುವ ಲೋಪಗಳನ್ನು ಸರಿ ಮಾಡುವ ಜೊತೆಗೆ ಆರ್ಥಿಕತೆಗೆ ಚೈತನ್ಯ ನೀಡುತ್ತಿದ್ದೇವೆ. ಕೇಂದ್ರ ಸರ್ಕಾರವು 15ನೇ ಹಣಕಾಸು ಆಯೋಗದ ವರದಿಯ ನೆಪದಲ್ಲಿ ಶೇ 23ರಷ್ಟು ತೆರಿಗೆ ಪಾಲು ಕಡಿಮೆ ಮಾಡಿದೆ. ರಾಜ್ಯಕ್ಕೆ ಐದು ವರ್ಷಗಳಲ್ಲಿ ₹ 68 ಸಾವಿರ ಕೋಟಿಗೂ ಹೆಚ್ಚು ನಷ್ಟವಾಗಿದೆ. ಇದನ್ನೂ ಕ್ಷೇತ್ರದ ಮತದಾರರಿಗೆ ಅರ್ಥ ಮಾಡಿಸಬೇಕು’ ಎಂದಿದ್ದಾರೆ. ‘ಯೂರಿಯಾ ಪೂರೈಕೆ ವಿಚಾರದಲ್ಲಿ ಕೇಂದ್ರದ ಅಸಹಕಾರ ಇದ್ದರೂ ಬಿಜೆಪಿಯವರು ಪ್ರತಿಭಟನೆ ಮಾಡುತ್ತಿರುವುದು ರಾಜಕೀಯ ದುರುದ್ದೇಶ ಹಾಗೂ ನಾಚಿಕೆಗೇಡಿತನದ ಕ್ರಮ. ಇದನ್ನು ಕ್ಷೇತ್ರದ ಜನರಿಗೆ ನೀವು ಅರ್ಥ ಮಾಡಿಸಬೇಕು. ಅಧಿಕಾರಿಗಳ ಜೊತೆ ಸಂಪರ್ಕದಲ್ಲಿದ್ದು ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಬೇಕು’ ಎಂದೂ ಕಿವಿಮಾತು ಹೇಳಿದ್ದಾರೆ.

ಪಾಟೀಲ ಗೈರು; ರಾಜು ಕಾಗೆ ಹಾಜರ್

ಸರ್ಕಾರದ ಕಾರ್ಯವೈಖರಿ, ಕ್ಷೇತ್ರಕ್ಕೆ ಅನುದಾನ ವಿಚಾರದಲ್ಲಿ ಇತ್ತೀಚೆಗೆ ಅಪಸ್ವರ ಎತ್ತಿದ್ದ ಶಾಸಕರ ಪೈಕಿ, ಆಳಂದ ಶಾಸಕ ಬಿ.ಆರ್. ಪಾಟೀಲ ಅವರು ಕಲಬುರಗಿ ಜಿಲ್ಲೆಯ ಸಚಿವರು, ಶಾಸಕರ ಜೊತೆ ಮುಖ್ಯಮಂತ್ರಿ ನಡೆಸಿದ ಸಭೆಗೆ ಗೈರಾದರು. ಬಿ.ಆರ್. ಪಾಟೀಲ ಅವರು ವಿದೇಶ ಪ್ರವಾಸದಲ್ಲಿದ್ದಾರೆ.

ಇನ್ನೊಬ್ಬ ಶಾಸಕ ರಾಜು ಕಾಗೆ ಅವರು ಬೆಳಗಾವಿ ಜಿಲ್ಲೆಯ ಸಚಿವರು, ಶಾಸಕರ ಜೊತೆ ನಡೆಸಿದ ಸಭೆಯಲ್ಲಿ ಭಾಗವಹಿಸಿ ತಮ್ಮ ಅಹವಾಲು ಹೇಳಿಕೊಂಡಿದ್ದಾರೆ. ಸಭೆಯ ಬಳಿಕ ಪ್ರತಿಕ್ರಿಯಿಸಿದ ಸಚಿವ ಸತೀಶ ಜಾರಕಿಹೊಳಿ, ‘ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಶಾಸಕರು ಹೇಳಿಕೊಂಡಿದ್ದಾರೆ. ನೀರಾವರಿ ಸಮಸ್ಯೆಯ ಬಗ್ಗೆ ರಾಜು ಕಾಗೆ ಅವರು ಎರಡು ವರ್ಷಗಳಿಂದ ಹೇಳುತ್ತಿದ್ದರು. ತಕ್ಷಣ ಹಣ ಕೊಡಿಸುವ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ. ಹೀಗಾಗಿ ಅವರಿಗೆ ಸಮಾಧಾನ ಆಗಿದೆ’ ಎಂದರು.

ಬೈದಾಡಿಕೊಂಡ ಶ್ರೀನಿವಾಸ್–ರಾಜಣ್ಣ

ಮುಖ್ಯಮಂತ್ರಿ ಮಂಗಳವಾರ ನಡೆಸಿದ ಸಭೆಯಲ್ಲಿ ತುಮಕೂರು ಜಿಲ್ಲೆಯ ಶಾಸಕರು ಮತ್ತು ಸಚಿವರ ನಡುವಿನ ಭಿನ್ನಾಭಿಪ್ರಾಯ ಬಹಿರಂಗವಾಗಿದೆ. ಸಚಿವ ಕೆ.ಎನ್. ರಾಜಣ್ಣ ಮತ್ತು ಶಾಸಕ ಎಸ್‌.ಆರ್. ಶ್ರೀನಿವಾಸ್ ನಡುವೆ ಮಾತಿನ ಚಕಮಕಿ ನಡೆದಿದೆ.

‘ನನ್ನ ಪತ್ನಿಗೆ ತುಮುಲ್ ಅಧ್ಯಕ್ಷ ಸ್ಥಾನದ ಅವಕಾಶ ತಪ್ಪಿಸಿ ಪಾವಗಡ ಶಾಸಕ ವೆಂಕಟೇಶ್ ಅವರಿಗೆ ಅಧ್ಯಕ್ಷ ಸ್ಥಾನ ಸಿಗುವಂತೆ ರಾಜಣ್ಣ ಮಾಡಿದರು. ಪಕ್ಷನಿಷ್ಠರಾಗಿ ನಾವು ಕೆಲಸ ಮಾಡುತ್ತೇವೆ. ನಮ್ಮ ಕೆಲಸ ಕಾರ್ಯಗಳೇ ಆಗದಿದ್ದರೆ ಹೇಗೆ’ ಎಂದು ಶ್ರೀನಿವಾಸ್ ಪ್ರಶ್ನಿಸಿದಾಗ ರಾಜಣ್ಣ ಸಮಜಾಯಿಷಿ ನೀಡಲು ಮುಂದಾದರು. ಈ ವೇಳೆ ಇಬ್ಬರೂ ಏರುದನಿಯಲ್ಲಿ ಬೈದಾಡಿಕೊಂಡಿದ್ದಾರೆ ಎಂದು ಹೇಳಲಾಗಿದೆ. ತಕ್ಷಣ ಮುಖ್ಯಮಂತ್ರಿ ಮಧ್ಯಪ್ರವೇಶಿಸಿ ಸಮಾಧಾನಪಡಿಸಿದ್ದಾರೆ.

‘ಮೊಹಾಂತಿ ಹೋದರೆ ಎಸ್‌ಐಟಿಗೆ ಹೊಸಬರ ನೇಮಕ’

ಪ್ರಜಾವಾಣಿ ವಾರ್ತೆ



ಮೊಹಾಂತಿ

ಬೆಂಗಳೂರು: ‘ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ತನಿಖೆಗೆ ರಾಜ್ಯ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮುಖ್ಯಸ್ಥರಾಗಿರುವ ಪ್ರಣಬ್ ಮೊಹಾಂತಿ ಅವರು ಕೇಂದ್ರ ಸೇವೆಗೆ ಹೋದರೆ ಅವರ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಕಾನೂನು ಪ್ರಕಾರ ಏನಿದೆಯೊ ಅದರಂತೆ ನಾವೂ ನಡೆದುಕೊಳ್ಳುತ್ತೇವೆ’ ಎಂದರು. ರಾಜ್ಯದ ಆಂತರಿಕ ಭದ್ರತಾ ವಿಭಾಗದ ಪೊಲೀಸ್ ಮಹಾನಿರ್ದೇಶಕರಾಗಿರುವ ಪ್ರಣಬ್ ಮೊಹಾಂತಿ ಅವರು ಕೇಂದ್ರ ಸೇವೆಗೆ ಅರ್ಹತೆ ಪಡೆದ 35 ಐಪಿಎಸ್ ಅಧಿಕಾರಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಸಿಬಿಐ, ಎನ್‌ಎಐ ಸೇರಿ ಕೇಂದ್ರ ಸರ್ಕಾರದ ವಿವಿಧ ತನಿಖಾ ಸಂಸ್ಥೆಗಳ ಮಹಾನಿರ್ದೇಶಕ ಹುದ್ದೆಗೆ ಈ ಪಟ್ಟಿಯಲ್ಲಿರುವ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಬಹುದಾಗಿದೆ.

‘ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖೆ ವೇಳೆ ನಾವು ಯಾರೂ ಮಾತನಾಡಬಾರದೆಂದು ನಿರ್ಧರಿಸಿದ್ದೇವೆ. ತನಿಖೆಯ ಬಳಿಕ ಎಲ್ಲ ಮಾಹಿತಿ ಸಿಗಲಿದೆ’ ಎಂದರು.

ತೇಜೋವಧೆಗೆ ಅವಕಾಶ ಇಲ್ಲ

ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ವಿರುದ್ಧ ಅಶ್ಲೀಲ ಸಂದೇಶಗಳನ್ನು ಪೋಸ್ಟ್ ಮಾಡುತ್ತಿರುವವರ ವಿರುದ್ಧ ನಟಿ ರಮ್ಯಾ ನೀಡಿರುವ ದೂರಿನ ಕುರಿತು ಪ್ರತಿಕ್ರಿಯಿಸಿದ ಪರಮೇಶ್ವರ, ‘ಅಭಿಪ್ರಾಯ ವ್ಯಕ್ತಪಡಿಸಲು ಎಲ್ಲರೂ ಸ್ವತಂತ್ರರು. ಆದರೆ, ತೇಜೋವಧೆ ಮಾಡಲು ಹೋಗಬಾರದು. ದೂರಿನ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ’ ಎಂದರು.

ರಾಹುಲ್ 'ಚೀನಾ–ಗುರು': ಜೈಶಂಕರ್

ರಾಜ್ಯಸಭೆಯಲ್ಲಿ 'ಆಪರೇಷನ್ ಸಿಂಧೂರ' ಚರ್ಚೆ ವೇಳೆ ಸಚಿವರ ವಾಗ್ದಾಳಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಪರೋಕ್ಷ ವಾಗ್ದಾಳಿ ನಡೆಸಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅವರನ್ನು 'ಚೀನಾ- ಗುರು' ಎಂದು ಬುಧವಾರ ಆರೋಪಿಸಿದರು.

'ಬೀಜಿಂಗ್‌ನಲ್ಲಿ ನಡೆದಿದ್ದ ಒಲಿಂಪಿಕ್ಸ್‌ಗೆ ಹಾಜರಾಗಿ ಮತ್ತು ಚೀನಾದ ರಾಯಭಾರಿಯಿಂದ ವಿಶೇಷ ಬೋಧನೆ ಪಡೆದು ಅವರು ಚೀನಾ ಬಗ್ಗೆಗಿನ ಜ್ಞಾನವನ್ನು ಪಡೆದುಕೊಂಡಿದ್ದಾರೆ' ಎಂದು ದೂರಿದರು.

ರಾಜ್ಯಸಭೆಯಲ್ಲಿ ಮಾತನಾಡಿದ ಜೈಶಂಕರ್ ಅವರು, 'ನಾನು ಇತ್ತೀಚೆಗೆ ಚೀನಾಕ್ಕೆ ಭೇಟಿ ನೀಡಿದ್ದೆ. ಆದರೆ ಚೀನಾ–ಗುರುವಿನಂತೆ ನಡೆದುಕೊಳ್ಳಲಿಲ್ಲ. ಈ ವೇಳೆ ಯಾವುದೇ ಗೋಪ್ಯ ಸಭೆಗಳನ್ನು ನಡೆಸಲಿಲ್ಲ ಮತ್ತು ಒಪ್ಪಂದಗಳನ್ನು ಮಾಡಿಕೊಳ್ಳಲಿಲ್ಲ' ಎಂದರು.

'ಚೀನಾದ ನಾಯಕರ ಜತೆಗಿನ ನನ್ನ ಭೇಟಿಯ ವೇಳೆ ಭಯೋತ್ಪಾದನೆ ನಿಗ್ರಹ, ವ್ಯಾಪಾರ ಮತ್ತು ಎರಡೂ ದೇಶಗಳ ನಡುವಿನ ಪರಸ್ಪರ ಹಿತಾಸಕ್ತಿ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ಈ ಸಂದರ್ಭದಲ್ಲಿ ನಡೆದ ಬಹುತೇಕ ಚರ್ಚೆಯನ್ನು ಸಾರ್ವಜನಿಕವಾಗಿ ಮುಕ್ತವಾಗಿ ತಿಳಿಸಿದ್ದೇನೆ' ಎಂದು ಅವರು ಹೇಳಿದರು.

ಬೀಜಿಂಗ್‌ನಲ್ಲಿ 2008ರಲ್ಲಿ ನಡೆದ ಒಲಿಂಪಿಕ್ಸ್‌ನಲ್ಲಿ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ವಿಶೇಷ ಅತಿಥಿಯಾಗಿ ಭಾಗವಹಿಸಿದ್ದರು.

'ನಮ್ಮ ಚೀನಾ–ಗುರುವಿಗೆ ಆ ದೇಶದ ಮೇಲೆ ಅಪಾರ ಪ್ರೀತಿಯಿದೆ. ಅವರು ಭಾರತ- ಚೀನಾ ನಡುವೆ 'ಚಿಂಡಿಯಾ' (CHINDIA) ಒಪ್ಪಂದ ಮಾಡಿಕೊಂಡಿದ್ದಾರೆ' ಎಂದು ಟೀಕಿಸಿದರು.

'ಚೀನಾ ಮತ್ತು ಪಾಕಿಸ್ತಾನ ತುಂಬಾ ಹತ್ತಿರ ಬಂದಿವೆ ಎಂದು ಚೀನಾ–ಗುರು ಹೇಳುತ್ತಿದ್ದಾರೆ. ಅದು ವಾಸ್ತವ ಸಹ. ನಾವು ಪಿಓಕೆ ತೊರೆದಾಗ ಅವರಿಬ್ಬರು ಒಂದಾದರು' ಎಂದು ಜೈಶಂಕರ್ ಹೇಳಿದರು. 'ಈ ಬಗ್ಗೆ ತಿಳಿದುಕೊಳ್ಳುವಾಗ ಇತಿಹಾಸದ ತರಗತಿಯಲ್ಲಿ ನೀವೇನಾದರೂ ಮಲಗಿದ್ದಿರಾ' ಎಂದು ಅವರು ಪ್ರಶ್ನಿಸಿದರು

> ಪಹಲ್ಗಾಮ್‌ನಲ್ಲಿ ಮಹಿಳೆಯರ ಕುಂಕುಮವನ್ನು ಅಳಿಸಿದ ಭಯೋತ್ಪಾದಕರ ವಿರುದ್ಧ ಪ್ರತೀಕಾರದ ಕ್ರಮ ತೆಗೆದುಕೊಳ್ಳುವ ಕಾರ್ಯಾಚರಣೆಗೆ 'ಆಪರೇಷನ್ ಸಿಂಧೂರ' ಹೆಸರಿಟ್ಟಿದ್ದು ಏಕೆ
>
> **ಜಯಾ ಬಚ್ಚನ್,** ಸಂಸದೆ

ಸಿಂಧೂ ಜಲ ಒಪ್ಪಂದ– ತಪ್ಪನ್ನು ಸರಿಪಡಿಸಿದ್ದೇವೆ: ಎಸ್. ಜೈಶಂಕರ್



ಪಾಕಿಸ್ತಾನದ ಜತೆಗಿನ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು, ನೆಹರೂ ಅವರ ನೀತಿಗಳಲ್ಲಿನ ತಪ್ಪುಗಳನ್ನು ಸರಿಪಡಿಸಿದೆ ಎಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ರಾಜ್ಯಸಭೆಯಲ್ಲಿ ತಿಳಿಸಿದರು.

'ನೆಹರೂ ಅವರು ಶಾಂತಿ ಸಲುವಾಗಿ ಈ ಒಪ್ಪಂದಕ್ಕೆ ಸಹಿ ಮಾಡಿರಲಿಲ್ಲ, ಬದಲಿಗೆ ಅವರನ್ನು ಓಲೈಸಲು ಸಹಿ ಮಾಡಿದ್ದರು' ಎಂದು ಅವರು ದೂರಿದರು.

ಕಾಂಗ್ರೆಸ್ ಟೀಕೆ: ಜೈಶಂಕರ್ ಅವರ ಹೇಳಿಕೆಯನ್ನು ಕಾಂಗ್ರೆಸ್ ತೀವ್ರವಾಗಿ ಟೀಕಿಸಿದೆ. ಓಲೈಕೆ ಸಲುವಾಗಿ ಸಿಂಧೂ ಜಲ ಒಪ್ಪಂದ ಮಾಡಿಕೊಳ್ಳಲಾಯಿತು ಎಂದು ವಿದೇಶಾಂಗ ಸಚಿವರು ನೀಡಿದ ಹೇಳಿಕೆಯಿಂದ ಆಘಾತವಾಗಿದೆ. ಒಂದು ಕಾಲದಲ್ಲಿ ವೃತ್ತಿಪರರು ಎಂದು ಹೆಸರಾಗಿದ್ದ ವಿದೇಶಾಂಗ ಸಚಿವರಿಂದ ಈ ಹೇಳಿಕೆಯನ್ನು ನಿರೀಕ್ಷಿಸಿರಲಿಲ್ಲ. ಬಹುಶಃ ಅವರು ವೃತ್ತಿಪರತೆಯನ್ನು ಹಿಂದೆಯೇ ತ್ಯಜಿಸಿದ್ದಾರೆ ಅನಿಸುತ್ತದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಕಿಡಿಕಾರಿದ್ದಾರೆ.

ಹೊರನಡೆದ ವಿರೋಧ ಪಕ್ಷಗಳ ಸದಸ್ಯರು

ಪಹಲ್ಗಾಮ್ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಕುರಿತ ಚರ್ಚೆ ಸಂಸತ್ತಿನಲ್ಲಿ ಬುಧವಾರ ಮುಕ್ತಾಯವಾಯಿತು. ಸದನದ ಸಂಕೀರ್ಣದಲ್ಲಿದ್ದರೂ ಪ್ರಧಾನಿ ನರೇಂದ್ರ ಮೋದಿ ಅವರು ಚರ್ಚೆಗೆ ಉತ್ತರಿಸದೆ ಸದನವನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ವಿರೋಧ ಪಕ್ಷಗಳ ಸದಸ್ಯರು ಪ್ರತಿಭಟಿಸುತ್ತ ಸಭೆಯಿಂದ ಹೊರನಡೆದರು.

ಸಂಸತ್ತಿನಲ್ಲಿ ಎಸ್‌ಐಆರ್ ವಿರುದ್ಧ ಆಕ್ರೋಶ

ನವದೆಹಲಿ (ಪಿಟಿಐ): ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ವಿರೋಧಿಸಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ 'ಇಂಡಿಯಾ' ಒಕ್ಕೂಟದ ಹಲವು ಸಂಸದರು ಸಂಸತ್‌ನಲ್ಲಿ ಬುಧವಾರವೂ ಪ್ರತಿಭಟನೆ ನಡೆಸಿದರು.

ಪ್ರಿಯಾಂಕಾ ಗಾಂಧಿ ಮತ್ತು ವಿರೋಧ ಪಕ್ಷಗಳ ಇತರ ಸಂಸದರು ಎಸ್‌ಐಆರ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ಸಂಸತ್ತಿನ ಮಕರ ದ್ವಾರದ ಸಮೀಪ 'ಎಸ್‌ಐಆರ್–ಪ್ರಜಾಪ್ರಭುತ್ವ ವಿರೋಧಿ' ಘೋಷಣೆಯ ದೊಡ್ಡ ಬ್ಯಾನರ್ ಹಿಡಿದು ವಿರೋಧ ವ್ಯಕ್ತಪಡಿಸಿದರು. ಕಾಂಗ್ರೆಸ್, ಡಿಎಂಕೆ, ಟಿಎಂಸಿ, ಎಸ್‌ಪಿ, ಆರ್‌ಜೆಡಿ ಸಂಸದರು 'ಎಸ್‌ಐಆರ್ ನಿಲ್ಲಿಸಿ' ಫಲಕಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.

ಸಾಲಮನ್ನಾಕ್ಕೆ ಪ್ರಿಯಾಂಕಾ ಒತ್ತಾಯ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು, ವಯನಾಡ್‌ನ ಪ್ರವಾಹ ಮತ್ತು ಭೂಕುಸಿತ ಸಂತ್ರಸ್ತರ ಸಾಲವನ್ನು ಮನ್ನಾ ಮಾಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಲೋಕಸಭೆಯ ಶೂನ್ಯ ಅವಧಿ ವೇಳೆ ವಿಷಯ ಪ್ರಸ್ತಾಪಿಸಿದ ಅವರು, ಕೇರಳದಲ್ಲಿ ಪ್ರವಾಹ ಮತ್ತು ಭೂಕುಸಿತದಿಂದ ನೂರಾರು ಜನರು ಪ್ರಾಣ ಕಳೆದುಕೊಂಡಿದ್ದಾರೆ, 17 ಕುಟುಂಬಗಳು ಕೊಚ್ಚಿ ಹೋಗಿವೆ ಮತ್ತು 1,600 ಕಟ್ಟಡಗಳು ನಾಶವಾಗಿವೆ ಎಂದು ಹೇಳಿದರು.

ನೈಸರ್ಗಿಕ ವಿಪತ್ತು ಸಂಭವಿಸಿ ವರ್ಷ ಉರುಳಿದರೂ ಸಂತ್ರಸ್ತರಿಗೆ ಸರಿಯಾಗಿ ಪುನರ್ವಸತಿ ಕಲ್ಪಿಸಿಲ್ಲ ಎಂದು ದೂರಿದರು.

ಎಸ್‌ಐಆರ್: ಮಾಜಿ ಅಧಿಕಾರಿಗಳಿಂದ ಕಳವಳ

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಬಗ್ಗೆ ಸುಮಾರು 90 ಮಾಜಿ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.


ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ. ಪೌರತ್ವ ಸಾಬೀತುಪಡಿಸಲು ದಾಖಲೆ ಇರದವರು ಸೇರಿದಂತೆ ಸಾಕಷ್ಟು ಜನರು ಮತದಾನದ ಹಕ್ಕನ್ನು ಕಳೆದುಕೊಳ್ಳಲಿದ್ದಾರೆ ಎಂದು ಹೇಳಿದ್ದಾರೆ.

ಅಖಿಲ ಭಾರತ ಮತ್ತು ಹಲವು ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಲ್ಲಿ ಸೇವೆ ಸಲ್ಲಿಸಿರುವ 93 ನಿವೃತ್ತ ಅಧಿಕಾರಿಗಳು ಬಹಿರಂಗ ಪತ್ರ ಬರೆದಿದ್ದು, ಬಿಹಾರ ಮತ್ತು ದೇಶದಾದ್ಯಂತ ಎಸ್‌ಐಆರ್ ನಡೆಸುವುದರಿಂದ ಭಾರತದ ಪ್ರಜಾಪ್ರಭುತ್ವಕ್ಕೆ ಅತಿ ದೊಡ್ಡ ಅಪಾಯ ಎದುರಾಗಲಿದೆ ಎಂದಿದ್ದಾರೆ.

ಬಾನಿನಲ್ಲಿ ಭಾರತದ ಶಕ್ತಿಶಾಲಿ 'ಕಣ್ಣು'

ನಾಸಾ, ಇಸ್ರೊದಿಂದ ಅಭಿವೃದ್ಧಿ: ಕಕ್ಷೆ ಸೇರಿದ 'ನಿಸಾರ್'

ಜಿಎಸ್‌ಎಲ್‌ವಿ–ಎಫ್‌16 ಉಡ್ಡಯನಕ್ಕೆ ಬಳಸಿದ ರಾಕೆಟ್



51.7 ಮೀ. ರಾಕೆಟ್‌ನ ಎತ್ತರ

₹10 ಸಾವಿರ ಕೋಟಿ (1.2 ಶತಕೋಟಿ ಡಾಲರ್) ಯೋಜನೆಯ ವೆಚ್ಚ

2,393 ಕೆ.ಜಿ 'ನಿಸಾರ್' ಉಪಗ್ರಹದ ಒಟ್ಟು ತೂಕ

5 ವರ್ಷ ಉಪಗ್ರಹ ಕಾರ್ಯಾಚರಣೆ ನಡೆಸುವ ಅವಧಿ

745 ಕಿ.ಮೀ. ಉಪಗ್ರಹ ಸೇರಿಸಲಾದ ಕಕ್ಷೆ ಮತ್ತು ಭೂಮಿ ನಡುವಿನ ಅಂತರ

19 ನಿಮಿಷ ಭೂಮಿಯ ಕೆಳಕಕ್ಷೆಗೆ ತಲುಪಲು ರಾಕೆಟ್ ತೆಗೆದುಕೊಂಡ ಸಮಯ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀಹರಿಕೋಟ: ಭೂ ವೀಕ್ಷಣೆ ಉದ್ದೇಶದಿಂದ ಇಸ್ರೊ ಹಾಗೂ ಅಮೆರಿಕದ ನಾಸಾ ಜಂಟಿಯಾಗಿ ಅಭಿವೃದ್ಧಿಪಡಿಸಿರುವ 'ನಿಸಾರ್' ಉಪಗ್ರಹವನ್ನು ಹೊತ್ತ ಜಿಎಸ್‌ಎಲ್‌ವಿ–ಎಫ್‌16 ರಾಕೆಟ್ ಬುಧವಾರ ನಭಕ್ಕೆ ಚಿಮ್ಮಿತು.

ಈ ಉಡ್ಡಯನಕ್ಕಾಗಿ ಮಂಗಳವಾರದಿಂದ 27.30 ಗಂಟೆಗಳ ಕ್ಷಣಗಣನೆ ಆರಂಭವಾಗಿತ್ತು. ಬುಧವಾರ ಸಂಜೆ 5.40ಕ್ಕೆ ಉಪಗ್ರಹ ಹೊತ್ತ ರಾಕೆಟ್, ಶ್ರೀಹರಿಕೋಟದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿನ ಉಡ್ಡಯನ ನೆಲೆಯಿಂದ ಬುಧವಾರ ಆಗಸಕ್ಕೆ ಚಿಮ್ಮಿತು. ಮೂರು ಹಂತಗಳ ಕಾರ್ಯಾಚರಣೆ ಬಳಿಕ, ಉಪಗ್ರಹವನ್ನು ನಿಗದಿತ ಕಕ್ಷೆಯಲ್ಲಿ ಸೇರಿಸಿತು.

ಭೂ ವೀಕ್ಷಣೆ ಉದ್ದೇಶದಿಂದ ಉಪಗ್ರಹ ನಿರ್ಮಾಣ ಹಾಗೂ ಉಡ್ಡಯನಕ್ಕಾಗಿ ರೂಪಿಸಲಾಗಿರುವ ಬಾಹ್ಯಾಕಾಶ ಕಾರ್ಯಕ್ರಮವೇ 'ನಾಸಾ–ಇಸ್ರೊ ಸಿಂಥೆಟಿಕ್ ಅಪಾರ್ಚರ್ ರೇಡಾರ್'. ಇದರ ಸಂಕ್ಷಿಪ್ತರೂಪವೇ 'ನಿಸಾರ್'.

ಈ ಉಪಗ್ರಹದಲ್ಲಿ ಶಕ್ತಿಶಾಲಿ ಎಲ್–ಬ್ಯಾಂಡ್ ಹಾಗೂ ಎಸ್–ಬ್ಯಾಂಡ್ ರೇಡಾರ್‌ಗಳನ್ನು ಅಳವಡಿಸಲಾಗಿದೆ. ಈ ಬ್ಯಾಂಡ್‌ಗಳನ್ನು ಕ್ರಮವಾಗಿ ನಾಸಾ ಮತ್ತು ಇಸ್ರೊ ವಿನ್ಯಾಸಗೊಳಿಸಿವೆ. ಈ ಉಪಗ್ರಹವು ಇಡೀ ಭೂಮಿಗೆ ಸಂಬಂಧಿಸಿದ ದತ್ತಾಂಶ ಹಾಗೂ ಚಿತ್ರಗಳನ್ನು ಕಳುಹಿಸುತ್ತದೆ. ಹೀಗಾಗಿ, ಭೂಮಂಡಲದ ವಿದ್ಯಮಾನಗಳ ವೀಕ್ಷಣೆಗಾಗಿ ಆಗಸದಲ್ಲಿ ಭಾರತ ಅಳವಡಿಸಿರುವ 'ಕಣ್ಣು' ಇದು ಎನ್ನಬಹುದು.



'ನಿಸಾರ್' ಉಪಗ್ರಹ ಹೊತ್ತ ಜಿಎಸ್‌ಎಲ್‌ವಿ–ಎಫ್‌16 ರಾಕೆಟ್ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಲ್ಲಿನ ಉಡ್ಡಯನ ನೆಲೆಯಿಂದ ಆಗಸಕ್ಕೆ ಚಿಮ್ಮಿತು ಪಿಟಿಐ ಚಿತ್ರ

'ನಿಸಾರ್' ಉಪಗ್ರಹದ ಪ್ರಯೋಜನ

- ಅರಣ್ಯಗಳು ಹಾಗೂ ಅವುಗಳಲ್ಲಿ ಕಂಡುಬರುವ ಬದಲಾವಣೆ ಕುರಿತು ಅಧ್ಯಯನ
- ಬೆಳೆಗಳಲ್ಲಿನ ಬದಲಾವಣೆಗಳ ಮೇಲೆ ನಿಗಾ
- ಜೌಗುಪ್ರದೇಶಗಳಲ್ಲಿ ಆಗುವ ಪರಿವರ್ತನೆಗಳ ಅಧ್ಯಯನ
- ಗ್ರೀನ್‌ಲ್ಯಾಂಡ್, ಅಂಟಾರ್ಕ್ಟಿಕಾದಲ್ಲಿನ ಹಿಮಪದರುಗಳು, ಸಾಗರದಲ್ಲಿನ ಮಂಜುಗಡ್ಡೆಗಳು ಹಾಗೂ ಹಿಮನದಿಗಳ ಕುರಿತು ಅಧ್ಯಯನ
- ಭೂಕಂಪನ, ಜ್ವಾಲಾಮುಖಿ, ಭೂಕುಸಿತ ಹಾಗೂ ಸವಕಳಿಯಿಂದಾಗಿ ಭೂಮಿ ಮೇಲ್ಪದರ ವಿರೂಪಗೊಳ್ಳುವ ಪ್ರಕ್ರಿಯೆಯ ಅಧ್ಯಯನ
- ಭಾರತ ಮತ್ತು ಅಮೆರಿಕದ ವಿಜ್ಞಾನಿಗಳು/ ಸಂಶೋಧಕರು ಆಸಕ್ತಿ ಹೊಂದಿರುವ ವಿಷಯಗಳ ಅಧ್ಯಯನಕ್ಕೆ ನೆರವು

ಚಿಟಿಕೆ ಸುದ್ದಿ

ರಾಷ್ಟ್ರಪತಿ ಆಡಳಿತ ವಿಸ್ತರಣೆ: ನಿರ್ಣಯ ಮಂಡನೆ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಆಗಸ್ಟ್ 13ರಿಂದ ಮುಂದಿನ 6 ತಿಂಗಳವರೆಗೆ ವಿಸ್ತರಿಸಲು ಅನುಮತಿ ಕೋರಿ ಲೋಕಸಭೆಯಲ್ಲಿ ಬುಧವಾರ ನಿರ್ಣಯ ಮಂಡಿಸಲಾಯಿತು.

ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್, ರಾಷ್ಟ್ರಪತಿ ಆಡಳಿತ ವಿಸ್ತರಣೆಗೆ ಶಾಸನಬದ್ಧ ನಿರ್ಣಯ ಕೈಗೊಳ್ಳಲು ನಿರ್ಣಯ ಮಂಡಿಸಿದರು.

'ರಾಷ್ಟ್ರಪತಿ ಆಡಳಿತವನ್ನು 6 ತಿಂಗಳು ವಿಸ್ತರಿಸಬೇಕಾದರೆ ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಶಾಸನಬದ್ಧ ನಿರ್ಣಯವನ್ನು ಅಂಗೀಕರಿಸಬೇಕಾಗುತ್ತದೆ' ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದರು.

ಭದ್ರತಾ ಮಂಡಳಿ ವರದಿ: ಟಿಆರ್‌ಎಫ್ ಉಲ್ಲೇಖ




ನವದೆಹಲಿ (ಪಿಟಿಐ): ಪಹಲ್ಗಾಮ್ ದಾಳಿಯಲ್ಲಿ ಲಷ್ಕರ್–ಎ–ತಯಬಾದ (ಎಲ್‌ಇಟಿ) ಅಂಗಸಂಸ್ಥೆ 'ದಿ ರೆಸಿಸ್ಟನ್ಸ್ ಫ್ರಂಟ್' (ಟಿಆರ್‌ಎಫ್) ಪಾತ್ರದ ಕುರಿತು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು (ಯುಎನ್‌ಎಸ್‌ಸಿ) ತನ್ನ ವರದಿಯಲ್ಲಿ ಇದೇ ಮೊದಲ ಬಾರಿಗೆ ಉಲ್ಲೇಖಿಸಿದೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ದಾಳಿಯ ಹೊಣೆಯನ್ನು ಟಿಆರ್‌ಎಫ್ ಹೊತ್ತುಕೊಂಡಿದ್ದು, ಈ ಕುರಿತು ಎರಡು ಬಾರಿ ಹೇಳಿಕೊಂಡಿದೆ. ಅಲ್ಲದೇ, ದಾಳಿ ನಡೆಸಿದ ಸ್ಥಳದ ಚಿತ್ರವನ್ನು ಕೂಡ ಪ್ರಕಟಿಸಿದೆ ಎಂದೂ ಮಂಡಳಿ ಹೇಳಿದೆ. ನಿರ್ಬಂಧಗಳನ್ನು ಹೇರುವ ಪ್ರಕ್ರಿಯೆ ಕುರಿತು ಮೇಲ್ವಿಚಾರಣೆ ನಡೆಸುವ ಮಂಡಳಿಯ ತಂಡವು ಮಂಗಳವಾರ ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಮಾಹಿತಿ ಇದೆ.

ಬಿಹಾರ: 'ಆಶಾ' ಗೌರವ ಧನ ಹೆಚ್ಚಳ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭೆ ಚುನಾವಣೆ ಹತ್ತಿರ ಬರುತ್ತಿದ್ದಂತೆ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬುಧವಾರ ಆಶಾ ಕಾರ್ಯಕರ್ತೆಯರ ಮಾಸಿಕ ಗೌರವಧನವನ್ನು ₹1000ದಿಂದ ₹3000ಕ್ಕೆ ಹೆಚ್ಚಿಸಿದ್ದಾರೆ. ಅಲ್ಲದೇ ಹೆರಿಗೆ ಮಾಡಿಸುವ 'ಮಮತಾ' ಕಾರ್ಯಕರ್ತೆಯರಿಗೆ ಪ್ರತಿ ಹೆರಿಗೆಗೆ ನೀಡುತ್ತಿದ್ದ ಗೌರವಧನವನ್ನು ದುಪ್ಪಟ್ಟು ಮಾಡಿ ₹600ಕ್ಕೆ ಏರಿಸಿದ್ದಾರೆ.



ನಿತೀಶ್ ಕುಮಾರ್

ಈ ಬಗ್ಗೆ 'ಎಕ್ಸ್'ನಲ್ಲಿ ಮಾಹಿತಿ ನೀಡಿರುವ ಅವರು, '2005ರಿಂದ ನಮ್ಮ ಸರ್ಕಾರ ಆರೋಗ್ಯ ಸೇವೆಯನ್ನು ಸುಧಾರಿಸಿದೆ. ಆಶಾ ಮತ್ತು ಮಮತಾ ಕಾರ್ಯಕರ್ತೆಯರು ಗ್ರಾಮೀಣ ಆರೋಗ್ಯ ಸುಧಾರಣೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ' ಎಂದಿದ್ದಾರೆ.

ಮೀನಿಗೆ ಬಲೆ...

ಪಿಟಿಐ ಚಿತ್ರ:



ಮಧ್ಯಪ್ರದೇಶದ ಹಲವೆಡೆ ಭಾರಿ ಮಳೆಯಾಗುತ್ತಿದ್ದು, ಭೋಪಾಲ್‌ನಲ್ಲಿರುವ ಹತಾಯಿ ಖೇಡ ಕೆರೆ ಕೋಡಿ ಬಿದ್ದುತ್ತು . ಆಗ ಹರಿಯುತ್ತಿರುವ ನೀರಿನಲ್ಲಿ ಜನರು ಮೀನುಗಳನ್ನು ಹಿಡಿಯುತ್ತಿದ್ದುದು ಬುಧವಾರ ಕಂಡುಬಂತು

'ಕ್ರೈಸ್ತ ಸನ್ಯಾಸಿನಿಯರ ಬಂಧನ ಅಕ್ರಮ'

ದುರ್ಗ್ (ಛತ್ತೀಸಗಢ) (ಪಿಟಿಐ): 'ಮಾನವ ಕಳ್ಳಸಾಗಣೆ ಮತ್ತು ಬಲವಂತದ ಮತಾಂತರದ ಆರೋಪದ ಮೇಲೆ ಇಬ್ಬರು ಕ್ಯಾಥೋಲಿಕ್ ಸನ್ಯಾಸಿನಿಯರನ್ನು ಬಂಧಿಸಿರುವುದು ಸಂವಿಧಾನಬಾಹಿರ ಮತ್ತು ಅಕ್ರಮ' ಎಂದು ಸಿಪಿಐ(ಎಂ) ಹಿರಿಯ ನಾಯಕಿ ಬೃಂದಾ ಕಾರಟ್ ಆಕ್ರೋಶ ವ್ಯಕ್ತಪಡಿಸಿದರು.



ಬೃಂದಾ ಕಾರಟ್

ಬಂಧನದಲ್ಲಿರುವ ಕೇರಳದ ಸನ್ಯಾಸಿನಿಯರಾದ ಪ್ರೀತಿ ಮೇರಿ, ವಂದನಾ ಫ್ರಾನ್ಸಿಸ್ ಅವರನ್ನು ಜೈಲಿನಲ್ಲಿ ಬುಧವಾರ ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಬಿಜೆಪಿ ಮತ್ತು ಛತ್ತೀಸಗಢ ಸರ್ಕಾರದ ಸಂಕುಚಿತ ಕಾರ್ಯಸೂಚಿಯ ಭಾಗವಾಗಿ ಈ ಬಂಧನ ಆಗಿದೆ. ಕೂಡಲೇ ಈ ಇಬ್ಬರನ್ನೂ ಬಿಡುಗಡೆ ಮಾಡಬೇಕು ಎಂದು ಅವರು ಆಗ್ರಹಿಸಿದರು. ಇದು ದೇಶದಲ್ಲಿ ಕ್ರೈಸ್ತರನ್ನು ಗುರಿಯಾಗಿಸಿ ನಡೆದ ದಾಳಿ ಎಂದು ದೂರಿದರು.

ವಿಶೇಷ ನ್ಯಾಯಾಲಯಕ್ಕೆ ಹೋಗಿ: ಇಬ್ಬರು ಸನ್ಯಾಸಿನಿಯರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಿದ ದುರ್ಗ್ ಜಿಲ್ಲಾ ಸೆಷನ್ಸ್ ನ್ಯಾಯಾಲಯವು, 'ಈ ಜಾಮೀನು ಅರ್ಜಿಗಳನ್ನು ಆಲಿಸುವ ಅಧಿಕಾರ ವ್ಯಾಪ್ತಿ ತನಗಿಲ್ಲ, ಅದಕ್ಕಾಗಿ ವಿಶೇಷ ನ್ಯಾಯಾಲಯಕ್ಕೆ ಹೋಗಬಹುದು' ಎಂದು ಹೇಳಿ ಅರ್ಜಿ ವಿಲೇವಾರಿ ಮಾಡಿತು.

ಪ್ರಿಯಾಂಕಾ ಪ್ರತಿಭಟನೆ



ನವದೆಹಲಿ (ಪಿಟಿಐ): ಕ್ಯಾಥೊಲಿಕ್ ಸನ್ಯಾಸಿನಿಯರ ಬಂಧನ ಖಂಡಿಸಿ ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಂಸತ್ ಭವನದ ಆವರಣದಲ್ಲಿ ಬುಧವಾರ ಕೇರಳದ ಹಲವು ವಿಪಕ್ಷ ಸಂಸದರ ಜೊತೆಗೂಡಿ ಪ್ರತಿಭಟನೆ ನಡೆಸಿದರು. ದೇಶದಲ್ಲಿ ಅಲ್ಪಸಂಖ್ಯಾತರ ವಿರುದ್ಧ ದೌರ್ಜನ್ಯ ಹೆಚ್ಚುತ್ತಿದೆ ಎಂದು ಇದೇ ವೇಳೆ ಬಿಜೆಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭೆ ಕಲಾಪ ಆರಂಭಕ್ಕೂ ಮುನ್ನ ಪ್ರಿಯಾಂಕಾ ಅವರೊಂದಿಗೆ ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, ಆರ್‌ಎಸ್‌ಪಿ ಸಂಸದ ಎನ್.ಕೆ. ಪ್ರೇಮಚಂದ್ರನ್ ಮತ್ತು ಕೇರಳದ ಕಾಂಗ್ರೆಸ್ ಸಂಸದರು ಕ್ರೈಸ್ತ ಸನ್ಯಾಸಿನಿಯರ ಬಿಡುಗಡೆಗೆ ಆಗ್ರಹಿಸಿ ಸಂಸತ್ತಿನ ಮಕರದ್ವಾರದ ಬಳಿ ಪ್ರತಿಭಟನೆ ನಡೆಸಿದರು.

ಲೋಕಸಭೆಯಲ್ಲಿ ಚರ್ಚೆ: ಈ ವಿಷಯವನ್ನು ಲೋಕಸಭೆಯಲ್ಲಿ ಬುಧವಾರ ಕಾಂಗ್ರೆಸ್ ಪ್ರಸ್ತಾಪಿಸಿ ಚರ್ಚಿಸಿತು. ಕಾಂಗ್ರೆಸ್ ಸಂಸದರಾದ ಕೆ.ಸಿ. ವೇಣುಗೋಪಾಲ್, ಕೆ. ಫ್ರಾನ್ಸಿಸ್ ಜಾರ್ಜ್, ಕೆ.ಸುರೇಶ್ ಅವರು ಶೂನ್ಯ ವೇಳೆಯಲ್ಲಿ ಇದನ್ನು ಪ್ರಸ್ತಾಪಿಸಿ, ಕ್ರೈಸ್ತ ಸನ್ಯಾನಿಸಿನಿಯರ ಬಿಡುಗಡೆಗೆ ಸರ್ಕಾರ ಮಧ್ಯ ಪ್ರವೇಶಿಸಬೇಕು ಎಂದು ಆಗ್ರಹಿಸಿದರು.

ಇದನ್ನು ದುರ್ಗ್‌ನ ಬಿಜೆಪಿ ಸಂಸದ ವಿಜಯ್ ಬಾಘೇಲ್ ವಿರೋಧಿಸಿದರು. ಕೋಮು ಸೌಹಾರ್ದ ಕದಡಲು ಕಾಂಗ್ರೆಸ್ ಪಿತೂರಿ ನಡೆಸುತ್ತಿದೆ ಎಂದು ದೂರಿದ ಅವರು, ಸನ್ಯಾಸಿನಿಯರನ್ನು ಬಂಧಿಸಿದ ಛತ್ತೀಸಗಢ ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡರು.

ಗಡಿ ನಿಯಂತ್ರಣ ರೇಖೆಯಲ್ಲಿ ಒಳನುಸುಳಲು ಯತ್ನ

ಪೂಂಛ್‌ನಲ್ಲಿ ಇಬ್ಬರು ಉಗ್ರರ ಹತ್ಯೆ

ಜಮ್ಮು (ಪಿಟಿಐ): ಜಮ್ಮು–ಕಾಶ್ಮೀರದ ಪೂಂಛ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆಯಲ್ಲಿ ಒಳನುಸುಳುವಿಕೆ ಯತ್ನವನ್ನು ವಿಫಲಗೊಳಿಸಿರುವ ಸೇನಾ ಸಿಬ್ಬಂದಿ, ಲಷ್ಕರ್–ಎ–ತಯಬಾದ ಇಬ್ಬರು ಶಂಕಿತ ಉಗ್ರರನ್ನು ಹೊಡೆದುರುಳಿಸಿದ್ದಾರೆ ಎಂದು ಬುಧವಾರ ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀನಗರದ ಅರಣ್ಯದಲ್ಲಿ ಪಹಲ್ಗಾಮ್ ದಾಳಿಕೋರ ಭಯೋತ್ಪಾದಕರನ್ನು ಬಲಿ ಪಡೆದ ಎರಡು ದಿನಗಳ ಅಂತರದಲ್ಲಿ ಮತ್ತೊಂದು ಎನ್‌ಕೌಂಟರ್ ನಡೆದಿದೆ.

'ಆಪರೇಷನ್ ಶಿವಶಕ್ತಿ' ಕಾರ್ಯಾಚರಣೆಯಲ್ಲಿ ರಾತ್ರಿ ವೇಳೆ ಗಡಿ ನುಸುಳಿ ಬರುತ್ತಿದ್ದವರನ್ನು ಹೊಡೆದು ಉರುಳಿಸಲಾಗಿದೆ. ಗಡಿ ನಿಯಂತ್ರಣ ರೇಖೆಯಲ್ಲಿ ಜಾಗೃತ ಸ್ಥಿತಿಯಲ್ಲಿರುವ ನಮ್ಮ ಪಡೆಗಳು ಕುತಂತ್ರಗಳನ್ನು ಹಿಮ್ಮೆಟ್ಟಿಸುತ್ತಿವೆ. ಶಂಕಿತ ಉಗ್ರರಿಂದ ಮೂರು ಶಸ್ತ್ರಾಸ್ತ್ರ ವಶಕ್ಕೆ ಪಡೆಯಲಾಗಿದೆ' ಎಂದು 'ಎಕ್ಸ್'ನಲ್ಲಿ 'ಜಮ್ಮು ವೈಟ್ ನೈಟ್ ಕೋರ್' ಮಾಹಿತಿ ನೀಡಿದೆ.

ಸೇನೆಯ ಸಂಘಟಿತ ಮತ್ತು ಸಮನ್ವಯ ಗುಪ್ತಚರ ಮಾಹಿತಿ ಮತ್ತು ಜಮ್ಮು–ಕಾಶ್ಮೀರ ಪೊಲೀಸರ ಸಹಕಾರದಲ್ಲಿ ಕಾರ್ಯಾಚರಣೆ ನಡೆದಿದೆ. ಉಗ್ರರು ಗುಂಡಿನ ದಾಳಿ ನಡೆಸಿದರು. ಪ್ರತಿದಾಳಿ ನಡೆಸಿದ ಸೇನೆ ಇಬ್ಬರನ್ನೂ ಹೊಡೆದುರುಳಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರ– ನಾಲ್ವರ ಬಂಧನ (ಇಂಫಾಲ್ ವರದಿ): ಅಪರಾಧ ಕೃತ್ಯಗಳಲ್ಲಿ ಭಾಗವಹಿಸಿರುವ ಆರೋಪದಡಿ ಮಣಿಪುರದಲ್ಲಿ ಭದ್ರತಾ ಸಿಬ್ಬಂದಿ ನಾಲ್ವರನ್ನು ಬಂಧಿಸಿದ್ದಾರೆ.

ಎರಡು ನಿಷೇಧಿತ ಸಂಘಟನೆಗಳ ಸದಸ್ಯರಾಗಿರುವ ಇಬ್ಬರನ್ನು ಇಂಫಾಲ್ ಪೂರ್ವ ಮತ್ತು ಪಶ್ಚಿಮ ಜಿಲ್ಲೆಗಳಲ್ಲಿ ಮಂಗಳವಾರ ಬಂಧಿಸಲಾಗಿದೆ. ಇನ್ನಿಬ್ಬರನ್ನು ಸೋಮವಾರ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪಹಲ್ಗಾಮ್: ಭಾರತದ ನಿಲುವಿಗೆ ಪಾಕ್ ಖಂಡನೆ

ಇಸ್ಲಾಮಾಬಾದ್ (ಪಿಟಿಐ): ಭಾರತ ಕೈಗೊಂಡಿದ್ದ ಆಪರೇಷನ್ ಸಿಂಧೂರ ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಯುತ್ತಿದ್ದ ವೇಳೆ ವಿವಿಧ ಪಕ್ಷಗಳ ನಾಯಕರು ನೀಡಿರುವ ಹೇಳಿಕೆಗಳನ್ನು ಪಾಕಿಸ್ತಾನ ಬುಧವಾರ ಖಂಡಿಸಿದೆ.



'ಉಭಯ ದೇಶಗಳ ನಡುವಿನ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಭಾರತದೊಂದಿಗೆ ಅರ್ಥಪೂರ್ಣ ಮಾತುಕತೆ ನಡೆಸುವುದಕ್ಕೆ ಪಾಕಿಸ್ತಾನ ಬದ್ಧವಾಗಿದೆ' ಎಂದು ವಿದೇಶಾಂಗ ಕಚೇರಿ ಹೇಳಿದೆ.

'ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಗೆ ಸಂಬಂಧಿಸಿ ಯಾವುದೇ ವಿಶ್ವಾಸಾರ್ಹ ಅಥವಾ ದೃಢೀಕರಿಸಿದ ಸಾಕ್ಷ್ಯಗಳು ಇಲ್ಲದೆಯೇ ಪಾಕಿಸ್ತಾನದ ವಿರುದ್ಧ ಭಾರತ ವಾಗ್ದಾಳಿ ನಡೆಸಿದೆ' ಎಂದಿದೆ.

'ಭಾರತದ ನಾಯಕರು ನೀಡಿರುವ ಹೇಳಿಕೆಗಳು ವಾಸ್ತವಿಕ ಸಂಗತಿಗಳನ್ನು ತಿರುಚುವ ಅಪಾಯಕಾರಿ ಪ್ರವೃತ್ತಿಯನ್ನು ತೋರಿಸುತ್ತವೆ. ಪಹಲ್ಗಾಮ್‌ನಲ್ಲಿ ದಾಳಿ ನಡೆಸಿದ್ದ ಉಗ್ರರ ಹತ್ಯೆಗಾಗಿ ಭಾರತ 'ಆಪರೇಷನ್ ಮಹಾದೇವ' ಕೈಗೊಂಡಿದ್ದು, ಇದು ಕೂಡ ಪಾಕಿಸ್ತಾನದ ಪಾಲಿಗೆ ಮಹತ್ವದ ವಿಚಾರವಲ್ಲ' ಎಂದು ಹೇಳಿದೆ.

ಇಬ್ಬರು ಯೋಧರ ಸಾವು

ಲೇಹ್ (ಪಿಟಿಐ): ಲಡಾಖ್‌ನಲ್ಲಿ ಸೇನಾ ವಾಹನವೊಂದರ ಮೇಲೆ ಬುಧವಾರ ಬಂಡೆ ಉರುಳಿಬಿದ್ದ ಪರಿಣಾಮ ಲೆಫ್ಟಿನೆಂಟ್ ಕರ್ನಲ್ ಸೇರಿದಂತೆ ಇಬ್ಬರು ಸೇನಾ ಸಿಬ್ಬಂದಿ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ.

ಗಲ್ವಾನ್ ಸಮೀಪದ ಚಾರ್‌ಬಾಗ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ಅವಘಡ ಸಂಭವಿಸಿದೆ. ಮೃತರನ್ನು ಲೆಫ್ಟಿನೆಂಟ್ ಕರ್ನಲ್ ಭಾನು ಪ್ರತಾಪ್ ಸಿಂಗ್ ಮನ್‌ಕೊಟಿಯಾ ಮತ್ತು ಲ್ಯಾನ್ಸ್ ದಫಾದಾರ್ ದಲ್‌ಜಿತ್ ಸಿಂಗ್ ಎಂದು ಗುರುತಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರು ನಕ್ಸಲರ ಬಂಧನ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಆರು ನಕ್ಸಲರನ್ನು ಬಂಧಿಸಿರುವ ಪೊಲೀಸರು ಅವರಿಂದ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದಾರೆ.

ಹುತಾತ್ಮರ ಸಪ್ತಾಹ (ಜುಲೈ 28– ಆ.3) ಆಚರಿಸುತ್ತಿದ್ದ ವೇಳೆ ನಕ್ಸಲರನ್ನು ಬಂಧಿಸಲಾಗಿದೆ.

ಬಾಸಾಗುಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಧರ್ಮಪುರ ಸಮೀಪದ ಕಾಡಿನಿಂದ ಉಯಿಕಾ ಸೇತು (32), ಉಯಿಕಾ ಪೇಕಿ (33) ಎಂಬ ಇಬ್ಬರು ಮಹಿಳಾ ನಕ್ಸಲರು ಸೇರಿ ಆರು ನಕ್ಸಲರನ್ನು ಬಂಧಿಸಲಾಗಿದೆ.

ಸ್ವಚ್ಛತೆ ಕೊರತೆ: ಬಸ್ಕಿ ಹೊಡೆದ ಐಎಎಸ್ ಟ್ರೈನಿ

ಲಖನೌ: ಉತ್ತರ ಪ್ರದೇಶದ ಶಹಜಹಾನ್‌ಪುರ ಜಿಲ್ಲೆಯ ಪೊವಯನ್ ತಹಸೀಲ್ ಕಚೇರಿ ಆವರಣದಲ್ಲಿ ಸ್ವಚ್ಛತೆಯ ಕೊರತೆಗೆ ತನ್ನನ್ನೇ ದೂಷಿಸಿಕೊಳ್ಳುತ್ತ ಐಎಎಸ್ ಟ್ರೈನಿ ಅಧಿಕಾರಿ ವಕೀಲರ ಮುಂದೆ, ಬಸ್ಕಿ ಹೊಡೆದ ಪ್ರಸಂಗ ನಡೆದಿದೆ.

ರಿಂಕು ಸಿಂಗ್ (ಉಪ ವಿಭಾಗಾಧಿಕಾರಿ) ಅವರು ಬಸ್ಕಿ ಹೊಡೆದಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೆಯಾಗಿದೆ.

ಶುಚಿತ್ವಕ್ಕೆ ಸಂಬಂಧಿಸಿದಂತೆ ತಹಸೀಲ್‌ನಲ್ಲಿ ತಪಾಸಣೆ ನಡೆಸುವ ವೇಳೆ, ಕೆಲವರು ಬಯಲಿನಲ್ಲಿ ಮೂತ್ರ ವಿಸರ್ಜಿಸುತ್ತಿದ್ದುದನ್ನು ಕಂಡ ಸಿಂಗ್, ಅವರಿಗೆ ಬಸ್ಕಿ ಹೊಡೆಯಲು ಆದೇಶಿಸುವ ಮೂಲಕ ಶಿಕ್ಷೆ ನೀಡಿದರು. ಇದೇ ವೇಳೆ ಹಿರಿಯ ಅಧಿಕಾರಿ ಬಯಲಿನಲ್ಲಿ ಮೂತ್ರ ವಿಸರ್ಜಿಸುವಾಗ ಸಿಕ್ಕಿಬಿದ್ದರು. ಅವರಿಗೆ ಪೊಲೀಸರಿಂದ ಬೆದರಿಸಿ, ಬಸ್ಕಿ ಹೊಡೆಯುವಂತೆ ಒತ್ತಾಯಿಸಲಾಗಿತ್ತು.

ಈ ರೀತಿಯ ಶಿಕ್ಷೆಗಳನ್ನು ವಿಧಿಸಿದ ಕ್ರಮ ಖಂಡಿಸಿ ವಕೀಲರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.


'ಕಚೇರಿಯಲ್ಲಿನ ಶೌಚಾಲಯಗಳೇ ಶುಚಿತ್ವದಿಂದ ಕೂಡಿಲ್ಲ. ಅವುಗಳು ಬಳಕೆಗೆ ಯೋಗ್ಯವಾಗಿಲ್ಲ. ಹೀಗಾದಾಗ ಶೌಚಾಲಯಕ್ಕೆ ಎಲ್ಲಿಗೆ ಹೋಗಬೇಕು' ಎಂದು ಪ್ರತಿಭಟನಾನಿರತರು ರಿಂಕು ಸಿಂಗ್ ಅವರನ್ನು ಪ್ರಶ್ನಿಸಿದರು. ಆಗ ಕಚೇರಿ ಆವರಣದಲ್ಲಿನ ಶೌಚಾಲಯಗಳನ್ನು ಸಿಂಗ್ ಪರಿಶೀಲಿಸಿ, ಸ್ವಚ್ಛತೆಯ ಕೊರತೆಯನ್ನು ಮನಗಂಡರು.

'ವಿಶ್ವಾಸವಿಲ್ಲದ ಮೇಲೆ ವಿಚಾರಣೆಗೆ ಹಾಜರಾಗಿರುವುದು ಏಕೆ?'

ನ್ಯಾ. ವರ್ಮಾಗೆ 'ಸುಪ್ರೀಂ' ಮತ್ತೆ ತರಾಟೆ

ಪಿಟಿಐ

ನವದೆಹಲಿ: ಮನೆಯಲ್ಲಿ ನಗದು ಪತ್ತೆಯಾದ ಪ್ರಕರಣದಲ್ಲಿ ತಮ್ಮನ್ನು ಅಪರಾಧಿಯಾಗಿಸಿ ಸುಪ್ರೀಂ ಕೋರ್ಟ್‌ನ ಆಂತರಿಕ ತನಿಖಾ ಸಮಿತಿಯು ನೀಡಿದ ವರದಿಯನ್ನು ಅಮಾನ್ಯ ಮಾಡಬೇಕು ಎಂದು ಕೋರಿದ್ದ ನ್ಯಾಯಮೂರ್ತಿ ಅವರನ್ನು ಯಶವಂತ ವರ್ಮಾ ಸುಪ್ರೀಂ ಕೋರ್ಟ್ ಬುಧವಾರ ಮತ್ತೆ ತರಾಟೆಗೆ ತೆಗೆದುಕೊಂಡಿತು.



ಯಶವಂತ ವರ್ಮಾ

ನಿಮ್ಮ ಬಗ್ಗೆ ನಿಮಗೇ ವಿಶ್ವಾಸ ಇಲ್ಲದ ಮೇಲೆ ಆಂತರಿಕ ತನಿಖಾ ಸಮಿತಿ ಎದುರು ಹಾಜರಾಗಿದ್ದು ಏಕೆ? ಆಗಲೇ ಏಕೆ ಅದನ್ನು ಪ್ರಶ್ನಿಸಲಿಲ್ಲ ಎಂದು ವರ್ಮಾ ಅವರನ್ನು ಸುಪ್ರೀಂ ಕೋರ್ಟ್ ಮತ್ತೆ ಪ್ರಶ್ನಿಸಿತು.

ಮುಖ್ಯಾಂಶಗಳು

- ವರ್ಮಾ ಅರ್ಜಿ ಕುರಿತ ಆದೇಶ ಕಾಯ್ದಿರಿಸಿದ ನ್ಯಾಯಪೀಠ
- ಪದಚ್ಯುತಿ ಶಿಫಾರಸು ಅಸಾಂವಿಧಾನಿಕ: ಸಿಬಲ್ ವಾದ

ಆಂತರಿಕ ತನಿಖಾ ಸಮಿತಿಯ ವಿರುದ್ಧ ಇದಕ್ಕೂ ಮುಂಚೆಯೇ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಬೇಕಿತ್ತು ಎಂದು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತಾ ಮತ್ತು ಎ.ಜಿ.ಮಸೀಹ್ ಅವರು ಇದ್ದ ನ್ಯಾಯಪೀಠ ಹೇಳಿತು.

'ನ್ಯಾಯಮೂರ್ತಿಯಿಂದ ದುರ್ನಡತೆ ನಡೆದಿದೆ ಎಂದು ಸಾಬೀತು ಮಾಡುವ ಪುರಾವೆಗಳು ಸಿಜೆಐ ಅವರ ಬಳಿ ಇದ್ದರೆ, ಅವರು ಆ ಬಗ್ಗೆ ರಾಷ್ಟ್ರಪತಿ ಮತ್ತು ಪ್ರಧಾನಿಮಂತ್ರಿಗೆ ತಿಳಿಸಬಹುದು ಎಂದಿತು.

ವರ್ಮಾ ಅವರ ಅಶಿಸ್ತಿನ ವರ್ತನೆ ಮತ್ತು ಅವರ ವಿರುದ್ಧದ ಆರೋಪಗಳ ಕುರಿತ ಸಾಕ್ಷ್ಯಗಳ ಪರಿಶೀಲನೆ ಬಳಿಕ ಅವರ ಪದಚ್ಯುತಿ ಪ್ರಕ್ರಿಯೆ ಆರಂಭಿಸಲು ಕೇಂದ್ರಕ್ಕೆ ಸಿಜೆಐ ಶಿಫಾರಸು ಮಾಡಬಹುದು.

'ಶಿಫಾರಸಿನ ಅನ್ವಯ ಕ್ರಮ ಕೈಗೊಳ್ಳಬೇಕೇ ಅಥವಾ ಬೇಡವೇ ಎಂಬುದು ರಾಜಕೀಯ ನಿರ್ಧಾರ. ಆದರೆ ಎಲ್ಲಾ ಪ್ರಕ್ರಿಯೆಗಳನ್ನು ಅನುಸರಿಸಲಾಗಿದೆ ಎಂಬ ಸಂದೇಶವನ್ನು ನ್ಯಾಯಾಂಗವು ಸಮಾಜಕ್ಕೆ ರವಾನಿಸಬೇಕಿದೆ' ಎಂದು ನ್ಯಾಯಪೀಠ ಪ್ರತಿಪಾದಿಸಿತು.

ವರ್ಮಾ ಪರ ಹಾಜರಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, 'ವರ್ಮಾ ಅವರ ಪದಚ್ಯುತಿಗೆ ಸಲಹೆ ನೀಡಿದ ಆಂತರಿಕ ತನಿಖಾ ಸಮಿತಿಯ ಶಿಫಾರಸು ಅಸಾಂವಿಧಾನಿಕ. ಈ ರೀತಿಯ ಶಿಫಾರಸು ಅಪಾಯಕಾರಿ ನಿದರ್ಶನವಾಗಲಿದೆ' ಎಂದರು.

ಆಂತರಿಕ ತನಿಖಾ ಸಮಿತಿ ಶಿಫಾರಸು ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರು 'ಸಂಸತ್ತಿನಲ್ಲಿ ವರ್ಮಾ ಅವರ ವಿರುದ್ಧ ವಾಗ್ದಂಡನೆ ಪ್ರಕ್ರಿಯೆ ನಡೆಸಬೇಕು' ಎಂದು ನೀಡಿರುವ ಸಲಹೆ ಪ್ರಶ್ನಿಸಿ ವರ್ಮಾ ಅವರು ಸಲ್ಲಿಸಿರುವ ಅರ್ಜಿಯ ಕುರಿತ ಆದೇಶವನ್ನು ನ್ಯಾಯಾಲಯವು ಕಾಯ್ದಿರಿಸಿತು.

ವರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸಲು ಕೋರಿ ಸಲ್ಲಿಕೆಯಾದ ಅರ್ಜಿಯ ಆದೇಶವನ್ನೂ ಕೋರ್ಟ್ ಕಾಯ್ದಿರಿಸಿತು.

ನಿಥಾರಿ ಸರಣಿ ಹತ್ಯೆ ಪ್ರಕರಣ: ಸಿಬಿಐ ಮೇಲ್ಮನವಿ ವಜಾ




ನವದೆಹಲಿ: ಉತ್ತರ ಪ್ರದೇಶದ ನೋಯ್ಡಾದಲ್ಲಿ 2006ರಲ್ಲಿ ನಡೆದ ನಿಥಾರಿ ಸರಣಿ ಹತ್ಯೆ ಪ್ರಕರಣದಲ್ಲಿ ಆರೋಪಿ ಸುರೇಂದ್ರ ಕೋಲಿಯನ್ನು ಖುಲಾಸೆಗೊಳಿಸಿದ್ದ ಅಲಹಾಬಾದ್ ಹೈಕೋರ್ಟ್ ತೀರ್ಪಿನ ವಿರುದ್ಧ ಸಿಬಿಐ ಸಲ್ಲಿಸಿದ್ದ 14 ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

'ಅಲಹಾಬಾದ್ ಹೈಕೋರ್ಟ್‌ನ ತೀರ್ಪಿನಲ್ಲಿ ಯಾವುದೇ ದೋಷವಿಲ್ಲ' ಎಂದು ಸಿಜೆಐ ಬಿ.ಆರ್. ಗವಾಯಿ ಹಾಗೂ ನ್ಯಾಯಮೂರ್ತಿಗಳಾದ ಸತೀಶ್ ಚಂದ್ರ ಶರ್ಮಾ, ಕೆ. ವಿನೋದ್ ಚಂದ್ರನ್ ಅವರಿದ್ದ ಪೀಠ ಹೇಳಿದೆ.

ನೊಯ್ಡಾದಲ್ಲಿ ಮೋನಿಂದರ್ ಸಿಂಗ್ ಪಂಧೇರ್ ಮತ್ತು ಸುರೇಂದ್ರ ಕೋಲಿ, ಹೆಣ್ಣುಮಕ್ಕಳನ್ನು ಮನೆಗೆ ಕರೆತಂದು ಅತ್ಯಾಚಾರ ಎಸಗಿದ ಬಳಿಕ ಕೊಲೆ ಮಾಡಿ ಮೃತದೇಹಗಳನ್ನು ಚರಂಡಿಗೆ ಎಸೆದಿದ್ದರು ಎಂಬ ಆರೋಪವಿತ್ತು.

ವಿನಿಮಯ ದರ ▶ ಡಾಲರ್ 87.80 ⬇ | ಪೌಂಡ್ 116.95 ⬇ | ಯುರೊ 100.96 ⬇ | ಯೆನ್ (100ಕ್ಕೆ) 59 ⬇

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,821
ಇಂದಿನ ಅಂತ್ಯ:	24,855
ದಿನದ ಗರಿಷ್ಠ:	24,902
⬇	33

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹465
	12 ಕ್ಕೆ	₹65
ಮೈಸೂರು:	100 ಕ್ಕೆ	₹470

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹322-580
ದ್ವಿತಳಿ (ಬಿ.ವಿ)	₹400-796

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹205
ಆರ್‌ಎಸ್‌ಎಸ್-5	₹199
ಗುಡ್ ಲಾಟ್	₹183

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)	(10 ಕೆ.ಜಿಗೆ)
ಶೇಂಗಾ (ರಿಫೈನ್ಡ್)	₹1420 (1425)
ಸೋಯಾ (ರಿಫೈನ್ಡ್)	₹1240 (1235)
ಸೂರ್ಯಕಾಂತಿ (ರಿಫೈನ್ಡ್)	₹1370 (1365)
ಪಾಮೋಲಿನ್	₹1205 (1200)

ಚುಟುಕೆ ಸುದ್ದಿ

ತೆರಿಗೆ ಪಾಲಿನಲ್ಲಿ ಅನ್ಯಾಯ: ನಾಳೆ ‘ದೆಹಲಿ ಚಲೋ’

ನವದೆಹಲಿ: ಕೇಂದ್ರ ಸರ್ಕಾರದಿಂದ ತೆರಿಗೆ ಪಾಲಿನಲ್ಲಿ ಹಾಗೂ ಅನುದಾನ ಹಂಚಿಕೆಯಲ್ಲಿ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿ ಕೆಪಿಸಿಸಿ ಕಾನೂನು ಹಾಗೂ ಮಾನವ ಹಕ್ಕು ಘಟಕದ ವತಿಯಿಂದ ಆಗಸ್ಟ್ 1ರಂದು ಜಂತರ್ ಮಂತರ್‌ನಲ್ಲಿ ‘ದೆಹಲಿ ಚಲೋ’ ಹಮ್ಮಿಕೊಳ್ಳಲಾಗಿದೆ.

ಈ ಪ್ರತಿಭಟನೆಯಲ್ಲಿ 200 ವಕೀಲರು ಭಾಗವಹಿಸಲಿದ್ದಾರೆ. ಬಳಿಕ ರಾಷ್ಟ್ರಪತಿ ಹಾಗೂ ಕೇಂದ್ರ ಹಣಕಾಸು ಸಚಿವರಿಗೆ ಮನವಿ ಸಲ್ಲಿಸಲಾಗುವುದು. ಒಂದು ವೇಳೆ ಕೇಂದ್ರ ಸರ್ಕಾರವು ತಾರತಮ್ಯ ಸರಿಪಡಿಸದಿದ್ದರೆ ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದು ಕಾನೂನು ಘಟಕದ ಅಧ್ಯಕ್ಷ ಸಿ.ಎಂ. ಧನಂಜಯ ತಿಳಿಸಿದ್ದಾರೆ.

ರೂಪಾಯಿ ಮೌಲ್ಯ 89 ಪೈಸೆ ಕುಸಿತ



ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 89 ಪೈಸೆ ಕುಸಿದಿದೆ. ಡಾಲರ್ ಎದುರು ರೂಪಾಯಿ ಮೌಲ್ಯ ₹87.80 ಆಗಿದೆ. ಇದು ಮೂರು ವರ್ಷಗಳಲ್ಲಿ ರೂಪಾಯಿಯು ಒಂದೇ ದಿನದಲ್ಲಿ ಕಂಡ ಅತಿದೊಡ್ಡ ಕುಸಿತ.

ಆಗಸ್ಟ್ 1ರಿಂದ ಅಮೆರಿಕವು, ಭಾರತದಿಂದ ಆಮದಾಗುವ ಸರಕುಗಳ ಮೇಲೆ ಶೇ 25ರಷ್ಟು ಸುಂಕ ವಿಧಿಸಲಿದೆ. ಇದರಿಂದ ರೂಪಾಯಿ ಮೌಲ್ಯ ಕುಸಿತ ಕಂಡಿದೆ. ವಿದೇಶಿ ಬಂಡವಾಳದ ಹೊರಹರಿವು ಸಹ ಮೌಲ್ಯ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಅಮೆರಿಕದಿಂದ ಸುಂಕ, ದಂಡ ಪ್ರಹಾರ

ಒಂದನೇ ಪುಟದಿಂದ...

ಈಗ ಘೋಷಿಸಿರುವ ಶೇ 25ರಷ್ಟು ಸುಂಕವು ಈ ಮೂಲಸುಂಕಕ್ಕೆ ಹೆಚ್ಚುವರಿಯಾಗಿ ಇರಲಿದೆಯೇ ಎಂಬುದು ಇನ್ನೂ ಗೊತ್ತಾಗಿಲ್ಲ.

ಟ್ರಂಪ್ ಅವರು ಘೋಷಿಸಿರುವ ಈ ಸುಂಕವು ಭಾರತದಿಂದ ಅಮೆರಿಕಕ್ಕೆ ಆಗುವ 87 ಬಿಲಿಯನ್ ಡಾಲರ್ (ಅಂದಾಜು ₹7.63 ಲಕ್ಷ ಕೋಟಿ) ಮೌಲ್ಯದ ಸರಕುಗಳ ರಫ್ತಿನ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ. ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಉತ್ಪನ್ನಗಳಲ್ಲಿ ಜವಳಿ, ಔಷಧ, ಮುತ್ತು ಮತ್ತು ಆಭರಣ, ಪೆಟ್ರೊಕೆಮಿಕಲ್ಸ್ ಪ್ರಮುಖವಾಗಿವೆ.

ಅಮೆರಿಕದಿಂದ ಭಾರತಕ್ಕೆ ಆಮದಾಗುವ ತಯಾರಿಕಾ ವಲಯದ ಉತ್ಪನ್ನಗಳ ಮೌಲ್ಯವು ಅಂದಾಜು 42 ಬಿಲಿಯನ್ ಡಾಲರ್ (ಸರಿಸುಮಾರು ₹3.68 ಲಕ್ಷ ಕೋಟಿ) ಆಗಿದೆ. ಅಮೆರಿಕವು ಭಾರತಕ್ಕೆ ದ್ರವೀಕೃತ ನೈಸರ್ಗಿಕ ಅನಿಲ, ಕಚ್ಚಾ ತೈಲ, ಕಲ್ಲಿದ್ದಲನ್ನು ಸಹ ರಫ್ತು ಮಾಡುತ್ತದೆ.

ಟ್ರಂಪ್ ಅವರು ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಪ್ರತಿಸುಂಕ ಹೇರುವುದಾಗಿ ಏಪ್ರಿಲ್ 2ರಂದು ಘೋಷಿಸಿದರು. ಆಗ ಭಾರತದ ಮೇಲೆ ಅವರು ಶೇ 26ರಷ್ಟು ಸುಂಕ ಹೇರಿದ್ದರು. ಆದರೆ, ಬೇರೆ ಬೇರೆ ದೇಶಗಳ ಜೊತೆ ಅಮೆರಿಕವು ವಾಣಿಜ್ಯ ಒಪ್ಪಂದದ ಬಗ್ಗೆ ಮಾತುಕತೆ ಆರಂಭಿಸಿದ ಕಾರಣಕ್ಕೆ ಪ್ರತಿಸುಂಕ ಕ್ರಮವನ್ನು 90 ದಿನಗಳವರೆಗೆ ಅಮಾನತಿನಲ್ಲಿ ಇರಿಸಲಾಯಿತು. ನಂತರ ಅಮಾನತನ್ನು ಆಗಸ್ಟ್ 1ರವರೆಗೆ ವಿಸ್ತರಿಸಲಾಯಿತು. ಆದರೆ ಶೇ 10ರಷ್ಟು ಮೂಲಸುಂಕವು ಜಾರಿಯಲ್ಲಿ ಇದೆ.

‘ಕೈಗಾರಿಕೆಗೆ ರಿಯಾಯಿತಿ ನೀತಿ’

ಅಧಿಕಾರಿಗಳ ಜೊತೆ ಸಚಿವ ಎಂ.ಬಿ.ಪಾಟೀಲ, ಪ್ರಿಯಾಂಕ್ ಖರ್ಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಾಹ್ಯಾಕಾಶ ಕ್ಷೇತ್ರದ ಉದ್ಯಮಗಳು ಮತ್ತು ವಿದ್ಯುನ್ಮಾನ ಉಪಕರಣಗಳ ಬಿಡಿಭಾಗಗಳ ತಯಾರಿಕಾ ಪಾರ್ಕ್‌ಗಳಿಗೆ ಸರ್ಕಾರದ ಕಡೆಯಿಂದ ನೀಡಬಹುದಾದ ರಿಯಾಯಿತಿ ಮತ್ತು ವಿನಾಯಿತಿಗಳಿಗೆ ಸಂಬಂಧಿಸಿದಂತೆ ನೀತಿ ರೂಪಿಸಲಾಗುತ್ತಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ತಿಳಿಸಿದ್ದಾರೆ.

ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಎರಡು ಇಲಾಖೆಗಳ ಅಧಿಕಾರಿಗಳ ಜತೆಗೆ ಬುಧವಾರ ಖನಿಜ ಭವನದಲ್ಲಿ ಸಭೆ ನಡೆಸಿದರು.

‘ಬಂಡವಾಳ ಆಕರ್ಷಣೆ ಮತ್ತು ಹೂಡಿಕೆ ಉತ್ತೇಜನಕ್ಕೆ ಪೂರಕವಾಗಿರುವಂತೆ ನೀತಿ ರೂಪಿಸುವ ಬಗ್ಗೆ ಒಂದು ವರದಿ ಸಿದ್ಧಪಡಿಸಿ ಎಂದು ಎರಡೂ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳಿಗೆ, ಇಬ್ಬರು ಸಚಿವರೂ ಸೂಚಿಸಿದ್ದಾರೆ. ಒಂದು ವಾರದಲ್ಲಿ ವರದಿ ಸಲ್ಲಿಸುವಂತೆ ಹೇಳಿದ್ದಾರೆ’ ಎಂದು ಪ್ರಕಟಣೆ ಹೇಳಿದೆ.

‘ಈ ವಲಯಗಳ ಉದ್ಯಮಕ್ಕೆ ಪೂರಕವಾಗಿ ನೀಡಬಹುದಾದ ರಿಯಾಯಿತಿಗಳ ಬಗ್ಗೆ ಮಾಹಿತಿ ತಂತ್ರಜ್ಞಾನ ಇಲಾಖೆಯು ಪರಿಶೀಲನೆ ನಡೆಸುತ್ತಿದ್ದು, ಕೈಗಾರಿಕಾ ಇಲಾಖೆಯಿಂದ ದೊರೆಯಬಹುದಾದ ವಿನಾಯಿತಿಗಳ ಬಗ್ಗೆ ಇಬ್ಬರು ಸಚಿವರು ಸಭೆಯಲ್ಲಿ ಚರ್ಚಿಸಿದರು. ಒಂದೇ ಕೈಗಾರಿಕೆಗೆ ಎರಡೂ ಇಲಾಖೆಗಳಿಂದ ರಿಯಾಯಿತಿ ದೊರೆಯುತ್ತಿದ್ದು, ಈ ಬಗ್ಗೆ ಇರುವ ಗೊಂದಲಗಳನ್ನು ನಿವಾರಿಸಿಕೊಳ್ಳುವ ಅಗತ್ಯವಿದೆ ಎಂದು ಅಧಿಕಾರಿಗಳು ಸಚಿವರಿಗೆ ತಿಳಿಸಿದರು’ ಎಂದು ಪ್ರಕಟಣೆ ತಿಳಿಸಿದೆ.

‘ಉದ್ದೇಶಿತ ಡ್ರೋನ್ ಪರೀಕ್ಷಾ ಕೇಂದ್ರವನ್ನು ಬೆಂಗಳೂರಿನ ವ್ಯಾಪ್ತಿಯಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ಹೆಸರಘಟ್ಟ ಪ್ರದೇಶವೂ ಬೆಂಗಳೂರಿನ ವ್ಯಾಪ್ತಿಯಲ್ಲಿ ಬರುವುದರಿಂದ, ಪರೀಕ್ಷಾ ಕೇಂದ್ರಕ್ಕೆ ಬೇರೆ ಸ್ಥಳ ಹುಡುಕಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚಿಸಿದರು’ ಎಂದಿದೆ.

ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಮಾಹಿತಿ ತಂತ್ರಜ್ಞಾನ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಅವರು ಸಭೆಯಲ್ಲಿ ಭಾಗಿಯಾಗಿದ್ದರು.

‘ಪಿಸಿಬಿ ಪಾರ್ಕ್‌ಗೆ ಭೂಮಿ ನೀಡಿ’

‘ಮಾಹಿತಿ ತಂತ್ರಜ್ಞಾನ ಇಲಾಖೆಯ ವತಿಯಿಂದ ದೇವನಹಳ್ಳಿ ಸಮೀಪದ ಆದಿನಾರಾಯಣ ಹೊಸಹಳ್ಳಿ ಅಥವಾ ಐಟಿಐಆರ್ ಪ್ರದೇಶದಲ್ಲಿ 100 ಎಕರೆಯಲ್ಲಿ ಸ್ಪೇಸ್ ಪಾರ್ಕ್, ಮೈಸೂರಿನ ಕೋಚನಹಳ್ಳಿ ಹಂತ-2ರಲ್ಲಿ 150 ಎಕರೆಯಲ್ಲಿ ಪ್ರಿಂಟೆಡ್ ಸರ್ಕ್ಯೂಟ್ ಬೋರ್ಡ್ (ಪಿಸಿಬಿ) ಪಾರ್ಕ್ ಸ್ಥಾಪಿಸಲು ತೀರ್ಮಾನಿಸಲಾಗಿದೆ’ ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

‘ಅಡಕನಹಳ್ಳಿ ಮತ್ತು ಕೋಚನಹಳ್ಳಿ ಎರಡೂ ಕಡೆ ತಲಾ 100 ಎಕರೆಯಲ್ಲಿ ಗ್ಲೋಬಲ್ ಇನ್ನೋವೇಶನ್ ಸಿಟಿ, 100 ಎಕರೆಯಲ್ಲಿ ಕಿಯೋನಿಕ್ಸ್ ಮೂಲಕ ಗ್ಲೋಬಲ್ ಕೇಪಬಿಲಿಟಿ ಸೆಂಟರ್‌ಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ. ಇದಕ್ಕೆ ಜಮೀನು ಒದಗಿಸುವಂತೆ ಕೈಗಾರಿಕಾ ಸಚಿವರನ್ನು ಕೋರಲಾಗಿದೆ’ ಎಂದಿದ್ದಾರೆ.



ಸಚಿವರಾದ ಎಂ.ಬಿ.ಪಾಟೀಲ ಮತ್ತು ಪ್ರಿಯಾಂಕ್ ಖರ್ಗೆ ಅವರು ಅಧಿಕಾರಿಗಳ ಜತೆ ಸಭೆ ನಡೆಸಿದರು

‘ನೀರು ಪೂರೈಕೆಗೆ ₹2,500 ಕೋಟಿ ಯೋಜನೆ’

‘ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿರುವ ಪ್ರದೇಶಗಳಿಗೆ ನೀರು ಒದಗಿಸಲು ₹2,500 ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ. ಕೈಗಾರಿಕೆಗಳಿಗೆ ನೀರಿನ ಭದ್ರತೆಯನ್ನು ಒದಗಿಸಬೇಕಿದೆ. ಇದಕ್ಕಾಗಿ ‘ಕೈಗಾರಿಕಾ ನೀರು ಭದ್ರತಾ ನೀತಿ’ಯನ್ನು ರೂಪಿಸಬೇಕು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ’ ಎಂದು ಎಂ.ಬಿ.ಪಾಟೀಲ ತಿಳಿಸಿದ್ದಾರೆ.

‘ನೀರು ಪೂರೈಕೆ ಯೋಜನೆ ಅಡಿಯಲ್ಲಿ ಉದ್ಯಮಗಳಿಗೆ ಅಗತ್ಯವಿರುವ ಶೇ 50ರಷ್ಟನ್ನು ಸರ್ಕಾರ ಪೂರೈಸಲಿದೆ. ನೀರಿನ ಸಂಸ್ಕರಣೆ ಮತ್ತು ಮರುಬಳಕೆ ಮೂಲಕ, ಉಳಿದ ಶೇ 50ರಷ್ಟನ್ನು ಕೈಗಾರಿಕೆಗಳೇ ಒದಗಿಸಿಕೊಳ್ಳಬೇಕು. ಇದನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಗಂಭೀರವಾಗಿ ಚಿಂತನೆ ನಡೆಸಲಾಗಿದೆ’ ಎಂದಿದ್ದಾರೆ.

ಸುದ್ದಿ 2 ನಿಮಿಷ

ಮಹೀಂದ್ರ ಲಾಭ ಶೇ 24 ಹೆಚ್ಚಳ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ₹4,083 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹3,283 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭವು ಶೇ 24ರಷ್ಟು ಏರಿಕೆ ಕಂಡಿದೆ. ವಾಹನಗಳ ಮಾರಾಟ ಮತ್ತು ವ್ಯವಹಾರದಲ್ಲಿನ ಏರಿಕೆಯಿಂದ ಲಾಭದ ಪ್ರಮಾಣ ಹೆಚ್ಚಳವಾಗಿದೆ ಎಂದು ಕಂಪನಿ ಬುಧವಾರ ಷೇರುಪೇಟೆಗೆ ತಿಳಿಸಿದೆ.

ಒಟ್ಟು ವರಮಾನವು ₹45,529 ಕೋಟಿಯಾಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹37,218 ಕೋಟಿ ವರಮಾನ ಇತ್ತು. ಜೂನ್ ತ್ರೈಮಾಸಿಕದಲ್ಲಿ 2,47,249 ವಾಹನಗಳು ಮಾರಾಟವಾಗಿದ್ದು, ಶೇ 17ರಷ್ಟು ಏರಿಕೆ ಕಂಡಿದೆ. ಟ್ರ್ಯಾಕ್ಟರ್‌ಗಳ ಮಾರಾಟದಲ್ಲಿ ಶೇ 10ರಷ್ಟು ಹೆಚ್ಚಳವಾಗಿದ್ದು, 1,32,964 ಟ್ರ್ಯಾಕ್ಟರ್‌ಗಳು ಮಾರಾಟವಾಗಿವೆ ಎಂದು ತಿಳಿಸಿದೆ.

‘ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ಎಲ್ಲ ವಹಿವಾಟುಗಳು ಬೆಳವಣಿಗೆ ದಾಖಲಿಸಿವೆ. ಹೆಚ್ಚಿದ ವಾಹನಗಳ ಮಾರಾಟ ಮತ್ತು ಕೃಷಿ ವಹಿವಾಟು ಲಾಭದ ಹೆಚ್ಚಳಕ್ಕೆ ಕಾರಣವಾಗಿವೆ’ ಎಂದು ಕಂಪನಿಯ ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಅನೀಶ್ ಶಾ ಹೇಳಿದ್ದಾರೆ.

ಹುಂಡೈ ಲಾಭ ಇಳಿಕೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಜೂನ್ ತ್ರೈಮಾಸಿಕದಲ್ಲಿ ಹುಂಡೈ ಮೋಟರ್ ಇಂಡಿಯಾದ ನಿವ್ವಳ ಲಾಭ ಶೇ 8ರಷ್ಟು ಇಳಿಕೆ ಆಗಿದೆ.

ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹1,490 ಕೋಟಿ ಲಾಭ ಗಳಿಸಿತ್ತು. ಈ ಬಾರಿ ₹1,369 ಕೋಟಿ ಲಾಭ ಗಳಿಸಿದೆ. ವಾಹನಗಳ ಮಾರಾಟದಲ್ಲಿನ ಇಳಿಕೆಯಿಂದ ಲಾಭದ ಪ್ರಮಾಣ ಕಡಿಮೆಯಾಗಿದೆ ಎಂದು ಕಂಪನಿ ಷೇರುಪೇಟೆಗೆ ಬುಧವಾರ ತಿಳಿಸಿದೆ.

ಒಟ್ಟು ವರಮಾನವು ₹16,628 ಕೋಟಿಯಾಗಿದೆ. ಹಿಂದಿನ ಇದೇ ಅವಧಿಯಲ್ಲಿ ₹17,568 ಕೋಟಿ ವರಮಾನ ಇತ್ತು ಎಂದು ತಿಳಿಸಿದೆ.

ಕಳೆದ ವರ್ಷದ ಜೂನ್ ತ್ರೈಮಾಸಿಕದಲ್ಲಿ ಒಟ್ಟು 1,92,055 ವಾಹನಗಳು ಮಾರಾಟವಾಗಿದ್ದವು. ಈ ಬಾರಿ 1,80,399 ವಾಹನ ಮಾರಾಟವಾಗಿದ್ದು, ಶೇ 6ರಷ್ಟು ಇಳಿಕೆ ಕಂಡಿದೆ ಎಂದು ತಿಳಿಸಿದೆ.

ಅಡಿಕೆ ಧಾರಣೆ

ಕುಮಟಾ					
ಚಾಲಿ	39099-42699	ಚಾಲಿ	34369-37277	ಸರಕು	81300-96196
ಚಿಪ್ಪು	25689-30999	ಕೋಕ	18369-18999	ಸಿದ್ದಾಪುರ	
ಕೋಕ	7109-21569	ರಾಶಿ	48959-55329	ಬಿಳಿಗೋಟು	27629-33690
ಫ್ಯಾಕ್ಟರಿ	4039-30200	ಸಿಪ್ಪೆಗೋಟು	16899-19525	ಚಾಲಿ	34699-43000
ಹೊಸಚಾಲಿ	35599-42699	ಶಿವಮೊಗ್ಗ		ಕೋಕ	17219-17619
ಸಾಗರ		ಬೆಟ್ಟೆ	50109-60239	ರಾಶಿ	43099-48799
ಬಿಳಿಗೋಟು	27299-27299	ಗೊರಬಲು	17890-31111	ತಟ್ಟಿಬೆಟ್ಟೆ	22617-22617
		ರಾಶಿ	45009-57599		

ಶಾಂಘೈನಲ್ಲಿ ಮಳೆ 2.83 ಲಕ್ಷ ಜನ ಸ್ಥಳಾಂತರ

ಶಾಂಘೈ (ಎಎಫ್‌ಪಿ): ಚೀನಾದ ಆರ್ಥಿಕ ಕೇಂದ್ರ ಶಾಂಘೈ ಮೇಲೆ ಬುಧವಾರ ‘ಕೊ–ಮೇ’ ಚಂಡಮಾರುತ ಅಪ್ಪಳಿಸಿದ್ದು ಬಿರುಗಾಳಿ ಸಹಿತ ಭಾರಿ ಮಳೆಯಾಗುತ್ತಿದೆ.

ಕರಾವಳಿ ಮತ್ತು ತಗ್ಗು ಪ್ರದೇಶಗಳಲ್ಲಿದ್ದ ಸುಮಾರು 2.83 ಲಕ್ಷಕ್ಕೂ ಹೆಚ್ಚು ಜನರನ್ನು ಸ್ಥಳಾಂತರ ಮಾಡಲಾಗಿದೆ. ಶಾಂಘೈನ ಎರಡು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕಾರ್ಯಾಚರಣೆ ಮಾಡುವ ಹಲವು ವಿಮಾನಗಳ ಸಂಚಾರ ರದ್ದುಮಾಡಲಾಗಿದೆ.

ಹಡಗು, ದೋಣಿ ಸೇವೆಗಳನ್ನು ರದ್ದುಪಡಿಸಲಾಗಿದೆ. ಮೆಟ್ರೊ ಸೇರಿದಂತೆ ರೈಲ್ವೆ ಸಂಚಾರಕ್ಕೆ ಕೆಲವೆಡೆ ವ್ಯತ್ಯಯವಾಗಿದೆ. ಹೆದ್ದಾರಿಗಳಲ್ಲಿ ವಾಹನಗಳ ವೇಗ ತಗ್ಗಿಸಲಾಗಿದೆ.

1900ಕ್ಕೂ ಹೆಚ್ಚು ತಾತ್ಕಾಲಿಕ ಶಿಬಿರಗಳನ್ನು ನಿರ್ಮಿಸಿ ಜನರಿಗೆ ಆಶ್ರಯ ಕಲ್ಪಿಸಲಾಗಿದೆ. ಬುಧವಾರ ಬೆಳಗ್ಗೆ ಝುಜಿಂಗ್‌ಗೆ ಅಪ್ಪಳಿಸಿದ್ದ ಚಂಡಮಾರುತ ಗಂಟೆಗೆ 83 ಕಿಲೋ ಮೀಟರ್ ವೇಗದಲ್ಲಿ ಬೀಸುತ್ತಿತ್ತು.

ಚೀನಾದ ಪೂರ್ವ ಕರಾವಳಿಯಲ್ಲಿ ಅಲೆಗಳ ಅಬ್ಬರ ಜೋರಾಗಿತ್ತು. ರಷ್ಯಾದಲ್ಲಿ ಸಂಭವಿಸಿದ ಪ್ರಬಲ ಭೂಕಂಪದಿಂದಾಗಿ ಚೀನಾದ ಪೂರ್ವ ಕರಾವಳಿಗೆ ಸುನಾಮಿಯ ಮುನ್ನೆಚ್ಚರಿಕೆ ನೀಡಿದ್ದ ಸರ್ಕಾರ ಆನಂತರ ವಾಪಸ್ ಪಡೆದಿದೆ.

ರಿಲಯನ್ಸ್ ದೇಶದ ಅಗ್ರ ಕಂಪನಿ

‘ಫಾರ್ಚೂನ್’ ಪಟ್ಟಿಯಲ್ಲಿ ದೇಶದ 9 ಕಂಪನಿಗಳಿಗೆ ಸ್ಥಾನ

ನವದೆಹಲಿ (ಪಿಟಿಐ): ‘ಫಾರ್ಚೂನ್’ ನಿಯತಕಾಲಿಕ ಪ್ರಕಟಿಸಿರುವ 2025ನೇ ಸಾಲಿನ ಜಗತ್ತಿನ ಪ್ರಮುಖ 500 ಕಂಪನಿಗಳ ಪಟ್ಟಿಯಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ಭಾರತದ ಕಂಪನಿಗಳ ಪೈಕಿ ಅಗ್ರ ಸ್ಥಾನದಲ್ಲಿ ಇದೆ.

ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಎರಡು ಸ್ಥಾನ ಇಳಿಕೆ ಕಂಡಿದೆ. 2024ರಲ್ಲಿ 86ನೇ ಸ್ಥಾನ ಪಡೆದಿದ್ದ ಕಂಪನಿಯು, ಈ ವರ್ಷ 88ನೇ ಸ್ಥಾನ ಪಡೆದಿದೆ. 2021ರಲ್ಲಿ 155ನೇ ಸ್ಥಾನ ಪಡೆದಿದ್ದ ಕಂಪನಿಯು, ನಾಲ್ಕು ವರ್ಷದಲ್ಲಿ 67 ಸ್ಥಾನ ಜಿಗಿತ ಕಂಡಿದೆ ಎಂದು ತಿಳಿಸಿದೆ.

ಅಮೆರಿಕದ ವಾಲ್‌ಮಾರ್ಟ್ ಕಂಪನಿಯು ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದಿದೆ. ನಂತರ ಅಮೆಜಾನ್ ಇದೆ. ಮೊದಲ 10 ಕಂಪನಿಗಳ ಪೈಕಿ ಚೀನಾದ ಮೂರು ಕಂಪನಿಗಳಿವೆ. ಸೌದಿ ಅರಾಮ್ಕೊ 4 ಮತ್ತು ಆ್ಯಪಲ್ 8ನೇ ಸ್ಥಾನ ಪಡೆದಿವೆ.

ಭಾರತದ 9 ಕಂಪನಿಗಳು ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, ಈ ಪೈಕಿ ಐದು ಸರ್ಕಾರಿ ವಲಯದವು, ಉಳಿದ ನಾಲ್ಕು ಖಾಸಗಿ ವಲಯದವು.

ಭಾರತೀಯ ಜೀವ ವಿಮಾ ನಿಗಮ (95), ಇಂಡಿಯನ್ ಆಯಿಲ್ ಕಾರ್ಪೊರೇಷನ್ (127), ಎಸ್‌ಬಿಐ (163), ಎಚ್‌ಡಿಎಫ್‌ಸಿ ಬ್ಯಾಂಕ್ (258) ಮತ್ತು ಒಎನ್‌ಜಿಸಿ (181) ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

ಟಾಟಾ ಮೋಟರ್ಸ್ (283), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (285) ಮತ್ತು ಐಸಿಐಸಿಐ ಬ್ಯಾಂಕ್ (464) ಕೂಡ ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

2024–25ರ ಆರ್ಥಿಕ ವರ್ಷದಲ್ಲಿ ಕಂಪನಿಗಳ ಒಟ್ಟು ವರಮಾನ ಆಧರಿಸಿ ಈ ಪಟ್ಟಿ ಸಿದ್ಧಪಡಿಸಲಾಗಿದೆ. 2024ರ ಮಾರ್ಚ್‌ನಲ್ಲಿ ರೂಪಾಯಿ ಎದುರು ಡಾಲರ್ ಮೌಲ್ಯ ₹83.35 ಇತ್ತು. 2025ರ ಮಾರ್ಚ್ ವೇಳೆಗೆ ₹85.45 ಆಗಿತ್ತು. ರೂಪಾಯಿ ಮೌಲ್ಯ ಇಳಿಕೆಯು ರಿಲಯನ್ಸ್ ಕಂಪನಿ ವರಮಾನದ ಮೇಲೆ ಪರಿಣಾಮ ಬೀರಿದೆ.

ಮುಂಬೈ ಧಾರಣೆ (ಶೇಂಗಾ)	
30-07-2025	
ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1430 (1435)
ಒಂದು ವಾರದ ಡೆಲಿವರಿ	1425 (1430)
ಪಾಮ್ ವಾರದ ಡೆಲಿವರಿ	1203 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1275)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	98,400 (97,850)
ಬೆಳ್ಳಿ ಕೆ.ಜಿಗೆ	1,13,000 (1,13,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

‘ದೇಶದ ಜಿಡಿಪಿ ಬೆಳವಣಿಗೆ ಶೇ 6.4’

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಪ್ರಸಕ್ತ ಮತ್ತು ಮುಂದಿನ ಕ್ಯಾಲೆಂಡರ್ ವರ್ಷದಲ್ಲಿ ಭಾರತದ ಒಟ್ಟು ಆಂತರಿಕ ಉತ್ಪಾದನೆ (ಜಿಡಿಪಿ) ಶೇ 6.4ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆಯಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ.

ಜನರು ಸರಕು ಮತ್ತು ಸೇವೆಗಳನ್ನು ಪಡೆದುಕೊಳ್ಳುವುದರ ಮೇಲೆ ವ್ಯಯಿಸುವ ಹಣದ ಪ್ರಮಾಣ ಹೆಚ್ಚಳವಾಗಿದೆ. ಅಲ್ಲದೆ, ಸರ್ಕಾರಗಳು ಹೂಡಿಕೆ ಹೆಚ್ಚಳ ಮಾಡಿವೆ. ಇವು ಬೆಳವಣಿಗೆಗೆ ನೆರವಾಗಿವೆ ಎಂದು ಐಎಂಎಫ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥೆ ಡೆನಿಜ್ ಇಗನ್ ಹೇಳಿದ್ದಾರೆ.

ಭಾರತವು, ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಕಾರ್ಮಿಕರಿಗೆ ಮರು ಕೌಶಲ ನೀಡಲಾಗುತ್ತಿದೆ. ಮೂಲಸೌಕರ್ಯ ವಲಯದಲ್ಲಿ ನಿರಂತರವಾಗಿ ಹೂಡಿಕೆ ಮಾಡುತ್ತಿದ್ದು, ವ್ಯಾಪಾರಕ್ಕಿರುವ ನಿರ್ಬಂಧಗಳನ್ನು ತೆಗೆಯುತ್ತಿದೆ ಎಂದು ತಿಳಿಸಿದ್ದಾರೆ.

ಆದರೂ, ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಹೂಡಿಕೆ ಮಾಡುವ ಅಗತ್ಯವಿದೆ. ಭೂಸುಧಾರಣೆಗೆ ಒತ್ತು ನೀಡಬೇಕಿದೆ ಮತ್ತು ಸಾಮಾಜಿಕ ಭದ್ರತೆ ಹೆಚ್ಚಿಸಬೇಕಿದೆ. ಉತ್ತಮ ವ್ಯವಹಾರ ನಡೆಸಲು ವಿಳಂಬ ಧೋರಣೆಯನ್ನು ಕಡಿಮೆ ಮಾಡಬೇಕಿದೆ ಎಂದು ಹೇಳಿದ್ದಾರೆ.

ಹೈದರಾಬಾದ್: 8 ಕಡೆಗಳಲ್ಲಿ ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಈ ಹಿಂದಿನ ಬಿಆರ್‌ಎಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕುರಿಗಳ ವಿತರಣೆ ಯೋಜನೆಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದ ತನಿಖೆ ಭಾಗವಾಗಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ನಗರದ 8 ಕಡೆಗಳಲ್ಲಿ ಬುಧವಾರ ಶೋಧ ನಡೆಸಿದರು.

ಬಿಆರ್‌ಎಸ್ ಸರ್ಕಾರದ ಅವಧಿಯಲ್ಲಿ ಸಚಿವರಾಗಿದ್ದ ಟಿ.ಶ್ರೀನಿವಾಸ ಯಾದವ್ ಅವರಿಗೆ ವಿಶೇಷ ಕರ್ತವ್ಯಾಧಿಕಾರಿಯಾಗಿದ್ದ ಜಿ.ಕಲ್ಯಾಣ ಅವರಿಗೆ ಸಂಬಂಧಿಸಿದ ಸ್ಥಳಗಳನ್ನು ಗುರಿಯಾಗಿಸಿ ಶೋಧ ನಡೆಸಲಾಗಿದೆ ಎಂದು ಇ.ಡಿ ಮೂಲಗಳು ಹೇಳಿವೆ.

ಹಗರಣಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ದಾಖಲಿಸಿರುವ ಎಫ್‌ಐಆರ್‌ನಲ್ಲಿ ಕಲ್ಯಾಣ ಅವರ ಹೆಸರನ್ನು ಉಲ್ಲೇಖಿಸಲಾಗಿದೆ. ಈ ಎಫ್‌ಐಆರ್ ಆಧಾರದ ಮೇಲೆ, ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ತನಿಖೆ ನಡೆಸುತ್ತಿದೆ.

ಕುರಿಗಳ ವಿತರಣೆ ಮತ್ತು ಅಭಿವೃದ್ಧಿ ಯೋಜನೆಯಡಿ (ಎಸ್‌ಆರ್‌ಡಿಎಸ್) ಅಂದಾಜು ₹700 ಕೋಟಿಯಷ್ಟು ಅವ್ಯವಹಾರ ನಡೆದಿದೆ ಎಂದು ಆರೋಪಿಸಲಾಗಿದೆ. 2017ರಲ್ಲಿ ಜಾರಿಗೊಳಿಸಿದ್ದ ಈ ಯೋಜನೆಯ ಮೊದಲ ಹಂತದಲ್ಲಿ, ಅರ್ಹ ಕುರಿಗಾಹಿ ಕುಟುಂಬಗಳಿಗೆ 1.28 ಕೋಟಿಗೂ ಅಧಿಕ ಕುರಿಗಳನ್ನು ವಿತರಣೆ ಮಾಡಲಾಗಿತ್ತು ಎನ್ನಲಾಗಿದೆ.

‘ಹೆದ್ದಾರಿಯಲ್ಲಿ ವಾಹನ ದಿಢೀರ್ ನಿಲ್ಲಿಸುವುದು ನಿರ್ಲಕ್ಷ್ಯ’

ನವದೆಹಲಿ: ರಸ್ತೆ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ಆದೇಶ ನೀಡಿರುವ ಸುಪ್ರೀಂ ಕೋರ್ಟ್, ‘ಹೆದ್ದಾರಿಯಲ್ಲಿ ಯಾವುದೇ ಮುನ್ಸೂಚನೆ ಕೊಡದೇ ದಿಢೀರ್ ಬ್ರೇಕ್ ಹಾಕಿದರೆ ಅದು ಕಾರು ಚಾಲಕನ ನಿರ್ಲಕ್ಷ್ಯ’ ಎಂದು ಹೇಳಿದೆ.

ನ್ಯಾಯಮೂರ್ತಿಗಳಾದ ಸುಧಾಂಶು ಧುಲಿಯಾ ಮತ್ತು ಅರವಿಂದ ಕುಮಾರ್ ಅವರು ಇದ್ದ ಪೀಠವು ತಮಿಳುನಾಡಿನ ಕೊಯಮತ್ತೂರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಆದೇಶ ನೀಡಿದೆ.

‘ಹೆದ್ದಾರಿಗಳಲ್ಲಿ ಅತಿ ವೇಗದ ಚಾಲನೆ ಸಹಜ. ಚಾಲಕ ವಾಹನವನ್ನು ನಿಲ್ಲಿಸುವಾಗ ಹಿಂಬದಿಯ ವಾಹನಗಳಿಗೆ ಮುನ್ಸೂಚನೆ ನೀಡಬೇಕಾದುದು ಅವನ ಹೊಣೆಗಾರಿಕೆ ಆಗಿರುತ್ತದೆ’ ಎಂದು ಹೇಳಿದೆ.

ಗರ್ಭಿಣಿಯಾಗಿದ್ದ ತನ್ನ ಪತ್ನಿಗೆ ವಾಂತಿ ಮಾಡಬೇಕು ಎನಿಸಿದ್ದ ಕಾರಣಕ್ಕೆ ದಿಢೀರ್ ಬ್ರೇಕ್ ಹಾಕಿದ್ದಾಗಿ ರಸ್ತೆ ಅಪಘಾತಕ್ಕೆ ಕಾರಣವಾಗಿದ್ದ ಕಾರು ಚಾಲಕ ವಿವರಣೆ ನೀಡಿದ್ದರು. ಇದನ್ನು ಒಪ್ಪದ ನ್ಯಾಯಮೂರ್ತಿ ಧುಲಿಯಾ ನೇತೃತ್ವದ ಪೀಠವು ಕಾರು ಚಾಲಕ ಶೇ 50ರಷ್ಟು ಬಾಧ್ಯಸ್ಥ ಎಂದು ಮಂಗಳವಾರ ತೀರ್ಪು ನೀಡಿದೆ.

2017ರಲ್ಲಿ ರಸ್ತೆ ಅಪಘಾತದಲ್ಲಿ ಎಡಗಾಲು ಕಳೆದುಕೊಂಡಿದ್ದ 20 ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿ ಮಹಮ್ಮದ್ ಹಕಿಮ್ ಪರಿಹಾರ ಹೆಚ್ಚಳ ಕೋರಿ ಕೋರ್ಟ್ ಮೊರೆಹೋಗಿದ್ದರು.

ವಾಸ್ತವ ಸಂಗತಿ ತಿರುಚುತ್ತಿರುವ ರಾಹುಲ್: ದುಬೆ ಟೀಕೆ

ನವದೆಹಲಿ(ಪಿಟಿಐ): 1971ರಲ್ಲಿ ಪಾಕಿಸ್ತಾನ ವಿರುದ್ಧದ ಯುದ್ಧವನ್ನು ಇಂದಿರಾ ಗಾಂಧಿ ನಿರ್ವಹಿಸಿದ ರೀತಿ ಕುರಿತು ಲೋಕಸಭೆಯಲ್ಲಿ ಮಾತನಾಡುವ ವೇಳೆ, ರಾಹುಲ್ ಗಾಂಧಿ ಅವರು ‘ತಿರುಚಲಾದ ಮತ್ತು ತಪ್ಪಾದ ಸಂಗತಿ’ಗಳನ್ನು ಬಳಸಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಬುಧವಾರ ಟೀಕಿಸಿದರು.



ನಿಶಿಕಾಂತ್ ದುಬೆ

‘ಲೋಕಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರಾಗಿರುವ ರಾಹುಲ್ ಗಾಂಧಿ ಪದೇಪದೇ ಈ ರೀತಿ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದು, ಅವರ ಕಿವಿಹಿಂಡಿ’ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ದುಬೆ ಒತ್ತಾಯಿಸಿದ್ದಾರೆ.

‘ಈ ವಿಚಾರವಾಗಿ ದುಬೆ ಅವರು ಓಂ ಬಿರ್ಲಾ ಅವರಿಗೆ ಪತ್ರ ಬರೆದಿದ್ದಾರೆ. ಪ್ರಶ್ನಾರ್ಹ ಹೇಳಿಕೆಗಳನ್ನು ನೀಡುತ್ತಿರುವ ರಾಹುಲ್ ಗಾಂಧಿ ಅವರಿಗೆ ಕಾರಣ ಕೇಳಿ ನೋಟಿಸ್ ಮಾಡಬೇಕು. ಅಲ್ಲದೇ, ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕು ಎಂಬುದಾಗಿ ದುಬೆ ಕೋರಿದ್ದಾರೆ’ ಎಂದು ಮೂಲಗಳು ಹೇಳಿವೆ.

ಆಪರೇಷನ್ ಸಿಂಧೂರ ಕುರಿತು ಲೋಕಸಭೆಯಲ್ಲಿ ಮಂಗಳವಾರ ನಡೆದ ಚರ್ಚೆಯಲ್ಲಿ ರಾಹುಲ್ ಗಾಂಧಿ ಪಾಲ್ಗೊಂಡಿದ್ದರು. ‘ಪಾಕಿಸ್ತಾನ ವಿರುದ್ಧ ಯುದ್ಧದ ವೇಳೆ ಇಂದಿರಾ ಗಾಂಧಿ ಅಸಾಧಾರಣ ಧೈರ್ಯ ತೋರಿದ್ದರು. ಅದರ ಅರ್ಧದಷ್ಟು ಧೈರ್ಯ ಮೋದಿ ಅವರಿಗೆ ಇದ್ದರೆ, ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧವನ್ನು ನಿಲ್ಲಿಸಿದ್ದಾಗಿ ಹೇಳುತ್ತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆ ಸುಳ್ಳು ಎಂಬುದಾಗಿ ಸ್ಪಷ್ಟಪಡಿಸಲಿ’ ಎಂದು ರಾಹುಲ್ ಗಾಂಧಿ ಹೇಳಿದ್ದರು.

‘ಪಾಕಿಸ್ತಾನ ವಿರುದ್ಧ ಯುದ್ಧ ನಡೆದಿದ್ದ ವೇಳೆ, ಕಾರ್ಯಾಚರಣೆಗೆ ಸಂಬಂಧಿಸಿ ಇಂದಿರಾ ಗಾಂಧಿ ಅವರು ಸೇನೆಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಮೋದಿ ಸರ್ಕಾರ ಸಶಸ್ತ್ರ ಪಡೆಗಳ ಯೋಧರ ಕೈಗಳನ್ನು ಕಟ್ಟಿಹಾಕಿತ್ತು’ ಎಂದೂ ರಾಹುಲ್ ಗಾಂಧಿ ಹೇಳಿದ್ದರು.

ಅಮೆರಿಕದ ಆಗಿನ ಅಧ್ಯಕ್ಷ ರಿಚರ್ಡ್ ನಿಕ್ಸನ್ ಅವರು 1971ರ ಡಿಸೆಂಬರ್ 5ರಂದು ಬರೆದಿದ್ದ ಪತ್ರವನ್ನು ಉಲ್ಲೇಖಿಸುವ ಮೂಲಕ ದುಬೆ ಅವರು ರಾಹುಲ್ ಅವರಿಗೆ ತಿರುಗೇಟು ನೀಡಿದ್ದರು.

‘ನಿಮ್ಮ ಪ್ರಭಾವ ಬಳಸಿ, ಪಾಕಿಸ್ತಾನದೊಂದಿಗಿನ ಯುದ್ಧ ನಿಲ್ಲಿಸಿ ಎಂದು ಇಂದಿರಾ ಗಾಂಧಿ ಅಕ್ಷರಶಃ ನನ್ನಲ್ಲಿ ಬೇಡಿಕೊಂಡಿದ್ದರು’ ಎಂದು ನಿಕ್ಸನ್ ಪತ್ರದಲ್ಲಿ ಬರೆದಿದ್ದರು ಎಂಬ ಅಂಶವನ್ನು ದುಬೆ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಬಿರ್ಲಾ ಅವರಿಗೆ ಸಲ್ಲಿಸಿರುವ ಮನವಿ ಪತ್ರದೊಂದಿಗೆ ಈ ಪತ್ರದ ಪ್ರತಿ ಲಗತ್ತಿಸಿದ್ದಾರೆ.

‘ಈ ರೀತಿ ತಿರುಚಿದ ಸಂಗತಿಗಳನ್ನು ಹೇಳುವುದು ಸ್ಪೀಕರ್ ಅವರ ನಿರ್ದೇಶನಗಳ ಉಲ್ಲಂಘನೆ ಮಾಡಿದಂತೆ’ ಎಂದೂ ದುಬೆ ಪ್ರತಿಪಾದಿಸಿದ್ದಾರೆ.

ಜಪಾನ್, ಹವಾಯಿ ದ್ವೀಪಗಳತ್ತ ಸುನಾಮಿ ಅಲೆಗಳ ಅಬ್ಬರ

ರಷ್ಯಾದಲ್ಲಿ ಭೂಕಂಪನ: 8.8 ತೀವ್ರತೆ ದಾಖಲು

ಟೋಕಿಯೊ(ಎಪಿ): ರಷ್ಯಾದ ಪೂರ್ವ ಭಾಗದಲ್ಲಿ ಬುಧವಾರ ಪ್ರಬಲ ಭೂಕಂಪನವಾಗಿದ್ದು, ದೂರದ ಜಪಾನ್, ಹವಾಯಿ ದ್ವೀಪಗಳು ಹಾಗೂ ಪೆಸಿಫಿಕ್ ಸಾಗರದಲ್ಲಿ ಸುನಾಮಿ ಅಲೆಗಳು ಕಾಣಿಸಿಕೊಂಡಿವೆ.

ಜಪಾನ್‌ನಲ್ಲಿ ಬೆಳಿಗ್ಗೆ 8.25ಕ್ಕೆ ರಿಕ್ಟರ್ ಮಾಪನದಲ್ಲಿ 8ರಷ್ಟು ತೀವ್ರತೆಯ ಭೂಕಂಪನವಾಯಿತು ಎಂದು ಜಪಾನ್ ಹಾಗೂ ಅಮೆರಿಕದ ಭೂಕಂಪನ ವಿಜ್ಞಾನಿಗಳು ಹೇಳಿದ್ದಾರೆ. ನಂತರ, ಕಂಪನದ ತೀವ್ರತೆ 8.8ರಷ್ಟು ದಾಖಲಾಗಿದೆ ಎಂದು ಅಮೆರಿಕದ ಭೂಸರ್ವೇಕ್ಷಣಾ ಇಲಾಖೆ ಹೇಳಿದೆ. ಭೂಕಂಪನವು 20.7 ಕಿ.ಮೀ. ಆಳದಲ್ಲಿ ಸಂಭವಿಸಿದೆ ಎಂದೂ ಹೇಳಿದೆ.

ಭಾರಿ ಪ್ರಮಾಣದ ಹಾನಿಯಾಗಿರುವ ವರದಿಗಳು ಇಲ್ಲ ಎಂದಿರುವ ಅಧಿಕಾರಿಗಳು, ದಿನಪೂರ್ತಿ ಈ ಕಂಪನದ ಪರಿಣಾಮ ಕಂಡುಬಂದಿತ್ತು ಎಂದು ಹೇಳಿದ್ದಾರೆ. ಅಲ್ಲದೇ, ಸಮುದ್ರ ತೀರಗಳಿಗೆ ಹೋಗದಂತೆ ಜನರಿಗೆ ಎಚ್ಚರಿಸಿದ್ದಾರೆ.

ರಷ್ಯಾದ ಕಮ್ಚಟ್ಕಾ ಪರ್ಯಾಯ ದ್ವೀಪದ ಸಮೀಪದಲ್ಲಿ ಕಂಪನ ಕೇಂದ್ರವಿದ್ದು, 8.8ರಷ್ಟು ತೀವ್ರತೆ ದಾಖಲಾಗಿದೆ. ಭೂಕಂಪನದಿಂದಾಗಿ ಸಂಭವಿಸಿದ ಅವಘಡಗಳಲ್ಲಿ ಕೆಲವು ಜನರು ಗಾಯಗೊಂಡಿದ್ದಾರೆ ಎಂದು ರಷ್ಯಾ ಅಧಿಕಾರಿಗಳು ತಿಳಿಸಿದ್ದಾರೆ.

ಕಮ್ಚಟ್ಕಾ ದ್ವೀಪದಲ್ಲಿ 10–13 ಅಡಿಗಳಷ್ಟು ಎತ್ತರದ ಸುನಾಮಿ ಅಲೆಗಳು ಕಂಡುಬಂದರೆ, ಜಪಾನ್‌ನ ಉತ್ತರದಲ್ಲಿರುವ ಹೊಕೈಡೊ ದ್ವೀಪದಲ್ಲಿ ಅಪ್ಪಳಿಸಿದ ಸುನಾಮಿ ಅಲೆಗಳ ಎತ್ತರ 60 ಸೆಂ.ಮೀ.ನಷ್ಟಿತ್ತು.

ಅಲಾಸ್ಕ ದ್ವೀಪದ ಅಲ್ಯೂಟಿಯನ್ ದ್ವೀಪಗಳಲ್ಲಿ 1.4 ಅಡಿಗಳಷ್ಟು ಎತ್ತರದ ಅಲೆಗಳು ಕಂಡುಬಂದವು.

ಜಪಾನ್‌ನ ಉತ್ತರ ಭಾಗದಲ್ಲಿ ಭೂಕಂಪನದ ಅನುಭವವಾದ ಕೂಡಲೇ ಗಾಬರಿಗೊಂಡ ಜನರು ಮನೆಗಳಿಂದ ಹೊರಗೆ ಓಡಿಬಂದರು. ಪ್ರಾಕೃತಿಕ ವಿಪತ್ತುಗಳ ಸಂದರ್ಭದಲ್ಲಿ ಆಶ್ರಯ ನೀಡುವುದಕ್ಕಾಗಿ ನಿರ್ಮಿಸಿರುವ ಪರಿಹಾರ ಕೇಂದ್ರಗಳಲ್ಲಿ ಅವರು ಆಶ್ರಯ ಪಡೆದಿದ್ದಾರೆ. ಹವಾಯಿ ದ್ವೀಪದ ರಾಜಧಾನಿ ಹೊನಲುಲುವಿನ ರಸ್ತೆಗಳು, ಹೆದ್ದಾರಿಗಳಲ್ಲಿ ಕಾರುಗಳು, ಇತರ ವಾಹನಗಳು ಸಂಚಾರ ನಿಲ್ಲಿಸಿದ ಕಾರಣ, ದಟ್ಟಣೆ ಕಂಡುಬಂತು.

ಕೆನಡಾದ ಪಶ್ಚಿಮ ಕರಾವಳಿ, ಅಮೆರಿಕದ ವಾಷಿಂಗ್ಟನ್ ಹಾಗೂ ಕ್ಯಾಲಿಫೋರ್ನಿಯಾ ರಾಜ್ಯಗಳಲ್ಲಿ ಕೂಡ ಸುನಾಮಿ ಎಚ್ಚರಿಕೆ ನೀಡಲಾಗಿತ್ತು.



ಭೂಕಂಪನದಿಂದಾಗಿ ರಷ್ಯಾದ ಉತ್ತರದ ಕುರಿಲ್ ದ್ವೀಪದಲ್ಲಿ ಬುಧವಾರ ಸುನಾಮಿ ಅಲೆಗಳು ತೀರಕ್ಕೆ ಅಪ್ಪಳಿಸಿದವು ಎಎಫ್‌ಪಿ ಚಿತ್ರ

‘ಭಾರತಕ್ಕೆ ಅಪಾಯ ಇಲ್ಲ’

ಹೈದರಾಬಾದ್(ಪಿಟಿಐ): ರಷ್ಯಾ ಪೂರ್ವ ಕರಾವಳಿಯಲ್ಲಿ ಸಂಭವಿಸಿರುವ ಭೂಕಂಪನದಿಂದಾಗಿ ಭಾರತದ ಕರಾವಳಿಯಲ್ಲಿ ಸುನಾಮಿಯ ಅಪಾಯ ಇಲ್ಲ ಎಂದು ಭಾರತೀಯ ಸುನಾಮಿ ಮುನ್ಸೂಚನೆ ಕೇಂದ್ರ (ಐಟಿಇಡಬ್ಲುಸಿ) ಬುಧವಾರ ಹೇಳಿದೆ.

ಪ್ರಮುಖ ಅಂಶಗಳು

- ಜಪಾನ್‌ನಲ್ಲಿ ದೋಣಿಗಳು, ರೈಲುಗಳ ಸಂಚಾರ ನಿಲ್ಲಿಸಲಾಗಿತ್ತು. ಭೂಕಂಪನದ ಅನುಭವ ಕಂಡುಬಂದ ಪ್ರದೇಶಗಳಲ್ಲಿನ ವಿಮಾನ ನಿಲ್ದಾಣಗಳನ್ನು ಬಂದ್ ಮಾಡಲಾಗಿತ್ತು. ಕೆಲವೆಡೆ ವಿಮಾನಗಳು ವಿಳಂಬವಾಗಿ ಹಾರಾಟ ಆರಂಭಿಸಿದವು
- ಜಪಾನ್‌ನ ಅಣು ವಿದ್ಯುತ್ ಸ್ಥಾವರಗಳಿಗೆ ಹಾನಿಯಾಗಿಲ್ಲ ಎಂದು ಅಧಿಕಾರಿಗಳ ಹೇಳಿಕೆ
- ಸಮುದ್ರ ತೀರಗಳಿಂದ ದೂರ ಇರುವಂತೆ ಫಿಲಿಪ್ಪೀನ್ಸ್ ಅಧಿಕಾರಿಗಳು ಜನರಿಗೆ ಸಲಹೆ ನೀಡಿದ್ದಾರೆ
- ದಕ್ಷಿಣ ಪೆಸಿಫಿಕ್ ದ್ವೀಪದಲ್ಲಿ ಪ್ರಬಲವಾದ ಅಲೆಗಳು ಅಪ್ಪಳಿಸುವ ಸಾಧ್ಯತೆ ಇದೆ ಎಂದು ನ್ಯೂಜಿಲೆಂಡ್ ಅಧಿಕಾರಿಗಳು ಎಚ್ಚರಿಸಿದ್ದಾರೆ
- ಸುನಾಮಿ ಅಲೆಗಳ ತೀವ್ರತೆ ಕಡಿಮೆಯಾಗುವವರೆಗೆ ಕರಾವಳಿ ಕಡೆಗೆ ಪ್ರಯಾಣಿಸದಂತೆ ಫಿಜಿ, ಸಮೋವಾ, ಟೊಂಗಾ ಹಾಗೂ ಸೊಲೊಮನ್ ದ್ವೀಪಗಳ ಅಧಿಕಾರಿಗಳು ಸೂಚಿಸಿದ್ದಾರೆ

‘ನಟ ಕೇವಲ ಮಾಧ್ಯಮವಷ್ಟೇ’


ಕೊತ್ತಲವಾಡಿ
ಗೋಪಾಲಕೃಷ್ಣ ದೇಶಪಾಂಡೆ



• ಅಭಿಲಾಷ್ ಪಿ.ಎಸ್.

ನಟ ಗೋಪಾಲಕೃಷ್ಣ ದೇಶಪಾಂಡೆ ಅವರು ಭಿನ್ನವಾದ ಪಾತ್ರಗಳ ಮೂಲಕವೇ ಕನ್ನಡದ ಪ್ರೇಕ್ಷಕರಿಗೆ ಹತ್ತಿರವಾದವರು. ‘ಗರುಡ ಗಮನ ವೃಷಭ ವಾಹನ’, ‘ಹೆಜ್ಜಾರು’, ‘ಟೋಬಿ’, ‘ಸಪ್ಲಯರ್ ಶಂಕರ’, ‘ಸಪ್ತ ಸಾಗರದಾಚೆ ಎಲ್ಲೋ’, ‘ಸ್ವಾತಿ ಮುತ್ತಿನ ಮಳೆ ಹನಿಯೇ’, ‘ಶಾಖಾಹಾರಿ’ ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ನಿರ್ದೇಶಕರು ಬರೆದ ಪಾತ್ರಗಳಿಗೆ ಜೀವ ತುಂಬಿದವರು. ಇದೀಗ ನಟ ಯಶ್ ತಾಯಿ ಪುಷ್ಪ ಅರುಣ್ ಕುಮಾರ್ ನಿರ್ಮಾಣದ, ಪೃಥ್ವಿ ಅಂಬಾರ್ ನಾಯಕನಾಗಿ ನಟಿಸಿರುವ ‘ಕೊತ್ತಲವಾಡಿ’ ಸಿನಿಮಾದಲ್ಲೂ ಅವರು ಮುಖ್ಯಭೂಮಿಕೆಯಲ್ಲಿದ್ದಾರೆ. ಸಿನಿಪಯಣ ಹಾಗೂ ಶ್ರೀರಾಜ್ ನಿರ್ದೇಶನದ ‘ಕೊತ್ತಲವಾಡಿ’ಯಲ್ಲಿನ ತಮ್ಮ ಪಾತ್ರದ ಬಗ್ಗೆ ಅವರು ಮಾತಿಗಿಳಿದಾಗ...

‘ಸದ್ಯ ನಾನು ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುವ ಸ್ಥಿತಿಯಲ್ಲಿಲ್ಲ. ಇದನ್ನು ನಾನು ನಂಬುವುದೂ ಇಲ್ಲ. ತಾವು ಇಷ್ಟಪಟ್ಟ ಪಾತ್ರಗಳನ್ನು ಮಾಡುವ ಅವಕಾಶ ಬಹಳ ಕಡಿಮೆ ಜನಕ್ಕೆ ದೊರೆಯುತ್ತದೆ. ನಟನೆಯನ್ನು ನಾನು ಬಹಳ ಶ್ರದ್ಧೆಯಿಂದ ಮಾಡುತ್ತಾ ಬಂದಿದ್ದೇನೆ. ನಿರಂತರವಾಗಿ ಪೊಲೀಸ್ ಪಾತ್ರಗಳು ಬಂದಾಗ ಕೆಲವೊಮ್ಮೆ ಬೇಡ ಎಂದಿದ್ದೇನೆ. ಪೊಲೀಸ್ ಪಾತ್ರದ ಹೊರತಾಗಿಯೂ ಭಿನ್ನವಾದ ಪಾತ್ರಗಳಲ್ಲಿ ನಿರ್ದೇಶಕರು ನನ್ನನ್ನು ಕಾಣಬಯಸುತ್ತಾರೆ ಎನ್ನುವುದಕ್ಕೆ ಹಲವು ಸಿನಿಮಾಗಳು ನಿಮ್ಮ ಮುಂದೆ ಉದಾಹರಣೆಯಾಗಿವೆ’ ಎಂದು ಮಾತು ಆರಂಭಿಸಿದರು ಗೋಪಾಲಕೃಷ್ಣ ದೇಶಪಾಂಡೆ.

‘ನನಗೆ ಸಣ್ಣ ಪಾತ್ರ, ದೊಡ್ಡ ಪಾತ್ರವೆಂಬ ಯೋಚನೆಯಿಲ್ಲ. ಕೊಟ್ಟ ಪಾತ್ರಗಳನ್ನು ಹೃದಯಪೂರ್ವಕವಾಗಿ ನಿಭಾಯಿಸಿದ್ದೇನೆ. ನಿರಂತರವಾಗಿ ಕೆಲಸ ಮಾಡುತ್ತಿದ್ದೇನೆ ಎನ್ನುವುದೇ ಖುಷಿ. ಊರಿನಲ್ಲಿ ನನ್ನನ್ನು ನೋಡಿ ‘ನೀನು ನಟನ ರೀತಿ ಇಲ್ವಲ್ಲೋ’ ಎನ್ನುತ್ತಾರೆ. ನನ್ನ ರೀತಿಯ ಮೈಬಣ್ಣ, ಎತ್ತರ, ದೇಹ ಹೊಂದಿರುವ ನಟನಿಗೂ ನಿರಂತರವಾದ ಅವಕಾಶವಿದೆ ಎನ್ನುವುದು ಮತ್ತೊಂದು ಖುಷಿ. ನಾನು ನಿಭಾಯಿಸಿದ ಪಾತ್ರದೊಳಗೆ ಸಹಜತೆ ಕಂಡರೆ ಅದು ನಿರ್ದೇಶಕರ ಬರವಣಿಗೆಯ ಪ್ರಭಾವ. ಉದಾಹರಣೆಗೆ ‘ಗರುಡ ಗಮನ..’ ಹಾಗೂ ‘ಶಾಖಾಹಾರಿ’ಯಲ್ಲಿನ ಪೊಲೀಸ್ ಪಾತ್ರಗಳನ್ನು ಗಮನಿಸಿ. ಅದು ಆ ಸಿನಿಮಾಗಳ ನಿರ್ದೇಶಕರಾದ ರಾಜ್ ಬಿ.ಶೆಟ್ಟಿ, ಸಂದೀಪ್ ಸುಂಕದ್ ಕೈಚಳಕ. ಒಂದು ಸಿನಿಮಾದಲ್ಲಿ ಓರ್ವ ನಟ ಕೇವಲ ಮಾಧ್ಯಮವಷ್ಟೇ. ಪ್ರೇಕ್ಷಕರು ಮತ್ತು ಬರಹಗಾರರ ನಡುವಿನ ಸಂವಹನ ಮಾಧ್ಯಮ ನಾವು’ ಎನ್ನುತ್ತಾ ‘ಕೊತ್ತಲವಾಡಿ’ಯಲ್ಲಿನ ತಮ್ಮ ಪಾತ್ರದತ್ತ ಮಾತು ಹೊರಳಿಸಿದರು.

‘ಶಾಖಾಹಾರಿ’, ‘ಗರುಡ ಗಮನ..’ ಸಿನಿಮಾಗಳಲ್ಲಿ ‘ಮೌನ’ ನನ್ನ ಪಾತ್ರಗಳ ಉಸಿರಾಗಿತ್ತು. ‘ಕೊತ್ತಲವಾಡಿ’ಯಲ್ಲಿ ಈ ಹಿಂದಿನ ಸಿನಿಮಾಗಳಿಗಿಂತ ಹೆಚ್ಚಿನ ಭಾವನೆ, ಮಾತುಗಳಿವೆ. ಪಾತ್ರ ವ್ಯಕ್ತಪಡಿಸುವ ಹಾವಭಾವಗಳೂ ಭಿನ್ನವಾಗಿವೆ. ರಂಗಭೂಮಿಯಲ್ಲಿರುವಂತೆ ಗ್ಯಾಲರಿಗೆ ಪ್ಲೇ ಮಾಡುವ ಸನ್ನಿವೇಶಗಳು ‘ಕೊತ್ತಲವಾಡಿ’ಯಲ್ಲಿ ಹೆಚ್ಚಿವೆ. ಈ ಸಿನಿಮಾದಲ್ಲಿ ನನ್ನ ಪಾತ್ರವನ್ನು ಇದೇ ರೀತಿ ವಿನ್ಯಾಸಗೊಳಿಸಲಾಗಿದೆ. ಯಾವುದೇ ಪಾತ್ರವನ್ನು ನಮಗೆ ವಿವರಿಸಿದಾಗ ಮೊದಲು ನಮಗೆ ಮನವರಿಕೆಯಾಗಬೇಕು, ಮೆಚ್ಚುಗೆಯಾಗಬೇಕು. ಹಾಗಾದಾಗ ಅದನ್ನು ಪ್ರೇಕ್ಷಕರಿಗೆ ದಾಟಿಸಲು ಸಾಧ್ಯ. ಈ ಪಾತ್ರವನ್ನು ಮೊದಲು ವಿವರಿಸಿದಾಗ ಕೊಂಚ ಭಯವಿತ್ತು. ನಿರ್ದೇಶಕರು ವಿನ್ಯಾಸಗೊಳಿಸಿದ ಪಾತ್ರವನ್ನು ಪ್ರೇಕ್ಷಕರಿಗೆ ದಾಟಿಸಬಲ್ಲೆನೇ ಎಂಬ ಸಂದೇಹವಿತ್ತು. ಆದರೂ ಒಮ್ಮೆ ಪ್ರಯತ್ನಿಸೋಣ ಎಂದೇ ಈ ಪಾತ್ರವನ್ನು ಒಪ್ಪಿಕೊಂಡೆ. ನನ್ನ ಪಾತ್ರಕ್ಕೆ ಎಷ್ಟು ಶೇಡ್ಸ್ ಇವೆ ಎನ್ನುವುದನ್ನು ಸಿನಿಮಾದಲ್ಲೇ ನೋಡಬೇಕು. ಸುಮ್ಮನೆ ಇದ್ದ ಒಬ್ಬ ಮನುಷ್ಯ ಆಸೆಗೆ ಬಿದ್ದಾಗ ಅದು ಏನೇನು ಮಾಡಿಸುತ್ತದೆ, ವ್ಯಕ್ತಿಯೊಬ್ಬನಿಗೆ ಅಧಿಕಾರ ಸಿಕ್ಕಾಗ–ಅಧಿಕಾರ ಹೋದಾಗ ಆಗುವ ಬದಲಾವಣೆಗಳನ್ನು ಈ ಪಾತ್ರದ ಮೂಲಕ ಹೇಳಲಾಗಿದೆ’ ಎಂದರು.

ಹಲವು ಸಿನಿಮಾಗಳು ಕೈಯಲ್ಲಿ

‘ಸುದೀಪ್ ಅವರ ಜೊತೆಗೊಂದು ಸಿನಿಮಾ, ಪಿಆರ್‌ಕೆಯವರ ಒಂದು ವೆಬ್‌ಸರಣಿ, ಪವನ್ ಒಡೆಯರ್ ನಿರ್ದೇಶನದ ಸಿನಿಮಾ, ‘ಆಡು ಆನೆಯ ನುಂಗಿ’ ಎಂಬ ಕಿರುಚಿತ್ರ ಮಾಡಿದ್ದ ಪುನೀತ್ ಜೊತೆಗೊಂದು ಸಿನಿಮಾ ಮಾಡುತ್ತಿದ್ದೇನೆ. ‘ಶಾಖಾಹಾರಿ’ ನಿರ್ದೇಶಕ ಸಂದೀಪ್ ಸುಂಕದ್ ನಿರ್ದೇಶನದ ‘ಪಬ್ಬಾರ್’ನಲ್ಲಿ ನಟಿಸುತ್ತಿದ್ದೇನೆ’ ಎಂದು ಗೋಪಾಲಕೃಷ್ಣ ದೇಶಪಾಂಡೆ ಮಾಹಿತಿ ನೀಡಿದರು.

ಪದ್ಮಗಂಧಿ ಟ್ರೇಲರ್ ಬಿಡುಗಡೆ


ಪರಿಪೂರ್ಣ ಚಂದ್ರಶೇಖರ್

ಹಿರಿಯ ನಟ ಸುಚೇಂದ್ರ ಪ್ರಸಾದ ಚಿತ್ರಕಥೆ-ಸಂಭಾಷಣೆ ಬರೆದು ನಿರ್ದೇಶಿಸಿರುವ ‘ಪದ್ಮಗಂಧಿ’ ಚಿತ್ರದ ಟ್ರೇಲರ್ ಮತ್ತು ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಎಸ್.ಆರ್.ಲೀಲಾ ಕಥೆ ಬರೆದು ಚಿತ್ರವನ್ನು ನಿರ್ಮಿಸಿದ್ದಾರೆ. ಕನ್ನಡ, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿ ಚಿತ್ರ ಸಿದ್ಧಗೊಂಡಿದೆ.

‘ಸಿನಿಮಾವು ಆದಿಯಿಂದ ಅಂತ್ಯದವರೆಗೂ ಪದ್ಮಗಂಧಿಯ ಪರಿಮಳ ಪಸರಿಸುತ್ತದೆ. ದೈವೀಕ ಗಂಧ ಮೆತ್ತಿಕೊಂಡಿರುವ ಕಮಲದ ಹೂವಿನ ಬಗ್ಗೆಯೇ ಕಥೆ ಇದೆ. ಕಮಲದ ಕುರಿತ ವಿಚಾರಗಳನ್ನು ಸಂಶೋಧಿಸಿ ಸನ್ನಿವೇಶಗಳಲ್ಲಿ ಕಟ್ಟಿಕೊಡಲಾಗಿದೆ. ನಿರ್ದೇಶಕರು ಕಥೆಯನ್ನು ನನ್ನ ಮನಸ್ಸಿನಲ್ಲಿರುವಂತೆ ತೆರೆಮೇಲೆ ತೋರಿಸಿದ್ದಾರೆ’ ಎಂದರು ಎಸ್.ಆರ್.ಲೀಲಾ.

‘ಕಮಲ ಯಾಕೆ ರಾಷ್ಟ್ರೀಯ ಪುಷ್ಪವಾಯ್ತು, ಒಂದು ಪಕ್ಷಕ್ಕೆ ಲಾಂಛನವಾಯ್ತು, ಬ್ರಹ್ಮ ಯಾಕೆ ಇದರ ಮೇಲೆ ಕುಳಿತುಕೊಳ್ಳುತ್ತಾನೆ, ಆಯುರ್ವೇದಕ್ಕೆ ಇದು ಯಾಕೆ ಬೇಕು? ಎಂದು ನೋಡುತ್ತ ಹೋದಾಗ ಕಮಲಕ್ಕೆ 36,000ಕ್ಕೂ ಹೆಚ್ಚು ಪರ್ಯಾಯ ನಾಮಗಳಿವೆ ಎಂದು ಕೇಳಿ ಅಚ್ಚರಿಯಾಯ್ತು. ಪದ್ಮ ಸಂಬಂಧಿ ಎಂಬ ಅರ್ಥದಲ್ಲಿ ಈ ಸಿನಿಮಾ ಮಾಡಲಾಗಿದೆ’ ಎನ್ನುತ್ತಾರೆ ಸುಚೇಂದ್ರ ಪ್ರಸಾದ.

ಕು.ಮಹಾಪದ್ಮ, ಪರಿಪೂರ್ಣ ಚಂದ್ರಶೇಖರ್, ಶತಾವಧಾನಿ ಆರ್.ಗಣೇಶ್, ಗೌರಿ ಸುಬ್ರಹ್ಮಣ್ಯ ಮುಂತಾದವರು ಚಿತ್ರದಲ್ಲಿದ್ದಾರೆ. ದೀಪಕ್ ಪರಮಶಿವನ್ ಸಂಗೀತ, ಮನು ಯಪ್ಲಾರ್, ನಾಗರಾಜ್ ಅದ್ವಾನಿ, ಗಿರಿಧರ್ ದಿವಾನ್ ಛಾಯಾಚಿತ್ರಗ್ರಹಣ, ಎನ್.ನಾಗೇಶ್ ನಾರಾಯಣಪ್ಪ ಸಂಕಲನವಿದೆ.

ರಿಷಬ್ ಹೊಸ ಸಿನಿಮಾ ಘೋಷಣೆ


ರಿಷಬ್ ಶೆಟ್ಟಿ

ಸದ್ಯ ‘ಕಾಂತಾರ ಚಾಪ್ಟರ್ 1’ ಬಿಡುಗಡೆ ಸಿದ್ಧತೆಯಲ್ಲಿರುವ ನಟ ರಿಷಬ್ ಶೆಟ್ಟಿ ಮತ್ತೊಂದು ತೆಲುಗು ಚಿತ್ರ ಒಪ್ಪಿಕೊಂಡಿದ್ದಾರೆ. ಯುವ ನಿರ್ದೇಶಕ ಅಶ್ವಿನ್ ಗಂಗರಾಜು ರಿಷಬ್ ಅವರ ಎರಡನೇ ತೆಲುಗು ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ರಿಷಬ್ ಅವರ ಮೊದಲ ತೆಲುಗು ಚಿತ್ರ ‘ಜೈ ಹನುಮಾನ್’ ಈಗಾಗಲೇ ಘೋಷಣೆಗೊಂಡಿದ್ದು, ಪ್ರಶಾಂತ್ ವರ್ಮಾ ನಿರ್ದೇಶಿಸಲಿದ್ದಾರೆ.

ಅಶ್ವಿನ್ ಗಂಗರಾಜು ‘ಬಾಹುಬಲಿ’ ಚಿತ್ರದ ಬರಹಗಾರರಾಗಿ ಚಿತ್ರರಂಗದಲ್ಲಿ ಜನಪ್ರಿಯತೆ ಪಡೆದವರು. 2021ರಲ್ಲಿ ‘ಆಕಾಶವಾಣಿ’ ಎಂಬ ಕಂಟೆಂಟ್ ಆಧಾರಿತ ಸಿನಿಮಾ ನಿರ್ದೇಶಿಸಿದ್ದರು. ಇದೀಗ 18ನೇ ಶತಮಾನದ ಬಂಡುಕೋರನ ಕಥೆಯನ್ನು ಹೇಳಲು ಸಿದ್ಧರಾಗಿದ್ದಾರೆ. ರಿಷಬ್ ಬಂಡುಕೋರ ಯುವಕನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದು, ಚಿತ್ರದ ಫಸ್ಟ್‌ಲುಕ್ ಬಿಡುಗಡೆಗೊಂಡಿದೆ. ಸ್ವಾತಂತ್ರ ಪೂರ್ವದ ಐತಿಹಾಸಿಕ ಕಥೆಯನ್ನು ಹೊಂದಿರುವ ಚಿತ್ರ ಎಂಬುದು ಪೋಸ್ಟರ್‌ನಿಂದ ಮೇಲ್ನೋಟಕ್ಕೆ ತಿಳಿಯುತ್ತಿದೆ.



‘ಕಾಂತಾರ ಚಾಪ್ಟರ್ 1’ ಈ ವರ್ಷ ಅ.2ರಂದು ತೆರೆಗೆ ಬರಲಿದೆ. ಅದಾದ ಬಳಿಕ ರಿಷಬ್ ‘ಜೈ ಹನುಮಾನ್’ ಚಿತ್ರೀಕರಣದಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಇದರ ಜತೆಗೆ ಬಾಲಿವುಡ್‌ನ ‘ಛತ್ರಪತಿ ಶಿವಾಜಿ’ ಚಿತ್ರದಲ್ಲಿಯೂ ನಟಿಸಿದ್ದಾರೆ. ಇವೆರಡು ಚಿತ್ರಗಳ ಬಳಿಕ ಅಶ್ವಿನ್ ನಿರ್ದೇಶನದ ಚಿತ್ರ ಸೆಟ್ಟೇರಲಿದೆ. ತೆಲುಗಿನ ಜನಪ್ರಿಯ ನಿರ್ಮಾಪಕ ನಾಗವಂಶಿ ತಮ್ಮ ಸಿತಾರ ಎಂಟರ್‌ಟೈನ್‌ಮೆಂಟ್ ಅಡಿಯಲ್ಲಿ ಈ ಚಿತ್ರ ನಿರ್ಮಿಸುತ್ತಿದ್ದಾರೆ. ಈ ವಾರ ತೆರೆ ಕಾಣುತ್ತಿರುವ ವಿಜಯ್ ದೇವರಕೊಂಡ ಅಭಿನಯದ ‘ಕಿಂಗ್ಡಮ್’ ಸೇರಿದಂತೆ ಸಾಕಷ್ಟು ದೊಡ್ಡ ಬಜೆಟ್ ಸಿನಿಮಾಗಳನ್ನು ನಿರ್ಮಿಸಿರುವ ಸಂಸ್ಥೆಯಿದು. ಈ ಚಿತ್ರ ಸಂಸ್ಥೆಯ 36ನೇ ಸಿನಿಮಾವಾಗಿದ್ದು, ಇದು ಸಹ ದೊಡ್ಡ ಬಜೆಟ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ ಸಿನಿಮಾ ಎನ್ನಲಾಗಿದೆ. ತೆಲುಗು ಮತ್ತು ಕನ್ನಡದಲ್ಲಿ ಈ ಸಿನಿಮಾ ನಿರ್ಮಾಣಗೊಳ್ಳಲಿದ್ದು, ಉಳಿದ ಭಾಷೆಗಳಿಗೆ ಡಬ್ ಆಗಲಿದೆ.

ರಿಷಬ್ ಶೆಟ್ಟಿ ‘ಕಾಂತಾರ’ ಯಶಸ್ಸಿನ ಬಳಿಕ ಐತಿಹಾಸಿಕ, ಪೌರಾಣಿಕ ಪಾತ್ರಗಳನ್ನೇ ಆಯ್ದುಕೊಳ್ಳುತ್ತಿದ್ದಾರೆ. ಬಾಲಿವುಡ್‌ನಲ್ಲಿ ‘ಕೃಷ್ಣದೇವರಾಯ’ ಸಿನಿಮಾ ಮಾಡಲು ಇವರು ಮುಂದಾಗಿದ್ದಾರೆ ಎಂಬ ವದಂತಿಯೂ ಇದೆ.

ಮಕಾವ್ ಓಪನ್: ಲಕ್ಷ್ಯ, ಆಯುಷ್, ತರುಣ್ ಕ್ವಾರ್ಟರ್ ಫೈನಲ್‌ಗೆ

ಮಕಾವ್ (ಪಿಟಿಐ): ಭಾರತದ ಅಗ್ರ ಮಾನ್ಯ ಆಟಗಾರ ಲಕ್ಷ್ಯ ಸೇನ್, ಕನ್ನಡಿಗ ಆಯುಷ್ ಶೆಟ್ಟಿ ಮತ್ತು ತರುಣ್ ಎಂ. ಅವರು ಮಕಾವ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಬುಧವಾರ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ತಲುಪಿದರು.

ವಿಶ್ವದ 17ನೇ ಕ್ರಮಾಂಕದ ಆಟಗಾರ ಲಕ್ಷ್ಯ 21–8, 21–14 ರಿಂದ ದಕ್ಷಿಣ ಕೊರಿಯಾದ ಜಿಯಾನ್ ಹಿಯೊಕ್ ಜಿನ್ ಅವರನ್ನು ಮಣಿಸಿದರು.

ಅಮೆರಿಕ ಓಪನ್ ಸೂಪರ್ 300 ಟೂರ್ನಿಯ ಚಾಂಪಿಯನ್ ಆಯುಷ್, 21–10, 21–11ರಿಂದ ಚೀನಾ ತೈಪೆಯ ಹುವಾಂಗ್ ಯು ಕೈ ವಿರುದ್ಧ ಸುಲಭ ಗೆಲುವು ದಾಖಲಿಸಿದರು. ಕ್ವಾರ್ಟರ್‌ಫೈನಲ್‌ನಲ್ಲಿ ಅವರಿಗೆ ಮಲೇಷ್ಯಾದ ಜಸ್ಟಿನ್ ಹೋ ಎದುರಾಳಿಯಾಗಲಿದ್ದಾರೆ.

ತರುಣ್ ಅವರು 21–19, 21–13ರಿಂದ ಸ್ವದೇಶದ ಮನರಾಜ್ ಸಿಂಗ್ ಅವರನ್ನು ನೇರ ಗೇಮ್‌ಗಳಲ್ಲಿ ಸೋಲಿಸಿದರು. ತರುಣ್ ಎಂಟರ ಘಟ್ಟದ ಪಂದ್ಯದಲ್ಲಿ ಅಗ್ರ ಶ್ರೇಯಾಂಕದ ಲೀ ಚೆಯುಕ್ ಯಿಯು (ಹಾಂಗ್‌ಕಾಂಗ್) ಅವರ ಸವಾಲನ್ನು ಎದುರಿಸಬೇಕಿದೆ.

ಮಿಶ್ರ ಡಬಲ್ಸ್‌ನಲ್ಲಿ ಟೂರ್ನಿಯ ಐದನೇ ಶ್ರೇಯಾಂಕದ ಧ್ರುವ ಕಪಿಲ–ತನಿಷಾ ಕ್ರಾಸ್ಟೊ ಜೋಡಿಯು 21–10, 21–15 ರಿಂದ ಥಾಯ್ಲೆಂಡ್‌ನ ರತ್‌ಚಪೊಲ್ –ನಟ್ಟಮೊನ್ ಲೈಸುವಾನ್ ಅವರನ್ನು ಸುಲಭವಾಗಿ ಹಿಮ್ಮೆಟ್ಟಿಸಿತು.




ಭಾರತದ ಆಟಗಾರರಾದ ಆಯುಷ್ ಶೆಟ್ಟಿ (ಎಡ) ಲಕ್ಷ್ಯ ಸೇನ್

ತೀವ್ರ ಪೈಪೋಟಿಯಿಂದ ಕೂಡಿದ್ದ ಪುರುಷರ ಡಬಲ್ಸ್‌ನಲ್ಲಿ ಪಿ.ಕೃಷ್ಣಮೂರ್ತಿ ರಾಯ್ ಹಾಗೂ ಎಸ್. ಪ್ರತೀಕ್ ಅವರು 21–18, 21–19ರಿಂದ ಸ್ವದೇಶದ ಡಿ. ಕೊನ್‌ಥೌಜಂ ಹಾಗೂ ಅಮಾನ್ ಮೊಹಮ್ಮದ್ ಎದುರು ಪ್ರಯಾಸದ ಜಯ ಕಂಡರು.

ಪ್ರಣಯ್‌ಗೆ ಆಘಾತ: ಅನುಭವಿ ಎಚ್. ಎಸ್. ಪ್ರಣಯ್ ಅವರು ಯೊಹಾನಸ್ ಸೌತ್ ಮಾರ್ಸೆಲಿನೊ (ಇಂಡೊನೇಷ್ಯಾ) ಎದುರು ಪರಾಭವಗೊಂಡು ಮೊದಲ ಸುತ್ತಿನಲ್ಲಿಯೇ ನಿರ್ಗಮಿಸಿದರು. ಅವರು 21–18, 15–21, 15–21ರಿಂದ ಆಘಾತ ಅನುಭವಿಸಿದರು.

ಸತೀಶ್ ಕುಮಾರ್ ಕರುಣಾಕರನ್ ಅವರು 19–21, 12–21ರಿಂದ ಜಸ್ಟಿನ್ ಹೋ ಅವರಿಗೆ ಶರಣಾದರು. ಶಂಕರ್ ಸುಬ್ರಹ್ಮಣ್ಯಂ ಅವರೂ 18–21, 14–21ರಿಂದ ಹು ಝೆ ಆ್ಯನ್ (ಚೀನಾ) ಎದುರು ಪರಾಭವಗೊಂಡರು.

ಉನ್ನತಿ ನಿರ್ಗಮನ: ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ಅವರು ಮೊದಲ ಸುತ್ತಿನಲ್ಲೇ ಆಘಾತ ಅನುಭವಿಸಬೇಕಾಯಿತು. ಹೂಡಾ 21-16, 19-21, 17-21ರಿಂದ ಡೆನ್ಮಾರ್ಕ್‌ನ ಜೂಲಿ ಡವಾಲ್ ಜೇಕಬ್ಸನ್ ಎದುರು ಸೋಲು ಕಂಡರು.

ಅನ್ಮೋಲ್ ಖಾರ್ಬ್ 21–23, 11–21ರಿಂದ ಬುಸಾನನ್ ಒಂಗ್ಬಮ್ರುಂಗ್ಫಾನ್ (ಥಾಯ್ಲೆಂಡ್) ಎದುರು ಮತ್ತು ತಸ್ನಿಮ್ ಮಿರ್ ಅವರು 6-21 14-21ರಿಂದ ಶೆನ್ ಯು ಫೈ (ಚೀನಾ) ವಿರುದ್ಧ ಪರಾಭವಗೊಂಡರು.

ಆಕರ್ಷಿ ಕಶ್ಯಪ್ ಅವರು 14-21 16-21ರಿಂದ ಜಪಾನ್‌ನ ನೊಜೊಮಿ ಒಕುಹಾರ ಅವರಿಗೆ ಮಣಿದರು.

ಸೆಂಟ್ರಲ್ ಏಷ್ಯಾ ನೇಷನ್ಸ್ ಕಪ್ ಟೂರ್ನಿಗೆ ಭಾರತ

ಅಲ್ಮಾಟಿ (ಕಜಕಸ್ತಾನ), (ಎಎಫ್‌ಪಿ): ಮುಂದಿನ ತಿಂಗಳು ಉಜ್ಬೇಕಿಸ್ತಾನ ಮತ್ತು ತಜಿಕಿಸ್ತಾನದದ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಮಧ್ಯ ಏಷ್ಯಾ ಫುಟ್‌ಬಾಲ್ ನೇಷನ್ಸ್ ಕಪ್ ಟೂರ್ನಿಯಲ್ಲಿ ಆಡಲು ಭಾರತ ತಂಡವನ್ನು ಆಹ್ವಾನಿಸಲಾಗಿದೆ.

ಆಗಸ್ಟ್ 29 ರಿಂದ ಸೆಪ್ಟೆಂಬರ್ 8ರವರೆಗೆ ಎರಡನೆ ಆವೃತ್ತಿಯ ಈ ಕೂಟ ನಡೆಯಲಿದೆ.

ವಿಶ್ವ ಕಪ್‌ಗೆ ಆಡಲು ಅರ್ಹತೆ ಪಡೆದಿರುವ ಇರಾನ್ ಮೊದಲ ವರ್ಷ ಚಾಂಪಿಯನ್ ಆಗಿತ್ತು. ಭಾರತ ತಂಡದ ಜೊತೆಗೆ ಅಫ್ಗಾನಿಸ್ತಾನ, ಇರಾನ್, ಕಿರ್ಗಿಸ್ತಾನ, ಉಜ್ಬೇಕಿಸ್ತಾನ, ತಜಿಕಿಸ್ತಾನ ಮತ್ತು ತುರ್ಕಮೆನಿಸ್ತಾನ ತಂಡಗಳು ಟೂರ್ನಿಯಲ್ಲಿ ಆಡಲಿವೆ.

ಸೀನಿಯರ್, 19 ವರ್ಷದೊಳಗಿನವರ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿ

ಪ್ರಿ ಕ್ವಾರ್ಟರ್‌ಗೆ ಅಭಿನವ್, ಅಶ್ವತಿ, ದಿಯಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕದ ಆಟಗಾರ, ಬೆಂಗಳೂರಿನ ಅಭಿನವ್ ಗರ್ಗ್ ಇಲ್ಲಿ ನಡೆಯುತ್ತಿರುವ ರಾಜ್ಯ ರ್‍ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಸೀನಿಯರ್ ಪುರುಷರ ಮತ್ತು 19 ವರ್ಷದೊಳಗಿನವರ ವಿಭಾಗಗಳಲ್ಲಿ ಪ್ರಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಸೀನಿಯರ್ ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಅಶ್ವತಿ ವರ್ಗೀಸ್ ಮತ್ತು 19 ವರ್ಷದೊಳಗಿನವರ ವಿಭಾಗದಲ್ಲಿ ದಿಯಾ ಭೀಮಯ್ಯ ಅವರೂ 16ರ ಘಟ್ಟ ತಲುಪಿದರು. ಅರ್ಹತಾ ಸುತ್ತು ದಾಟಿಬಂದಿದ್ದ ದಕ್ಷಿಣ ಕನ್ನಡದ ಸಹರ್ಷ್ ಪ್ರಭು ಸೀನಿಯರ್ ಪುರುಷರ ವಿಭಾಗದಲ್ಲೂ ಶುಭಾರಂಭ ಮಾಡಿದರು.


ಅಭಿನವ್ ಗರ್ಗ್

ಅಶ್ವತಿ ವರ್ಗೀಸ್

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ ಬ್ಯಾಡ್ಮಿಂಟನ್ ಸಂಸ್ಥೆ ಉರ್ವ ಕ್ರೀಡಾ ಸಂಕೀರ್ಣದಲ್ಲಿ ಈ ಟೂರ್ನಿ ಆಯೋಜಿಸಿದೆ.

ಅಭಿನವ್ 19 ವರ್ಷದೊಳಗಿನ ಪುರುಷರ ವಿಭಾಗದಲ್ಲಿ 21–5, 21–9 ರಿಂದ ತಿಲಕ್ ಬಿ.ಶೆಟ್ಟಿ (ಬೆಂಗಳೂರು) ವಿರುದ್ಧ ಹಾಗೂ ಸೀನಿಯರ್ ವಿಭಾಗದಲ್ಲಿ ರಾಘವೇಂದ್ರ ವಿರುದ್ಧ 21–17, 21–11ರಲ್ಲಿ ಗೆಲುವು ಸಾಧಿಸಿದರು.

ಬೆಂಗಳೂರಿನ ದಿಯಾ ಮೊದಲ ಸುತ್ತಿನಲ್ಲಿ ಗೀತಾಂಜಲಿ ಹರಿ ಅವರನ್ನು 21–13, 21–9ರಿಂದ ಮಣಿಸಿದರು. ಅಶ್ವತಿ ವರ್ಗೀಸ್ 21–12, 21–14ರಲ್ಲಿ ಗೌರಿ ಸತೀಶ್ ಎದುರು, ಸಹರ್ಷ್ 21–15, 21–10ರಲ್ಲಿ ಪ್ರದ್ಯೋತ್ ರವಿ ವಿರುದ್ಧ ಗೆದ್ದು ಗಮನ ಸೆಳೆದರು.

19 ವರ್ಷದೊಳಗಿನ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಮಯೂಖ್, ಧ್ಯಾನ್ ಸಂತೋಷ್, ಕೌಶಿಕ್ ರೆಡ್ಡಿ, ಹಾರ್ದಿಕ್ ದಿವ್ಯಾಂಶ್, ಪೀಯೂಷ್ ತಿವಾರಿ, ಪ್ರದ್ಯೋತ್ ರವಿ, ರಿಶಾನ್ ಜೆರಿನ್, ಶ್ಯಾಮ್ ಬಿಂಡಿಗನವಿಲೆ, ಭವೇಶ್, ಪ್ರಣವ್, ಯಶಸ್, ಓಂಕಾರ್, ರೋಹನ್ ಶ್ರೀಸಾಯ್, ನಿಶ್ಚಲ್ ಲೋಹಿತ್ ಮೊದಲ ಸುತ್ತಿನ ಪಂದ್ಯಗಳನ್ನು ಗೆದ್ದುಕೊಂಡರು.

ಸೀನಿಯರ್ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಆದಿತ್ಯ ದಿವಾಕರ್, ಪ್ರಣವ್, ವೈಭವ್, ಧ್ಯಾನ್ ಸಂತೋಷ್, ನಿಕೋಲಸ್‌ಗೆ, ತುಷಾರ್ ಸುವೀರ್, ಅಭಿನವ್ ಗರ್ಗ್, ಪ್ರವರ್ಚಿತ್, ಶ್ರೀಕರ್ ರಾಜೇಶ್, ಆದಿತ್ಯ ದಿವಾಕರ್ ಎರಡನೇ ಸುತ್ತಿಗೆ ಮುನ್ನಡೆದರು.

19 ವರ್ಷದೊಳಗಿನ ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಅನನ್ಯಶ್ರೀ, ತನಿಕಾ ಮೋಹನ್, ರಚನಾ, ನವ್ಯಾ, ಇಶಿಕಾ ಕಶ್ಯಪ್, ಬನಶ್ರೀ, ಅನ್ವಿತಾ ವಿಜಯ್, ಹರಿತಾ ಸತೀಶ್, ಕಾಮಾಕ್ಯ ರೆಡ್ಡಿ, ನಿಧಿ ಆತ್ಮಾರಾಮ್ ಎರಡನೇ ಸುತ್ತಿಗೆ ತಲುಪಿದರು.

ಬೆಂಗಳೂರಿನಲ್ಲಿ ರಾಷ್ಟ್ರೀಯ ಸಬ್ ಜೂನಿಯರ್ ಈಜು

ಬೆಂಗಳೂರು: ಕರ್ನಾಟಕ ಈಜು ಸಂಸ್ಥೆಯ ಆಶ್ರಯದಲ್ಲಿ 41ನೇ ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ ಮತ್ತು 51ನೇ ಜೂನಿಯರ್ ರಾಷ್ಟ್ರೀಯ ಅಕ್ವೆಟಿಕ್ (ವಾಟರ್ ಪೋಲೊ ಮತ್ತು ಡೈವಿಂಗ್) ಚಾಂಪಿಯನ್‌ಷಿಪ್ ಬೆಂಗಳೂರಿನಲ್ಲಿ ಆಗಸ್ಟ್ ಆರಂಭದಲ್ಲಿ ನಡೆಯಲಿದೆ. ಈ ಎರಡು ಕೂಟಗಳಲ್ಲಿ 800ಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ.

ಬಸವನಗುಡಿ ಈಜು ಕೇಂದ್ರದಲ್ಲಿ ಆ. 4 ಮತ್ತು 5ರಂದು ಸಬ್ ಜೂನಿಯರ್ ಈಜು ಚಾಂಪಿಯನ್‌ಷಿಪ್ ನಡೆಯಲಿದೆ.

ಆಗಸ್ಟ್ 4 ರಿಂದ 8ರವರೆಗೆ ಜೂನಿಯರ್ ವಾಟರ್ ಪೋಲೊ ಮತ್ತು ಡೈವಿಂಗ್ ಸ್ಪರ್ಧೆಗಳು ನಡೆಯಲಿವೆ. ಡೈವಿಂಗ್ ಸ್ಪರ್ಧೆಗಳು ಹಲಸೂರಿನ ಕೆನ್ಸಿಂಗ್‌ಟನ್ ಈಜುಕೊಳದಲ್ಲಿ, ವಾಟರ್ ಪೋಲೊ ಸ್ಪರ್ಧೆಗಳು ಬಸವನಗುಡಿಯ ಈಜುಕೊಳದಲ್ಲಿ ನಡೆಯಲಿವೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಎಂ.ಸತೀಶ್ ಕುಮಾರ್ ತಿಳಿಸಿದ್ದಾರೆ.

ವಿಶ್ವ ಈಜು ಚಾಂಪಿಯನ್‌ಷಿಪ್: ಅಹ್ಮದ್ ಜಾವ್ರೊವದಿಗೆ ಚಿನ್ನ

200 ಮೀ. ಮೆಡ್ಲೆ: ಮರ್ಷಾನ್ ವಿಶ್ವದಾಖಲೆ

ಸಿಂಗಪುರ (ಎಎಫ್‌ಪಿ): ಫ್ರಾನ್ಸ್‌ನ ಲೆಯಾನ್ ಮರ್ಷಾನ್ ಅವರು ವಿಶ್ವ ಈಜು ಚಾಂಪಿಯನ್‌ಷಿಪ್‌ನ ಪುರುಷರ 200 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯನ್ನು 1ನಿ.52.69 ಸೆ.ಗಳಲ್ಲಿ ಪೂರೈಸಿ ನೂತನ ವಿಶ್ವದಾಖಲೆ ಸ್ಥಾಪಿಸಿದರು.

23 ವರ್ಷ ವಯಸ್ಸಿನ ಮರ್ಷಾನ್ ಅವರು ಅಮೆರಿಕದ ರಯಾನ್ ಲಾಕ್ಟಿ 2011ರಲ್ಲಿ ಸ್ಥಾಪಿಸಿದ್ದ ಈ ಹಿಂದಿನ ದಾಖಲೆಯನ್ನು (1:54.00) ಒಂದು ಸೆಕೆಂಡುಗಿಂತಲೂ ಹೆಚ್ಚು ಅಂತರದಿಂದ ಮುರಿದರು. ಫೈನಲ್ ಗುರುವಾರ ನಡೆಯಲಿದೆ.

400 ಮೀ. ವೈಯಕ್ತಿಕ ಮೆಡ್ಲೆಯಲ್ಲಿ ಮೈಕೆಲ್ ಫೆಲ್ಪ್ಸ್ ಹೆಸರಿನಲ್ಲಿದ್ದ ದೀರ್ಘ ಕಾಲದ ದಾಖಲೆಯನ್ನು ಅವರು ಎರಡು ವರ್ಷಗಳ ಹಿಂದೆ ಜಪಾನ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಮುಳುಗಿಸಿದ್ದರು.

‘ನನಗೆ ಇದನ್ನು ನಂಬಲಾಗುತ್ತಿಲ್ಲ. ನನ್ನ ವೈಯಕ್ತಿಕ ಶ್ರೇಷ್ಠ ಸಾಧನೆಯ ಸಮೀಪ ತಲುಪುವೆನೆಂಬ ವಿಶ್ವಾಸವಿತ್ತು. ಉಲ್ಲಸಿತನಾಗಿದ್ದರ ಜೊತೆಗೆ ಸಾಕಷ್ಟು ಸಿದ್ಧತೆಯನ್ನೂ ನಡೆಸಿದ್ದೆ. ಆದರೆ 1ನಿ.52 ಸೆ. ಗುರಿಮುಟ್ಟಿರುವುದನ್ನು ನಂಬಲಾಗುತ್ತಿಲ್ಲ’ ಎಂದು ಮರ್ಷಾನ್ ಪ್ರತಿಕ್ರಿಯಿಸಿದರು. ಹೀಟ್ಸ್‌ನಲ್ಲಿ ಅವರು ಈ ದೂರವನ್ನು 1ನಿ.57.63 ಸೆಗಳಲ್ಲಿ ಈಜಿದ್ದರು.

ವರ್ಷದ ಹಿಂದೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ತವರಿನ ಪ್ರೇಕ್ಷಕರ ಎದುರು ಅವರು ನಾಲ್ಕು ವೈಯಕ್ತಿಕ ಚಿನ್ನಗಳನ್ನು ಗೆದ್ದುಕೊಂಡಿದ್ದರು.



ವಿಶ್ವ ಈಜು ಚಾಂಪಿಯನ್‌ಷಿಪ್‌ನ ಪುರುಷರ 200 ಮೀ. ವೈಯಕ್ತಿಕ ಮೆಡ್ಲೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿದ ಫ್ರಾನ್ಸ್‌ನ ಲೆಯಾನ್ ಮರ್ಷಾನ್ ಎಎಫ್‌ಪಿ ಚಿತ್ರ

ಶಾನ್ ಗಂಗೂಲಿಗೆ 38ನೇ ಸ್ಥಾನ

ಸಿಂಗಪುರ (ಪಿಟಿಐ): ಭಾರತದ ಈಜುತಾರೆ ಶಾನ್ ಗಂಗೂಲಿ ಅವರು ವಿಶ್ವ ಈಜು ಚಾಂಪಿಯನ್‌ಷಿಪ್ಸ್‌ನ ನಾಲ್ಕನದೇ ದಿನವಾದ ಬುಧವಾರ ಪುರುಷರ 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ 38ನೇ ಸ್ಥಾನ ಪಡೆದರು.

ಕರ್ನಾಟಕದ 20 ವರ್ಷ ವಯಸ್ಸಿನ ಶಾನ್, ತಮ್ಮ ಹೀಟ್‌ನಲ್ಲಿ ಈ ಸ್ಪರ್ಧೆಯನ್ನು 2ನಿ.05.40 ಸೆ.ಗಳಲ್ಲಿ ಕ್ರಮಿಸಿದರು. ಮೊದಲ 16 ಸ್ಥಾನ ಪಡೆದವರು ಸೆಮಿಫೈನಲ್‌ಗೆ ಮುನ್ನಡೆಯುತ್ತಾರೆ.

ಅಹ್ಮದ್‌ಗೆ ಚಿನ್ನ: ಟ್ಯುನೀಷಿಯಾದ ಅಹ್ಮದ್ ಜಾವ್ರೊವದಿ ಅವರು ಪುರುಷರ 800 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 7ನಿ.36.88 ಸೆ.ಗಳಲ್ಲಿ ‘ಟಚ್‌ವಾಲ್’ ಸ್ಪರ್ಶಿಸಿ ಮೊದಲ ಸ್ಥಾನ ಪಡೆದರು. ಇದು ಈ ಸ್ಪರ್ಧೆಯಲ್ಲಿ ಮೂರನೇ ಅತಿ ವೇಗದ ಅವಧಿಯಾಗಿದೆ. 20 ವರ್ಷ ವಯಸ್ಸಿನ ಜಾವ್ರೊವದಿ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು.

ಜರ್ಮನಿಯ ಸ್ವೆನ್ ಶ್ವಾರ್ಜ್ (7:39.96) ಮತ್ತು 400 ಮೀ. ಚಾಂಪಿಯನ್ ಲುಕಾಸ್ ಮೇರ್ಟನ್ಸ್ (7:40.19) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

ಒಲಿಂಪಿಕ್ ಚಾಂಪಿಯನ್, ಐರ್ಲೆಂಡ್‌ನ ಡೇನಿಯಲ್ ವಿಫೆನ್ ಕೊನೆಯವರಾದರು.

ಮಿಂಚಿನ ವೇಗ: ಮಿಂಚಿನಂತೆ ಈಜಿದ ಆಸ್ಟ್ರೇಲಿಯಾದ ಮೊಲ್ಲೀ ಒ‘ಕ್ಯಾಲಗನ್ ಮಹಿಳೆಯರ 200 ಮೀ. ಫ್ರೀಸ್ಟೈಲ್‌ನಲ್ಲಿ ಸುಲಭವಾಗಿ ಚಿನ್ನ ಗೆದ್ದರು. ಇದು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ಅವರಿಗೆ ಹತ್ತನೇ ಚಿನ್ನ.

21 ವರ್ಷ ವಯಸ್ಸಿನ ಒ‘ಕ್ಯಾಲಗನ್ 1ನಿ.54.48 ಸೆ.ಗಳಲ್ಲಿ ಗುರಿತಲುಪಿದರು. ಚೀನಾದ ಲಿ ಬಿಂಗ್ಜೀ (1:54.52) ಮತ್ತು ಅಮೆರಿಕದ ಕ್ಲೇರ್ ವೀನ್‌ಸ್ಟೀನ್ (1:54.67) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಉರ್ಲಾಂಡೊಗೆ ಚಿನ್ನ: ಅಮೆರಿಕದ ಲುಕಾ ಉರ್ಲಾಂಡೊ ಅವರು 200 ಮೀ. ಬಟರ್‌ಫ್ಲೈ ಫೈನಲ್‌ನಲ್ಲಿ 1ನಿ.51.87 ಸೆ.ಗಳ ಅವಧಿಯೊಡನೆ ಚಿನ್ನ ಗೆದ್ದುಕೊಂಡರು.

50 ಮೀ. ಬ್ರೆಸ್ಟ್‌ಸ್ಟ್ರೋಕ್‌ನಲ್ಲಿ ಇಟಲಿಯ ಸಿಮೋನ್ ಸೆರಾಸುವೊಲೊ (26.54 ಸೆ) ಅವರು ರಷ್ಯಾದ ಕಿರಿಲ್ ಪ್ರಿಗೋಡ ಅವರನ್ನು ಎರಡನೇ ಸ್ಥಾನಕ್ಕೆ ತಳ್ಳಿ ವಿಜಯಿಯಾದರು.

ರಷ್ಯಾದ ಈಜುಪಟುಗಳನ್ನು ಒಳಗೊಂಡ ‘ತಟಸ್ಥ’ ತಂಡವು ಮಿಶ್ರ 4x100 ಮೀ. ಮೆಡ್ಲೆ ರಿಲೆಯಲ್ಲಿ ಚಿನ್ನ ಗೆದ್ದುಕೊಂಡಿತು. ಚಿನಾ ಎರಡನೇ ಮತ್ತು ಕೆನಡಾ ಮೂರನೇ ಸ್ಥಾನ ಪಡೆದವು.

ಹಿಂದೆಸರಿದ ಸ್ಯಾಮ್ ಶಾರ್ಟ್ (ಎಪಿ ವರದಿ): 800 ಮೀ. ಫ್ರೀಸ್ಟೈಲ್‌ನಲ್ಲಿ ಆಸ್ಟ್ರೇಲಿಯಾಕ್ಕೆ ಪದಕ ಭರವಸೆಯಾಗಿದ್ದ ಸ್ಯಾಮ್ ಶಾರ್ಟ್ ಹೊಟ್ಟೆಕೆಟ್ಟಿದ್ದರಿಂದ ಕಣದಿಂದ ಹಿಂದೆಸರಿದರು.

ನಿಯಮ ಬದಲಿಸಲು ಚಿಂತನೆ

ಸಿಂಗಪುರ (ಎಎಫ್‌ಪಿ): ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚೀನಾದ 12 ವರ್ಷ ವಯಸ್ಸಿನ ಬಾಲಕಿ ಯು ಝಿದಿ ಪಾಲ್ಗೊಂಡ ನಂತರ, ಈ ಕೂಟದ ಪ್ರವೇಶಕ್ಕೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ಮಾಡುವ ಬಗ್ಗೆ ಪರಿಶೀಲನೆ ನಡೆಸುವುದಾಗಿ ವಿಶ್ವ ಅಕ್ವೆಟಿಕ್ಸ್ ಬುಧವಾರ ತಿಳಿಸಿದೆ.

ಚೀನಾದ ಬಾಲೆ, 200 ಮೀ. ಮೆಡ್ಲೆ ಸ್ಪರ್ಧೆಯಲ್ಲಿ 0.06 ಸೆ.ಗಳಿಂದ ಪದಕ ತಪ್ಪಿಸಿಕೊಂಡಿದ್ದರು. ಆದರೆ ಅವರ ವೇಗ ಎದುರಾಳಿಗಳ ಮೆಚ್ಚುಗೆ ಪಡೆಯಿತು.

‘ಈ ವಯಸ್ಸಿನಲ್ಲಿ ಈಕೆಯ ಪ್ರತಿಭೆ ಅದ್ಭುತ’ ಎಂದು ಬೆಳ್ಳಿ ವಿಜೇತೆ ಅಮೆರಿಕದ ಅಲೆಕ್ಸ್ ವಾಲ್ಶ್ ಮೆಚ್ಚಿದ್ದರು.

ವಿಶ್ವ ಅಕ್ವೆಟಿಕ್ಸ್ ನಿಯಮದ ಪ್ರಕಾರ ಈ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಕನಿಷ್ಠ ವಯಸ್ಸು 14. ಆದರೆ ಅರ್ಹತಾ ಮಟ್ಟ ತಲುಪಿದಲ್ಲಿ ಅದಕ್ಕಿಂತ ಕಿರಿಯ ಸ್ಪರ್ಧಿಗಳಿಗೆ ಅವಕಾಶ ನೀಡಲಾಗುತ್ತದೆ.

ಸರಣಿ ಸಮಬಲದತ್ತ ಗಿಲ್ ಪಡೆ ಚಿತ್ತ

ಓವಲ್ ಕ್ರೀಡಾಂಗಣದಲ್ಲಿ ಭಾರತ–ಇಂಗ್ಲೆಂಡ್ ಕೊನೆ ಟೆಸ್ಟ್ ಇಂದಿನಿಂದ; ರಿಷಭ್ ಪಂತ್ ಬದಲು ಜುರೇಲ್‌ಗೆ ಸ್ಥಾನ

• ಸಿದ್ಧಿ ಕಿರಣ್

ಲಂಡನ್: ಆಧುನಿಕ ಕಾಲದ ಕ್ರಿಕೆಟ್‌ನಲ್ಲಿ ಸತತ ನಾಲ್ಕು ಟೆಸ್ಟ್ ಪಂದ್ಯಗಳು ಪೂರ್ಣ ಐದು ದಿನಗಳವರೆಗೆ ನಡೆದ ಉದಾಹರಣೆಗಳು ಇವೆಯೇ ಎಂಬ ಪ್ರಶ್ನೆಗೆ ಅಂಕಿಸಂಖ್ಯೆ ತಜ್ಞರು ಹುಡುಕಾಡುತ್ತಿದ್ದಾರೆ.

ಸದ್ಯ ನಡೆಯುತ್ತಿರುವ ಆ್ಯಂಡರ್ಸನ್–ತೆಂಡೂಲ್ಕರ್ ಟ್ರೋಫಿ ಸರಣಿಯಲ್ಲಿ ಇದುವರೆಗೆ ಮುಗಿದ ನಾಲ್ಕು ಪಂದ್ಯಗಳೂ ಕೊನೆಯ ದಿನದ ಸಂಜೆಯವರೆಗೂ ನಡೆದವು. ಆ ಮಟ್ಟಿಗೆ ಇದೊಂದು ಅಪರೂಪದ ಮತ್ತು ರೋಚಕ ಸರಣಿ ಎಂಬುದರಲ್ಲಿ ಅನುಮಾನವೇ ಇಲ್ಲ.

ಗುರುವಾರ ಕೆನಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಸರಣಿಯ ಕೊನೆಯ ಪಂದ್ಯ ಕೂಡ ಕುತೂಹಲ ಕೆರಳಿಸಿದೆ. ಏಕೆಂದರೆ; ಈಗಾಗಲೇ 2–1ರಿಂದ ಮುನ್ನಡೆಯಲ್ಲಿರುವ ಆತಿಥೇಯರು ಸರಣಿ ಗೆಲುವಿನ ಸಂಭ್ರಮ ಆಚರಿಸಬೇಕಾದರೆ, ಈ ಪಂದ್ಯದಲ್ಲಿ ಜಯಿಸಬೇಕು ಇಲ್ಲವೇ ಡ್ರಾ ಮಾಡಿಕೊಳ್ಳಬೇಕು. ಆದರೆ ಶುಭಮನ್ ಗಿಲ್ ಬಳಗಕ್ಕೆ ಸರಣಿ ಜಯಿಸುವ ಅವಕಾಶ ಮುಗಿದಿದೆ. ಆದರೆ ಈ ಪಂದ್ಯದಲ್ಲಿ ಗೆದ್ದರೆ 2–2ರ ಸಮಬಲ ಸಾಧಿಸಬಹುದು. ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆದಿದ್ದ ನಾಲ್ಕನೇ ಪಂದ್ಯದಲ್ಲಿ ಸೋಲಿನ ದವಡೆಯಿಂದ ತಪ್ಪಿಸಿಕೊಂಡು ಡ್ರಾ ಮಾಡಿಕೊಂಡ ಭಾರತದ ಆಟಗಾರರ ಆತ್ಮವಿಶ್ವಾಸ ಈಗ ಉತ್ತುಂಗದಲ್ಲಿದೆ.

ಆದರೆ ಈ ಪಂದ್ಯದಲ್ಲಿ ಭಾರತ ತಂಡವು 'ಡೈನಾಮಿಕ್ ವಿಕೆಟ್‌ಕೀಪರ್' ರಿಷಭ್ ಪಂತ್ ಅವರಿಲ್ಲದೇ ಕಣಕ್ಕಿಳಿಯಲಿದೆ. ಕಳೆದ ಪಂದ್ಯದಲ್ಲಿ ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ಪಂತ್ ಅವರ ಕಾಲಿನ ಬೆರಳಿಗೆ ಚೆಂಡು ಬಡಿದು ಮೂಳೆ ಮುರಿದಿತ್ತು. ಆದ್ದರಿಂದ ಅವರಿಗೆ ಈ ಪಂದ್ಯದಲ್ಲಿ ವಿಶ್ರಾಂತಿ ನೀಡಲಾಗಿದೆ. ಈ ಸರಣಿಯಲ್ಲಿ ಅವರು ಎರಡು ಶತಕ ಗಳಿಸಿದ್ದಾರೆ. ಒಟ್ಟು 479 ರನ್‌ಗಳು ಅವರ ಖಾತೆಯಲ್ಲಿವೆ. ಪ್ರತಿ ಇನಿಂಗ್ಸ್‌ನಲ್ಲಿಯೂ ಅವರು ಭಾರತ ತಂಡದ ಹೋರಾಟಕ್ಕೆ ನೂರಾನೆ ಬಲ ತುಂಬಿದ್ದರು. ಅವರ ಬದಲಿಗೆ ಧ್ರುವ ಜುರೇಲ್ ಕಣಕ್ಕಿಳಿಯಲಿದ್ದಾರೆ. ಪಂತ್ ಅವರಷ್ಟೇ ಉಪಯುಕ್ತ ಕಾಣಿಕೆ ನೀಡುವ ಸವಾಲು ಜುರೇಲ್ ಮುಂದಿದೆ.

ಆತಿಥೇಯ ತಂಡವೂ ನಾಯಕ ಬೆನ್ ಸ್ಟೋಕ್ಸ್ ಅವರಿಲ್ಲದೇ ಆಡಲಿದೆ. ಬಲಭುಜದ ಗಾಯದಿಂದಾಗಿ ಸ್ಟೋಕ್ಸ್ ಆಡುತ್ತಿಲ್ಲ. ಅವರ ಬದಲಿಗೆ ಓಲಿ ಪೋಪ್ ನಾಯಕತ್ವ ವಹಿಸುವರು. ಅವರಷ್ಟೇ ಅಲ್ಲ; ಪರಿಣಾಮಕಾರಿ ವೇಗದ ಬೌಲರ್‌ಗಳಾದ ಜೋಫ್ರಾ ಆರ್ಚರ್, ಬ್ರೈಡನ್ ಕಾರ್ಸ್ ಮತ್ತು ಸ್ಪಿನ್ನರ್ ಲಿಯಾಮ್ ಡಾಸನ್ ಕೂಡ ಆಡುವುದಿಲ್ಲ.

ಇನ್ನೊಂದೆಡೆ ಭಾರತ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಕಣಕ್ಕಿಳಿಯುವುದು ಖಚಿತವಾಗಿಲ್ಲ. ಸರಣಿ ಆರಂಭಕ್ಕೂ ಮುನ್ನ ಬೂಮ್ರಾ ಅವರು ಕಾರ್ಯಭಾರ ನಿಯಮದ ಪ್ರಕಾರ ಮೂರು ಪಂದ್ಯಗಳಲ್ಲಿ ಆಡಲಿರುವರು ಮತ್ತು ಎರಡು ಪಂದ್ಯಗಳಲ್ಲಿ ವಿಶ್ರಾಂತಿ ಪಡೆಯುವರು. ಇದು ಬಿಸಿಸಿಐ ವೈದ್ಯರ ಸಲಹೆ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಹೇಳಿದ್ದರು. ಆದರೆ ಮ್ಯಾಂಚೆಸ್ಟರ್ ಪಂದ್ಯವು ಮಹತ್ವದ್ದಾಗಿದ್ದ ಕಾರಣ ಬೂಮ್ರಾ ಕಣಕ್ಕಿಳಿದಿದ್ದರು. ಗುರುವಾರ ಟಾಸ್ ನಂತರವಷ್ಟೇ ಬೂಮ್ರಾ ಲಭ್ಯತೆ ಕುರಿತು ಖಚಿತಗೊಳ್ಳಲಿದೆ.

ಬೂಮ್ರಾ ವಿಶ್ರಾಂತಿ ಪಡೆದರೆ, ಮೊಹಮ್ಮದ್ ಸಿರಾಜ್ ಅವರೊಂದಿಗೆ ಆಕಾಶ್ ದೀಪ್ ವೇಗದ ಬೌಲಿಂಗ್ ಹೊಣೆ ನಿಭಾಯಿಸಬೇಕಿದೆ. ಇನ್ನೊಬ್ಬ ವೇಗದ ಬೌಲರ್ ಸ್ಥಾನಕ್ಕಾಗಿ ಅನುಭವಿ ಪ್ರಸಿದ್ಧ ಕೃಷ್ಣ ಅಥವಾ ಪದಾರ್ಪಣೆಗಾಗಿ ಕಾದಿರುವ ಅರ್ಷದೀಪ್ ಸಿಂಗ್ ಅವರ ನಡುವೆ ಪೈಪೋಟಿ ಇದೆ.

ಆಕ್ರಮಣಶೀಲ ನಾಯಕತ್ವ ಮತ್ತು ಆಲ್‌ರೌಂಡ್ ಆಟದಿಂದ ಸರಣಿಯ ಉದ್ದಕ್ಕೂ ಭಾರತಕ್ಕೆ ಕಠಿಣ ಪೈಪೋಟಿಯೊಡ್ಡಿದ್ದ ಸ್ಟೋಕ್ಸ್ ಆಡದಿರುವುದು ಭಾರತಕ್ಕೆ ಒಂದು ರೀತಿಯಲ್ಲಿ ಅನುಕೂಲವಾಗಲಿದೆ. ಸ್ಟೋಕ್ಸ್‌ಗೆ ಹೋಲಿಸಿದರೆ ಪೋಪ್ ಶಾಂತಚಿತ್ತದ ವ್ಯಕ್ತಿತ್ವದವರು. ಉತ್ತಮ ಬ್ಯಾಟರ್ ಕೂಡ ಆಗಿದ್ದಾರೆ. ಅನುಭವಿ ಜೋ ರೂಟ್ ಬಿಟ್ಟರೆ ಉಳಿದವರೆಲ್ಲರೂ ಯುವ ಆಟಗಾರರೇ. ಆದ್ದರಿಂದ ಪೋಪ್ ಅವರಿಗೆ ಸರಣಿ ಜಯದತ್ತ ತಂಡವನ್ನು ಮುನ್ನಡೆಸುವ ಕಠಿಣ ಸವಾಲು ಇದೆ.

ಮುಖ್ಯಾಂಶಗಳು


- ಸ್ಟೋಕ್ಸ್, ಕಾರ್ಸ್, ಡಾಸನ್, ಜೋಫ್ರಾಗೆ ವಿಶ್ರಾಂತಿ
- ಸರಣಿಯಲ್ಲಿ 2–1ರ ಮುನ್ನಡೆಯಲ್ಲಿರುವ ಇಂಗ್ಲೆಂಡ್ ತಂಡ
- ಕಣಕ್ಕಿಳಿಯಲು ವೇಗಿ ಆಕಾಶ್ ದೀಪ್ ಫಿಟ್



ಭಾರತ ತಂಡದ ನಾಯಕ ಶುಭಮನ್ ಗಿಲ್


ಭಾರತ ತಂಡದ ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್ ಮತ್ತು ರವೀಂದ್ರ ಜಡೇಜ ತಾಲೀಮು ನಡೆಸಿದರು

ಪಿಟಿಐ ಚಿತ್ರಗಳು


ಇಂಗ್ಲೆಂಡ್ ತಂಡದ ಹಂಗಾಮಿ ನಾಯಕ ಓಲಿ ಪೋಪ್





ಪಿಚ್ ಹೇಗೆ?

ಪಂದ್ಯದ ಮೊದಲ ದಿನ ಬ್ಯಾಟರ್‌ಗಳಿಗೆ ನೆರವಾಗುವ ಇಲ್ಲಿ ಪಿಚ್, ಆಟ ಸಾಗಿದಂತೆ ಸ್ಥಿತಿ ಬದಲಾಗುತ್ತದೆ. ಕೊನೆಯ ಎರಡು ದಿನಗಳಲ್ಲಿ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ಸಿಗುವ ಸಾಧ್ಯತೆ ಇದೆ. ಈ ಹಿಂದೆ ಇಲ್ಲಿ ನಡೆದ ಪಂದ್ಯಗಳಲ್ಲಿ ಇದು ಸಾಬೀತಾಗಿದೆ. ಕೊನೆಯ ಹಂತದಲ್ಲಿ ವೇಗಿಗಳು ಬಹಳ ಏಕಾಗ್ರತೆ ಮತ್ತು ತಾಳ್ಮೆಯಿಂದ ಬೌಲಿಂಗ್ ಮಾಡಿದರೆ ಮಾತ್ರ ಫಲ ಲಭಿಸುವ ಸಾಧ್ಯತೆ ಇದೆ. ಪಂದ್ಯದ ಸಂದರ್ಭದಲ್ಲಿ ಮಳೆ ಬರುವ ಸಾಧ್ಯತೆಯೂ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ತಂಡಗಳು

ಭಾರತ: ಶುಭಮನ್ ಗಿಲ್ (ನಾಯಕ), ಯಶಸ್ವಿ ಜೈಸ್ವಾಲ್, ಕೆ.ಎಲ್. ರಾಹುಲ್, ಸಾಯಿ ಸುದರ್ಶನ್, ಅಭಿಮನ್ಯು ಈಶ್ವರನ್, ಕರುಣ್ ನಾಯರ್, ರವೀಂದ್ರ ಜಡೇಜ, ಧ್ರುವ ಜುರೇಲ್ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ಶಾರ್ದೂಲ್ ಠಾಕೂರ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ಆಕಾಶ್ ದೀಪ್, ಕುಲದೀಪ್ ಯಾದವ್, ಅನ್ಷುಲ್ ಕಂಬೋಜ್, ಅರ್ಷದೀಪ್ ಸಿಂಗ್, ಎನ್. ಜಗದೀಶನ್ (ವಿಕೆಟ್‌ಕೀಪರ್).

ಇಂಗ್ಲೆಂಡ್: ಒಲಿ ಪೋಪ್ (ನಾಯಕ), ಜಾಕ್ ಕ್ರಾಲಿ, ಬೆನ್ ಡಕೆಟ್, ಜೋ ರೂಟ್, ಹ್ಯಾರಿ ಬ್ರೂಕ್, ಜೇಕಬ್ ಬೆಥೆಲ್, ಜೆಮಿ ಸ್ಮಿತ್ (ವಿಕೆಟ್‌ಕೀಪರ್), ಕ್ರಿಸ್ ವೋಕ್ಸ್, ಗಸ್ ಅಟ್ಕಿನ್ಸನ್, ಜೆಮಿ ಒವರ್ಟನ್, ಜೋಶ್ ಟಂಗ್.

ಪಂದ್ಯ ಆರಂಭ: ಮಧ್ಯಾಹ್ನ 3.30 (ಭಾರತೀಯ ಕಾಲಮಾನ)
ನೇರಪ್ರಸಾರ; ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಆಲ್‌ರೌಂಡರ್‌ಗಳ ವಿಭಾಗ: ಅಗ್ರಸ್ಥಾನ ಬಲಪಡಿಸಿಕೊಂಡ ಜಡೇಜ

ದುಬೈ (ಪಿಟಿಐ): ಭಾರತದ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಬುಧವಾರ ಪ್ರಕಟವಾದ ಐಸಿಸಿ ಟೆಸ್ಟ್ ರ್‍ಯಾಂಕಿಂಗ್ ಆಲ್‌ರೌಂಡರ್‌ಗಳ ವಿಭಾಗದಲ್ಲಿ ಅಗ್ರಸ್ಥಾನವನ್ನು ಇನ್ನಷ್ಟು ಬಲಪಡಿಸಿಕೊಂಡಿದ್ದಾರೆ. ಟಿ20 ಬ್ಯಾಟರ್‌ಗಳ ವಿಭಾಗದಲ್ಲಿ ಅಭಿಷೇಕ್ ಶರ್ಮಾ ಮೊದಲ ಬಾರಿ ಅಗ್ರಸ್ಥಾನಕ್ಕೇರಿದ್ದಾರೆ.

ಜಡೇಜ (422 ರೇಟಿಂಗ್ ಪಾಯಿಂಟ್ಸ್) ಅವರು ಎರಡನೇ ಸ್ಥಾನದಲ್ಲಿರುವ ಬಾಂಗ್ಲಾದೇಶದ ಮೆಹಿದಿ ಹಸನ್ ಮಿರಾಜ್ (305) ಅವರಿಗಿಂತ 117 ರೇಟಿಂಗ್ ಪಾಯಿಂಟ್ಸ್ ಮುಂದಿದ್ದಾರೆ.

ಟಿ20ಯಲ್ಲಿ ಟ್ರಾವಿಸ್ ಹೆಡ್ ಅವರು ವರ್ಷದ ನಂತರ ಅಗ್ರಸ್ಥಾನ ಕಳೆದುಕೊಂಡಿದ್ದಾರೆ. ಅವರು ಕೆರಿಬಿಯನ್‌ನಲ್ಲಿ ಟೆಸ್ಟ್ ಸರಣಿಯ ನಂತರ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಆಡಿರಲಿಲ್ಲ. ಹೀಗಾಗಿ ಶರ್ಮಾ ಅಗ್ರಸ್ಥಾನಕ್ಕೇರಿದರು.

ಎಡಗೈ ಬ್ಯಾಟರ್ ಶರ್ಮಾ 829 ರೇಟಿಂಗ್ ಪಾಯಿಂಟ್ಸ್ ಹೊಂದಿದ್ದರೆ, ಹೆಡ್ ಬಳಿ 814 ಪಾಯಿಂಟ್‌ಗಳಿವೆ.

ಮ್ಯಾಂಚೆಸ್ಟರ್‌ನಲ್ಲಿ ನಡೆದ ನಾಲ್ಕನೇ ಟೆಸ್ಟ್‌ನಲ್ಲಿ ಅಮೋಘ ಹೋರಾಟದಲ್ಲಿ ಗಳಿಸಿದ ಅಜೇಯ 107 ರನ್ ಮತ್ತು ನಾಲ್ಕು ವಿಕೆಟ್ ಪಡೆದಿದ್ದು ಅವರಿಗೆ ತಮ್ಮ ಅಗ್ರಸ್ಥಾನ ಇನ್ನಷ್ಟು ಗಟ್ಟಿಮಾಡಿಕೊಳ್ಳಲು ನೆರವಾಯಿತು ಎಂದು ಐಸಿಸಿ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ. ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ವಾಷಿಂಗ್ಟನ್ ಸುಂದರ್ ಜಂಟಿ 13ನೇ ಸ್ಥಾನ ಪಡೆದಿದ್ದಾರೆ.

ಜೋ ರೂಟ್ ಟೆಸ್ಟ್ ಬ್ಯಾಟರ್‌ಗಳ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದ್ದು, ಎರಡನೇ ಸ್ಥಾನದಲ್ಲಿರುವ ಕೇನ್ಸ್ ವಿಲಿಯಮ್ಸನ್ ಅವರಿಗಿಂತ 37 ಪಾಯಿಂಟ್ಸ್ ಹೆಚ್ಚು ಹೊಂದಿದ್ದಾರೆ.

ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್, ಆಲ್‌ರೌಂಡರ್‌ಗಳ ವಿಭಾಗದಲ್ಲಿ ಮೂರು ಸ್ಥಾನ ಬಡ್ತಿ ಪಡೆದಿದ್ದು, ಮೂರನೇ ಸ್ಥಾನದಲ್ಲಿದ್ದಾರೆ. ಇದು 2022ರ ನಂತರ ಅವರ ಅತ್ಯಧಿಕ ರ್‍ಯಾಂಕಿಂಗ್ ಆಗಿದೆ.



ಭಾರತ ಟೆಸ್ಟ್ ಪಂದ್ಯ ಉಳಿಸಿಕೊಂಡಿದ್ದಾಗಿ ಇಂಗ್ಲೆಂಡ್ ತಂಡದ ನಾಯಕ ವಿವಾದಾತ್ಮಕ ವರ್ತನೆ ತೋರಿಸಿದ್ದಾರೆ !

ಪಾಕಿಸ್ತಾನ ಎದುರಿನ ಸೆಮಿಫೈನಲ್ ಬಹಿಷ್ಕರಿಸಿದ ಇಂಡಿಯಾ ಚಾಂಪಿಯನ್ಸ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಇಂಡಿಯಾ ಚಾಂಪಿಯನ್ಸ್ ತಂಡವು ವಿಶ್ವ ಲೆಜೆಂಡ್ಸ್ ಚಾಂಪಿಯನ್‌ಷಿಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಪಾಕಿಸ್ತಾನದ ಎದುರು ಆಡಲು ನಿರಾಕರಿಸಿದೆ. ಪಾಕ್ ಪ್ರಚೋದಿತ ಪಹಲ್ಗಾಮ್ ಭಯೋತ್ಪಾದನಾ ದಾಳಿಯನ್ನು ಖಂಡಿಸಿರುವ ಇಂಡಿಯಾ ಚಾಂಪಿಯನ್ಸ್ ಈ ನಿರ್ಧಾರ ತೆಗೆದುಕೊಂಡಿದೆ.

ಈ ತಂಡದಲ್ಲಿ ಮಾಜಿ ಆಟಗಾರರಾದ ಶಿಖರ್ ಧವನ್, ಇರ್ಫಾನ್ ಪಠಾಣ್, ಹರಭಜನ್ ಸಿಂಗ್, ಯುವರಾಜ್ ಸಿಂಗ್, ಸುರೇಶ್ ರೈನಾ ಮತ್ತಿತರರು ಇದ್ದಾರೆ. ಗುಂಪು ಹಂತದಲ್ಲಿಯೂ ಪಾಕಿಸ್ತಾನ ಎದುರಿನ ಪಂದ್ಯಗಳನ್ನು ಇಂಡಿಯಾ ಚಾಂಪಿಯನ್ಸ್ ಬಹಿಷ್ಕರಿಸಿತ್ತು. ಗುರುವಾರ ಎಜ್‌ಬಾಸ್ಟನ್ ಕ್ರೀಡಾಂಗಣದಲ್ಲಿ ಪಾಕಿಸ್ತಾನ ಎದುರು ಸೆಮಿಫೈನಲ್ ಆಡಬೇಕಿತ್ತು.

ಇಂಡಿಯಾ ಚಾಂಪಿಯನ್ಸ್ ತಂಡದ ಪ್ರಾಯೋಜಕರಾದ ಈಸ್‌ಮೈಟ್ರಿಪ್ ಭಾರತದ ನಿಲುವನ್ನು ಬೆಂಬಲಿಸಿದೆ.

'ಭಾರತ ತಂಡದ ನಿಲುವನ್ನು ನಾವು ಬೆಂಬಲಿಸುತ್ತೇವೆ. ತಂಡವು ಈ ಟೂರ್ನಿ ಯಲ್ಲಿ ಅಮೋಘವಾಗಿ ಆಡಿದೆ. ಈ ನಿರ್ಧಾರದಿಂದ ಇಡೀ ದೇಶವೇ ಹೆಮ್ಮೆಪಡುತ್ತಿದೆ. ಪಾಕ್ ಎದುರಿನ ಸೆಮಿಫೈನಲ್ ಕೇವಲ ಒಂದು ಪಂದ್ಯವಲ್ಲ. ಕ್ರಿಕೆಟ್ ಮತ್ತು ಭಯೋ ತ್ಪಾದನೆ ಜೊತೆಯಾಗಿ ಸಾಗದು. ನಾವು ಭಾರತದೊಂದಿಗೆ ಇದ್ದೇವೆ. ಭಯೋತ್ಪಾದನೆ ಯನ್ನು ಬೆಂಬಲಿಸುವ ಯಾವುದೇ ದೇಶದೊಂದಿಗೂ ಸಂಬಂಧ ಇಟ್ಟುಕೊಳ್ಳಲು ಬಯಸುವುದಿಲ್ಲ. ಭಾರತದ ಜನರ ಭಾವನೆಗಳನ್ನು ಬೆಂಬಲಿಸುತ್ತೇವೆ. ಭಾರತ ಮತ್ತು ಪಾಕಿಸ್ತಾನ ಪಂದ್ಯಕ್ಕೆ ನಾವು ಜೊತೆಯಾಗಿರುವುದಿಲ್ಲ. ಕೆಲವು ಸಂಗತಿಗಳು ಕ್ರೀಡೆಗಿಂತ ಮಿಗಿಲಾಗಿರುತ್ತವೆ. ವ್ಯಾಪಾರ ವಹಿವಾಟಿಗಿಂತ ರಾಷ್ಟ್ರ ಮೊದಲು' ಎಂದು ಈಸ್‌ಮೈಟ್ರಿಪ್ ಸಹಸಂಸ್ಥಾಪಕ ನಿಶಾಂತ್ ಪಿಟ್ಟಿ 'ಎಕ್ಸ್' ನಲ್ಲಿ ಬರೆದಿದ್ದಾರೆ.

ಇಂಡಿಯಾ ಚಾಂಪಿಯನ್ಸ್ ತಂಡವು ಮಂಗಳವಾರ ವೆಸ್ಟ್ ಇಂಡೀಸ್ ವಿರುದ್ಧ ಜಯಿಸಿ ಸೆಮಿಫೈನಲ್ ಪ್ರವೇಶಿಸಿತ್ತು.

ಕ್ರಿಕೆಟ್ ಅಂಗಳದಲ್ಲಿ ಜಟಾಪಟಿ: ಆಟಗಾರ ಅಮಾನತು

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಎಸ್.ಎ. ಶ್ರೀನಿವಾಸನ್ ಟ್ರೋಫಿ 23 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಪಂದ್ಯದ ನಂತರ ಉಭಯ ತಂಡಗಳ ಇಬ್ಬರು ಆಟಗಾರರು ಕೈಕೈ ಮಿಲಾಯಿಸಿದ ಘಟನೆ ನಡೆಯಿತು.

ಧಾರವಾಡ ವಲಯ ಮತ್ತು ಮಂಗಳೂರು ವಲಯ ತಂಡಗಳ ನಡುವಣ ಈ ಪಂದ್ಯವು ಡ್ರಾದಲ್ಲಿ ಮುಕ್ತಾಯವಾಯಿತು. ಮಂಗಳೂರು ತಂಡವು ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು. ಪಂದ್ಯ ಮುಗಿದ ನಂತರ ಉಭಯ ತಂಡಗಳ ಆಟಗಾರರು ಹಸ್ತಲಾಘವ ನೀಡುವ ಹಂತದಲ್ಲಿ ಇಬ್ಬರು ಆಟಗಾರರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಮಾತಿಗೆ ಮಾತು ಬೆಳೆದು ಕೈ ಕೈ ಮಿಲಾಯಿಸುವ ಹಂತಕ್ಕೂ ಹೋಯಿತು. ಈ ಜಟಾಪಟಿಯಲ್ಲಿ ಧಾರವಾಡ ವಲಯದ ಆಟಗಾರ ಬ್ಯಾಟ್‌ನಿಂದ ಇನ್ನೊಂದು ತಂಡದ ಆಟಗಾರನ ಮೇಲೆ ಹಲ್ಲೆ ಮಾಡಲು ಯತ್ನಿಸಿದ. ಉಳಿದ ಆಟಗಾರರು ಮಧ್ಯಪ್ರವೇಶಿಸಿ ತಡೆದರು ಎಂದು ಪ್ರತ್ಯಕ್ಷದರ್ಶಿಗಳು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಪದಾಧಿಕಾರಿಗಳು ಈ ಕುರಿತು ಸಭೆ ನಡೆಸಿದರು. ಆಟಗಾರರ ವಿಚಾರಣೆ ನಡೆಸಿದರು. ಧಾರವಾಡದ ಆಟಗಾರನ ಮೇಲೆ ಒಂದು ಪಂದ್ಯದ ಅಮಾನತು ಹಾಕಲಾಗಿದೆ' ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಮೂಲಗಳು ತಿಳಿಸಿವೆ. ಆದರೆ ಆಟಗಾರರ ಹೆಸರುಗಳನ್ನು ಬಹಿರಂಗಪಡಿಸಲಿಲ್ಲ.